
● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ವರ್ಧಾವಾಣಿ
ಭಾಷಿಣಿ - ಕೃತಕ ಬುದ್ಧಿಮತ್ತೆ ಆಧಾರಿತ ಭಾಷಾಂತರ ವೇದಿಕೆ ಕುರಿತ ಮಾಹಿತಿ ಇಲ್ಲಿದೆ.



ಆಳ-ಅಗಲ
ಶುದ್ಧ ಕುಡಿಯುವ ನೀರು ಎಲ್ಲರಿಗೂ ಸಿಗುತ್ತಿಲ್ಲ

ಸಾಲದ ಬಡ್ಡಿ ಹೆಚ್ಚಿಸಿದ ಎಸ್‌ಬಿಐ 10

ಸಾಹಿತಿ ಬರಗೂರು ಮನೆ ಈಗ ಮ್ಯೂಸಿಯಂ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,275 ▲	18,015 ▲	₹ 58,700 (ಬೆಂಗಳೂರು)	₹ 67,800 (ಬೆಂಗಳೂರು) ▼	82.83 ▼



ಏರುತ್ತಿದೆ ಚುನಾವಣೆ ಕಾವು: ಆರೋಪ– ಪ್ರತ್ಯಾರೋಪ

ಟೆಂಡರ್: ಕೈ–ಕಮಲ ಸವಾಲ್

ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿರುವಂತೆ ವಿರೋಧ ಪಕ್ಷ ಕಾಂಗ್ರೆಸ್, ಆಡಳಿತಾರೂಢ ಬಿಜೆಪಿ ನಾಯಕರ ಮಧ್ಯೆ ವಾಕ್ಸಮರವೂ ಬಿರುಸುಗೊಂಡಿದೆ. 'ನೂರಾರು ಕೋಟಿ ಟೆಂಡರ್ ಪ್ರಕ್ರಿಯೆಗೆ ತರಾತುರಿಯಲ್ಲಿ ಕೈಹಾಕಿರುವ ಸರ್ಕಾರ, ಚುನಾವಣೆಗಾಗಿ ಗುತ್ತಿಗೆದಾರರ ಮೂಲಕ ವಸೂಲಿಗಿಳಿದಿದೆ' ಎಂದು 'ಕೈ' ನಾಯಕರು ಆರೋಪಿಸಿದ್ದಾರೆ. 'ಅವರ ಪಕ್ಷ ಅಧಿಕಾರದಲ್ಲಿದ್ದ ಅವಧಿಯ ಹಗರಣಗಳು ಮತ್ತು ಅಕ್ರಮ ಟೆಂಡರ್‌ಗಳಿಗೆ ಮೊದಲು ಉತ್ತರ ಕೊಡಲಿ' ಎಂದು 'ಕಮಲ' ನಾಯಕರು ತಿರುಗೇಟು ಕೊಟ್ಟಿದ್ದಾರೆ.


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರ ವಸೂಲಿಗಿಳಿದಿದೆ. ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ಆರು ತಿಂಗಳ ಹಿಂದಿನ ಎಲ್ಲ ಟೆಂಡರ್‌ಗಳನ್ನು ರದ್ದು ಮಾಡುತ್ತೇವೆ. ತನಿಖಾ ಆಯೋಗ ರಚಿಸಿ ಎಲ್ಲವನ್ನೂ ತನಿಖೆ ಮಾಡಿಸಿ, ಯಾರ ಮೇಲೆ ಭ್ರಷ್ಟಾಚಾರದ ಆರೋಪಗಳಿವೆ ಅವೆಲ್ಲವನ್ನೂ ಬಯಲಿಗೆಳೆಯುತ್ತೇವೆ' ಎಂದು ಕಾಂಗ್ರೆಸ್ ನಾಯಕರು ಎಚ್ಚರಿಕೆ ನೀಡಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಶಾಸಕ ಪ್ರಿಯಾಂಕ ಖರ್ಗೆ ಜೊತೆ ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳು, ಗುತ್ತಿಗೆದಾರರು ಮತ್ತು ರಾಜಕಾರಣಿಗಳನ್ನು ಸುಮ್ಮನೆ ಬಿಡುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಜಲಸಂಪನ್ಮೂಲ, ಆರೋಗ್ಯ, ಲೋಕೋಪಯೋಗಿ ಇಲಾಖೆ ಸೇರಿದಂತೆ ಹಲವು ಇಲಾಖೆಗಳಲ್ಲಿ ತರಾತುರಿಯಲ್ಲಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ.

11ನೇ ಪುಟ ನೋಡಿ



ಭಾವು ಪತ್ತಾರ್

ಕಾಂಗ್ರೆಸ್ಸಿಗರಿಗೆ ಹುಚ್ಚು ಹಿಡಿದಿದೆ: ಬಿಎಸ್‌ವೈ

'ಕಾಂಗ್ರೆಸ್ ನಾಯಕರು ಹುಚ್ಚರು, ತಲೆ ತಿರುಕರು. ಬಾಯಿಗೆ ಬಂದಂತೆ ಕಪೋಲ ಕಲ್ಪಿತ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಕಿಡಿಕಾರಿದ್ದಾರೆ.

11ನೇ ಪುಟ ನೋಡಿ

ನಿಮ್ಮ ಟೆಂಡರ್ ಹಗರಣಗಳಿಗೆ ಉತ್ತರ ಕೊಡಿ: ಬೊಮ್ಮಾಯಿ

ಬೆಂಗಳೂರು: ಕಾಂಗ್ರೆಸ್ ಅವಧಿಯ ಹಗರಣಗಳ ಬಗ್ಗೆ ಲೋಕಾಯುಕ್ತದಿಂದ ತನಿಖೆ ನಡೆಯುತ್ತಿದ್ದು, ಕಾಂಗ್ರೆಸ್ ನಾಯಕರು ತಮ್ಮ ಮೇಲಿರುವ ಭ್ರಷ್ಟಾಚಾರದ ಆರೋಪಗಳು ಮತ್ತು ಅವರ ಅವಧಿಯಲ್ಲಿ ಆಗಿರುವ ಟೆಂಡರ್ ಹಗರಣಗಳ ಬಗ್ಗೆ ಉತ್ತರ ನೀಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

11ನೇ ಪುಟ ನೋಡಿ

ಪೆಟ್ರೋಲ್, ಡೀಸೆಲ್ ಅಗ್ಗ?

ಮುಂಬೈ/ನವದೆಹಲಿ (ರಾಯಿಟರ್ಸ್): ಚಿಲ್ಲರೆ ಹಣದುಬ್ಬರ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಇಂಧನ ಹಾಗೂ ಜೋಳದ ಮೇಲಿನ ತೆರಿಗೆಯನ್ನು ಕಡಿಮೆ ಮಾಡುವ ಬಗ್ಗೆ ಪರಿಶೀಲಿಸುವ ಸಾಧ್ಯತೆ ಇದೆ. ಫೆಬ್ರುವರಿಯಲ್ಲಿ ಹಣದುಬ್ಬರ ಯಾವ ಮಟ್ಟವನ್ನು ತಲುಪಿದೆ ಎಂಬುದು ಗೊತ್ತಾದ ನಂತರದಲ್ಲಿ ಈ ಕುರಿತು ಅಂತಿಮ ತೀರ್ಮಾನ ಆಗಲಿದೆ.

ಹಣದುಬ್ಬರ ನಿಯಂತ್ರಿಸಲು ತೆರಿಗೆ ಕಡಿಮೆ ಮಾಡಬೇಕು ಎಂಬ ಶಿಫಾರಸು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಕಡೆಯಿಂದ ಬಂದಿದೆ ಎಂದು ಗೊತ್ತಾಗಿದೆ. ಜನವರಿಯಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಮತ್ತೆ ಹೆಚ್ಚಾಗಿದ್ದು, ಆರ್‌ಬಿಐ ನಿಗದಿ ಮಾಡಿಕೊಂಡಿರುವ ಗರಿಷ್ಠ ಮಟ್ಟವನ್ನು ಮೀರಿದೆ.

'ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿಯೇ ಇರುವ ಸಾಧ್ಯತೆ ಇದೆ. ಹಾಲು, ಜೋಳ ಮತ್ತು ಸೋಯಾ ಎಣ್ಣೆಯ ಬೆಲೆಯು ಹಣದುಬ್ಬರಕ್ಕೆ ದೊಡ್ಡ ಕೊಡುಗೆ ನೀಡುತ್ತಿವೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



'ಜೋಳದ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಲು ಸರ್ಕಾರ ಪರಿಶೀಲನೆ ನಡೆಸುತ್ತಿದೆ. ಇದಕ್ಕೆ ಶೇಕಡ 60ರಷ್ಟು ಮೂಲ ಸುಂಕ ವಿಧಿಸಲಾಗುತ್ತಿದೆ. ಹಾಗೆಯೇ, ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಸುಂಕವನ್ನು ಕೂಡ ಮತ್ತೊಮ್ಮೆ ತಗ್ಗಿಸುವ ಸಾಧ್ಯತೆ ಇದೆ' ಎಂದು ಅವರು ಹೇಳಿದ್ದಾರೆ.

ಈ ವಿಚಾರವಾಗಿ ಕೇಂದ್ರ ಹಣಕಾಸು ಸಚಿವಾಲಯ ಹಾಗೂ ಆರ್‌ಬಿಐ ಕಡೆಯಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಸಿಕ್ಕಿಲ್ಲ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಈಚಿನ ದಿನಗಳಲ್ಲಿ ಸ್ಥಿರವಾಗಿದೆ. ಆದರೆ, ಕಂಪನಿಗಳು ಕಚ್ಚಾ ತೈಲದ ಬೆಲೆ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಿಲ್ಲ.

ಕೇಂದ್ರವು ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದರೆ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಇಳಿಕೆ ಆಗಿ, ಹಣದುಬ್ಬರ ನಿಯಂತ್ರಿಸಲು ನೆರವಾಗುತ್ತದೆ. 'ಆರ್‌ಬಿಐ ಕಡೆಯಿಂದಲೂ ನಮಗೆ ಕೆಲವು ಶಿಫಾರಸುಗಳು ಬಂದಿವೆ' ಎಂದು ಅಧಿಕಾರಿ ಹೇಳಿದ್ದಾರೆ.

ಜನವರಿಯಲ್ಲಿ ಹಣದುಬ್ಬರ ಪ್ರಮಾಣವು ಹೆಚ್ಚಳ ಕಂಡ ನಂತರದಲ್ಲಿ, ರೆಪೊ ದರವನ್ನು ಮತ್ತಷ್ಟು ಹೆಚ್ಚಿಸಬೇಕು ಎಂಬ ಆಗ್ರಹ ಬಂದಿದೆ. ಆದರೆ ಎಲ್ಲರಿಗೂ ಈ ವಿಚಾರದಲ್ಲಿ ಸಹಮತ ಇಲ್ಲ.

'ಮುಂದಿನ ಎರಡು ತಿಂಗಳುಗಳ ವರೆಗೆ ಚಿಲ್ಲರೆ ಹಣದುಬ್ಬರ ದರವು ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಉಳಿದರೆ, ಆರ್‌ಬಿಐ ಮತ್ತೆ ರೆಪೊ ದರ ಹೆಚ್ಚಿಸುವ ಬಗ್ಗೆ ಪರಿಶೀಲಿಸಬಹುದು' ಎಂದು 'ಬ್ಯಾಂಕ್ ಆಫ್ ಬರೋಡ'ದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ. ಆದರೆ, ದರ ಹೆಚ್ಚಳ ಮಾಡುವ ಸಾಧ್ಯತೆ ಕಡಿಮೆ ಇದೆ ಎಂದೂ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೈಸೂರು ಸೇರಿ 40 ಸ್ಥಳಗಳಲ್ಲಿ ಎನ್‌ಐಎ ಶೋಧ

ನವದೆಹಲಿ/ಚೆನ್ನೈ (ಪಿಟಿಐ): ಕೊಯ ಮತ್ತೂರು ಹಾಗೂ ಮಂಗಳೂರಿನಲ್ಲಿ ಸಂಭವಿಸಿದ ಎರಡು ಸ್ಫೋಟ ಪ್ರಕ ರಣಗಳಿಗೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಕರ್ನಾಟಕ, ತಮಿಳುನಾಡು ಹಾಗೂ ಕೇರಳದ ಒಟ್ಟು 40 ಸ್ಥಳಗಳಲ್ಲಿ ಬುಧವಾರ ಶೋಧ ಕಾರ್ಯ ಕೈಗೊಂಡಿತು.

11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗುರುಮಠಕಲ್ ತಾಲ್ಲೂಕಿನ ಅನಪುರದಲ್ಲಿ ಘಟನೆ

ಕಲುಷಿತ ನೀರು: ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಯಾದಗಿರಿ/ಗುರುಮಠಕಲ್: ಗುರುಮಠಕಲ್ ತಾಲ್ಲೂಕಿನ ಅನಪುರದಲ್ಲಿ ಕಲುಷಿತ ನೀರು ಕುಡಿದು ಬುಧವಾರ ಇಬ್ಬರು ಮಹಿಳೆಯರು ಮೃತಪಟ್ಟಿದ್ದು, 15ಕ್ಕೂ ಹೆಚ್ಚು ಮಂದಿ ವಾಂತಿ ಭೇದಿಯಿಂದ ಅಸ್ವಸ್ಥಗೊಂಡಿದ್ದಾರೆ.

ಸಾವಿತ್ರಮ್ಮ ವೆಂಕಟಪ್ಪ ನಕ್ಕ (35), ಸಾಯಮ್ಮ ಭೀಮಶಪ್ಪ ಮಿನಾಸಪುರಂ (72) ಮೃತರು. 'ಅಸ್ವಸ್ಥರನ್ನು ತೆಲಂಗಾಣದ ನಾರಾಯಣಪೇಟೆ ಆಸ್ಪತ್ರೆ, ಮೆಹಬೂಬ್ ನಗರದ ಆಸ್ಪತ್ರೆ ಮತ್ತು ಯಾದಗಿರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ವೈದ್ಯರು ತಿಳಿಸಿದ್ದಾರೆ.



ಸಾವಿತ್ರಮ್ಮ



ಸಾಯಮ್ಮ

ನೀರಿನ ಮಾದರಿಯನ್ನು ಪರೀಕ್ಷೆಗೆ ಕಳುಹಿಸಿದ್ದೇವೆ. ಇಬ್ಬರು ಮಹಿಳೆಯರು ಸಾಯಲು ಮತ್ತು ಜನ ಅಸ್ವಸ್ಥಗೊಳ್ಳಲು ನಿಖರ ಕಾರಣವೇನು ಎಂಬುದನ್ನು ಪತ್ತೆ ಮಾಡಲು ಪ್ರಯತ್ನಿಸುತ್ತಿದ್ದೇವೆ

ಸ್ನೇಹಲ್ ಆರ್., ಜಿಲ್ಲಾಧಿಕಾರಿ, ಯಾದಗಿರಿ

9ನೇ ಪುಟ ನೋಡಿ

ಡೊಭಾಲ್ ವಜಾಕ್ಕೆ ಸ್ವಾಮಿ ಆಗ್ರಹ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರ ಹುದ್ದೆಯಿಂದ ಅಜಿತ್ ಡೊಭಾಲ್ ಅವರನ್ನು ತಕ್ಷಣವೇ ತೆಗೆದು ಹಾಕಬೇಕು ಎಂದು ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಆಗ್ರಹಿಸಿದ್ದಾರೆ.

'ಪೆಗಾಸಸ್ ಪ್ರಕರಣದ ನಂತರ ಡೊಭಾಲ್ ಮತ್ತೊಂದು ಭಯಂಕರ ಪ್ರಮಾದ ಎಸಗಿದ್ದು, ಅಮೆರಿಕ ಶೀಘ್ರವೇ ಬಹಿರಂಗಪಡಿಸಲಿದೆ. ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಈ ವರ್ಷದ ಮಧ್ಯದಲ್ಲಿ ಮೋದಿಯೇ ಹುದ್ದೆ ತ್ಯಜಿಸಬೇಕಾಗುತ್ತದೆ' ಎಂದೂ ಟ್ವೀಟ್ ಮಾಡಿದ್ದಾರೆ.

ದೆಹಲಿ ಕಚೇರಿಯಲ್ಲಿ 2ನೇ ದಿನವೂ ಐಟಿ ತಪಾಸಣೆ

ಬಿಬಿಸಿ: ಮುಂದುವರಿದ 'ಪರಿಶೀಲನೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಆದಾಯ ತೆರಿಗೆ ಇಲಾಖೆಯು (ಐಟಿ) ಬಿಬಿಸಿ ಸುದ್ದಿಸಂಸ್ಥೆಯ ಕಚೇರಿಗಳಲ್ಲಿ ಎರಡನೇ ದಿನವೂ 'ಪರಿಶೀಲನೆ' ಮುಂದುವರಿಸಿತು. ಸಂಸ್ಥೆಯ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದ ಎಲೆಕ್ಟ್ರಾನಿಕ್ ದಾಖಲೆಗಳನ್ನು ಐಟಿ ಅಧಿಕಾರಿಗಳು ಪ್ರತಿ ಮಾಡಿಕೊಂಡರು. ರಾಜಕೀಯ ಪಕ್ಷಗಳು, ಮಾಧ್ಯಮ ಸಂಸ್ಥೆಗಳ ಖಂಡನೆಯ ನಡುವೆಯೂ ಬುಧವಾರ ಪರಿಶೀಲನೆ ಮುಂದುವರಿಯಿತು.

ಐಟಿ ಅಧಿಕಾರಿಗಳ ತನಿಖೆಗೆ ಪೂರ್ಣ ಸಹಕಾರ ನೀಡುವಂತೆ ತನ್ನ ಸಿಬ್ಬಂದಿಗೆ ಬಿಬಿಸಿ ಸೂಚಿಸಿತ್ತು. ಕಚೇರಿಯ ಹಣಕಾಸು ಹಾಗೂ ಇತರೆ ವಿಭಾಗದ ಸಿಬ್ಬಂದಿಯನ್ನು ತನಿಖಾಧಿಕಾರಿಗಳು ಪ್ರಶ್ನಿಸಿದರು.

ಪತ್ರಕರ್ತರು ಹಾಗೂ ಇತರ ಕೆಲವು ಸಿಬ್ಬಂದಿಗೆ ಕಚೇರಿಯಿಂದ ಹೊರಹೋಗಲು ಮಂಗಳವಾರ ರಾತ್ರಿ ಅವಕಾಶ ನೀಡಲಾಗಿತ್ತು. ಅಧಿಕಾರಿಗಳು ಸಂಸ್ಥೆಯ ಕಂಪ್ಯೂಟರ್ ಹಾರ್ಡ್‌ಡಿಸ್ಕ್ ಹಾಗೂ ಮೊಬೈಲ್‌ಗಳನ್ನು ತನಿಖೆಗಾಗಿ ತೆಗೆದುಕೊಂಡು ಹೋಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಕುರಿತ ಸಾಕ್ಷ್ಯಚಿತ್ರವನ್ನು ಬಿಬಿಸಿ ಪ್ರಸಾರ ಮಾಡಿದ ಕೆಲ ವಾರಗಳಲ್ಲಿ ನಡೆದಿರುವ ಐಟಿ ಪರಿಶೀಲನೆಯನ್ನು ಮಾಧ್ಯಮ ಸಂಘಟನೆಗಳು ಖಂಡಿಸಿವೆ. 'ಮೀಡಿಯ ಬಾಡೀಸ್ ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಂಡ್ ಡಿಜಿಟಲ್ ಅಸೋಸಿಯೇಷನ್' (ಎನ್‌ಬಿಡಿಎ) ಹಾಗೂ 'ಬೃಹನ್ ಮುಂಬೈ ಯೂನಿಯನ್ ಆಫ್ ಜರ್ನಲಿಸ್ಟ್ಸ್' ಸಂಘಟನೆಗಳು ಆದಾಯ ತೆರಿಗೆ ಇಲಾಖೆಯ ನಡೆಯನ್ನು ಖಂಡಿಸಿವೆ.

'ಯಾವ ವ್ಯವಸ್ಥೆಯೂ ಕಾನೂನಿಗಿಂತ ದೊಡ್ಡದಲ್ಲ. ಆದರೆ ಮಾಧ್ಯಮಗಳನ್ನು ಬೆದರಿಸುವ ಹಾಗೂ ಪತ್ರಕರ್ತರು, ಮಾಧ್ಯಮ ಸಂಸ್ಥೆಗಳ ಸ್ವತಂತ್ರ ಕಾರ್ಯನಿರ್ವಹಣೆಯಲ್ಲಿ ಮಧ್ಯಪ್ರವೇಶಿಸುವ ಯತ್ನಗಳನ್ನು ಖಂಡಿಸುತ್ತೇವೆ' ಎಂದು ಎನ್‌ಬಿಡಿಎ ಹೇಳಿದೆ. 'ಕೆಲವು ವಿದ್ಯಮಾನಗಳು ಹಾಗೂ ವ್ಯಕ್ತಿಗಳನ್ನು ವಿಮರ್ಶಾತ್ಮಕವಾಗಿ ಚಿತ್ರಿಸಿದ ಮಾಧ್ಯಮ ಸಂಸ್ಥೆಗಳ ಮೇಲೆ ಶೋಧನೆಯ ಅಸ್ತ್ರ ಪ್ರಯೋಗಿಸುವ ಕೇಂದ್ರ ಸರ್ಕಾರದ ನಡೆಯು, ನಾಗರಿಕರು ಹಾಗೂ ಸಂಘಟನೆಗಳಲ್ಲಿ ಕಳವಳ ಮೂಡಿಸಿದೆ' ಎಂದು ಬೃಹನ್ ಮುಂಬೈ ಪತ್ರಕರ್ತರ ಸಂಘಟನೆ ಹೇಳಿದೆ.









2022ರ ನವೆಂಬರ್‌ನಲ್ಲಿ ದಾಖಲೆ: ಅಂತರ್ಜಲ ನಿರ್ದೇಶನಾಲಯ

ನಗರದಲ್ಲಿ ಅಂತರ್ಜಲ ಮಟ್ಟ ವೃದ್ಧಿ

• ಸ್ನೇಹಾ ರಮೇಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಎರಡು ವರ್ಷಗಳಿಂದ ಅಂತರ್ಜಲ ಮಟ್ಟ ವೃದ್ಧಿಯಾಗಿದೆ. ಹೆಚ್ಚಾದ ಮಳೆಯಿಂದ, ಕೆರೆಗಳಲ್ಲಿ ನೀರಿನ ಸಂಗ್ರಹವಾಗಿರುವುದರಿಂದ 2022ರ ನವೆಂಬರ್‌ನಲ್ಲಿ ದಾಖಲೆ ಎಂಟು ಅಡಿಯಷ್ಟು ಅಂತರ್ಜಲ ವೃದ್ಧಿಯಾಗಿದೆ.

ಅಂತರ್ಜಲ ನಿರ್ದೇಶನಾಲಯದ ಅಂಕಿ–ಅಂಶದ ಪ್ರಕಾರ, 2020ರಿಂದ 2021ರಲ್ಲಿ 2 ಅಡಿ ವೃದ್ಧಿಯಾಗಿತ್ತು. 2022ರ ಅಂತ್ಯದಲ್ಲಿ ದಾಖಲೆ ಮಟ್ಟದಲ್ಲಿ ವೃದ್ಧಿಯಾಗಿದೆ.

'ಅಂತರ್ಜಲ ವೃದ್ಧಿಗೆ ಒಂದೇ ಕಾರಣ ಎಂದು ಹೇಳಲಾಗುವುದಿಲ್ಲ. ಮಳೆ ನೀರನ್ನು ಸಂಗ್ರಹಿಸುವುದು, ಇಂಗಿಸುವ ಪ್ರಕ್ರಿಯೆ ಹೆಚ್ಚಳ ಸೇರಿದಂತೆ ಹಲವು ಕಾರಣಗಳಿಂದ ಅಂತರ್ಜಲ ವೃದ್ಧಿಯಾಗಿರಬಹುದು. ನಗರದ ಸುತ್ತಮುತ್ತ ಕೆರೆಗಳ ಪುನರುಜ್ಜೀವನವೂ ಹೆಚ್ಚಿನ ಪರಿಣಾಮ ಬೀರಿದೆ' ಎಂದು ತಜ್ಞರು ಹೇಳಿದರು.

'ಮಳೆಯೊಂದೇ ಸಾಲುವುದಿಲ್ಲ. ಮಳೆ ನೀರನ್ನು ಇಂಗಿಸುವ ಕಾರ್ಯವಾಗಬೇಕು. ಎರಡು ವರ್ಷಗಳಲ್ಲಿ ಅರಿವು ಹೆಚ್ಚಾಗಿದೆ' ಎಂದು ನೀರು ಸಂರಕ್ಷಣೆ ತಜ್ಞ ಎಸ್. ವಿಶ್ವನಾಥ್ ತಿಳಿಸಿದರು.

'ಲಾಲ್‌ಬಾಗ್‌ನಲ್ಲಿ 2019ರಲ್ಲಿ ನೀರಿನ ಮಟ್ಟ 45 ಅಡಿಯಷ್ಟು ಕೆಳಗೆಹೋಗಿತ್ತು. ಇದೀಗ 15 ಅಡಿಗೆ ನೀರಿನ ಮಟ್ಟವಿದೆ. 300ಕ್ಕೂ ಹೆಚ್ಚು ಇಂಗುಗುಂಡಿಗಳನ್ನು ಇಲ್ಲಿ ನಿರ್ಮಿಸಲಾಗಿದೆ. ಮಳೆಗಾಲದಲ್ಲಿ 5 ಅಡಿಗೇ ನೀರು ಸಿಗುತ್ತದೆ. ಇದು ಸುತ್ತಲಿನ ಪರಿಸರ, ಉದ್ಯಾನದ ನಿರ್ವಹಣೆಗೆ ಸಹಕಾರಿಯಾಗಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ. ಎಂ. ಜಗದೀಶ್ ಮಾಹಿತಿ ನೀಡಿದರು.

'ನಗರದಲ್ಲಿ ತ್ಯಾಜ್ಯ ಮತ್ತು ಒಳಚರಂಡಿ ನೀರಿನ ನಿರ್ವಹಣೆ ಉತ್ತಮ ಮಟ್ಟದಲ್ಲಿ ಇಲ್ಲ. ಅಭಿವೃದ್ಧಿಗೊಂಡ ಹಲವು ಕೆರೆಗಳಿಗೆ ಕೈಗಾರಿಕೆ ತ್ಯಾಜ್ಯ ಹಾಗೂ ಒಳಚರಂಡಿ ನೀರು ಹರಿಯುತ್ತಿದೆ. ಇದೆಲ್ಲವೂ ಇಂಗಿ ಅಂತರ್ಜಲ ತಲುಪಿದರೆ ಅತ್ಯಂತ ಕೆಟ್ಟ ದುಷ್ಪರಿಣಾಮ ಉಂಟಾಗುತ್ತದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರೊ. ಟಿ.ವಿ. ರಾಮಚಂದ್ರ ಆತಂಕ ವ್ಯಕ್ತಪಡಿಸಿದರು.

ಭೀಮ ಜುವೆಲರ್ಸ್ ಮಳಿಗೆ ಉದ್ಘಾಟನೆ

ಬೆಂಗಳೂರು: ಭೀಮ ಜುವೆಲರ್ಸ್ ಕಂಪನಿಯು ಬೆಂಗಳೂರು ಸಮೀಪದ ಹೊಸೂರಿನಲ್ಲಿ ಹೊಸ ಮಳಿಗೆಯನ್ನು ಈಚೆಗೆ ಆರಂಭಿಸಿದೆ. ಇದು ತಮಿಳುನಾಡಿನಲ್ಲಿ ಭೀಮ ಜುವೆಲರ್ಸ್‌ನ ಎರಡನೆಯ ಮಳಿಗೆ.

ಕಂಪನಿಯ ನಿರ್ದೇಶಕಿ ಸಾವಿತ್ರಿ ಕೃಷ್ಣನ್ ಮತ್ತು ವ್ಯವಸ್ಥಾಪಕ ನಿರ್ದೇಶಕ ವಿಷ್ಣುಶರಣ್ ಕೆ. ಭಟ್ ಅವರು ಮಳಿಗೆ ಉದ್ಘಾಟಿಸಿದರು. ಈ ಮಳಿಗೆಯಲ್ಲಿ ಗ್ರಾಹಕರಿಗೆ ಸಮಕಾಲೀನ ಚಿನ್ನಾಭರಣ ಸಂಗ್ರಹಗಳು ಹಾಗೂ ಸಾಂಪ್ರದಾಯಿಕ ಚಿನ್ನಾಭರಣ ಸಂಗ್ರಹಗಳು ಲಭ್ಯವಿರಲಿವೆ ಎಂದು ಪ್ರಕಟಣೆ ತಿಳಿಸಿದೆ.

'ಗ್ರಾಹಕರಿಗೆ ಅತ್ಯುತ್ತಮ ಸೇವೆಗಳನ್ನು ಒದಗಿಸುವುದು ನಮ್ಮ ಗುರಿ' ಎಂದು ವಿಷ್ಣುಶರಣ್ ಕೆ. ಭಟ್ ಹೇಳಿದ್ದಾರೆ.



ತಮಿಳುನಾಡಿನ ಹೊಸೂರಿನಲ್ಲಿ ಭೀಮ ಜುವೆಲರ್ಸ್ ಕಂಪನಿಯ ಹೊಸ ಮಳಿಗೆಯನ್ನು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ವಿಷ್ಣುಶರಣ್ ಕೆ. ಭಟ್ ಮತ್ತು ಕಂಪನಿಯ ನಿರ್ದೇಶಕಿ ಸಾವಿತ್ರಿ ಕೃಷ್ಣನ್ ಈಚೆಗೆ ಉದ್ಘಾಟಿಸಿದರು.

ಗ್ಯಾರೇಜ್‌ನಲ್ಲಿ ಬೆಂಕಿ ಅವಘಡ: ಕಾರುಗಳು ಭಸ್ಮ

ಬೆಂಗಳೂರು: ಕಸ್ತೂರಿಬಾ ನಗರದ ಗ್ಯಾರೇಜ್‌ವೊಂದರಲ್ಲಿ ಬುಧವಾರ ರಾತ್ರಿ ಬೆಂಕಿ ಅವಘಡದಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಾರುಗಳು ಭಸ್ಮವಾಗಿವೆ. ಸರ್ವೀಸ್‌ಗೆ ಬಿಡಲಾಗಿದ್ದ ಹತ್ತಕ್ಕೂ ಹೆಚ್ಚು ಕಾರುಗಳು ಕ್ಷಣಾರ್ಧದಲ್ಲಿ ಸುಟ್ಟು ಹೋಗಿವೆ. ಚಾಂದ್ ಪಾಷಾ ಎಂಬುವವರಿಗೆ ಸೇರಿದ ಗ್ಯಾರೇಜ್‌ನಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದ ವೇಳೆ ಈ ಬೆಂಕಿ ಅವಘಡ ಸಂಭವಿಸಿದೆ. ಘಟನೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಸ್ಥಳಕ್ಕೆ ಬಂದ ಅಗ್ನಿಶಾಮಕದ ದಳದ ಸಿಬ್ಬಂದಿ ಒಂದು ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದರು.

ಅಪಘಾತ: ಬಿಬಿಎಂ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಲ್ಸನ್ ಗಾರ್ಡನ್ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ಬಿಬಿಎಂ ವಿದ್ಯಾರ್ಥಿ ಮೃತಪಟ್ಟಿದ್ದಾರೆ.

ಬೈಕ್‌ನಲ್ಲಿ ವೇಗವಾಗಿ ತೆರಳುತ್ತಿದ್ದಾಗ ಸೈಕಲ್‌ಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಮುಂದಾದ ವೇಳೆ ಬಿನ್ನಿಮಿಲ್ ನಿವಾಸಿ ರಸೀಲ್ (19) ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಪರಿಣಾಮ ಮೃತಪಟ್ಟಿದ್ದಾರೆ.

ಸ್ನೇಹಿತನ ಭೇಟಿಯಾಗಿ ವಾಪಸ್ ಬರುವಾಗ ಹೊಸೂರು ರಸ್ತೆಯ ನಿಮ್ಹಾನ್ಸ್ ಸಭಾಂಗಣದ ಬಳಿ ಈ ಅಪಘಾತ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್ಸಿ–ಎಸ್ಟಿ ದೌರ್ಜನ್ಯ ತಡೆ ಕಾಯ್ದೆ

ಸಭೆ ನಡೆಸದ ಸಿಎಂ: ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ಜಾರಿಗೆ ಸಂಬಂಧಿಸಿದಂತೆ ಕಳೆದ ಒಂದು ವರ್ಷದಿಂದ ಮುಖ್ಯಮಂತ್ರಿ ನೇತೃತ್ವದ ಉನ್ನತಾಧಿಕಾರದ ವಿಚಕ್ಷಣಾ ಮತ್ತು ಮೇಲ್ವಿಚಾರಣಾ ಸಮಿತಿಯು ಸಭೆ ನಡೆಸದೇ ಇರುವುದಕ್ಕೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.



'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲ್ವಿಚಾರಣೆ ಮತ್ತು ಬಲವರ್ಧನೆ ಸಂಸ್ಥೆಯು ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಪ್ರತಿ ವರ್ಷದ ಜನವರಿ ಮತ್ತು ಜುಲೈನಲ್ಲಿ ಸಭೆ ನಡೆಸುವುದು ಕಾನೂನಿನ ಅಡಿಯಲ್ಲಿ ಕಡ್ಡಾಯ. ಆದರೆ, 2022ರಲ್ಲಿ ಮುಖ್ಯಮಂತ್ರಿ ನೇತೃತ್ವದ ಸಮಿತಿಯು ಒಂದೇ ಒಂದು ಬಾರಿಯೂ ಸಭೆ ನಡೆಸಿಲ್ಲ. 2023ರಲ್ಲಿಯೂ ಈತನಕ ಸಭೆ ನಡೆಸಲಾಗಿಲ್ಲ' ಎಂದು ನ್ಯಾಯಪೀಠ ಆಕ್ಷೇಪಿಸಿದೆ.

'ಜಿಲ್ಲಾ ಮತ್ತು ಉಪ ವಿಭಾಗೀಯ ಮಟ್ಟದ ಸಮಿತಿಯು ಸಭೆ ನಡೆಸದೇ ಇರುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಸಲ್ಲಿಸಿರುವ ವರದಿ ಮೇಲ್ನೋಟಕ್ಕೆ ತೃಪ್ತಿದಾಯಕವಾಗಿಲ್ಲ' ಎಂದು ಹೇಳಿರುವ ನ್ಯಾಯಪೀಠ, ವಿಚಾರಣೆಯನ್ನು ಮೂರು ವಾರಗಳ ಕಾಲ ಮುಂದೂಡಿದೆ.

ಒಕ್ಕಲಿಗರ ಸಂಘದ ಸದಸ್ಯತ್ವಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಹೊಸ ಸದಸ್ಯತ್ವಕ್ಕಾಗಿ ಫೆ.17ರಿಂದ ಆಗಸ್ಟ್ 31ರವರೆಗೆ ಆನ್‌ಲೈನ್ ಮತ್ತು ಆಫ್‌ಲೈನ್ ವಿಧಾನಗಳ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

18 ವರ್ಷ ಪೂರೈಸಿದ ಒಕ್ಕಲಿಗ ಸಮುದಾಯದವರು ಅರ್ಜಿ ಸಲ್ಲಿಸಿ ಹೊಸ ಸದಸ್ಯತ್ವ ಪಡೆಯಬಹುದು.

ಬೆಂಗಳೂರು, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಶಿವಮೊಗ್ಗ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಹಾಗೂ ಕೊಡಗು ಡಿಸಿಸಿ ಬ್ಯಾಂಕ್‌ನ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಂಘದ ಸದಸ್ಯತ್ವದ ಅರ್ಜಿಗಳನ್ನು ವಿತರಿಸಲಾಗುವುದು. ಅರ್ಜಿ ಸ್ವೀಕರಿಸಿದ ದಿನದಿಂದ 30 ದಿನಗಳ ಒಳಗೆ ಅಗತ್ಯ ದಾಖಲೆಗಳೊಂದಿಗೆ ಆಯಾ ಬ್ಯಾಂಕಿಗೆ ಅರ್ಜಿ ಹಿಂತಿರುಗಿಸಬೇಕು ಎಂದು ಸಂಘದ ಉಪಾಧ್ಯಕ್ಷ ಮತ್ತು ಸದಸ್ಯತ್ವ ನೋಂದಣಿ ಸಮಿತಿ ಅಧ್ಯಕ್ಷ ಡಿ. ಹನುಮಂತಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ ಸೇರಿದಂತೆ ಅರ್ಜಿಯಲ್ಲಿ ಸೂಚಿಸಿರುವ ದಾಖಲೆಗಳನ್ನು ಒದಗಿಸುವುದು ಕಡ್ಡಾಯ. ಆನ್‌ಲೈನ್ ಮೂಲಕವೂ ಅರ್ಜಿ ಸಲ್ಲಿಸಲು ಅವಕಾಶವಿದೆ. http://www.rvsmembership.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸುವ ಮಾಹಿತಿ ಪಡೆಯಬಹುದು. ಅರ್ಜಿ ಸಲ್ಲಿಕೆ ಶುಲ್ಕವನ್ನು ₹1,650 ನಿಗದಿಪಡಿಸಲಾಗಿದೆ. ಡೆಬಿಟ್, ಕ್ರೆಡಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್ ಸೇರಿದಂತೆ ಆನ್‌ಲೈನ್ ಮೂಲಕ ಶುಲ್ಕ ಪಾವತಿಸಬಹುದು ಎಂದು ತಿಳಿಸಿದ್ದಾರೆ.

ಮಾಹಿತಿಗೆ: 080-26611031 ಸಂಪರ್ಕಿಸಬಹುದಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಸಂ: ಬೆಂಅಪ್ರಾ/ಕಾಅ(ಡಿಎಸ್‌ಕೆಎಲ್–1)/ಟೆಂ/04/2022–2023 ದಿನಾಂಕ : 15.02.2023

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ)
(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://eproc.karnataka.gov.in ಮೂಲಕ)
ಆಯುಕ್ತರು, ಬೆಂ.ಅ.ಪ್ರಾ., ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಡಾ. ಕೆ. ಶಿವರಾಮ ಕಾರಂತ ಲೇಔಟ್ ವಿಭಾಗ-1, ಬೆಂಅಪ್ರಾ, ಬೆಂಗಳೂರು ಇವರು ಈ ಕೆಳಗೆ ವಿವರಿಸಿರುವ ಸಲಹಾ ಸೇವೆಗಳನ್ನು ಒದಗಿಸಲು ಅರ್ಹ ಸಲಹೆಗಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಕಾಮಗಾರಿಯ ಹೆಸರು : ಡಾ. ಕೆ. ಶಿವರಾಮ ಕಾರಂತ ಲೇಔಟ್, ಬೆಂಗಳೂರು ಇದರ ರಚನೆಗಾಗಿ, ಪರಿಸರಕ್ಕೆ ಸಂಬಂಧಿಸಿದ ಅನುಮತಿ ನೀಡಿಕೆ ನಿಬಂಧನೆಗಳ ಅನ್ವಯ ಪರಿಸರ ಉಸ್ತುವಾರಿ ಸೇವೆಗಳನ್ನು ಒದಗಿಸಲು ಮತ್ತು ಮೂರು ವರ್ಷಗಳ ಅವಧಿವರೆಗೆ ಆರು ತಿಂಗಳಿಗೊಮ್ಮೆ ಅನುಸರಣೆ ವರದಿಗಳನ್ನು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ (MoEF&CC) ಪರಿವೇಶ್ ವೆಬ್‌ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡುವುದು.** ಇಎಂಡಿ: **ರೂ. 5.00 ಲಕ್ಷಗಳು.** ಇನ್ನಿತರೆ ಯಾವುದೇ ಮಾಹಿತಿಗೆ ವೆಬ್‌ಸೈಟ್ **https://eproc.karnataka.gov.in** ಗೆ ಲಾಗಿನ್ ಆಗಿ ಅಥವಾ ಈ ಕಛೇರಿಯನ್ನು ಸಂಪರ್ಕಿಸಿ.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಡಾ. ಕೆ. ಶಿವರಾಮ ಕಾರಂತ ಬಡಾವಣೆ ವಿಭಾಗ-1, ಬೆಂಅಪ್ರಾ, ಬೆಂಗಳೂರು
BDA/PRO/TN/42/2022-23

ಇಸರೋ ISRO
ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ಎಲೆಕ್ಟ್ರೋ-ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (LEOS) ಪೀಣ್ಯ, ಬೆಂಗಳೂರು-560058 ಲಿಯೋಸ್ ನಿರ್ಮಾಣ ಮತ್ತು ನಿರ್ವಹಣೆ ಗುಂಪು (LCMG)
[ಫೋನ್: (080) - 22685088, 5193, 5093, 5086- Fax- (080) - 28392310]
ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ (ಎನ್‌ಐಇಟಿ)
ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಗಳಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಕ್ರಮ ಸಂಖ್ಯೆ	ಕೆಲಸದ ಹೆಸರು;. ಎನ್‌ಐಇಟಿ ಸಂಖ್ಯೆ ಮತ್ತು ದಿನಾಂಕ	ಟೆಂಡರ್ ಮತ್ತು ಇಎಮ್ ಡಿಗೆ ಅಂದಾಜು ವೆಚ್ಚ ರೂ.	ಪೂರ್ಣಗೊಳಿಸುವ ಅವಧಿ ತಿಂಗಳುಗಳಲ್ಲಿ	ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಲು	
				ಪ್ರಾರಂಭದ ದಿನಾಂಕ	ಮುಕ್ತಾಯದ ದಿನಾಂಕ
1.	ಲಿಯೋಸ್ ಕ್ಯಾಂಪಸ್, ಆರ್ಯಭಟ, ಇಸ್ರಾಡ್ ಕಟ್ಟಡ ಮತ್ತು ಅತಿಥಿ ಗೃಹ, ಪೀಣ್ಯ, ಬೆಂಗಳೂರು-560058 ರಲ್ಲಿ ಒಂದು ವರ್ಷದವರೆಗೆ ತೋಟಗಾರಿಕಾ ಕೆಲಸಗಳಿಗೆ ಸುಧಾರಣೆಗಳನ್ನು ಕೈಗೊಳ್ಳಲು ಚಾಲನೆ ಮತ್ತು ಸೇವಾ ಶುಲ್ಕಗಳು. ಎನ್‌ಐಇಟಿ ಸಂಖ್ಯೆ: ಸಿ&ಎಂಜಿ/ಲಿಯೋಸ್/2022-23/ಎಲ್‌ಎಎಮ್-21 ದಿನಾಂಕ: 14.02.2023	ರೂ. 64.92 ಲಕ್ಷ ಇಎಂಡಿ ರೂ: 1,29,837/-	12 ತಿಂಗಳು	16.02.2023	01.03.2023
2.	LEOS ಕ್ಯಾಂಪಸ್, ಆರ್ಯಭಟ ಕಟ್ಟಡ, ISRAD ಕಟ್ಟಡ ಮತ್ತು ಅತಿಥಿ ಗೃಹ, ಪೀಣ್ಯ, ಬೆಂಗಳೂರು-560058 ರಲ್ಲಿ ಆಂತರಿಕ/ಬಾಹ್ಯ ಪರಿಸರದ ನಿಯತಕಾಲಿಕ ನಿರ್ವಹಣೆ. ಎನ್‌ಐಇಟಿ ಸಂಖ್ಯೆ: ಸಿ&ಎಂಜಿ/ಲಿಯೋಸ್/2022-23/ಎಲ್‌ಎಎಮ್-20 ದಿನಾಂಕ: 14.02.2023	ರೂ. 149.72 ಲಕ್ಷ ಇಎಂಡಿ ರೂ: 2,99,445/-	12 ತಿಂಗಳು	16.02.2023	01.03.2023

ಆಸಕ್ತ ಟೆಂಡರುದಾರರು ಇ-ಟೆಂಡರ್(ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು www.isro.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು www.tenderwizard.com/ISRO ನಿಂದ ಡೌನ್‌ಲೋಡ್ ಮಾಡಬಹುದು.
- ಸಹಿ/-
ಸಮೂಹ ನಿರ್ದೇಶಕ [ನಿರ್ಮಾಣ ಮತ್ತು ನಿರ್ವಹಣಾ ಸಮೂಹ]
ಯುಆರ್ ಎಸ್ ಸಿ, ಬೆಂಗಳೂರು

ಗವಾಕ್ಷಿ ಜಾಹೀರಾತು
ಸಿಆರ್‌ಪಿಎಫ್ – ನೇರ ನೇಮಕಾತಿ
ಗುತ್ತಿಗೆ ಆಧಾರದಲ್ಲಿ ಪಶು ವೈದ್ಯರ ಆಯ್ಕೆಗಾಗಿ (ಸಹಾಯವಾಣಿ ಸಂ. – 011–24368630)
ಈ ಕೆಳಗಿನ ನಮ್ಮ ಸಂಸ್ಥೆಗಳಿಗೆ/ಘಟಕಗಳಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿಗಾಗಿ ಆಸಕ್ತಿಯುಳ್ಳ ಮತ್ತು ಅರ್ಹ ಪಶು ವೈದ್ಯರಿಂದ (ಪುರುಷ ಮತ್ತು ಮಹಿಳೆ) ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅಭ್ಯರ್ಥಿಗಳು ನೇರ ಸಂದರ್ಶನ ದಿನಾಂಕದಂದು 70 ವರ್ಷ ಮೀರಕೂಡದು.

ಕ್ರ. ಸಂ.	ದಿನಾಂಕ ಮತ್ತು ಸಮಯ ಹಾಗೂ ಸ್ಥಳ/ಸಂದರ್ಶನ ಕೇಂದ್ರ	ಸಂದರ್ಶನ ಕೈಗೊಳ್ಳುವ ಸಂಸ್ಥೆ/ಘಟಕ	ಖಾಲಿ ಹುದ್ದೆಗಳ ಸಂಖ್ಯೆ
1)	**01/03/2023 ರಂದು 0900 ಗಂಟೆ.** ಕಾಂಪೋಸಿಟ್ ಹಾಸ್ಪಿಟಲ್, ಸಿಆರ್‌ಪಿಎಫ್, ಜಿಸಿ ಕ್ಯಾಂಪಸ್, ಯಲಹಂಕ, ಬೆಂಗಳೂರು, ಕರ್ನಾಟಕ – 560064	ಡಿಬಿ&ಟಿಎಸ್, ತರಾಳು, ಬೆಂಗಳೂರು	01
2)	**01/03/2023 ರಂದು 0900 ಗಂಟೆ.** ಕಾಂಪೋಸಿಟ್ ಹಾಸ್ಪಿಟಲ್, ಸಿಆರ್‌ಪಿಎಫ್, ಜಿಸಿ ಕ್ಯಾಂಪಸ್, ಹೈದರಾಬಾದ್, ಚಂದ್ರಾಯಣ ಗುಟ್ಟ, ಕೇಶೋಗಿರಿ ಅಂಚೆ, ತೆಲಂಗಾಣ – 500005	10ನೇ ಬಟಾಲಿಯನ್ ಎನ್‌ಡಿಆರ್‌ಎಫ್, (ಗುಂಟೂರ), ಕೊಂಡಪಾವುಲೂರು ಗ್ರಾಮ, ಸುರಂಪಲ್ಲಿ ಅಂಚೆ, ಗನ್ನಾವರಂ ಮಂಡಲ, ಕೃಷ್ಣಾ ಜಿಲ್ಲೆ (ಆಂ.ಪ್ರ), ಪಿನ್ – 521212	01

ಪ್ರಾಯ:– ನೇರ ಸಂದರ್ಶನ ದಿನಾಂಕಂದು 70 ವರ್ಷಕ್ಕಿಂತ ಕಡಿಮೆ ಆಗಿರತಕ್ಕದ್ದು.
ಸಂಭಾವನೆ:– ಒಟ್ಟು ಮಾಸಿಕ ರೂ. 75,000/–.
ಶೈಕ್ಷಣಿಕ ವಿದ್ಯಾರ್ಹತೆ:– ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಶು ವಿಜ್ಞಾನ ಮತ್ತು ಪಶು ಸಂಗೋಪನೆ ವಿಷಯದಲ್ಲಿ ಪದವಿ ಪಡೆದಿರಬೇಕು. ಭಾರತೀಯ ಪಶುವೈದ್ಯಕೀಯ ಮಂಡಳಿಯಲ್ಲಿ ನೋಂದಣಿ ಹೊಂದಿರಬೇಕು.
ಸೂಚನೆ:–
(1) ಬಿ.ವಿ.ಎಸ್ಸಿ/ಎಂ.ವಿ.ಎಸ್ಸಿ ಅಭ್ಯರ್ಥಿಗಳಿಗೆ ಆದ್ಯತೆ (ಆಬ್‌ಸ್ಟೆಟ್ರಿಕ್ಸ್ & ಗೈನಾಕೊಲಜಿ/ಸರ್ಜರಿ & ರೇಡಿಯಾಲಜಿ/ಕ್ಲಿನಿಕಲ್ ಮೆಡಿಸಿನ್ ಸ್ಪೆಷಲೈಸೇಶನ್ ಇರಬೇಕು)
(2) ಆಸಕ್ತಿಯುಳ್ಳ ಅಭ್ಯರ್ಥಿಗಳು, ಎಂಒ ಮತ್ತು ಜಿಡಿಎಂಒ ಸ್ಪೆಷಲಿಸ್ಟ್‌ಗಳ ಗುತ್ತಿಗೆ ಆಧಾರದಲ್ಲಿನ ನೇಮಕಾತಿಗೆ ಅನ್ವಯಿಸುವ ಸಂಪೂರ್ಣ ವಿವರಗಳಿಗಾಗಿ ಮತ್ತು ಇನ್ನಿತರ ಷರತ್ತು ಹಾಗೂ ನಿಬಂಧನೆಗಳಿಗಾಗಿ ನಮ್ಮ www.crpf.gov.in ವೆಬ್‌ಸೈಟ್ ಪರಿಶೀಲಿಸುವುದು.
(3) ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ಹಾಜರಾಗುವಾಗ, ಕಡ್ಡಾಯವಾಗಿ ತಮಗೆ ಸಂಬಂಧಿತ ಎಲ್ಲಾ ದಾಖಲಾತಿಗಳ ಮೂಲ ಪ್ರತಿಗಳನ್ನು ಮತ್ತು ನಕಲು ಪ್ರತಿಗಳನ್ನು (ಪದವಿ, ವಯಸ್ಸಿನ ಪುರಾವೆ ಮತ್ತು ಅನುಭವ ಪ್ರಮಾಣಪತ್ರ ಇತ್ಯಾದಿ), ಬಿಳಿಯ ಹಾಳೆಯ ಮೇಲೆ ಅರ್ಜಿಯನ್ನು ಭರ್ತಿ ಮಾಡಿ, ಅದರ ಮೇಲೆ ದಪ್ಪ ಅಕ್ಷರಗಳಲ್ಲಿ ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರನ್ನು ನಮೂದಿಸಿದ ಅರ್ಜಿ ನಮೂನೆ ಹಾಗೂ ಇತ್ತೀಚೆಗಿನ ಮೂರು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ತರತಕ್ಕದ್ದು.
(4) ಸಂದರ್ಶನದ ನಂತರ ವೈದ್ಯಕೀಯ ಪರೀಕ್ಷೆ ಕೈಗೊಳ್ಳಲಾಗುತ್ತದೆ.
(5) ಅಭ್ಯರ್ಥಿಗಳಿಗೆ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ.
ಸಹಿ/– 07–02–2023
ಡಿಐಜಿ (ನೇಮಕಾತಿ)
ಮಹಾ ನಿರ್ದೇಶಕರು, ಸಿಆರ್‌ಪಿಎಫ್
CBC-19140/11/0019/2223

ನೈಋತ್ಯ ರೈಲ್ವೆ G20
ಇ–ಟೆಂಡರು ಸೂಚನೆ ಸಂ.: **SBC-GSU-ENGG-2023-5**
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1. ವೈಟ್‌ಫೀಲ್ಡ್‌ನಲ್ಲಿ ಪ್ರಸ್ತುತವಿರುವ ಸ್ಟೇಷನ್ ಬಿಲ್ಡಿಂಗ್‌ನ ಪ್ರಥಮ ಮಹಡಿಯ ಮೇಲೆ ಪ್ಯಾನೆಲ್ ಕಂ ಎಸ್&ಟಿ ವಸತಿ ವ್ಯವಸ್ಥೆಯ ನಿರ್ಮಾಣ. 2. ವೈಟ್‌ಫೀಲ್ಡ್ ಸ್ಟೇಷನ್‌ನಲ್ಲಿ 2 ಸಂ. ಎಸ್&ಟಿ ಗೂಮ್ಟಿ ಕಟ್ಟಡಗಳ ನಿರ್ಮಾಣ ಕಾರ್ಯ.	ರೂ. **1,54,68,985.81**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **06.03.2023, 15:00 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ ಬೆಂಗಳೂರು
PUB/678/AAD/PRB/SWR/2022-23
S.W.Railways SWRRLY SWRRLY

ನೈಋತ್ಯ ರೈಲ್ವೆ G20
ಇ–ಟೆಂಡರು ಸೂಚನೆ ಸಂ.: **ECN/03/2023**
ದಿನಾಂಕ: **08.02.2023**
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು–ಹಾಸನ ವಿಭಾಗದಲ್ಲಿ ಪ್ರಸ್ತಾವನೆಯ ಸಬ್‌ವೇ / ರಸ್ತೆಯ ಕೆಳ ಸೇತುವೆಯ ನಿರ್ಮಾಣಕ್ಕೆ ಅನುಕೂಲವಾಗುವಂತೆ ಪ್ರಸ್ತುತವಾಗಿರುವ ಹೆಚ್‌ಟಿ / ಎಲ್‌ಟಿ ಓವರ್‌ಹೆಡ್ ಪವರ್ ಲೈನ್ ಅಲೈನ್‌ಮೆಂಟ್‌ನ ಸ್ಥಳಾಂತರಣ / ಮಾರ್ಪಡಿಸುವಿಕೆಯ ಹೆಚ್ಚುವರಿ ಕೆಲಸ ಹಾಗೂ ಹೊಳೆನರಸೀಪುರದ ಹತ್ತಿರದಲ್ಲಿ ರೈಲ್ವೆ ಕಿಮೀ. ನಂ. 87/800–900 ರಲ್ಲಿರು ಎಲ್‌ಸಿ ನಂ. 78ಗೆ ಬದಲಾಗಿ ರಸ್ತೆಯ ಮೇಲು ಸೇತುವೆಯ ನಿರ್ಮಾಣ ಕಾರ್ಯ. (ಟೆಂಡರು ಸಂ. **ECN-03-2023**)	ರೂ. **83,33,189/-**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.03.2023, 11:00 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್ / ನಿರ್ಮಾಣ ಬೆಂಗಳೂರು ದಂಡು
PUB/674/AAD/PRB/SWR/2022-23
S.W.Railways SWRRLY SWRRLY


ಅಣಬೆ ಮತ್ತು ಸಿರಿಧಾನ್ಯಗಳಿಂದ ತಯಾರಿಸಿದ ಬಿಸ್ಕತ್ತು

ಅಣಬೆ, ಸಿರಿ ಧಾನ್ಯ ಬಿಸ್ಕತ್ತು ತಯಾರಿಕೆ

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು (ಐಐಎಚ್‌ಆರ್) ಅಣಬೆ ಮತ್ತು ಸಿರಿಧಾನ್ಯಗಳಾದ ರಾಗಿ, ಜೋಳ, ಸಜ್ಜೆ, ಸಾಮೆಯನ್ನು ಬಳಸಿ ಬಿಸ್ಕತ್ತು ಉತ್ಪಾದಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ.

'ಆಯಸ್ಟರ್ ಅಣಬೆ ಮತ್ತು ಸಿರಿಧಾನ್ಯಗಳು ಔಷಧೀಯ ಗುಣಗಳನ್ನು ಒಳಗೊಂಡಿದ್ದು, ಈ ಎರಡರ ಸಂಯೋಜನೆಯಿಂದ ಹೆಚ್ಚು ಪೌಷ್ಟಿಕಾಂಶಯುಕ್ತ ಬಿಸ್ಕತ್ತನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಮೈದ ಮತ್ತು ಸಕ್ಕರೆಯನ್ನು ಬಳಸದೇ ಬೆಲ್ಲವನ್ನು ಬಳಸಿ ತಯಾರಿಸಲಾಗಿದೆ. ಮಾರುಕಟ್ಟೆಯಲ್ಲಿರುವ ಬೇರೆ ಬಿಸ್ಕತ್ತುಗಳಿಗೆ ಹೋಲಿಸಿದರೆ ಈ ಉತ್ಪನ್ನದಲ್ಲಿ ಶೇ 13-15ರಷ್ಟು ಅಧಿಕ ಪ್ರೋಟಿನ್, ಕ್ಯಾಲ್ಸಿಯಂ ಇದ್ದು, ಕಡಿಮೆ ಕಾರ್ಬೋಹೈಡ್ರೇಟ್ ಹೊಂದಿದೆ' ಎಂದು ಐಐಎಚ್‌ಆರ್‌ನ ಅಣಬೆ ಸಂಶೋಧನಾಯಲದ ಉಸ್ತುವಾರಿ ಡಾ. ಚಂದ್ರಶೇಖರ್ ಮಾಹಿತಿ ನೀಡಿದರು.

'ಐಐಎಚ್‌ಆರ್ ಪ್ರಾಂಗಣದಲ್ಲಿ ಫೆ.22ರಿಂದ 25ರವರೆಗೆ 'ಸ್ವಾವಲಂಬನೆಗಾಗಿ ನವೀನ ತೋಟಗಾರಿಕೆ' ಎಂಬ ವಿಷಯದಡಿ ನಡೆಯಲಿರುವ ರಾಷ್ಟ್ರೀಯ ತೋಟಗಾರಿಕೆ ಮೇಳದಲ್ಲಿ 120ಕ್ಕೂ ಹೆಚ್ಚು ಬೆಳೆಗಳ ಪ್ರಾತ್ಯಕ್ಷಿಕೆ ಮತ್ತು 58 ಹೊಸ ತಂತ್ರಜ್ಞಾನಗಳ ಪರಿಚಯ ಮಾಡಲಾಗುತ್ತದೆ. ಮೌಲ್ಯವರ್ಧಿತ ಸಿರಿಧಾನ್ಯಗಳ ಉತ್ಪನ್ನಗಳು, ಅಣಬೆ ಬೇಸಾಯ ಮತ್ತು ಮೌಲ್ಯವರ್ಧನೆ, ಜೈವಿಕ್ ತ್ಯಾಜ್ಯದಿಂದ ಗೊಬ್ಬರ ತಯಾರಿಕೆ ಇತ್ಯಾದಿ ವಿಷಯಗಳ ಬಗ್ಗೆ ಕಾರ್ಯಾಗಾರಗಳು ನಡೆಯಲಿವೆ' ಎಂದು ಐಐಎಚ್‌ಆರ್ ನಿರ್ದೇಶಕ ಸಂಜಯ್ ಕುಮಾರ್‌ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಐಐಎಚ್‌ಆರ್ ರಾಷ್ಟ್ರೀಯ ತೋಟಗಾರಿಕೆ ಮೇಳ

ಲಂಬ ವಾಣಿಜ್ಯ ಕೃಷಿ ಪದ್ಧತಿಯ ಅಭಿವೃದ್ಧಿ

• ಖಲೀಲ ಅಹ್ಮದ ಶೇಖ

ಬೆಂಗಳೂರು: ನಗರ ಪ್ರದೇಶಗಳಲ್ಲಿ ತರಕಾರಿ-ಸೊಪ್ಪು ಮತ್ತು ಹೂವಿನ ಬೆಳೆಗಳನ್ನು ಕಡಿಮೆ ಜಾಗದಲ್ಲಿ ಹೆಚ್ಚು ಬೆಳೆ ಬೆಳೆಯಲು ಲಂಬ ಕೃಷಿ ವಿಧಾನವನ್ನು ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ.

'1000 ಚದರ ಮೀಟರ್‌ನ ಪಾಲಿಹೌಸ್‌ನಲ್ಲಿ ಲಂಬಾಕಾರದಲ್ಲಿ ನಿರ್ಮಿಸಲಾದ 12 ಅಡಿಯ ರ್‍ಯಾಕ್‌ನಲ್ಲಿ 6 ಪದರಗಳಿಗೆ ಪ್ಲಾಸ್ಟಿಕ್ ಚೀಲಗಳನ್ನು ಅಳವಡಿಸಬೇಕು. ಅದರಲ್ಲಿ ಕೊಕೊಪಿಟ್, ಭತ್ತದ ಹೊಟ್ಟನ್ನು ಹಾಕಿ ತರಕಾರಿ ಮತ್ತು ಹೂವಿನ ಬೆಳೆಗಳನ್ನು ಬೆಳೆಯಬಹುದು. ಇದಕ್ಕೆ ಬತ್ತಿ ನೀರಾವರಿ ಪದ್ಧತಿಯ ಮೂಲಕ ನೀರು ಮತ್ತು ಪೋಷಕಾಂಶಗಳನ್ನು ನೀಡಬೇಕು. ಇದಕ್ಕೆ ಕೇವಲ 1000 ಲೀಟರ್ ನೀರು ಬೇಕಾಗುತ್ತದೆ' ಎಂದು ಐಐಎಚ್‌ಆರ್‌ನ ವಿಜ್ಞಾನಿ ಮತ್ತು ಹೂವು, ಔಷಧ ಸಸ್ಯಗಳ ಮುಖ್ಯಸ್ಥ ಡಾ. ಅಶ್ವಥ್ ಮಾಹಿತಿ ನೀಡಿದರು.

'ಹೂವಿನ ಬೆಳೆಗಳಾದ ಲಿಲಿಯಂ, ಜರ್ಬೆರಾ, ಜಿಪ್ಸೋಫಿಲಾ, ಗ್ಲಾಡಿಯೋಲಸ್, ತರಕಾರಿ-ಸೊಪ್ಪಿನಲ್ಲಿ ಎಲೆಕೋಸು, ಹೂಕೋಸು, ಬೀನ್ಸ್, ಕೊತ್ತಂಬರಿ, ಪಾಲಕ್ ದಂಟನ್ನು ಪ್ರತಿದಿನ 70-80 ಕೆ.ಜಿಯಷ್ಟು ಸೊಪ್ಪು ಮತ್ತು ತರಕಾರಿಗಳನ್ನು ಬೆಳೆಯಬಹುದು' ಎಂದು ಅವರು ತಿಳಿಸಿದರು.

'ಕೇಂದ್ರ ಸರ್ಕಾರದ ತೋಟಗಾರಿಕೆ ಸಮಗ್ರ ಅಭಿವೃದ್ಧಿ ಮಿಷನ್‌ನವರು (ಎಂಐಡಿಎಚ್) ಈ ಲಂಬ ಕೃಷಿ ಅಳವಡಿಸಿಕೊಳ್ಳುವ ರೈತರಿಗೆ ಎಷ್ಟು ಸಬ್ಸಿಡಿ ನೀಡಬೇಕು ಎಂದು ಕೇಳಿದ್ದು, ಇದಕ್ಕೆ ಎಷ್ಟು ಸಬ್ಸಿಡಿ ನೀಡಬೇಕೆಂಬ ಸಮಗ್ರ ಮಾಹಿತಿಯನ್ನು ತಯಾರಿಸಿ ಅವರಿಗೆ ಕಳುಹಿಸಿಕೊಡಲಾಗುವುದು' ಎಂದು ಅವರು ಹೇಳಿದರು.

'ನಗರ ಪ್ರದೇಶಗಳ ನಿರುದ್ಯೋಗಿ ಯುವಕರು ಮತ್ತು ಮಹಿಳೆಯರು ಈ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. ಈ ಪದ್ಧತಿಯನ್ನು ಅಳವಡಿಸಿಕೊಂಡರೆ ವಾಣಿಜ್ಯ ಬೆಳೆಯಾದ ಲಿಲಿಯಂ ಹೂವಿನ ಹೆಚ್ಚು ಉತ್ಪಾದನೆ ಸಾಧ್ಯ. ನಗರ ತೋಟಗಾರಿಕೆ ಇದು ವರದಾನವಾಗಿದೆ' ಎಂದರು.


ಲಂಬ ಕೃಷಿ ಮಾದರಿಯಲ್ಲಿ ಬೆಳೆದಿರುವ ಲಿಲಿಯಂ ಹೂವುಗಳು
–ಪ್ರಜಾವಾಣಿ ಚಿತ್ರ



'ಡಬಲ್ ಎಂಜಿನ್ ವಿಷ ಉಗುಳುತ್ತಿದೆ'

ಬೆಂಗಳೂರು: 'ಕೋಮುವಾದವೇ ಡಬಲ್ ಎಂಜಿನ್‌ನ ಇಂಧನ. ಹೊಗೆಯ ರೂಪದಲ್ಲಿ ಅದು ವಿಷ ಉಗುಳುತ್ತಿದೆ' ಎಂದು ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ವಿಧಾನಸಭೆಯಲ್ಲಿ ಬುಧವಾರ ವಾಗ್ದಾಳಿ ನಡೆಸಿದರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ರಾಜ್ಯಪಾಲರ ಭಾಷಣದ ಕುರಿತು ಮಾತನಾಡುವಾಗಲೂ ಬಿಜೆಪಿಯವರು ಡಬಲ್ ಎಂಜಿನ್ ಸರ್ಕಾರ ಎಂದು ಹೇಳುತ್ತಾರೆ. ಆದರೆ, ಜನರು ಸಂಕಷ್ಟದಲ್ಲಿರುವಾಗ ಡಬಲ್ ಎಂಜಿನ್ ಆಫ್ ಆಗಿರುತ್ತದೆ. ಅದು ತಯಾರಾಗಿರುವುದೇ ಭ್ರಷ್ಟಾಚಾರ ಮತ್ತು ಕಣ್ಣೀರಿನಿಂದ' ಎಂದರು.

'ರಾಜ್ಯಪಾಲರ ಭಾಷಣ ಬಿಜೆಪಿ ಸರ್ಕಾರದ ಬೀಳ್ಕೊಡುಗೆಯ ಭಾಷಣದಂತೆ ಇದೆ. ಅದನ್ನು ತಮ್ಮ ಸರ್ಕಾರದ 'ರಿಪೋರ್ಟ್ ಕಾರ್ಡ್' ಎಂದು ಬಿಜೆಪಿಯವರು ಹೇಳಿಕೊಳ್ಳುತ್ತಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಪರೀಕ್ಷೆ ಬರೆದ ಮಕ್ಕಳಿಗೆ ವರ್ಷ ಕಳೆದರೂ ಅಂಕಪಟ್ಟಿ ವಿತರಿಸಲು ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಪಡಿತರ ಚೀಟಿ, ಗರ್ಭಿಣಿಯರಿಗೆ ತಾಯಿ ಕಾರ್ಡ್ ನೀಡಿಲ್ಲ. ಇವರು 'ರಿಪೋರ್ಟ್ ಕಾರ್ಡ್' ಕೇಳಿದರೆ ಜನರು ಸೊನ್ನೆ ಅಂಕ ನೀಡುತ್ತಾರೆ' ಎಂದು ಹೇಳಿದರು.

'ಬಿಜೆಪಿ ಸರ್ಕಾರದ ಸಾಧನೆ ಮಾತಿಗೆ ಸೀಮಿತವಾಗಿದೆ. ಅಧಿಕಾರದಿಂದ ಕೆಳಗಿಳಿಯುವ ಕಾಲ ಬಂದರೂ ಕರಾವಳಿಯ ಜನರಿಗೆ ಕುಚ್ಚಲಕ್ಕಿ ವಿತರಿಸಲು ಆಗಿಲ್ಲ. ಆಸ್ಪತ್ರೆಗಳಿಗೆ ಆಮ್ಲಜನಕ ಘಟಕ ಒದಗಿಸಿದ್ದಾರೆ. ಆದರೆ, ಅಲ್ಲಿ ತಾಂತ್ರಿಕ ಸಿಬ್ಬಂದಿಯೇ ಇಲ್ಲ' ಎಂದರು.

ಜೆಡಿಎಸ್‌ನ ವೆಂಕಟರಾವ್ ನಾಡಗೌಡ ಮಾತನಾಡಿ, 'ಜಲಜೀವನ ಮಿಷನ್ ಯೋಜನೆಯಡಿ ಪೈಪ್‌ಲೈನ್ ನಿರ್ಮಿಸಿದ್ದು, ನೀರಿನ ಸಂಪರ್ಕವೇ ಇಲ್ಲ. ಕೆಲವು ಜಿಲ್ಲೆಗಳಲ್ಲಿ ಜಲಧಾರೆ ಯೋಜನೆ ಜತೆ ಅದನ್ನು ಜೋಡಿಸಲಾಗಿದೆ. ಇದರಿಂದಾಗಿ ಯೋಜನೆಯ ಕಾಮಗಾರಿ ಕುಂಟುತ್ತಾ ಸಾಗಿದೆ' ಎಂದು ಅವರು ದೂರಿದರು.

ಶೇ 70ರಷ್ಟು ಪ್ರಗತಿ ಸಾಧನೆ: ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ

10 ಲಕ್ಷಕ್ಕೂ ಅಧಿಕ ಡಿಜಿಟಲ್ ಮೀಟರ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಸ್ಕಾಂ ಮೆಟ್ರೋಪಾಲಿಟನ್ ಪ್ರದೇಶ ವಲಯದಲ್ಲಿ ಫೆ.14ರವರೆಗೆ ಒಟ್ಟು 10.74 ಲಕ್ಷ ಸಿಂಗಲ್ ಫೇಸ್ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಲಾಗಿದ್ದು, ಇದುವರೆಗೆ ಶೇ 70ರಷ್ಟು ಪ್ರಗತಿ ಸಾಧಿಸಲಾಗಿದೆ' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

'ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಒಟ್ಟು 58.77ಲಕ್ಷ ಎಲ್‌ಟಿ ವಿದ್ಯುತ್ ಮಾಪಕಗಳಿವೆ. ಸಮೀಕ್ಷೆ ಪ್ರಕಾರ ಇವುಗಳಲ್ಲಿ 17.23 ಲಕ್ಷ ಎಲೆಕ್ಟ್ರೊಮೆಕ್ಯಾನಿಕಲ್ ಮೀಟರ್‌ಗಳಿವೆ. ಇವುಗಳನ್ನು ಡಿಎಲ್‌ಎಮ್‌ಎಸ್ ಸ್ಟ್ಯಾಟಿಕ್ (ಡಿವೈಸ್ ಲ್ಯಾಂಗ್ವೇಜ್ ಮೆಸೇಜ್ ಸ್ಪೆಸಿಫಿಕೇಷನ್) ಡಿಜಿಟಲ್ ಮಾಪಕಗಳನ್ನಾಗಿ ಪರಿವರ್ತಿಸುವ ಕಾರ್ಯಕ್ಕೆ 2022ರ ಜುಲೈನಿಂದ ಚಾಲನೆ ನೀಡಲಾಗಿದೆ' ಎಂದರು.

'ಡಿಎಲ್‌ಎಮ್‌ಎಸ್ ಸ್ಟ್ಯಾಟಿಕ್ ಮೀಟರ್ ಗ್ರಾಹಕಸ್ನೇಹಿಯಾಗಿದೆ. ಸಿಂಗಲ್ ಫೇಸ್ ಅಥವಾ ಮೂರು ಫೇಸ್ ಮೀಟರ್ ಅಳವಡಿಸಿಕೊಂಡಿರುವ ಗ್ರಾಹಕರಿಗೆ ವಿದ್ಯುತ್ ವೋಲ್ಟೇಜ್ ಮತ್ತು ವಿದ್ಯುತ್ ಸಂಪರ್ಕದ ಲೋಡ್ ಮಾಹಿತಿ ಪಡೆಯಬಹುದಾಗಿದೆ. ಈ ಡಿಜಿಟಲ್ ಮೀಟರ್‌ಗಳನ್ನು ಉಚಿತವಾಗಿ ಅಳವಡಿಸಲಾಗುತ್ತಿದ್ದು ಗ್ರಾಹಕರಿಂದ ಶುಲ್ಕ ಪಡೆಯುವುದಿಲ್ಲ' ಎಂದರು.

'ಗ್ರಾಹಕರು ತಾವು ಬಳಸಿರುವ ವಿದ್ಯುತ್ ಪ್ರಮಾಣದ ನಿಖರ ಮಾಹಿತಿ ಪಡೆಯಬಹುದು. ಜತೆಗೆ, ಎರಡು ವರ್ಷಗಳ ಹಿಂದಿನ ಅವಧಿಯವರೆಗೂ ಬಳಸಿದ ವಿದ್ಯುತ್ ಪ್ರಮಾಣದ ವಿವರಗಳನ್ನು ಬೆಸ್ಕಾಂ ಕಚೇರಿಯಿಂದ ಪಡೆದು ವಿದ್ಯುತ್ ಬಿಲ್ ಜೊತೆ ಹೋಲಿಸಬಹುದು. ಇದರಿಂದ, ವಿದ್ಯುತ್ ಪ್ರಮಾಣ ಸರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲಿಸಿಕೊಳ್ಳಬಹುದು. ಈ ಹಿಂದಿನ ಮೆಕ್ಯಾನಿಕಲ್ ಮೀಟರ್‌ಗಳಲ್ಲಿ ಲೋಡ್ ಮತ್ತು ವೋಲ್ಟೇಜ್‌ಗಳನ್ನು ದಾಖಲಿಸುವ ವ್ಯವಸ್ಥೆ ಇರಲಿಲ್ಲ. ಇದರಿಂದಾಗಿ ಬೆಸ್ಕಾಂಗೆ ವಿದ್ಯುತ್ ಶುಲ್ಕ ಸಂಗ್ರಹದಲ್ಲಿ ನಷ್ಟವಾಗುತ್ತಿತ್ತು' ಎಂದು ವಿವರಿಸಿದ್ದಾರೆ.

'ಈಗಿರುವ ಡಿಜಿಟಲ್ ಮೀಟರ್‌ಗಳಲ್ಲಿ ಈ ಎಲ್ಲ ಸೌಲಭ್ಯಗಳಿದ್ದು, ಗ್ರಾಹಕರು ಕಡಿಮೆ ಪ್ರಮಾಣದಲ್ಲಿ ವಿದ್ಯುತ್ ಬಳಸಿದರೂ ಸಹ ದಾಖಲಾಗುತ್ತದೆ. ಉದಾಹರಣೆಗೆ ಮೊಬೈಲ್ ಚಾರ್ಜಿಂಗ್, ಝಿರೋ ವ್ಯಾಟ್ ಬಲ್ಬ್ ಬಳಕೆಯ ವಿದ್ಯುತ್ ಪ್ರಮಾಣವನ್ನು ಸಹ ಡಿಜಿಟಲ್ ಮೀಟರ್ ದಾಖಲಿಸುತ್ತದೆ. ಆದರೆ, ಈ ಸಣ್ಣ ಪ್ರಮಾಣದ ವಿದ್ಯುತ್ ಬಳಕೆಯನ್ನು ಮೆಕ್ಯಾನಿಕಲ್ ಮೀಟರ್‌ಗಳು ದಾಖಲಿಸುವುದಿಲ್ಲ. ಇದರೊಂದಿಗೆ ಗ್ರಾಹಕರು ನಿಖರವಾಗಿ ಬಳಸುವ ವಿದ್ಯುತ್ ಪ್ರಮಾಣವನ್ನು ಮಾತ್ರ ಡಿಜಿಟಲ್ ಮೀಟರ್‌ನಲ್ಲಿ ದಾಖಲಿಸಿ ಬಿಲ್ಲಿಂಗ್ ಮಾಡಲಾಗುತ್ತದೆ' ಎಂದು ತಿಳಿಸಿದ್ದಾರೆ.

'ದೋಷ ಇದ್ದರೆ ಗಮನಕ್ಕೆ ತನ್ನಿ'



'ಒಂದು ವೇಳೆ, ದೋಷಯುಕ್ತ ಡಿಜಿಟಲ್ ಮೀಟರ್ ಅಳವಡಿಸಿದ್ದರೆ, ಗ್ರಾಹಕರು ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರ ಗಮನಕ್ಕೆ ತರಬೇಕು' ಎಂದು ಮಹಾಂತೇಶ ಬೀಳಗಿ ಅವರು ತಿಳಿಸಿದ್ದಾರೆ.

'ದೋಷಯುಕ್ತ ಮೀಟರ್ ಅಳವಡಿಸಿದ್ದರೆ ಅಥವಾ ಮೀಟರ್ ಅಳವಡಿಸುವ ಸಂದರ್ಭದಲ್ಲಿ ಗ್ರಾಹಕರಿಂದ ಹಣಕ್ಕೆ ಬೇಡಿಕೆ ಇಟ್ಟ ಕುರಿತು ದೂರು ಬಂದರೆ, ಸಂಬಂಧಪಟ್ಟ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.



'ಧನ–ಜಾತಿ ಬಲಕ್ಕೆ ಅವಕಾಶ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧನ ಬಲ, ಭುಜ ಬಲ ಹಾಗೂ ಜಾತಿ ಬಲ ಬಳಸುವವರು ಮತ್ತು ಗೂಂಡಾ ಪ್ರವೃತ್ತಿ ಹೊಂದಿರುವವರಿಗೆ ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಅವಕಾಶ ನೀಡಬಾರದು. ಸರಳ ಸಜ್ಜನ ವ್ಯಕ್ತಿಗಳನ್ನು ಪಕ್ಷದ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಬೇಕು' ಎಂದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಆಗ್ರಹಿಸಿದೆ.

ಈ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರಿಗೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಪತ್ರ ಬರೆದಿದ್ದಾರೆ.

'ರಾಜಕಾರಣವೆನ್ನುವುದು ಸತ್ಯಶುದ್ಧ ಕಾಯಕವಾಗಿದ್ದು, ಪ್ರಜ್ಞೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಜವಾಬ್ದಾರಿಯುತ ಸೇವಾ ಕ್ಷೇತ್ರ. ಈ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸಲು ಬರುವ ವ್ಯಕ್ತಿ ಹಾಗೂ ಪಕ್ಷಗಳಿಗೆ ನೈತಿಕ ನೆಲೆಯ ಪರಿಶುದ್ಧತೆ ಅಗತ್ಯ. ಜನಪ್ರತಿನಿಧಿಗಳು ಸತ್ಯಮಾರ್ಗದಲ್ಲಿ ನಡೆದರೆ, ಸಮಾಜವೂ ಸರಿದಾರಿಯಲ್ಲಿ ಮುನ್ನಡೆಯುತ್ತದೆ. ಪ್ರಜಾಪ್ರಭುತ್ವದ ಉದ್ದೇಶವೇ ಇಂಥ ನೈತಿಕ, ಪಾರದರ್ಶಕ ನಡೆಯ ರಾಜಕೀಯ ಸಿದ್ಧಾಂತದ ಆಡಳಿತ ನಿರ್ವಹಣೆಯಾಗಿದೆ' ಎಂದು ತಿಳಿಸಿದ್ದಾರೆ.

'ಸದ್ಯ ಲೋಕಸಭೆಯಲ್ಲಿ ಶೇ 43ರಷ್ಟು ಹಾಗೂ ರಾಜ್ಯದ ವಿಧಾನಸಭೆಯಲ್ಲಿ ಶೇ 27ರಷ್ಟು ಸದಸ್ಯರು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ. ಇದು ಇಡೀ ದೇಶ ತಲೆ ತಗ್ಗಿಸುವ ವಿಚಾರ. ಪ್ರಜಾಪ್ರಭುತ್ವವನ್ನು ಮುನ್ನಡೆಸುವ ಜನಪ್ರತಿನಿಧಿಗಳಲ್ಲಿ ಇಂಥ ಕ್ರಿಮಿನಲ್ ಹಿನ್ನೆಲೆಯವರು ಇದ್ದಾರೆ ಎಂಬುದು ದೇಶದ ರಾಜಕೀಯ ವರ್ಚಸ್ಸಿಗೆ ಮಸಿ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಅನಧಿಕೃತ ಶಾಲೆ: ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ರುಪ್ಸ ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಅನಧಿಕೃತ ಶಾಲೆಗಳು ಕಾರ್ಯನಿರ್ವಹಿಸಲು ಇದುವರೆಗೂ ಅವಕಾಶ ಮಾಡಿಕೊಟ್ಟಿದ್ದ ಅಧಿಕಾರಿಗಳ ವಿರುದ್ಧ ಶಿಕ್ಷಣ ಇಲಾಖೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸ) ಒತ್ತಾಯಿಸಿದೆ.

ಖಾಸಗಿ ಶಾಲೆಗಳಿಂದ ಹಣ ಸಂಗ್ರಹಿಸುತ್ತಿದ್ದ ಇಲಾಖೆಯ ಭ್ರಷ್ಟ ಅಧಿಕಾರಿಗಳ ಕುರಿತು ರುಪ್ಸ ಪ್ರಧಾನಮಂತ್ರಿಗೆ ದಾಖಲೆ ಸಮೇತ ಪತ್ರ ಬರೆದ ನಂತರ ಎಚ್ಚೆತ್ತುಕೊಂಡ ಶಿಕ್ಷಣ ಇಲಾಖೆ, 1,316 ಅನಧಿಕೃತ ಶಾಲೆಗಳನ್ನು ಗುರುತಿಸಿದೆ ಎಂದು ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಹೇಳಿದ್ದಾರೆ.

ಕೆಲ ಶಾಲೆಗಳು ಬಹಿರಂಗವಾಗಿ ಪೋಷಕರು, ಮಕ್ಕಳಿಗೆ ಮೋಸ ಮಾಡುತ್ತಿವೆ. ಅಧಿಕಾರಿಗಳು ಹೊಣೆ ಹೊರಬೇಕು. ಬಂಡವಾಳಶಾಹಿ ಖಾಸಗಿ ಶಾಲೆಗಳು ಶುಲ್ಕ ರೂಪದಲ್ಲಿ ದೊಡ್ಡಮೊತ್ತದ ಹಣ ವಸೂಲಿ ಮಾಡುತ್ತಿವೆ. ಅಂತಹ ಶಾಲೆಗಳಿಗೆ ಮಂತ್ರಿಗಳು, ಶಾಸಕರ ಕೃಪಾಕಟಾಕ್ಷವಿದೆ. ಕೆಲ ಶಾಲೆಗಳು ಅವರ ಒಡೆತನದಲ್ಲೇ ಇವೆ ಎಂದರು.

ಶೈಕ್ಷಣಿಕ ಸಾಲ ಮನ್ನಾಕ್ಕೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತರ ಸಾಲ ಮನ್ನಾ ಮಾದರಿಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಸಾಲ ಅಥವಾ ಬಡ್ಡಿ ಮನ್ನಾ ಮಾಡಬೇಕು' ಎಂದು ಬಿಜೆಪಿಯ ಆಯನೂರು ಮಂಜುನಾಥ್ ಸಲಹೆ ನೀಡಿದರು.

ವಿಧಾನ ಪರಿಷತ್ತಿನಲ್ಲಿ ಬುಧವಾರ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಮುಂದುವರಿದ ಚರ್ಚೆಯಲ್ಲಿ ಅವರು ಮಾತನಾಡಿದರು.

'ಶಿಕ್ಷಣ ಪೂರೈಸಿದ ನಂತರ ಸಕಾಲಕ್ಕೆ ಉದ್ಯೋಗ ಸಿಗದೇ ವೃತ್ತಿಪರ, ಉನ್ನತ ಶಿಕ್ಷಣಕ್ಕೆ ಸಾಲ ಪಡೆದ ವಿದ್ಯಾರ್ಥಿಗಳು ಕಷ್ಟಪಡುತ್ತಿದ್ದಾರೆ. ಹಾಗಾಗಿ, ಸಾಲ ಮನ್ನಾ ಮಾಡಬೇಕು. ಇಲ್ಲವೇ ಈ ಬಜೆಟ್‌ನಲ್ಲಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಘೋಷಣೆ ಮಾಡಬೇಕು' ಎಂದು ಅವರು ತಿಳಿಸಿದರು.


'ರಾಜ್ಯದ ಪ್ರತಿ ಶಾಲೆಗಳಲ್ಲೂ ಶೌಚಾಲಯ ಇರಬೇಕು. ಶಾಲಾ ಸಚ್ಛತಾ ಕಾರ್ಯಕ್ಕೆ 'ಡಿ' ಗ್ರೂಪ್ ನೌಕರರ ನೇಮಕ ಮಾಡಿಕೊಳ್ಳಬೇಕು. ಪತ್ನಿ ಮೃತರಾಗಿರುವ ಪುರುಷರಿಗೂ ಶಿಶುಪಾಲನಾ ರಜೆ ನೀಡಬೇಕು. ವಾಹನ ಚಾಲಕರ ಕ್ಷೇಮಾಭಿವೃದ್ಧಿ ಮಂಡಳಿ ರಚಿಸಬೇಕು' ಎಂದು ಹೇಳಿದರು.

'ವಿರೋಧ ಪಕ್ಷಗಳು ಅತೃಪ್ತ ಮನಸ್ಸಿನಿಂದ ಹೊರಬಂದು, ಪ್ರಧಾನಿ ಮೋದಿ, ಆರ್‌ಎಸ್‌ಎಸ್ ಟೀಕಿಸುತ್ತಾ ಕಾಲಕಳೆಯುವ ಬದಲು, ಸರ್ಕಾರಕ್ಕೆ ಸೂಕ್ತ ಸಲಹೆ, ಸಹಕಾರ ನೀಡುವ ರಚನಾತ್ಮಕ ವಿರೋಧ ಪಕ್ಷಗಳಾಗಿ ಕೆಲಸ ಮಾಡಬೇಕು' ಎಂದು ಕಿವಿಮಾತು ಹೇಳಿದರು.

ನೋಂದಣಿ ಇಲಾಖೆ :₹ 14,246 ಕೋಟಿ ಆದಾಯ ಸಂಗ್ರಹ

ಬೆಂಗಳೂರು: ರಾಜ್ಯದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ 2021-22ನೇ ಸಾಲಿನಲ್ಲಿ ₹ 14,246 ಕೋಟಿ ಆದಾಯ ಸಂಗ್ರಹವಾಗಿದೆ. ಬೆಂಗಳೂರು ಜಿಲ್ಲೆಯೊಂದರಲ್ಲೇ 9,846 ಕೋಟಿ ದೊರೆತಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಬುಧವಾರ ಬಿಜೆಪಿಯ ಎಚ್.ಎಸ್.ಗೋಪಿನಾಥ್ ಪ್ರಶ್ನೆಗೆ ಉತ್ತರಿಸಿದ ಅವರು, 2020-21ರಲ್ಲಿ ₹ 10,705 ಕೋಟಿ ಆದಾಯ ಬಂದಿತ್ತು ಎಂದು ವಿವರಣೆ ನೀಡಿದರು.





ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

AFFIDAVIT

I, **Mr. HALDRYN ASHLEY STEVE PILLARDTH**, S/o. Mr. Anthony Pillardth & Mrs. Sylvia Pillardth aged about 53 years, presently R/at # 34, Immaculate Abode, 3rd Cross, Papiah Layout, Horamavu, Bengaluru-47 hereby declare that my name is wrongly spelt as **HALDRIN ASHLEY STEVE PILLATH** in certain official records and the correct spelling of my name is **HALDRYN ASHLEY STEVE PILLARDTH** and both names belong to one and the same person, henceforth, I have decided to correct and continue my name as **HALDRYN ASHLEY STEVE PILLARDTH**, vide affidavit dated 13-02-2023 sworn to before advocate & notary A.R. Muneer Ahmed, Bangalore

I,CHITRA CARIAPPA (DOB 12-12-1952) W/o.No.IC-135327 Rank-Brigadier Name- M.M.A. CARIAPPA R/a#134/1, Defence Colony,4th Main Road, 4th Cross, IndiraNagar Bengaluru- 560038 Have`Changed`My Name to MUCKATIRA CHITRA CARIAPPA vide Affidavit Dated 13-2-2023`Sworn Before`Notary D.C.Ravindra, Bengaluru

DURYODHANA, FATHER/O, JC672405Y, SUB, KRISHNACHANDRARAO PERADA, Vill- Pathinivanipeta, Kanithivooru, Nandigam, Srikakulam, Andhra Pradesh changed name DURYODHANA to PERADA DHURYODHANA 14/02/2023 Notary K.V. Mani Bangalore

PARVATAMMA, MOTHER/O, JC672405Y, SUB, KRISHNACHANDRARAO PERADA, Vill- Pathinivanipeta, Kanithivooru, Nandigam, Srikakulam, Andhra Pradesh changed name PARVATAMMA to PERADA PARVATHAMMA 14/02/2023 Notary K.V. Mani Bangalore

I, LUCY Thomas W/o K.N Suresh aged about 54years residing at Aishwarya Nilaya NGO Layout Near Gokul College, Kolar 563101. Have changed my name to Latha vide affidavit dated 04.02.2023 before Notary Venkataswamy Kolar. Henceforth I Shall be called as Latha only

PUBLIC NOTICE

This is to inform the general public that, we, UKN Properties Pvt. Ltd., having our registered office at No.303, Third Floor, A Block, Sy. No. 66/1, Miraya Rose by UK, Siddapura Village, Bangalore - 560066 has either lost or irretrievably misplaced the original of the Sale Deed dated: 15-12-1965 which has been registered as Document No.4181/1965-66, in Block I, Volume No. 562, Pages 151 to 156, in the office of Sub-Registrar, Bangalore South Taluk, in respect of the land measuring an extent of about 1 Acre and 33 Guntas (which is exclusive of 1 Gunta Kharab Land) comprised in Survey No.100/6 of Ramagondanahalli Village, Varthur Hobli, Bangalore South Taluk, Bangalore District while shifting the office from our old address 10th Floor, Gamma Block, Sigma Soft Tech Park, Ramagondanahalli Village, Bangalore 560066 and inspite of our best efforts we are unable to trace the same. In this regard, we have also lodged a complaint online with the Bangalore State Police which is duly acknowledged under Lost Report No.0466517/2023 on 7th February 2023.

Any person/s in possession of the aforesaid original sale deed are hereby notified to forthwith return the same to the undersigned. Members of the public are also cautioned not to deal with any person on the basis of custody of the below mentioned documents and any such transaction's shall not be binding on us.

For UKN Properties Pvt. Ltd.,
Name: Sudhir Kumar Mishra
Mobile: 9880263174
DATE: 16.02.2023
PLACE: Bengaluru

PUBLIC NOTICE

This is to inform the general public that, my client, Sri CHIKKANNA has LOST original Sale deed dated 3/9/1984, executed by Sri Shamanna in favour of Sri Chikkanna and Smt Gallamma same is registered as document No. Doc No 2251/1984-85. REGISTERED in Sub Registrar office, Bangalore.

If any person found this documents can handed over the same to below mentioned advocate office within 7 days from date of publication.

Mr. C. V. LAKSHMI, Advocate
#1662, East End "A" Main,
38th Cross, Jayanagar 9th Block,
Bangalore - 560 069.
94492 59796

THE NEW TOWN CLUB - YELAHANKA®

TENDER

Subject : Request Quotation For Solar Power Unit 32 KW

We are planning to install **SOLAR POWER UNIT** in our club on view of reducing electricity charges.It is estimated that minimum 32 KW power generation is required to cater our purpose.It is hereby requested to refer well known **SOLAR POWER SERVICE PROVIDERS.**

A detailed estimate including all specifications may please be submitted to the undersigned on or before **22nd February, 2023.** Please submit Quotation (Hard copy) at the earliest.

e-mail: ntcynk@gmail.com Ph: 080-28460688

Lost

LOST

I, **Karibasappa,** No:01. 4th Block. Kaveri Sankeerna. Adugodi Police Quatras. Adugodi,Bangalore - 560030, have lost mother deed on the name of **Nathan and P Mangala Nathan** and other relevant documents of registered by Dodda Marappa, DOCUMENT NO. / IDENTIFICATION : Register sale deed No:1045/1994-95 dated 25-08-1994 book no-1. volume No:3913. pages123-128 register off south taluk and registered Sale Deed no 1046/1994-95 dated: 24-08-1994 Book No-1, Volume No 3899, Pages 184-187 registered off South SUB-REG. In this regard I have lodged missing complaint with the Lost Article Report Reference No.0473052/2023 dated : 14.02.23.

If found please contact : 8884010336

JOB OPPORTUNITIES

Teachers/ Professors

St. Joseph's School
(English Medium Residential School)
Applications are invited from
Teachers
Nursery to XII
Sc / Comm. / Arts
Multiple Vacancies (2023 - 2024)
www.sjskhanusa.org/careers/
Apply to
careers@sjskhanusa.org

WANTED LECTURERS in Physics and Mathematics (Full Time), Hindi and Chemistry (Part Time). Apply within 10 days. To the Correspondent, St. Anne's PU College for Girls, Ramamurthynagar, Bangalore- 560016. Contact: 080-25651079/ 40944403.

PUBLIC NOTICE

PUBLIC NOTICE

Take notice that my client has entered into agreements to purchase the commercial units (1,21,948 square feet of super built up area comprised in Upper Basement, Ground Floor, First Floor, Second Floor, Third Floor, Fourth Floor and Fifth Floor, hereinafter referred to as the "Commercial Units") which are being utilized for the purpose of running and operating a hotel and the residential units (Apartment Nos.601, 602, 701, 702, 801, 802, 901, 902, 1001 and 1002, hereinafter referred to as the "Residential Units") comprised in sixth floor to tenth floor of the building known as 'Miraya Residences' constructed on the converted land measuring an extent of about 1 acre 33 guntas (exclusive of 1 gunta kharab land) comprised in Survey No.100/6 of Ramagondanahalli Village, Varthur Hobli, Bangalore South Taluk, now falling within the jurisdiction of BBMP and assigned Municipal No.479/454/338A 100/6, more particularly described in the 'Schedule' hereinbelow and hereinafter, the Commercial Units and Residential Units shall collectively referred to as the "Schedule Properties" with their respective owners (as mentioned below) of the Schedule Properties.

If any person/s, entity, firm, institution (corporate or otherwise) has or claims any right, title, interest, pending litigation or demand of any nature in or upon the Schedule Properties or any part thereof, the same may be brought to the notice of the undersigned in writing, together with all details of the right, title, interest, claim, pending litigation or demand made together with supporting documents within fifteen (15) days from the date of this notice, failing which such claim shall be considered to have been waived and my client shall be entitled to complete the purchase of the Schedule Properties. Objections and/or claims received after the expiry of the period stipulated above shall neither be entertained nor be binding on my client.

SCHEDULE PROPERTIES

All that piece and parcel of the commercial units totally measuring an extent of about 1,21,948 square feet of super built up area comprised in Upper Basement, Ground Floor, First Floor, Second Floor, Third Floor, Fourth Floor and Fifth Floor which are being utilized for the purpose of running and operating a hotel and the residential units comprised in Apartment Nos.601, 602, 701, 702, 801, 802, 901, 902, 1001 and 1002 located on the sixth floor to tenth floor of the building known as 'Miraya Residences', inclusive of proportionate share in common areas such as lobbies, passages, lifts, staircases and other areas of common use with right to use car parking spaces in the Lower Basement, Upper Basement and Ground Floor earmarked for these units along with proportionate undivided share, right, title, interest and ownership in the converted land measuring an extent of about 1 acre 33 guntas (exclusive of 1 gunta kharab land), comprised in Survey No.100/6 of Ramagondanahalli Village, Varthur Hobli, Bangalore South Taluk, now falling within the jurisdiction of BBMP and assigned Municipal No.479/454/338A 100/6 on which Miraya Residences has been constructed as detailed below:-

Unit Nos	Owners	Total area in sq.ft
Upper Basement, Ground Floor, First Floor, Second Floor, Third Floor, Fourth Floor and Fifth Floor	M/s. Indian Chemical Associates and M/s. Kshema Geo Consultants	1,21,948
601	Veeerabhadrappa Sangappa & Company	6,475
602	Gautam Unnikrishnan Nambisan and Vinutha Kondur	6,375
701	M/s. Indian Chemical Associates	6,475
702	M/s. Indian Chemical Associates	6,375
801	Mr.K.S. Shivakumar	6,475
802	Harjeet Sikand and Parveen Sikand	6,375
901	Akshaya Mayur	6,475
902	K.S.Nagaraj and K.S.Sumangala	6,375
1001	Akash Mayur	6,475
1002	K.S.Mayurnath and Latha Mayur	6,375

Mr.Arvind Raghavan
Arvind Raghavan and Associates,
Advocates and Solicitors,
No.48, "ISHITA", 3rd Floor, 2nd Main Road, Vyalikaval,
Bangalore-560003 E: arvind_ncsr@yahoo.com

CONNECT ಕ್ಲಾಸಿಫೈಡ್ಸ್

ವಿಭಿನ್ನ ಮತ್ತು ವೈಶಿಷ್ಟ್ಯಮಯ ರುದ್ರಾಕ್ಷಗಳ ಪ್ರದರ್ಶನ ಮತ್ತು ಮಾರಾಟ

Rudrajyoothi Healing Gallery
Empower Your Self

Rudraksh
ಪ್ರದರ್ಶನ ಮತ್ತು ಮಾರಾಟ

ನಿಮಗೆ ಸೂಕ್ತವಾಗುವ ರುದ್ರಾಕ್ಷ ಸಂಯೋಜನೆಯನ್ನು ತಿಳಿಯಿರಿ
ಜನ್ಮದಿನಾಂಕದ ಆಧಾರದ ಮೇಲೆ ಉಚಿತ ಸಮಾಲೋಚನೆ

ಅಪರೂಪ ಶಿವಶಕ್ತಿ ಮಾಲಾ

- ನಿಮ್ಮ ಜೀವನದಲ್ಲಿ ಅನುರಾಗ ತುಂಬುತ್ತದೆ.
- ಭದ್ರತೆ ಮತ್ತು ಸಮತೋಲನ ನೀಡುತ್ತದೆ.
- ಸಿರಿ, ದೀರ್ಘಾಯುಷ್ಯ, ಅದೃಷ್ಟ ಮತ್ತು ಸುರಕ್ಷೆ ಒದಗಿಸುತ್ತದೆ.
- ಇದನ್ನು ಧರಿಸಿದವರಿಗೆ ಕೌಟುಂಬಿಕ ಒಗ್ಗಟ್ಟು ಮತ್ತು ಬಲಿಷ್ಠ ಬೆಂಬಲ ಒಲಿಯುತ್ತದೆ ಹಾಗೂ ಕೆಲಸದ ಸ್ಥಳದಲ್ಲಿ ಕೂಡ ಲಭಿಸುತ್ತದೆ.
- ಶಕ್ತಿ, ಯಶಸ್ಸು, ಬಾಳಿಕೆ, ಪ್ರೇಮಾನುಭೂತಿ, ವಿಶ್ವಾಸ, ಅಂತಸ್ಸು, ಬುದ್ಧಿಮತ್ತೆ, ಸ್ವಾತಂತ್ರ್ಯ ಇತ್ಯಾದಿಗಳಂತಹ ಮೌಲ್ಯವರ್ಧನೆಗೆ ಶಕ್ತಿಯುತವಾಗಿದೆ.

ಮಹಾಶಿವರಾತ್ರಿ

ಈ ಮಹಾಶಿವರಾತ್ರಿ ಸಪ್ತಾಹದಲ್ಲಿ ದಶಮಿ ಕಾಲದಿಂದ ಚತುರ್ದಶಿ ಅವಧಿಯೊಳಗೆ ರುದ್ರಾಕ್ಷ ಧಾರಣೆ ಮಾಡುವುದನ್ನು, ಪರಿಶುದ್ಧ ಮತ್ತು ಪುಣ್ಯದ ಕಾರ್ಯ ಎಂದು ಹೇಳಲಾಗುತ್ತದೆ.

★ 100% ★ ORIGINAL & GENUINE

ನಿಮ್ಮ ವರ್ತಮಾನ ಮತ್ತು ಭವಿಷ್ಯದ ಬಗ್ಗೆ ಚಿಂತೆಯೇ? ರುದ್ರಾಕ್ಷ ಚಿಕಿತ್ಸೆ ಮುಖಾಂತರ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಿ.

ರುದ್ರಾಕ್ಷ ಚಿಕಿತ್ಸೆ ಮೂಲಕ ಸಾವಿರಾರು ಜನರು ಪ್ರಯೋಜನ ಪಡೆದಿದ್ದಾರೆ. ರುದ್ರಾಕ್ಷವು ಆರೋಗ್ಯ ಸಮಸ್ಯೆಗಳನ್ನು, ಸಂಬಂಧಗಳ ವಿವಾದಗಳನ್ನು, ಉದ್ಯೋಗ ಸಮಸ್ಯೆಗಳನ್ನು, ಹಣಕಾಸು, ಕಾನೂನು ತಗಾದೆಗಳನ್ನು, ವಿದ್ಯಾರ್ಜನೆ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿಯಾಗಿದೆ.

Date : 15th to 21st Feb. 2023
Time : 11 am to 8 pm

ಪ್ರದರ್ಶನದ ವೈಶಿಷ್ಟ್ಯತೆಗಳು

1. ಜನ್ಮದಿನಾಂದ ಆಧಾರದ ಮೇರೆಗೆ ಉಚಿತ ಸಮಾಲೋಚನೆ
2. ಉತ್ಕೃಷ್ಟ ಗುಣಮಟ್ಟದ ಅಸಲಿ ರುದ್ರಾಕ್ಷಗಳು ಕೈಗೆಟಕುವ ಬೆಲೆಗಳಲ್ಲಿ ಲಭ್ಯ. ಎಲ್ಲಾ ಅಪರೂಪದ ರುದ್ರಾಕ್ಷಗಳು ಪ್ರದರ್ಶನದಲ್ಲಿದ್ದು, ಅಪರೂಪದಲ್ಲಿ ಅಪರೂಪವಾದ ಸರ್ವ ಸಿದ್ಧ ಮಾಲಾ (1 ರಿಂದ 14 ಮುಖಿ) ಮತ್ತು ಇಂದ್ರ ಮಾಲಾ (1 ರಿಂದ 21 ಮುಖಿ) ಕೂಡ ದೊರೆಯುತ್ತವೆ.
3. ರುದ್ರಾಕ್ಷ ಮಾಲಾ ತಯಾರಿಕೆಗೆ ಅಭಿಷೇಕ ಉಚಿತ (ಮಾಲೆಯನ್ನು ಸಶಸಕ್ತಗೊಳಿಸುವುದು)
4. ಮರ್ಕ್ಯೂರಿ ಉತ್ಪನ್ನಗಳ ಶ್ರೇಣಿಯಲ್ಲಿ (ಶಿವಲಿಂಗ, ಲಾಕೆಟ್ಸ್, ಬ್ರೇಸ್‌ಲೆಟ್ಸ್), ಸ್ಫಟಿಕ ಯಂತ್ರ ಮತ್ತು ಮಾಲಾ, ವಿಶಿಷ್ಟ ಜೈವಿಕ ಆಭರಣಗಳು ಸಿಗುತ್ತವೆ.

ಸ್ಥಳ: ಕೆನರ ಯೂನಿಯನ್ ಹಾಲ್, 8ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03

9867402789 ; www.rudrajyoothi.com

General

WANTED IMMEDIATELY
Helpers for loading and unloading nearBagaluru.
Contact: 9448488536/ 9844083318

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EXCELLENT BUSINESS OPPORTUNITY

For Retired, Housewives, CA's, Doctors, MLM, Real Estate Consultant, Lecturers/ Professor's, Banking Financial & Services, Chit Fund/ Mutual Fund Agents. VRS, NRI'S Self Employed, Business Owners, Professionals etc.

India's Most trusted, Leading 153 Year old MNC Company offers service oriented DISTRIBUTION with Zero investment

Address: No. 220/A, 2nd Floor, BMW Building, Whitefield Road, Opp to Prestige Shantiniketan, Bangalore-560 048

Ph : 8152022200 / 9246502812

TRAVEL CORNER

India's Biggest Travel Show Network
TTF® TRAVEL & TOURISM FAIR

OPENS TOMORROW

17 18 19 February 2023
Palace Grounds, Tripuravasini (Near Mekhri Circle), Bengaluru

INDIA'S BIGGEST TRAVEL SHOW NETWORK
MUMBAI • BENGALURU • CHENNAI • KOLKATA HYDERABAD • AHMEDABAD • DELHI

Reserved for Travel Trade
17 Feb: 11:00 am - 7:00 pm | 18 Feb: 11:00 am - 2:00 pm
Open to all
18 Feb: 2:00 pm - 7:00 pm | 19 Feb: 11:00 am - 7:00 pm

Meet hundreds of exhibitors from all over India and abroad. Find the best deals in travel and packages for great destinations!

Partner Country: nepal | Incredible India www.incredibleindia.org | Azadi Ka Amrit Mahotsav | G20
Host State: Karnataka One state. Many worlds. www.karnatakatourism.org | Partner States: ODISHA India's best kept secret; Madhya Pradesh The heart of Incredible India | Feature State: kerala Gods Own Country | Featured Exhibitor: EbixCash | via Travel & Holidays
Supported by
Official Publication: travel News Digest | Organised by: FAIRFEST MEDIA LIMITED

Free entry for all visitors* • 022 4555 8555 • www.ttfotm.com
*Visitors below 15 years of age are not allowed during trade hours. (Right of admission reserved)

DH DECCAN HERALD ಪ್ರಜಾವಾಣಿ

BOOK YOUR REAL ESTATE

AD IN
DECCAN HERALD ALL KARNATAKA + PRAJAVANI BENGALURU
ON FRIDAY + SATURDAY + SUNDAY

@ 1070/-* Per Sqcm Single Column

conditions apply*

For More Details Contact:
9731810277 | 9901641752 | 9886213331 | 9845114560
080- 45557163 | 45557164

ಚಿನ್ನಾಭರಣ ಕಳವು: ನೇಪಾಳದ ದಂಪತಿ ಸೇರಿ ಐವರಿಂದ ಕೃತ್ಯ

ಪ್ರಕರಣ ದಾಖಲಾದ ಎರಡು ತಾಸಿನಲ್ಲೇ ಬಂಧನ


ಬಿಕಾಸ್


ಸುಷ್ಮಿತಾ


ರೋಷನ್


ಪ್ರೇಮ್


ಹಿರದಮ್

ಬೆಂಗಳೂರು: ಮನೆಕೆಲಸಕ್ಕೆ ಸೇರಿಕೊಂಡು ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ವಿವಿಧ ಬ್ರ್ಯಾಂಡ್‌ನ ವಾಚ್‌ಗಳನ್ನು ಕಳವು ಮಾಡಿದ್ದ ನೇಪಾಳದ ದಂಪತಿ ಸೇರಿ ಐವರು ಆರೋಪಿಗಳನ್ನು ಜಯನಗರ ಪೊಲೀಸರು ಬಂಧಿಸಿದ್ದಾರೆ.

ನೇಪಾಳದ ದೈಲೇಕ್ ಗ್ರಾಮದ ಬಿಕಾಸ್ (23) ಹಾಗೂ ಆತನ ಪತ್ನಿ ಸುಷ್ಮಿತಾ (22), ಹೇಮಂತ್ ಬಿನ್ ಹಿರದಮ್ (21), ರೋಷನ್ (27), ಪ್ರೇಮ್ (31) ಬಂಧಿತರು. ಜಯನಗರದ 5ನೇ ಬ್ಲಾಕ್‌ನ 5ನೇ ಮುಖ್ಯರಸ್ತೆಯಲ್ಲಿ ದಂಪತಿ ನೆಲೆಸಿದ್ದರು. ಪ್ರಕರಣ ದಾಖಲಾದ ಎರಡು ತಾಸಿನಲ್ಲೇ ಕಳವು ಮಾಡಿದ್ದ ದಂಪತಿಯನ್ನು ಬಂಧಿಸಲಾಯಿತು. ಅದಾದ ಮೇಲೆ ಕಳವು ಪ್ರಕರಣಕ್ಕೆ ನೆರವಾಗಿದ್ದ ಮೂವರು ಆರೋಪಿಗಳನ್ನು ಬಂಧಿಸಲಾಯಿತು ಎಂದು ಮೂಲಗಳು ತಿಳಿಸಿವೆ.

'ಜಯನಗರದ ಎಚ್.ಎಸ್. ಒಬೇದುಲ್ಲಾ ಖಾನ್ ಅವರು ಮನೆಯಲ್ಲಿ ಕೆಲಸಕ್ಕೆಂದು ಇಬ್ಬರೂ ಸೇರಿಕೊಂಡಿದ್ದರು. ಮನೆಯಲ್ಲಿ ಯಾರೂ ಇಲ್ಲದ ವೇಳೆ ನಗ-ನಾಣ್ಯ ಕಳವು ಮಾಡಿ ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಬಂಧಿತ ದಂಪತಿಯಿಂದ ₹ 19.27 ಲಕ್ಷ ಮೌಲ್ಯದ 252 ಗ್ರಾಂ ಚಿನ್ನಾಭರಣ, 168 ಗ್ರಾಂ ಬೆಳ್ಳಿಯ ಆಭರಣ, ರಾಡೊ, ಅರಮಾನಿ, ಫಾಸಿಲ್ ಸೇರಿದಂತೆ ವಿವಿಧ ಬ್ರ್ಯಾಂಡ್‌ನ 18 ವಾಚ್‌ಗಳು, 1 ಸ್ಯಾಮ್‌ಸಂಗ್ ಟ್ಯಾಬ್, 1 ಮೊಬೈಲ್ ವಶಕ್ಕೆ ಪಡೆಯಲಾಗಿದೆ. ಆರೋಪಿಗಳಿಂದ ₹ 21.27 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಜಯನಗರದ ಪೊಲೀಸರು ತಿಳಿಸಿದ್ದಾರೆ.

ಜನ್ಮದಿನಕ್ಕೆ ಉಡುಗೊರೆ ಕೊಡಲು ಬಂದು ಕೊಲೆ


ಕೌಸರ್


ನದೀಮ್

ಬೆಂಗಳೂರು: ಅಶೋಕನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಶಾಲಾ ಶಿಕ್ಷಕಿ ಕೌಸರ್ ಮುಬೀನ್ (35) ಕೊಲೆ ಪ್ರಕರಣದಲ್ಲಿ ಆಕೆಯ ಸ್ನೇಹಿತ, ಆರೋಪಿ ನದೀಮ್ ಪಾಷಾ ಎಂಬಾತನನ್ನು ಮಂಡ್ಯದಲ್ಲಿ ಪೊಲೀಸರು ಬಂಧಿಸಿದ್ದಾರೆ. ಫೆ.13ರಂದು ಈ ಕೊಲೆ ನಡೆದಿತ್ತು.

ಕೌಸರ್ ಮುಬೀನ್ ಕೆಲವು ವರ್ಷಗಳ ಹಿಂದೆ ನದೀಮ್ (ಆರೋಪಿ ಹಾಗೂ ವಿಚ್ಛೇದಿತ ಪತಿ ಹೆಸರು ಒಂದೇ ಆಗಿದೆ) ಜತೆಗೆ ಮದುವೆಯಾಗಿತ್ತು. ಈ ದಂಪತಿಗೆ ಪುತ್ರಿ ಇದ್ದಳು. ಇಬ್ಬರ ನಡುವೆ ಮನಸ್ತಾಪ ಉಂಟಾಗಿ ವಿಚ್ಛೇದನ ಪಡೆದುಕೊಂಡಿದ್ದರು. ಬಳಿಕ ಕೌಸರ್ ಅಶೋಕನಗರದ ನಂಜಪ್ಪ ಸರ್ಕಲ್ ಬಳಿಯ ಮನೆಯಲ್ಲಿ ಪುತ್ರಿಯೊಂದಿಗೆ ವಾಸವಾಗಿದ್ದರು. ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ದುಬೈನಲ್ಲಿ ಚಾಲಕನಾಗಿದ್ದ ಆರೋಪಿ ನದೀಮ್ ಪಾಷಾ 2 ವರ್ಷಗಳ ಹಿಂದೆ ಬೆಂಗಳೂರಿಗೆ ವಾಪಸ್ ಬಂದು ಮೆಕ್ಯಾನಿಕ್ ಕೆಲಸ ಮಾಡಿಕೊಂಡಿದ್ದ. ಈ ವೇಳೆ ಕೌಸರ್ ಜತೆ ಸ್ನೇಹ ಬೆಳೆದು, ಮದುವೆ ಆಗುವಂತೆ ಪದೇಪದೇ ನದೀಮ್ ಪೀಡಿಸುತ್ತಿದ್ದ. ಈ ಮನವಿಯನ್ನು ಆಕೆ ಹಾಗೂ ಕುಟುಂಬದವರು ನಿರಾಕರಿಸಿದ್ದರು. ಇದರಿಂದ ಆತ ಸಿಟ್ಟಾಗಿದ್ದ' ಎಂದು ಪೊಲೀಸರು ಹೇಳಿದರು.

'ಫೆ.13ರಂದು ಕೌಸರ್ ಜನ್ಮದಿನಾಚರಣೆ ಇತ್ತು. ಆಕೆಗೆ ಬೆಳ್ಳಿ ಸಾಮಗ್ರಿ ಉಡುಗೊರೆ ನೀಡಲು ಆರೋಪಿ ಬಂದಿದ್ದ. ಮತ್ತೆ ಮದುವೆಯಾಗುವಂತೆ ಬಲವಂತ ಮಾಡಿದ್ದ. ನಿರಾಕರಿಸಿದ್ದಕ್ಕೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕರ್ನಾಟಕ ಸರ್ಕಾರ
ಕರ್ನಾಟಕ ಚಲನಚಿತ್ರ ಅಕಾಡೆಮಿ
Karnataka Chalanachitra Academy
ಕನ್ನಡ ಚಲನಚಿತ್ರ ಅಮೃತೋತ್ಸವ ಭವನ ಸಂಕೀರ್ಣ, ನಂ. 20/ಎ, ನಂದಿನಿ ಲೇಔಟ್, ಬೆಂಗಳೂರು–560096. ದೂರವಾಣಿ: 080–23493410

ಸಂಖ್ಯೆ: ಕಚಅ/14ನೇ ಬೆಂ.ಅಂ.ಚಿ/ಬ್ರಾಂಡಿಂಗ್ ಇ–ಟೆಂಡರ್/19/2022–23 ದಿನಾಂಕ: 15.02.2023

ಇ–ಟೆಂಡರ್ ಅಧಿಸೂಚನೆ
14ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಬ್ರಾಂಡಿಂಗ್ ಕೆಲಸಗಳಿಗೆ ಇ–ಟೆಂಡರ್ ಪ್ರಕಟಣೆ

14ನೇ ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದ ಬ್ರಾಂಡಿಂಗ್, ಡಿಸ್‌ಪ್ಲೇ ಪೋಸ್ಟರ್ ಮುದ್ರಣ ಮತ್ತು ಮಿಡಿಯಾ ಸೆಂಟರ್ ತೆರೆಯುವ ಕೆಲಸಗಳಿಗೆ ತಗುಲುವ ವೆಚ್ಚದ ಕುರಿತಂತೆ ಇ–ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿ ಕೊಂಡಿರುವ ಅರ್ಹ ಟೆಂಡರ್‌ದಾರರಿಂದ ಇ–ಟೆಂಡರನ್ನು ಆಹ್ವಾನಿಸಲಾಗಿದೆ.

ಆಸಕ್ತ ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ: **15.02.2023 ರಂದು ಮಧ್ಯಾಹ್ನ 3.00 ಗಂಟೆ** ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ–ಟೆಂಡರ್‌ಗಳನ್ನು ಇಎಂಡಿ ಮೊತ್ತ **ರೂ. 54,000/– (ರೂ. ಐವತ್ತ ನಾಲ್ಕು ಸಾವಿರ)** ನ್ನು ಇ–ಪೇಮೆಂಟ್ ಮೂಲಕ **ದಿನಾಂಕ: 02.03.2023ರ ಸಂಜೆ 5.30 ಗಂಟೆಯೊಳಗೆ** ಸಲ್ಲಿಸಬಹುದು. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ ಷರತ್ತುಗಳ ವಿವರ ಇತ್ಯಾದಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **http://www.eproc.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್‌ನ್ನು ದೂರವಾಣಿ ಸಂಖ್ಯೆ: +91–80–46010000 +91–80–22631200 +91–80–68948777 ನ್ನು ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ **ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಕಚೇರಿ (080–23493410)** ಯನ್ನು ಸಂಪರ್ಕಿಸಬಹುದು.

ಸಹಿ/– ರಿಜಿಸ್ಟ್ರಾರ್

DIPR/CP/4729/2022-23

ಕೆ.ಜಿ.ಎಫ್ ಬಾಬು ಬಂಧಿಸಲು ಒತ್ತಾಯ

ಬೆಂಗಳೂರು: 'ನಗರದ ಕೆ.ಎಚ್.ರಸ್ತೆಯ ಎಂ.ಟಿ.ಆರ್ ಹೋಟೆಲ್ ಎದುರು ಇರುವ ವಕ್ಫ್ ಮಂಡಳಿಗೆ ಸೇರಿದ ಬಡಾ ಮಕಾನ್ ದರ್ಗಾದ ಆಸ್ತಿಯನ್ನು ಕೆ.ಜಿ.ಎಫ್. ಬಾಬು ಕಾನೂನುಬಾಹಿರವಾಗಿ ಸ್ವಾಧೀನಪಡಿಸಿಕೊಂಡಿದ್ದು, ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದಿ ಹೆಲ್ಪಿಂಗ್ ಸಿಟಿಜನ್ ಅಂಡ್ ಪೀಪಲ್ಸ್ ಕೋರ್ಟ್ ಸಂಘಟನೆಯ ಅಧ್ಯಕ್ಷ ಆಲಂ ಪಾಷಾ ಆಗ್ರಹಿಸಿದರು.

ಬಾಬು ಮತ್ತು ಅವರಿಗೆ ನೆರವಾದ ವಕ್ಫ್ ಮಂಡಳಿಯ ಅಧ್ಯಕ್ಷ ಮೌಲಾನಾ ಶಫಿ ಸಾಅದಿ ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಎಫ್‌ಐಆರ್ ದಾಖಲಾಗಿದೆ. ಈ ಇಬ್ಬರನ್ನೂ ಬಂಧಿಸಬೇಕು. ಬಡಾ ಮಕಾನ್ ದರ್ಗಾದ 33 ಸಾವಿರ ಚದರಡಿ ಭೂಮಿ ರಕ್ಷಿಸುವಲ್ಲಿ ವಿಫಲವಾಗಿರುವ ಮಂಡಳಿ ಅಧ್ಯಕ್ಷರನ್ನು ಕೂಡಲೇ ವಜಾಗೊಳಿಸಬೇಕು' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಜ.27ರಿಂದ ಫೆ.3ರ ಅವಧಿಯಲ್ಲಿ ಹಲವು ಮಂದಿ ಅಪಾಯಕಾರಿ ಮಾರಕಾಸ್ತ್ರಗಳೊಂದಿಗೆ ತೆರಳಿ, ಜೆಸಿಬಿ ಯಂತ್ರಗಳ ಮೂಲಕ ಕಟ್ಟಡಗಳನ್ನು ಕೆಡವಿ, ಸರಕು ಸಾಗಣೆ ವಾಹನಗಳ ಅವಶೇಷಗಳನ್ನು ಸಾಗಾಟ ಮಾಡಿದ್ದಾರೆ. ಇದರಿಂದ ಮುಸ್ಲಿಂ ಸಮುದಾಯಕ್ಕೆ ನೋವಾಗಿದೆ. ಆದ್ದರಿಂದ ಸರ್ಕಾರವು ಆಸ್ತಿ ರಕ್ಷಿಸಬೇಕು' ಎಂದು ಕೋರಿದರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಮಹಾನಗರ ಆಯುಕ್ತರವರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು–560 052.
ದೂರವಾಣಿ ಸಂಖ್ಯೆ: 080–22263479

ಸಂಖ್ಯೆ: STRRPA/TP/CLU/172/2022-23 ದಿನಾಂಕ: 15.02.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು, ಹೋಬಳಿ, ಗ್ರಾಮ	ಸ.ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	2	3	4	5	6	7
1	ಶ್ರೀ ಸಿ. ಮುನಿರಾಜು ಬಿನ್ ಟಿ. ಎಂ. ಚಿನ್ನಪ್ಪ ಮತ್ತು ಶ್ರೀ ನಾಗೇಶ್ ಬಿನ್ ಶ್ರೀ ಟಿ.ಎಂ. ಚಿನ್ನಪ್ಪ	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	106 108/1	0-27 0-18	ವ್ಯವಸಾಯ	ವಸತಿ
2	ಶ್ರೀ ರಾಧಕೃಷ್ಣ ಹೆಗಡೆ ಬಿನ್ ಲೇಟ್ ಸುಬ್ರಯ ಹೆಗಡೆ	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	105 104 103 102 98 96	0-26 0-07 0-11 0-29 0-14½ 0-15	ವ್ಯವಸಾಯ	ವಸತಿ
3	ಶ್ರೀಮತಿ ಯಲ್ಲಮ್ಮ ಕೋಂ. ಲೇಟ್ ವೆಂಕಟರಮಣಪ್ಪ, ಶ್ರೀ ನಾಗೇಶ್ ಬಿನ್ ಲೇಟ್ ವೆಂಕಟರಮಣಪ್ಪ, ಶ್ರೀಮತಿ ಪ್ರಭಾ ಬಿನ್ ಲೇಟ್ ವೆಂಕಟರಮಣಪ್ಪ	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	99	0-33	ವ್ಯವಸಾಯ	ವಸತಿ
4	ಶ್ರೀ ಮುನಿಯಪ್ಪ ಬಿನ್ ಲೇಟ್ ವೆಂಕಟಪ್ಪ	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	98	0-05¼	ವ್ಯವಸಾಯ	ವಸತಿ
5	ಶ್ರೀಮತಿ ಯಲ್ಲಮ್ಮ ಕೋಂ. ಲೇಟ್ ವೆಂಕಟರಮಣಪ್ಪ,	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	98	0-12¼	ವ್ಯವಸಾಯ	ವಸತಿ
6	ಶ್ರೀ ಪಿ. ನಾಗಪ್ಪ	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	101	0-19	ವ್ಯವಸಾಯ	ವಸತಿ
7	ಶ್ರೀ ಚಿನ್ನಪ್ಪ	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	101	0-26	ವ್ಯವಸಾಯ	ವಸತಿ
8	ಶ್ರೀ ಪಿ. ನಾಗಪ್ಪ ಬಿನ್ ಪಾಪಯ್ಯ	ಆನೇಕಲ್, ಸರ್ಜಾಪುರ, ದೊಡ್ಡತಿಮ್ಮಸಂದ್ರ	100	1-20	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

DIPR/CP/4734/Zen/2022-23

ಶಾಸಕ ಸತೀಶ್ ರೆಡ್ಡಿ ಕೊಲೆಗೆ ಸುಪಾರಿ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿ ಶಾಸಕ ಎಂ.ಸತೀಶ್ ರೆಡ್ಡಿ ಕೊಲೆಗೆ ಸಂಚು ರೂಪಿಸಿದ ಆರೋಪದ ಮೇರೆಗೆ ಇಬ್ಬರು ಆರೋಪಿಗಳನ್ನು ಬೊಮ್ಮನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಆಕಾಶ್ ಹಾಗೂ ಗಿರೀಶ್ ಎಂಬುವರನ್ನು ಬಂಧಿಸಲಾಗಿದೆ.

‘ಶಾಸಕರ ಹತ್ಯೆಗೆ ಸುಪಾರಿ ನೀಡಲಾಗಿದೆ’ ಎಂದು ಆರೋಪಿಸಿ ಶಾಸಕರ ಆಪ್ತ ಸಹಾಯಕ ಹರೀಶ್ ಬಾಬು ದೂರು ನೀಡಿದ್ದರು. ಆದರೆ, ಪೊಲೀಸರು ಎನ್‌ಸಿಆರ್ ಮಾಡಿಕೊಂಡಿದ್ದರು. ಆ ಕ್ರಮ ಪ್ರಶ್ನಿಸಿ ದೂರುದಾರರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಸಿಎಂಎಂ ನ್ಯಾಯಾಲಯವು ಎನ್‌ಸಿಆರ್ ಪ್ರಕರಣವನ್ನು ಪರಿವರ್ತಿಸಿ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಆದೇಶಿಸಿದ ಬೆನ್ನಲ್ಲೇ ಇಬ್ಬರನ್ನು ಬಂಧಿಸಲಾಗಿದೆ.

ವಿಲ್ಸನ್ ಗಾರ್ಡನ್ ನಾಗ ಹಾಗೂ ಅಶೋಕ್ ಮತ್ತಿತರರು ಎಂದು ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆಡಿಯೊ ಆಧರಿಸಿ ಬಂಧಿಸಲಾಗಿದೆ. ಬಂಧಿತರ ವಿಚಾರಣೆ ನಡೆಸಲಾಗುತ್ತಿದೆ. ಸದ್ಯಕ್ಕೆ ಹೆಚ್ಚಿನ ವಿವರ ತಿಳಿಸಲು ಸಾಧ್ಯವಿಲ್ಲ’ ಎಂದು ಡಿಸಿಪಿ ಬಾಬಾ ತಿಳಿಸಿದ್ದಾರೆ.

‘ಫೆಬ್ರುವರಿ 3ರಂದು ಬೊಮ್ಮನಹಳ್ಳಿಯ ಚಂದ್ರು ಎಂಬಾತ ಕರೆ ಮಾಡಿ, ‘ಶಾಸಕರ ಕೊಲೆಗೆ ಸಂಚು ನಡೆದಿದೆ. ಹೊಳಲ್ಕೆರೆಯ ಆಕಾಶ್ ಎಂಬಾತ ತಿಳಿಸಿದ್ದಾನೆ. ಕೊಲೆಗೆ ₹ 2 ಕೋಟಿಗೆ ಸುಪಾರಿ ಕೊಡಲಾಗಿದೆ’ ಎಂದೂ ತಿಳಿಸಿದ್ದ. ಸುಪಾರಿ ಪಡೆದವನ ಭಾವಚಿತ್ರವನ್ನೂ ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದ. ಆ ಫೋಟೊ ಪರಿಶೀಲಿಸಿದಾಗ ವಿಲ್ಸನ್ ಗಾರ್ಡನ್ ನಾಗ ಎಂದು ಗೊತ್ತಾಯಿತು’ ಎಂದು ಆಪ್ತ ಸಹಾಯಕ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದರು.

ಸುಪಾರಿ ಹಿಂದೆ ರಾಜಕೀಯ ಉದ್ದೇಶ

‘ಸುಪಾರಿ ನೀಡಿರುವ ಕುರಿತು ಪೊಲೀಸರಿಗೆ ಆಡಿಯೊ ಸಿಕ್ಕಿದೆ. ನಾನು ಯಾರ ಮೇಲೂ ಆರೋಪ ಮಾಡುವುದಿಲ್ಲ. ಇದರ ಹಿಂದೆ ರಾಜಕೀಯ ಉದ್ದೇಶವಿದೆ ಘಟನೆ ಕುರಿತು ಮುಖ್ಯಮಂತ್ರಿ ಗಮನಕ್ಕೆ ತಂದಿರುವೆ. ಅವರು ಭದ್ರತೆ ತೆಗೆದುಕೊಳ್ಳುವಂತೆ ತಿಳಿಸಿದ್ದಾರೆ. ನನಗೆ ಭದ್ರತೆ ಬೇಡ ಎಂದು ತಿಳಿಸಿದ್ದೇನೆ. ಯಾರಿಗೂ ಭಯ ಪಡುವುದಿಲ್ಲ’ ಎಂದು ಶಾಸಕ ಸತೀಶ್ ರೆಡ್ಡಿ ಪ್ರತಿಕ್ರಿಯಿಸಿದ್ದಾರೆ.

ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ವಿಳಂಬ: ಸ್ಥಳೀಯ ನಿವಾಸಿಗಳ ಎಚ್ಚರಿಕೆ

‘ಯಾವ ಮೇಲ್ಸೇತುವೆ ಆರಂಭಕ್ಕೂ ಬಿಡೆವು’

ಬೆಂಗಳೂರು: ‘ಈಜಿಪುರ ಮೇಲ್ಸೇತುವೆ ಪೂರ್ಣಗೊಳಿಸುವ ಕಾಮಗಾರಿ ಯನ್ನು ಶೀಘ್ರ ಆರಂಭಿಸದಿದ್ದರೆ ನಗರದಲ್ಲಿ ಇನ್ನಾವುದೇ ಹೊಸ ಮೇಲ್ಸೇತುವೆ ಆರಂಭವಾಗಲು ಬಿಡುವುದಿಲ್ಲ. ಎಲ್ಲೆಡೆ ಪ್ರತಿಭಟನೆ, ಧರಣಿ ಆರಂಭಿಸಲಾಗುತ್ತದೆ’ ಎಂದು ಕೋರಮಂಗಲ ನಿವಾಸಿಗಳು ಎಚ್ಚರಿಸಿದ್ದಾರೆ.

ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ಬೇಡ ಎಂದು ನಾಗರಿಕರು ಒತ್ತಾಯ, ಪ್ರತಿಭಟಿಸುತ್ತಿದ್ದರೂ ಅದಕ್ಕೆ ಮಣಿಯದೆ ಬಿಬಿಎಂಪಿ ಕೆಲಸ ಮುಂದುವರಿಸಿದೆ. ಆದರೆ, ಸ್ಥಗಿತಗೊಂಡಿರುವ ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು ಶೀಘ್ರ ಕೈಗೊಳ್ಳಬೇಕು ಎಂದು ಸ್ಥಳೀಯ ನಿವಾಸಿಗಳು ಆಗ್ರಹಿಸುತ್ತಿದ್ದಾರೆ. ಅಲ್ಲದೆ, ಹೈಕೋರ್ಟ್ ಮೂರು ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆ ಮುಗಿಸಬೇಕೆಂದು ಆದೇಶ ನೀಡಿದ್ದರೂ ಬಿಬಿಎಂಪಿ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದ್ದಾರೆ.



ಈಜಿಪುರ ಮೇಲ್ಸೇತುವೆ ಕಾಮಗಾರಿ ಸ್ಥಗಿತಗೊಂಡಿದ್ದು, ಆ ಸ್ಥಳ ತ್ಯಾಜ್ಯ ಎಸೆಯುವ ತಾಣವಾಗಿದೆ

‘ಬಿಬಿಎಂಪಿ ಆಡಳಿತಾಧಿಕಾರಿಯ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದು, ಕೂಡಲೇ ಈಜಿಪುರ ಮೇಲ್ಸೇತುವೆ ನಿರ್ಮಿಸಬೇಕು ಎಂದು ಒತ್ತಾಯಿಸಿದ್ದೇವೆ. ಆದರೆ ಈವರೆಗೆ ಅವರು ನಿಧಾನಗತಿಯನ್ನೇ ಅನುಸರಿಸುತ್ತಿದ್ದಾರೆ. ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸುತ್ತೇವೆ. ಅವರೂ ಕ್ರಮ ಕೈಗೊಳ್ಳದಿದ್ದರೆ ನಗರದಾದ್ಯಂತ ನಾವು ಪ್ರತಿಭಟನೆ ಆರಂಭಿಸುತ್ತೇವೆ’ ಎಂದು ಕೋರಮಂಗಲ ಎಸ್‌ಟಿ ಬೆಡ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜೇಂದ್ರ ಬಾಬು ಹೇಳಿದರು.

‘ಶೇ 42ರಷ್ಟು ಕಾಮಗಾರಿ ಮುಗಿದು ಸ್ಥಗಿತಗೊಂಡಿರುವ ಈಜಿಪುರ ಮೇಲ್ಸೇತುವೆ ಪೂರ್ಣಗೊಳಿಸಲು ಹೈಕೋರ್ಟ್ ಆದೇಶದ ನಂತರ 3 ಬಾರಿ ಟೆಂಡರ್ ಕರೆಯಲಾಗಿತ್ತು. ಜ.25ರಂದು ಟೆಂಡರ್ ತೆರೆಯಬೇಕಾಗಿತ್ತು. ತಾಂತ್ರಿಕ ಬಿಡ್ ಮುಗಿದು, ಹಣಕಾಸು ಬಿಡ್ ಹಂತದಲ್ಲೇ ಬಿಬಿಎಂಪಿ ಕಾಲಕಳೆಯುತ್ತಿದೆ. ಸರ್ಕಾರದ ಅನುಮೋದನೆಗೆ ಕಳುಹಿಸದೆ ವಿಳಂಬ ಮಾಡುತ್ತಿರುವುದರಿಂದ ಚುನಾವಣೆ ಘೋಷಣೆಯಾದರೆ ಎಲ್ಲವೂ ಸ್ಥಗಿತಗೊಳ್ಳುತ್ತದೆ. ಮತ್ತೆ ಸಾಕಷ್ಟು ವಿಳಂಬ ಹಾಗೂ ಇನ್ನಷ್ಟು ಅಧಿಕ ವೆಚ್ಚವಾಗುವ ಸಂಭವವಿದೆ’ ಎಂದರು.

‘ಬಾಕಿ ಉಳಿದ ಕಾಮಗಾರಿಗೆ ಬಹುತೇಕ ಸಮಯಗಳಲ್ಲಿ ಹೆಚ್ಚಿನ ಹಣವನ್ನೇ ನೀಡಿ ಪೂರೈಸಬೇಕಾಗುತ್ತದೆ. ಒಬ್ಬರು ಪೂರ್ಣಗೊಳಿಸದ ಕಾಮಗಾರಿ ಪೂರೈಸಲು ಇನ್ನೊಬ್ಬರು ಬರುವುದು ಕಷ್ಟ. ಕೆಲಸ ಬಿಟ್ಟು ಹೋಗಿರುವ ಗುತ್ತಿಗೆದಾರರಿಂದಲೇ ಮುಂದಿನ ಗುತ್ತಿಗೆದಾರರು ಕೇಳುವ ಹೆಚ್ಚಿನ ಹಣ ಕೊಡಿಸಬಹುದು ಎಂಬ ನಿಯಮವಿದೆ. ಅದನ್ನು ಬಿಬಿಎಂಪಿ ಈ ಪ್ರಕರಣದಲ್ಲಿ ಅಳವಡಿಸಿಕೊಳ್ಳಬಹುದು’ ಎಂದು ಬಿಬಿಎಂಪಿ ತಾಂತ್ರಿಕ ಎಂಜಿನಿಯರ್‌ಗಳೇ ಹೇಳಿದರು.

‘ಮೂರನೇ ಟೆಂಡರ್‌ನಲ್ಲಿ ಹೆಚ್ಚಿಗೆ ಬಿಡ್ ಮಾಡಿದ್ದಾರೆ. ಆ ಮೊತ್ತವನ್ನು ಕಡಿಮೆ ಮಾಡುವಂತೆ ಅವರೊಂದಿಗೆ ಚರ್ಚೆ ನಡೆದಿದೆ. ಅದು ಅಂತಿಮವಾದ ಮೇಲೆ, ಮುಖ್ಯ ಆಯುಕ್ತರ ಸೂಚನೆಯಂತೆ ಮುಂದಿನ ಪ್ರಕ್ರಿಯೆ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಸೂಗೂರು ಹೇಳಿದರು.



ಸ್ಥಳೀಯ ಸಂಚಾರಕ್ಕೆ ಅನುವಾಗುವ ಬ್ಯಾಟರಿ ಚಾಲಿತ ಇ–200 ಅಭಿವೃದ್ಧಿ

ಟ್ರಾಫಿಕ್ ಸವಾಲಿಗೆ ವಿಮಾನದ ಜವಾಬು

• ವಿಶಾಖ ಎನ್.



ಏರೋ ಇಂಡಿಯಾದ ಮಳಿಗೆಯಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಇ–ವಿಮಾನ ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಬೆಂಗಳೂರೂ ಸೇರಿ ಭಾರತದ ಪ್ರಮುಖ ಮಹಾನಗರಗಳಲ್ಲಿ ಸ್ಥಳೀಯ ಸಂಚಾರಕ್ಕೆ ಅನುವಾಗುವ ಬ್ಯಾಟರಿ ಚಾಲಿತ ಇ-200 ಎಂಬ ಪುಟ್ಟ ವಿಮಾನವನ್ನು (ಕಾಂಪ್ಯಾಕ್ಟ್ ಫ್ಲೈಯಿಂಗ್ ಎಲೆಕ್ಟ್ರಿಕ್ ಟ್ಯಾಕ್ಸಿ) ಅಭಿವೃದ್ಧಿಪಡಿಸಲಾಗಿದೆ.

ಚೆನ್ನೈನ ಐಐಟಿ ಮದ್ರಾಸ್‌ನ ಪ್ರೊ. ಸತ್ಯ ಚಕ್ರವರ್ತಿ ನೇತೃತ್ವದ ತಂಡ ಇದನ್ನು ಅಭಿವೃದ್ಧಿಪಡಿಸಿದೆ. ಯಲಹಂಕದ ವಾಯುನೆಲೆಯಲ್ಲಿ ನಡೆಯುತ್ತಿರುವ ‘ಏರೋ ಇಂಡಿಯಾ’ ಪ್ರದರ್ಶನದಲ್ಲಿ ಈ ಪುಟ್ಟ ವಿಮಾನವನ್ನು ನೋಡಬಹುದು.

ಇದು 200 ಕೆ.ಜಿ. ತೂಕ ಹೊರಬಲ್ಲದು. 2 ಫಾರ್ಚ್ಯುನರ್ ಕಾರುಗಳನ್ನು ಸೇರಿಸಿದರೆ ಎಷ್ಟು ಅಗಲ ಆದೀತೊ, ಅಷ್ಟೇ ಅಗಲವಿದೆ. ದೊಡ್ಡ ವಿಮಾನಕ್ಕೆ ಅಗತ್ಯವಿರುವಷ್ಟು ಜಾಗ ಟೇಕಾಫ್‌ಗೆ ಬೇಕಾಗಿಲ್ಲ. 200 ಮೀಟರ್ ಮೇಲೆಯೂ ಇದು ಸಲೀಸಾಗಿ ಸಾಗಬಲ್ಲದು. ಒಬ್ಬ ಪೈಲಟ್ ಹಾಗೂ ಒಬ್ಬ ಪ್ರಯಾಣಿಕ ಇದರಲ್ಲಿ ಸಾಗಬಹುದು.

ಮಹಾನಗರಗಳಲ್ಲಿ ಟ್ರಾಫಿಕ್ ದಟ್ಟಣೆ ಹೆಚ್ಚಾಗಿದ್ದು, ವಿಮಾನ ನಿಲ್ದಾಣ ತಲುಪಲು ಗಂಟೆಗಟ್ಟಲೆ ಸಮಯ ಬೇಕಾಗುತ್ತದೆ. ಈ ವಿಮಾನದ ಮೂಲಕ ನಗರದ ಎಂ. ಜಿ. ರಸ್ತೆಯಿಂದ ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣವನ್ನು ಕೇವಲ 14-15 ನಿಮಿಷಗಳಲ್ಲಿ ತಲುಪಬಹುದು ಎಂದು ಇ-ಪ್ಲೇನ್ ಕಂಪನಿ ತಂಡದ ವಿಷ್ಣು ರಾಮಕೃಷ್ಣನ್ ತಿಳಿಸಿದರು.

ವಿಶ್ವದಲ್ಲೇ ಇಷ್ಟು ಚಿಕ್ಕದಾದ ಬ್ಯಾಟರಿ ಚಾಲಿತ ಫ್ಲೈಯಿಂಗ್ ಟ್ಯಾಕ್ಸಿಯನ್ನು ಯಾರೂ ಇದುವರೆಗೆ ಅಭಿವೃದ್ಧಿಪಡಿಸಿಲ್ಲ ಎನ್ನುವ ಅವರು, ‘ಇದರಲ್ಲಿ ಪ್ರಯಾಣಿಸಲು ಉಬರ್‌ಗೆ ನೀಡುವ ದರಕ್ಕಿಂತ ಮೂರುಪಟ್ಟು ಹೆಚ್ಚು ಖರ್ಚಾಗುತ್ತದಷ್ಟೆ’ ಎನ್ನುತ್ತಾರೆ.

ಈ ಪುಟಾಣಿ ವಿಮಾನದ ತೂಕ 1,400 ಕೆ.ಜಿ. ಒಮ್ಮೆ ಪೂರ್ತಿ ಚಾರ್ಜ್ ಮಾಡಿದರೆ ವೈಮಾನಿಕ ಮಾರ್ಗದಲ್ಲಿ 200 ಕಿ.ಮೀ. ಸಾಗಬಲ್ಲದು. ಎಂ.ಜಿ. ರಸ್ತೆಯಿಂದ ವಿಮಾನ ನಿಲ್ದಾಣಕ್ಕೆ ಐದಾರು ಸಲ ಪ್ರಯಾಣಿಕರನ್ನು ಸಾಗಿಸಲು ಇಷ್ಟು ಸಾಕು ಎನ್ನುವುದು ಇ-200 ಅಭಿವೃದ್ಧಿಪಡಿಸಿದ ತಂಡದ ಲೆಕ್ಕಾಚಾರ. ಈಗ ಹೆಲಿಕಾಪ್ಟರ್‌ನಲ್ಲಿ ಸಾಗಲು ಒಬ್ಬರಿಗೆ ಸುಮಾರು ₹4,500 ಖರ್ಚಾಗುತ್ತದೆ. ಆದರೆ, ಹೆಲಿಪ್ಯಾಡ್ ಇರುವಲ್ಲಿಗೆ ಹೋಗಿಯೇ ಹತ್ತಬೇಕು. ಇ-200 ಲ್ಯಾಂಡ್ ಮಾಡಲು 1,600 ಅಡಿಗಳಷ್ಟು ಖಾಲಿ ಜಾಗ ಸಾಕು. ಸ್ಥಳೀಯ ಆಡಳಿತಗಳ ಜತೆ ಚರ್ಚಿಸಿ ಎಲ್ಲೆಲ್ಲಿ ಇಳಿಸಬಹುದು ಎನ್ನುವ ಅಂತಿಮ ನಿರ್ಧಾರಕ್ಕೆ ಬರಲಾಗುವುದು. ಬೆಂಗಳೂರಿನಲ್ಲಿ 11 ಅತಿ ಎತ್ತರದ ಕಟ್ಟಡಗಳಿದ್ದು, ಅವುಗಳ ಮೇಲೆ ಹೆಲಿಪ್ಯಾಡ್‌ಗಳು ಇವೆ. ಇವನ್ನೆಲ್ಲ ಪರಿಗಣಿಸಿದರೆ ಏರ್ ಟ್ಯಾಕ್ಸಿ ಪರಿಕಲ್ಪನೆಯ ಕನಸನ್ನು ಖಂಡಿತ ನನಸಾಗಿಸಬಹುದು ಎನ್ನುತ್ತಾರೆ ವಿಷ್ಣು.

ಶೇ 30 ರಷ್ಟು ಇಂಧನ ಸದಾ ಕಾಲ ಇರುವಂತೆ ನೋಡಿಕೊಂಡು ವಿಮಾನ ಹಾರಾಟ ಮಾಡಬೇಕು ಎನ್ನುವ ನಿಯಮವಿದೆ. ಈ ಬ್ಯಾಟರಿ ಚಾಲಿತ ವಿಮಾನಕ್ಕೂ ಅದೇ ಅನ್ವಯವಾಗಲಿದೆ. ಕನಿಷ್ಠ ಶೇ 30ರಷ್ಟು ಬ್ಯಾಟರಿ ಚಾರ್ಜ್ ಸದಾ ಉಳಿದಿರುವಂತೆ ನೋಡಿಕೊಳ್ಳಬೇಕು. ಹಾರಾಟಕ್ಕೆ ನಾಗರಿಕ ವಿಮಾನ ಯಾನ ನಿರ್ದೇಶನಾಲಯದ (ಡಿಜಿಸಿಎ) ಅನುಮತಿ ಪಡೆಯುವ ಪ್ರಯತ್ನವನ್ನು ಈಗಾಗಲೇ ಇ-200 ಪ್ಲೇನ್ ಕಂಪನಿ ನಡೆಸಿದೆ. ಇದರ ರೆಕ್ಕೆಗಳು ಸದಾ ಅಳವಡಿಸಿದ ಸ್ಥಿತಿಯಲ್ಲೇ ಇರಲಿವೆ. ಒಂದು ವೇಳೆ ತುರ್ತು ಭೂಸ್ಪರ್ಶ ಮಾಡಬೇಕಾದರೆ ಸಲೀಸಾಗಿ ಕೆಳಗಿಳಿಸಬಲ್ಲ ತಂತ್ರಜ್ಞಾನವಿದೆ. ಇನ್ನು ಒಂದು, ಒಂದೂವರೆ ವರ್ಷದಲ್ಲಿ ಬ್ಯಾಟರಿ ಚಾಲಿತ ಪುಟ್ಟ ವಿಮಾನ ಹಾರಾಟದ ಕನಸು ಸಾಕಾರಗೊಳ್ಳಲಿದೆ ಎನ್ನುವುದು ವಿಷ್ಣು ಅವರ ವಿಶ್ವಾಸ.

ದೇಸಿ ನಿರ್ವಾತ ಶೌಚಾಲಯ ವ್ಯವಸ್ಥೆ

ಕೊಯಮತ್ತೂರಿನ ಜೊನಾಥಾ ಕಂಪನಿಯು ಪೂರ್ಣಪ್ರಮಾಣದ ನಿರ್ವಾತ ಶೌಚಾಲಯ (ವ್ಯಾಕ್ಯುಮ್ ಟಾಯ್ಲೆಟ್) ರೂಪಿಸಿದ್ದು, ಇದನ್ನು ವಂದೇಮಾತರಂ ರೈಲುಗಳಲ್ಲಿ ಅಳವಡಿಸಲಾಗುತ್ತಿದೆ. ಮೆಟ್ರೊ ರೈಲು, ಬಿಎಂಟಿಸಿ ಬಸ್‌ಗಳಲ್ಲಿ ಬಾಗಿಲುಗಳಿಗೆ ಸ್ವಯಂಚಾಲಿತ ವ್ಯವಸ್ಥೆಯನ್ನೂ ಇದೇ ಕಂಪನಿ ಒದಗಿಸಿದೆ. ದೇಶದಲ್ಲಿ ಈ ರೀತಿಯ ಶೌಚಾಲಯವನ್ನು ಮೊದಲ ಬಾರಿಗೆ ತಯಾರಿಸಿರುವುದಾಗಿಯೂ ಕಂಪನಿ ಹೇಳಿಕೊಂಡಿದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಲೋರಾ ಕ್ಷಿಪಣಿ ದೇಶೀಯ ಉತ್ಪಾದನೆಗೆ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮೂರೂ ಸೇನೆಗಳಿಗಾಗಿ ಲೋರಾ(ಲಾಂಗ್ ರೇಂಜ್ ಅಟ್ಯಾಕ್) ಶಸ್ತ್ರಾಸ್ತ್ರವನ್ನು ದೇಶೀಯವಾಗಿ ಉತ್ಪಾದಿಸಲು ಮತ್ತು ಸರಬರಾಜು ಮಾಡಲು ಇಸ್ರೇಲ್ ಏರೋಸ್ಪೇಸ್ ಇಂಡಸ್ಟ್ರೀಸ್(ಐಎಐ) ಜೊತೆ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್(ಬಿಇಎಲ್) ಒಡಂಬಡಿಕೆ ಮಾಡಿಕೊಂಡಿದೆ.

ಭಾರತ ಮತ್ತು ಇಸ್ರೇಲ್ ದೇಶಗಳ ಪಾಲುದಾರಿಕೆಯಲ್ಲಿ ರಕ್ಷಣಾ ಕ್ಷೇತ್ರದಲ್ಲಿ ಅತ್ಯುನ್ನತ ದರ್ಜೆಯ ತಂತ್ರಜ್ಞಾನ ಬೆಳವಣಿಗೆಯಾಗಿದೆ. ಇದರ ಫಲಿತಾಂಶವಾಗಿ ಈ ಒಪ್ಪಂದ ಏರ್ಪಟ್ಟಿದೆ.

ಐಎಐನ ಮಲಮ್ ವಿಭಾಗ ಈ ಲೋರಾ ಶಸ್ತ್ರವನ್ನು ಅಭಿವೃದ್ಧಿಪಡಿಸಿದೆ. ಸಮುದ್ರದಿಂದ ನೆಲಕ್ಕೆ ಮತ್ತು ನೆಲದಿಂದ ನೆಲಕ್ಕೆ ಹಾರಿಸಬಹುದಾದ ದೀರ್ಘ-ಶ್ರೇಣಿಯ ಬ್ಯಾಲಿಸ್ಟಿಕ್ ಕ್ಷಿಪಣಿಯಾಗಿದ್ದು, ವಿಶಿಷ್ಟ ಲಾಂಚರ್, ಕಮಾಂಡ್ ಮತ್ತು ಕಂಟ್ರೋಲ್ ವ್ಯವಸ್ಥೆಯನ್ನು ಒಳಗೊಂಡಿದೆ.

ಹಾನಿ ಮುನ್ಸೂಚನೆ ನೀಡುವ ಕೃತಕ ಬುದ್ಧಿಮತ್ತೆ: ವಿಮಾನ ಹಾನಿಗೀಡಾಗುವ ಸಂಭವ ಇರುವ ಮುನ್ಸೂಚನೆ ನೀಡುವ ಕೃತಕ ಬುದ್ಧಿಮತ್ತೆಯನ್ನು ದೇಶೀಯ ತಂತ್ರಜ್ಞಾನದಲ್ಲಿ ಅಭಿವೃದ್ಧಿಪಡಿಸಲು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು(ಡಿಆರ್‌ಡಿಒ) ಮುಂದಾಗಿದೆ. ಹೈದರಾಬಾದ್‌ನ ಸ್ಮಾರ್ಟ್ ಮಷಿನ್ಸ್ ಮತ್ತು ಸ್ಟ್ರಕ್ಚರ್ಸ್ (ಎಸ್‌ಎಂಎಸ್) ಜತೆ ಸೇರಿ ಈ ಕಾರ್ಯವನ್ನು ಡಿಆರ್‌ಡಿಒ ಆರಂಭಿಸಿದೆ. ಭಾರತೀಯ ನೌಕಾಪಡೆಯ ಯುದ್ಧವಿಮಾನಕ್ಕೆ(ಮಿಗ್ 29ಕೆ) ಈ ತಂತ್ರಜ್ಞಾನವನ್ನು ಎಸ್‌ಎಂಎಸ್ ಅಭಿವೃದ್ಧಿಪಡಿಸಿದೆ.

‘ನೌಕಾಪಡೆಯು ನಮ್ಮ ಈ ಕೃತಕ ಬುದ್ಧಮತ್ತೆ ಮೂಲಕ ವಿಮಾನ ಹಾನಿಗೆ ಒಳಗಾಗುವುದನ್ನು ಅರಿತು ಮುನ್ನೆಚ್ಚರಿಕೆ ವಹಿಸಲು ಅವಕಾಶ ಇದೆ’ ಎಂದು ಎಸ್‌ಎಂಎಸ್ ಸಂಸ್ಥಾಪಕ ಶ್ರೀನಿವಾಸ ಆಲೂರಿ ಹೇಳಿದರು.

ಒಪ್ಪಂದಕ್ಕೆ ಸಹಿ

ಭಾರತೀಯ ಬಹೂಪಯೋಗಿ ಹೆಲಿಕಾಪ್ಟರ್ 13–ಟನ್ ಐಎಂಆರ್‌ಎಚ್ ಹಾಗೂ ಅದರ ನೌಕಾ ಮಾದರಿ ಡಿಬಿಎಂಆರ್‌ಎಚ್ ಎಂಜಿನ್‌ಗಳ ತಯಾರಿಕೆಗಾಗಿ ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಕಾರ್ಯಹಂಚಿಕೆ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿದವು.

ಈ ವಿಷಯವಾಗಿ, ಕಳೆದ ವರ್ಷ ಜುಲೈ 8ರಂದೇ ಎರಡೂ ಕಂಪನಿಗಳ ನಡುವೆ ಒಡಂಬಡಿಕೆ ಆಗಿತ್ತು.

266 ಪಾಲುದಾರಿಕೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು:ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಮಾರು ₹80,000 ಕೋಟಿ ಮೊತ್ತದ 266 ಸಹಭಾಗಿತ್ವಕ್ಕೆ ‘ಬಂಧನ್’ ಕಾರ್ಯಕ್ರಮದಡಿ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬುಧವಾರ ತಿಳಿಸಿದರು.

ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ಒಪ್ಪಂದಗಳನ್ನು ಉತ್ತೇಜಿಸುವ ಉದ್ದೇಶದಿಂದ ‘ಬಂಧನ್’ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದು ಅವರು ತಿಳಿಸಿದರು.

2023–24ರ ಸಾಲಿನ ರಕ್ಷಣಾ ಉತ್ಪನ್ನಗಳ ಖರೀದಿಗಾಗಿ ನಿಗದಿ ಮಾಡಿರುವ ಒಟ್ಟು ಮೊತ್ತದಲ್ಲಿ ಶೇ 75ರಷ್ಟನ್ನು ದೇಶೀಯ ಉದ್ಯಮಕ್ಕೆ ಮೀಸಲಿಡಲಾಗಿದೆ. ಕಳೆದ ಹಣಕಾಸು ವರ್ಷಕ್ಕಿಂತ ಇದು ಶೇ 7ರಷ್ಟು ಅಧಿಕವಾಗಿದೆ ಎಂದರು.

ವಿನ್ಯಾಸ, ಅಭಿವೃದ್ಧಿ, ಉತ್ಪಾದನೆ, ಹೆಲಿಕಾಪ್ಟರ್ ಎಂಜಿನ್‌ಗಳ ಬಾಳಿಕೆಯ ಕ್ಷಮತೆ ಹೆಚ್ಚಿಸುವುದಕ್ಕಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಹಾಗೂ ಫ್ರಾನ್ಸ್‌ನ ಸಫ್ರಾನ್ ಹೆಲಿಕಾಪ್ಟರ್ ಎಂಜಿನ್ ಸಂಸ್ಥೆಗಳ ನಡುವೆ ತಿಳಿವಳಿಕೆ ಒಪ್ಪಂದವಾಗಿದೆ. ಬಿಇಎಲ್ ಹಾಗೂ ಎಡಿಎ ನಡುವೆ ಸುಧಾರಿತ ಮಧ್ಯಮ ಯುದ್ಧ ವಿಮಾನಗಳಿಗಾಗಿ ಒಪ್ಪಂದವಾಗಿದೆ. ಭಾರತದಲ್ಲಿ ರಾಕೆಟ್‌ಗಳ (122 MM GRAD BMER ಹಾಗೂ NONER) ಉತ್ಪಾದನೆಗೆ ಬಲ್ಗೇರಿಯಾದ ಬುಲ್ಸ್ ಎಕ್ಸ್‌ಪ್ರೋ ಲಿಮಿಟೆಡ್ ಕಂಪನಿಯ ನಡುವೆ ಭಾರತ್ ಡೈನಾಮಿಕ್ಸ್ ಲಿಮಿಟೆಡ್ ಒಪ್ಪಂದ ಮಾಡಿಕೊಂಡಿದೆ ಎಂದು ಅವರು ವಿವರಿಸಿದರು.

ನವಭಾರತದ ಹೊಸ ರಕ್ಷಣಾ ವಲಯವನ್ನೇ ‘ಏರೋ ಇಂಡಿಯಾ’ ಜಗತ್ತಿಗೆ ಪ್ರದರ್ಶಿಸಿದೆ. ಇಂತಹ ಪ್ರದರ್ಶನವನ್ನು ಆಯೋಜಿಸಲು ಕರ್ನಾಟಕಕ್ಕಿಂತ ಉತ್ತಮ ರಾಜ್ಯ ಬೇರೊಂದಿಲ್ಲ. ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಈ ರಾಜ್ಯ ಅಷ್ಟು ಸಕ್ರಿಯವಾಗಿ ತೊಡಗಿಕೊಂಡಿದೆ ಎಂದು ಶ್ಲಾಘಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಕ್ಷಣಾ ಸಿಬ್ಬಂದಿ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್, ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ, ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ಆರ್. ಹರಿಕುಮಾರ್, ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಇದ್ದರು.

ನವೋದ್ಯಮಕ್ಕೆ ಸುಗ್ಗಿ

ರಕ್ಷಣಾ ವಲಯದಲ್ಲಿ ನವೋದ್ಯಮಗಳನ್ನು ಉತ್ತೇಜಿಸುವ ಉದ್ದೇಶದಿಂದ ಐಡೆಕ್ಸ್ (https://idex.gov.in/) ಎಂಬ ಹೂಡಿಕೆ ತಾಣಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಏರೋ ಇಂಡಿಯಾ ಪ್ರದರ್ಶನದಲ್ಲಿ ಬುಧವಾರ ಚಾಲನೆ ನೀಡಿದರು. ಈ ಜಾಲತಾಣದ ಮೂಲಕವೇ ₹ 200 ಕೋಟಿಯಷ್ಟು ಬಂಡವಾಳ ಹೂಡಿಕೆ ಸಾಧ್ಯವಾಗಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಸೈಬರ್ ಭದ್ರತೆ ಕುರಿತಂತೆ 28 ಸಮಸ್ಯೆಗಳನ್ನು ಪಟ್ಟಿಮಾಡಿದ್ದು, ಅವುಗಳನ್ನು ಪರಿಹರಿಸುವ ಸವಾಲುಗಳಿವೆ ಎಂದು ಹೇಳಿದ ಅವರು, ‘ಡಿಫೆನ್ಸ್ ಇಂಡಿಯಾ ಸ್ಟಾರ್ಟ್‌ಅಪ್ ಚಾಲೆಂಜಸ್’ನ (ಡಿಐಎಸ್ಸಿ 9) ಒಂಬತ್ತನೇ ಆವೃತ್ತಿ ಮೂಲಕ ಈ ಸವಾಲುಗಳನ್ನು ಅವರು ಅನಾವರಣಗೊಳಿಸಿದರು.

ದೇಶದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ನವೋದ್ಯಮಗಳು ತಲೆಎತ್ತಿದ್ದು, ಅಭಿವೃದ್ಧಿಯಲ್ಲಿ ಅವುಗಳ ಕೊಡುಗೆ ಮಹತ್ವದ್ದು ಎಂದು ಶ್ಲಾಘಿಸಿದರು.

‘ಡಿಐಎಸ್ ಸಿ 6’, ‘ಐಡೆಕ್ಸ್ ಪ್ರೈಮ್’ನ ಮೊದಲ ಮೂರು ಆವೃತ್ತಿಗಳ ಸವಾಲುಗಳಿಗೆ ಜವಾಬು ಕೊಟ್ಟ ವಿಜೇತರನ್ನು ಹಾಗೂ ರಕ್ಷಣಾ ಬಾಹ್ಯಾಕಾಶ (ಮಿಷನ್ ಡೆಫ್‌ಸ್ಪೇಸ್) ಮಿಷನ್ ಅಡಿಯಲ್ಲಿ ಸ್ಪರ್ಧೆಯ ಒಂದನೇ ಹಂತದ ವಿಜೇತರನ್ನು ಗೌರವಿಸಲಾಯಿತು.

ಗರುಡ ಏರೋಸ್ಪೇಸ್ ಕಂಪನಿಯಿಂದ ಅಭಿವೃದ್ಧಿ

ಸ್ವಿಗ್ಗಿ ಆಹಾರ ಹೊತ್ತು ಸಾಗಲಿವೆ ಡ್ರೋನ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಸ್ವಿಗ್ಗಿ ಆ್ಯಪ್‌ನಲ್ಲಿ ಆಹಾರ ಪೂರೈಕೆಗೆ ಆರ್ಡರ್ ಮಾಡಿದರೆ ಅದನ್ನು ಮುಂದಿನ ದಿನಗಳಲ್ಲಿ ಹೊತ್ತು ಡೆಲಿವರಿ ಬಾಯ್ ತರುವುದಿಲ್ಲ, ಬದಲಿಗೆ ಡ್ರೋನ್ ಬರಲಿದೆ!

ಹೌದು, ಆಹಾರ ಹೊತ್ತು ಬರುವ ಡ್ರೋನ್ ಈಗ ಸಿದ್ಧವಾಗಿದೆ. ಗರುಡ ಏರೋಸ್ಪೇಸ್ ಕಂಪನಿ ಅಭಿವೃದ್ಧಿಪಡಿಸಿರುವ ಡ್ರೋನ್, ಏರೋ ಇಂಡಿಯಾ–2023ರಲ್ಲಿ ಪ್ರದರ್ಶನಗೊಳ್ಳುತ್ತಿದೆ.

‘ಡೆಲಿವರಿ ಡ್ರೋನ್’ ಎಂದೇ ಇದಕ್ಕೆ ಹೆಸರಿಡಲಾಗಿದ್ದು, ಸದ್ಯಕ್ಕೆ 5 ಕೆ.ಜಿ ತೂಕ ಹೊರುವ ಸಾಮರ್ಥ್ಯವನ್ನು ಹೊಂದಿದೆ. ಮುಂದಿನ ದಿನಗಳಲ್ಲಿ 10 ರಿಂದ 15 ಕೆ.ಜಿ ಸಾಮರ್ಥದ ಡ್ರೋನ್ ಅಭಿವೃದ್ಧಿಪಡಿಸುವ ಸಿದ್ಧತೆಯಲ್ಲೂ ಗರುಡ ಕಂಪನಿ ಇದೆ.

‘ಸ್ವಿಗ್ಗಿ ಜತೆಗೆ ಈ ಕಂಪನಿ ಮಾತುಕತೆ ನಡೆಸಿದ್ದು, 2 ಕಿಲೋ ಮೀಟರ್ ವ್ಯಾಪ್ತಿಯೊಳಗಿನ ಮನೆಗಳಿಗೆ ಆಹಾರ ಪೂರೈಕೆ ಮಾಡಲಿದೆ. ಮುಂದಿನ ದಿನಗಳಲ್ಲಿ 8 ಕಿಲೋ ಮೀಟರ್ ವ್ಯಾಪ್ತಿಗೂ ವಿಸ್ತರಿಸುವ ಸಾಮರ್ಥ್ಯ ಹೊಂದಲಿದ್ದೇವೆ. 18.8 ಕೆ.ಜಿ ತೂಕದ ಈ ಡ್ರೋನ್, ಸೆಕೆಂಡ್‌ಗೆ 10 ಮೀಟರ್ ವೇಗದಲ್ಲಿ ಸಾಗಲಿದೆ’ ಎಂದು ಕಂಪನಿಯ ಅಧಿಕಾರಿಗಳು ವಿವರಿಸುತ್ತಾರೆ.

200 ಮೀಟರ್ ಎತ್ತರದಲ್ಲಿ ಇದು ಹಾರಾಟ ನಡೆಸಲಿದ್ದು, ಯಾವುದೇ ಅಡೆತಡೆಗಳಲ್ಲದೆ ಸಾಗಲಿದೆ. ಇದಕ್ಕೆ ಪ್ರತ್ಯೇಕ ಆ್ಯಪ್ ಅಭಿವೃದ್ಧಿಪಡಿಸಲಾಗುತ್ತಿದ್ದು, ಎಲ್ಲಾ ಪ್ರಕ್ರಿಯೆಯೂ ಅಂತಿಮ ಹಂತದಲ್ಲಿದೆ ಎಂದು ಕಂಪನಿಯ ಸಿಇಒ ಅಗ್ನೀಶ್ವರ್ ಜಯಪ್ರಕಾಶ್ ಹೇಳಿದರು.

ಆಹಾರ ಪದಾರ್ಥ ಮಾತ್ರವಲ್ಲದೇ ಔಷಧ ಪದಾರ್ಥಗಳ ಸಾಗಣೆಯನ್ನೂ ಮಾಡಬಹುದು. ಜತೆಗೆ ರಕ್ಷಣಾ ಕ್ಷೇತ್ರಕ್ಕೂ ಬಳಕೆ ಮಾಡಿಕೊಳ್ಳಬಹುದಾಗಿದೆ. ಈ ಕುರಿತೂ ಮಾತುಕತೆ ನಡೆಯುತ್ತಿದೆ ಎಂದರು.

ಕೀಟನಾಶಕ ಸಿಂಪಡಣೆಗೂ ಡ್ರೋನ್



ಗರುಡ ಕಂಪನಿ ಸಿದ್ಧಪಡಿಸಿರುವ ಡೆಲಿವರಿ ಡ್ರೋನ್ –ಪ್ರಜಾವಾಣಿ ಚಿತ್ರ

ಹಳ್ಳಿ-ಹಳ್ಳಿಗೂ ಡ್ರೋನ್ ಒದಗಿಸಲು ಗರುಡ ಕಂಪನಿ ಮುಂದಾಗಿದ್ದು, ಈ ಸಂಬಂಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜತೆ ಒಡಂಬಡಿಕೆ ಮಾಡಿಕೊಂಡಿದೆ. ಒಂದು ಸಾವಿರಕ್ಕೂ ಹೆಚ್ಚು ಹಳ್ಳಿಗಳನ್ನು ಕಂಪನಿ ಸಂಪರ್ಕ ಮಾಡಿದೆ.

‘ರೈತರ ಜಮೀನಿನಲ್ಲಿ ಕೀಟನಾಶಕ ಸಿಂಪಡಣೆ ಮಾಡಲು ಪ್ರತ್ಯೇಕ ಡ್ರೋನ್ ಅಭಿವೃದ್ಧಿಪಡಿಸಿದೆ. ದೇಶದಲ್ಲಿ 6.3 ಲಕ್ಷ ಹಳ್ಳಿಗಳಿದ್ದು, ಎಲ್ಲಾ ಹಳ್ಳಿಗಳಿಗೂ ಡ್ರೋನ್ ಪೂರೈಸುವ ಉದ್ದೇಶ ಇದೆ. ಡ್ರೋನ್ ಚಾಲನೆ ಮಾಡಲು ರಿಮೋಟ್ ಪೈಲಟ್ ತರಬೇತಿಯನ್ನೂ ಕಂಪನಿ ನೀಡಲಿದೆ. ರಿಮೋಟ್ ಪೈಲಟ್ ಟ್ರೈನಿಂಗ್ ಆರ್ಗನೈಸೇಷನ್(ಆರ್‌ಟಿಪಿಒ) ಕೂಡ ಕಂಪನಿ ಹೊಂದಿದೆ. ಹಳ್ಳಿಗೆ ಒಬ್ಬರಂತೆ 6.3 ಲಕ್ಷ ಜನರಿಗೆ ಉದ್ಯೋಗ ಸಿಗಲಿದೆ’ ಎಂದು ಕಂಪನಿಯ ಉಪಾಧ್ಯಕ್ಷ ರವಿಕುಮಾರ್ ಹೇಳಿದರು.

ಸರ್ಕಾರದಿಂದ ಇದಕ್ಕೆ ಸಬ್ಸಿಡಿ ದೊರಕಲಿದ್ದು, ಎಷ್ಟು ಮೊತ್ತ ಎಂಬುದು ಇನ್ನೂ ಅಂತಿಮವಾಗಿಲ್ಲ. ಬ್ಯಾಂಕ್ ಸಾಲವೂ ದೊರಕಲಿದೆ ಎಂದರು.

‘ನಮ್ಮ ಕಂಪನಿಯ ಎಲ್ಲಾ ಡ್ರೋನ್‌ಗಳಿಗೂ ಐಐಎಸ್‌ಸಿಯಿಂದ(ಭಾರತೀಯ ವಿಜ್ಞಾನ ಸಂಸ್ಥೆ) ತಾಂತ್ರಿಕ ಸಹಕಾರ ಪಡೆದುಕೊಳ್ಳಲಾಗಿದೆ. ಆ್ಯಪ್ ಆಧಾರಿತ ಟ್ಯಾಕ್ಸಿ ಬುಕ್ ಮಾಡುವ ಮಾದರಿಯಲ್ಲೇ ರೈತರು ಡ್ರೋನ್ ಬುಕ್ ಮಾಡಿ ಕರೆಸಿಕೊಳ್ಳಬಹುದು’ ಎಂದು ಹೇಳಿದರು.

‘ಏರೋ ಇಂಡಿಯಾ’: ಪರ್ಯಾಯ ರಸ್ತೆ ಬಳಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ವಾಯುನೆಲೆಯಲ್ಲಿ ನಡೆಯುತ್ತಿರುವ ‘ಏರೋ ಇಂಡಿಯಾ-2023’ರ ವೈಮಾನಿಕ ಪ್ರದರ್ಶನ ವೀಕ್ಷಣೆಗೆ, ಫೆ.16 ಹಾಗೂ 17ರಂದು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದ್ದು, ಬಳ್ಳಾರಿ ರಸ್ತೆ ಮೂಲಕ ತೆರಳುವ ವಾಹನ ಸವಾರರು ಪರ್ಯಾಯ ರಸ್ತೆ ಬಳಸುವಂತೆ ಪೊಲೀಸರು ಸೂಚಿಸಿದ್ದಾರೆ.

ಈ ಎರಡು ದಿನವೂ ಸಾವಿರಾರು ಮಂದಿ ಪ್ರದರ್ಶನ ವೀಕ್ಷಣೆಗೆ ಬರುವ ಸಾಧ್ಯತೆಯಿದ್ದು, ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳುವ ಹಾಗೂ ಅಲ್ಲಿಂದ ನಗರಕ್ಕೆ ಆಗಮಿಸುವ ವಾಹನಗಳು ಹೆಣ್ಣೂರು–ಬಾಗಲೂರು ರಸ್ತೆ ಬಳಸುವಂತೆ ಕೋರಲಾಗಿದೆ.

ಸಾರ್ವಜನಿಕರಿಗೆ ಜಿ.ಕೆ.ವಿ.ಕೆ ಆವರಣ ಹಾಗೂ ಜಕ್ಕೂರು ಆವರಣದಲ್ಲಿ ವಾಹನ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿದೆ. ಬಿಎಂಟಿಸಿಯಿಂದ ಒದಗಿಸಿರುವ ಬಸ್‌ಗಳ ಮೂಲಕ ಏರ್ ಶೋ ನಡೆಯುವ ಸ್ಥಳಕ್ಕೆ ತಲುಪಬಹುದು ಎಂದು ಪೊಲೀಸರು ತಿಳಿಸಿದ್ದಾರೆ.

ಬಳ್ಳಾರಿ ರಸ್ತೆಯಲ್ಲಿ ಎರಡೂ ದಿನವೂ ಬೆಳಿಗ್ಗೆ 6ರಿಂದ ರಾತ್ರಿ 10ರ ತನಕ ಎಲ್ಲ ರೀತಿಯ ಸರಕು ಸಾಗಣೆ ಹಾಗೂ ಬೃಹತ್ (ಬಿ.ಎಂ.ಟಿ.ಸಿ ಬಸ್ ಹೊರತು ಪಡಿಸಿ) ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ನಾಗೇನಹಳ್ಳಿ ಗೇಟ್‌ನಿಂದ ಗಂಟಿಗಾನಹಳ್ಳಿ ಮಾರ್ಗವಾಗಿ ಬೆಂಗಳೂರು–ಬಳ್ಳಾರಿ ರಸ್ತೆ ಸೇರುವ ಆಂಬಿಯನ್ಸ್ ಡಾಬಾ ಕ್ರಾಸ್‌ವರೆಗೆ ರಸ್ತೆಯ ಎರಡೂ ಬದಿಯಲ್ಲೂ ವಾಹನ ನಿಲುಗಡೆ ನಿಷೇಧಿಸಲಾಗಿದೆ.

ಮೇಖ್ರಿ ವೃತ್ತದಿಂದ ದೇವನಹಳ್ಳಿ ತನಕ ರಸ್ತೆಯ ಎರಡೂ ಬದಿಯಲ್ಲೂ ವಾಹನ ನಿಲುಗಡೆ ನಿಷೇಧಿಸಲಾಗಿದೆ. ರಿಂಗ್ ರಸ್ತೆಯ ಗೊರಗುಂಟೆ ಪಾಳ್ಯದ ಜಂಕ್ಷನ್‌ನಿಂದ ಹೆಣ್ಣೂರು ಕ್ರಾಸ್ ಜಂಕ್ಷನ್ ವರೆಗೆ ರಸ್ತೆಯ ಎರಡೂ ಬದಿಯಲ್ಲೂ ವಾಹನ ನಿಲುಗಡೆಗೆ ಅವಕಾಶ ಇಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

‘ಸೂರ್ಯಕಿರಣ’ಕ್ಕೆ 6 ತಿಂಗಳ ತಾಲೀಮು

ಪ್ರಜಾವಾಣಿ ವಾರ್ತೆ



ವೈಮಾನಿಕ ಪ್ರದರ್ಶನ ನಡೆಸುತ್ತಿರುವ ‘ಸೂರ್ಯಕಿರಣ’ ವಿಮಾನಗಳು –ಪ್ರಜಾವಾಣಿ ಚಿತ್ರ

ಬೆಂಗಳೂರು: ‘ವೈಮಾನಿಕ ಪ್ರದರ್ಶನ ನೀಡಲು ಆರು ತಿಂಗಳು ನಿರಂತರ ತಾಲೀಮು ನಡೆಯುತ್ತದೆ. ದೈತ್ಯ ವಿಮಾನಗಳನ್ನು ಪಳಗಿಸಿದ ಅನುಭವ ಇರಬೇಕು, ದೇಹದ ತೂಕದಲ್ಲಿ ಸಮತೋಲನ ಕಾಯ್ದುಕೊಳ್ಳಬೇಕು...’

ಇದು ಯಲಹಂಕ ವಾಯುನೆಲೆಯಲ್ಲಿ ನಡೆಯುತ್ತಿರುವ ವೈಮಾನಿಕ ಪ್ರದರ್ಶನದ ಕೇಂದ್ರ ಬಿಂದು ‘ಸೂರ್ಯಕಿರಣ’ ತಂಡದ ವಿಂಗ್ ಕಮಾಂಡರ್ ದಿಲ್ಲಾನ್ ಅವರು ಅನುಭವ ಹಂಚಿಕೊಂಡರು.

‘ಸುಖೋಯ್, ರಫೇಲ್ ರೀತಿಯ ದೈತ್ಯ ವಿಮಾನಗಳನ್ನು ಪಳಗಿಸಿದ ಅನುಭವ ಇರಬೇಕು. ನಿತ್ಯ 7ರಿಂದ 8 ತಾಸು ನಿದ್ರೆ ಆಗಲೇಬೇಕು. ಏರೋ ಇಂಡಿಯಾ ಮತ್ತು ಭಾರತೀಯ ವಾಯುಸೇನೆ ದಿನಾಚರಣೆ ಸಂದರ್ಭದಲ್ಲಿ ನೀಡುವ ವೈಮಾನಿಕ ಪ್ರದರ್ಶನಗಳು ನಮಗೆ ಸ್ಮರಣೀಯ ಕ್ಷಣಗಳ ಜೊತೆಗೆ ಸವಾಲು ಕೂಡ’ ಎಂದರು.

ಸೂರ್ಯಕಿರಣ್ ಅತ್ಯಂತ ವೇಗವಾಗಿ ಹಾರುವ ಮತ್ತು ಅತಿ ಹೆಚ್ಚು ಸಾಮರ್ಥ್ಯದ ವಿಮಾನ. ಇವುಗಳನ್ನು ಚಾಲನೆ ಮಾಡುವುದು ಸಂತಸದ ವಿಷಯ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಕೋಲಾರ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ–563101.
ದೂರವಾಣಿ ಸಂಖ್ಯೆ: 08152–222570, ಇ–ಮೇಲ್ : eepredkolar1@gmail.com

ಅಲ್ಪಾವಧಿ ಏಕ–ಲಕೋಟೆ ಟೆಂಡರ್ ಇ–ಪ್ರಕ್ಯೂರ್‌ಮೆಂಟ್
ಪ್ರಕಟಣೆ ಸಂಖ್ಯೆ: 32/2022–23 ದಿನಾಂಕ: 13.02.2023

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-I &II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ಏಕ–ಲಕೋಟೆ ಪದ್ಧತಿಯಲ್ಲಿ (Single Cover System) ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಕೋಲಾರ ಜಿಲ್ಲೆಯ 07 ಸಂಖ್ಯೆ ವಿವಿಧ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸುತ್ತಿದ್ದು, ಇದರಲ್ಲಿ 03 ಸಂಖ್ಯೆ ಪ.ಜಾತಿ ಇಂಡೆಂಟ್ ಸಂಖ್ಯೆ: 98337, 100385, 95361 ಮತ್ತು 01 ಸಂಖ್ಯೆ ಪರಿಶಿಷ್ಟ ಪಂಗಡ ಇಂಡೆಂಟ್ ಸಂಖ್ಯೆ: 100400 ಹಾಗೂ ಸಾಮಾನ್ಯ ವರ್ಗಕ್ಕೆ ಇಂಡೆಂಟ್ ಸಂಖ್ಯೆ: 97309, 97615 ಮತ್ತು 100382 ಗಳು ಆಗಿರುತ್ತವೆ. ಟೆಂಡರ್‌ಗಿಟ್ಟ ಮೊತ್ತ ಸರಾಸರಿ: ರೂ.5.10 ರಿಂದ 41.20 ಲಕ್ಷಗಳು ಆಗಿರುತ್ತದೆ. ಇ.ಎಂ.ಡಿ ಮತ್ತು ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ ಮುಂತಾದ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್: https://eproc.karnataka.gov.in ಮುಖಾಂತರ ಪಡೆದು ಇ–ಟೆಂಡರ್‌ಗಳಲ್ಲಿ ಭಾಗವಹಿಸಲು ಕೋರಲಾಗಿದೆ. ಇ–ಪ್ರೋಟಾಲ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಆರೋಹಿಸಿ ಸಲ್ಲಿಸಲು ಕೊನೆಯ **ದಿನಾಂಕ:03.03.2023 ರ ಸಂಜೆ 04.00 ರವರೆಗೆ.** (2) ಟೆಂಡರ್‌ಗಳನ್ನು ಇ–ಪ್ರೋಟಾಲ್‌ನಲ್ಲಿ ತೆರೆಯುವ **ದಿನಾಂಕ: 04.03.2023 ರಂದು ಸಂಜೆ 04.30 ಗಂಟೆಗೆಂದು** ನಿಗದಿಪಡಿಸಲಾಗಿದೆ. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: **91 8046010000 & +91 8022631200, 080–22230960 & 22234115.** ಅನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ514/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

ಎಲ್.ಎಸ್. ಶೇಷಗಿರಿರಾವ್ ಅವರ ‘ಸಂಚಯ’ ಮತ್ತು ಶಿವಕುಮಾರ್ ಡಿ.ಬಿ. ಅವರ ‘ಎಲ್.ಎಸ್. ಶೇಷಗಿರಿರಾವ್ ಅವರ ಜೀವನ ಮತ್ತು ಸಾಹಿತ್ಯ’ ಪುಸ್ತಕಗಳ ಬಿಡುಗಡೆ: ಬಾಬು ಕೃಷ್ಣಮೂರ್ತಿ, ಅಧ್ಯಕ್ಷತೆ: ದೊಡ್ಡರಂಗೇಗೌಡ, ಅತಿಥಿಗಳು: ಟಿ.ಎನ್. ವಾಸುದೇವಮೂರ್ತಿ, ಉಪಸ್ಥಿತಿ: ಭಾರತಿ ಶೇಷಗಿರಿರಾವ್, ಶಿವಕುಮಾರ್ ಡಿ.ಬಿ., ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.30

ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನಾ ಕಾರ್ಯಕ್ರಮ: ಅತಿಥಿಗಳು: ಅನಂತನಾಗ್, ಗಾಯತ್ರಿ ನಾಗ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಬೆಳಿಗ್ಗೆ 11.30

ಪ್ರವಚನ ವಾಹಿನಿ ಕಾರ್ಯಕ್ರಮ: ‘ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಹಾಗೂ ಪ್ರವಚನ’ ಕುರಿತು ಉಪನ್ಯಾಸ: ಅರಳು ಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

‘ಶ್ರೀಮದ್ಭಾಗವತ’ ಪ್ರವಚನ: ಖೇಡಾ ಪ್ರಮೋದಾಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಸಂಜೆ 7

‘ಚೋರಪುರಾಣ’ ನಾಟಕ ಪ್ರದರ್ಶನ: ನಿರ್ದೇಶನ- ಮಂಜುನಾಥ ಎಲ್. ಬಡಿಗೇರ, ಸ್ಥಳ- ರಂಗಶಂಕರ, ಜೆ.ಪಿ. ನಗರ ಸಂಜೆ 7.30

ಭರತನಾಟ್ಯ ಪ್ರದರ್ಶನ: ನರ್ತನಯೋಗ ಸಂಸ್ಥೆಯ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ, ಸಂಜೆ 6.30

ಅಂಬೇಡ್ಕರ್ ಬರಹ, ಭಾಷಣಕ್ಕೆ ಆಡಿಯೊ ರೂಪ

ಕೋಲಾರ: ಆನಂದ್ ಸಿದ್ಧಾರ್ಥ ಅವರ ‘ಸ್ಯಾಮ್ ಆಡಿಯೊ’ ಸಂಸ್ಥೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಬರಹ ಹಾಗೂ ಭಾಷಣದ 22 ಸಂಪುಟಗಳನ್ನು ಆಡಿಯೊ ರೂಪದಲ್ಲಿ ಹೊರತರುತ್ತಿದೆ. ಫೆ.19ರಂದು ಮಾಲೂರಿನಲ್ಲಿ ಪ್ರಥಮ ಸಂಪುಟದ ಆಡಿಯೊ ಬಿಡುಗಡೆ ಮಾಡಲಾಗುತ್ತಿದೆ.

ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಸಂಪುಟದ ಆಡಿಯೊ ಬಿಡುಗಡೆ ಮಾಡುವ ಯೋಜನೆ ಇದೆ ಎಂದು ಉಪನ್ಯಾಸಕ ಮಂಜುನಾಥ್ ಆರ್.ಹುಣಸಿಕೋಟೆ ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ದೇಶದಲ್ಲಿಯೇ ಪ್ರಥಮ ಬಾರಿ ಅಂಬೇಡ್ಕರ್ ಅವರ ಸಂಪೂರ್ಣ ಬರಹ–ಭಾಷಣಗಳನ್ನು ಆಡಿಯೊ ಬುಕ್ ರೂಪದಲ್ಲಿ ತರಲಾಗುತ್ತಿದೆ. ಎರಡು ವರ್ಷದ ಶ್ರಮ ಇದು. ಸುಮಾರು ₹75 ಲಕ್ಷ ಖರ್ಚಾಗಿದೆ. ಈ ಹಣವನ್ನು ಆನಂದ್ ಸಿದ್ಧಾರ್ಥ ಭರಿಸಿದ್ದಾರೆ’ ಎಂದು ತಿಳಿಸಿದರು.

ಮೊದಲ ಸಂಪುಟ 16.30 ಗಂಟೆ ಆಡಿಯೊ ಒಳಗೊಂಡಿದೆ. ಮೊಬೈಲ್‌ನಲ್ಲಿ ‘sam audio’s’ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡು ಕೇಳಬಹುದು. ಉದ್ಘಾಟನೆ ಬಳಿಕ ಆ್ಯಪ್ ಲಭ್ಯವಾಗಲಿದೆ ಎಂದು ತಿಳಿಸಿದರು.

ಅಕ್ರಮ, ಭ್ರಷ್ಟಾಚಾರದ ಬಗ್ಗೆ ಜನರಿಂದ ದೂರು

ಬಿಡಿಎ: ಲೋಕಾಯುಕ್ತಕ್ಕೆ 60 ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳ ವಿರುದ್ಧ ಸಾರ್ವಜನಿಕರು 60 ದೂರುಗಳನ್ನು ಲೋಕಾಯುಕ್ತ ಪೊಲೀಸರಿಗೆ ಬುಧವಾರ ಸಲ್ಲಿಸಿದ್ದಾರೆ.

ಬಿಡಿಎ ಕಚೇರಿಯಲ್ಲಿನ ದುರಾಡಳಿತ, ಅಕ್ರಮ, ಭ್ರಷ್ಟಾಚಾರ ಹಾಗೂ ಸರ್ಕಾರಿ ಸೇವೆ ಒದಗಿಸುವುದರಲ್ಲಿ ವಿಳಂಬ ಮಾಡುವುದು ಮತ್ತಿತರ ಸಮಸ್ಯೆಗಳ ಕುರಿತು ಲೋಕಾಯುಕ್ತ ಪೊಲೀಸರು ಪ್ರಾಧಿಕಾರದ ಕೇಂದ್ರ ಕಚೇರಿ ಆವರಣದಲ್ಲೇ ಬುಧವಾರ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿದರು.

ನಿವೇಶನ ಹಂಚಿಕೆಯಲ್ಲಿ ಅಕ್ರಮ, ಹಂಚಿಕೆ ಮಾಡಿದ ನಿವೇಶನಗಳನ್ನು ಸ್ವಾಧೀನಕ್ಕೆ ನೀಡದಿರುವುದು, ಸಕಾರಣಗಳಿಲ್ಲದೇ ನಿವೇಶನಗಳ ಹಂಚಿಕೆಯನ್ನು ರದ್ದು ಮಾಡಿರುವುದು, ಬಿಡಿಎ ಸ್ವಾಧೀನಪಡಿಸಿಕೊಳ್ಳದ ಖಾಸಗಿ ಜಮೀನುಗಳಲ್ಲಿ ನಿವೇಶನ ನಿರ್ಮಿಸಿ ಹಂಚಿಕೆ ಮಾಡಿರುವುದು, ಪರ್ಯಾಯ ನಿವೇಶನಗಳ ಹಂಚಿಕೆಗೆ 10ರಿಂದ 15 ವರ್ಷಗಳಾದರೂ ಕ್ರಮ ಕೈಗೊಳ್ಳದಿರುವುದು ಮತ್ತಿತರ ದೂರುಗಳು ಸಲ್ಲಿಕೆಯಾಗಿವೆ ಎಂದು ಲೋಕಾಯುಕ್ತದ ಮೂಲಗಳು ‘ಪ್ರಜಾವಾಣಿಗೆ’ ತಿಳಿಸಿವೆ.

ಬಿಡಿಎ ಕೇಂದ್ರ ಕಚೇರಿ ಮೇಲೆ ಶುಕ್ರವಾರ ದಾಳಿಮಾಡಿದ್ದ ಲೋಕಾಯುಕ್ತ ಪೊಲೀಸರು, ಶೋಧ ನಡೆಸಿದ್ದರು. ಕಚೇರಿ ಆವರಣದಲ್ಲಿದ್ದ ಇಬ್ಬರು ದಲ್ಲಾಳಿಗಳನ್ನು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಅವ್ಯವಹಾರ ಮತ್ತು ಭ್ರಷ್ಟಾಚಾರದ ಶಂಕೆ ಮೇಲೆ ಹಲವು ಕಡತಗಳನ್ನು ವಶಪಡಿಸಿಕೊಂಡಿರುವ ಲೋಕಾಯುಕ್ತ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ.

ಸಾರ್ವಜನಿಕರು ಸಲ್ಲಿಸಿರುವ ಎಲ್ಲ ದೂರುಗಳ ಬಗ್ಗೆಯೂ ಸಮಗ್ರವಾಗಿ ತನಿಖೆ ನಡೆಸಲಾಗುವುದು. ಭ್ರಷ್ಟಾಚಾರ ಪ್ರಕರಣಗಳು ಕಂಡುಬಂದಲ್ಲಿ ಎಫ್‌ಐಆರ್ ದಾಖಲಿಸಿ, ಮುಂದಿನ ಕ್ರಮ ಜರುಗಿಸಲಾಗುವುದು. ದೂರುದಾರರ ಸಮಸ್ಯೆ ಪರಿಹಾರಕ್ಕೆ ಅಗತ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದು ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಪ್ರತಿ ವಾರ ಅಹವಾಲು ಸ್ವೀಕಾರ: ಪ್ರತಿ ಬುಧವಾರವ ಬಿಡಿಎ ಕಚೇರಿಯಲ್ಲಿ ಅಹವಾಲು ಸ್ವೀಕಾರ ಮಾಡಲಾಗುವುದು. ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರಿತು, ಮಧ್ಯವರ್ತಿಗಳ ಹಾವಳಿ ತಡೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಶೀಘ್ರ ವಿಲೇವಾರಿಗೆ ಸೂಚನೆ

ಸಾರ್ವಜನಿಕರು ನೀಡುವ ಅಹವಾಲುಗಳನ್ನು ನಿಗದಿತ ಅವಧಿಯೊಳಗೆ ಪರಿಹರಿಸುವಂತೆ ಅಧಿಕಾರಿಗಳಿಗೆ ಬಿಡಿಎ ಆಯುಕ್ತ ಜಿ. ಕುಮಾರ ನಾಯಕ ಸೂಚಿಸಿದರು. ಬಿಡಿಎ ಆವರಣದಲ್ಲಿ ಬುಧವಾರ ನಡೆದ ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ನಾಗರಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದರು.

ಸಾರ್ವಜನಿಕ ಕುಂದುಕೊರತೆ ಸಭೆಯಲ್ಲಿ ಪ್ರಾಧಿಕಾರದ ವಿವಿಧ ವಿಭಾಗಗಳಿಗೆ ಸಂಬಂಧಪಟ್ಟ ಅಹವಾಲುಗಳನ್ನು ಸಲ್ಲಿಸಲಾಯಿತು. ಇವುಗಳನ್ನೆಲ್ಲ ಪರಿಶೀಲಿಸಿ ಅವಧಿಯೊಳಗೆ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಆದೇಶಿಸಿದರು. ಈ ಸಭೆಯಲ್ಲಿ ಪ್ರಾಧಿಕಾರದ ಎಲ್ಲಾ ವಿಭಾಗದ ಅಧಿಕಾರಿಗಳು/ ಮುಖ್ಯಸ್ಥರು ಪಾಲ್ಗೊಂಡಿದ್ದರು.

ಸುರಂಗ ಕೊರೆದು ಹೊರ ಬಂದ ‘ಲಾವಿ’

ಬೆಂಗಳೂರು: ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದ ಮತ್ತೊಂದು ಸುರಂಗ ಕೊರೆಯುವ ಕಾಮಗಾರಿ ಪೂರ್ಣಗೊಂಡಿದ್ದು, ಎಂ.ಜಿ.ರಸ್ತೆಯಿಂದ ಕಾಮಗಾರಿ ಆರಂಭಿಸಿದ್ದ ಸುರಂಗ ಕೊರೆಯುವ ಯಂತ್ರ(ಟಿಬಿಎಂ) ‘ಲಾವಿ’ ಬುಧವಾರ ರಾಷ್ಟ್ರೀಯ ಮಿಲಿಟರಿ ಶಾಲೆ ನಿಲ್ದಾಣದ(ವೆಲ್ಲಾರ ಜಂಕ್ಷನ್) ಬಳಿ ಹೊರಬಂದಿದೆ.

‘2022ರ ಮೇ 20ರಂದು ಹೊರಟಿದ್ದ ಟಿಬಿಎಂ, 1134 ಮೀಟರ್ ಸುರಂಗ ಕೊರೆದಿದೆ. ಇದರೊಂದಿಗೆ 14 ಕಿಲೋ ಮೀಟರ್ ಸುರಂಗ ಮಾರ್ಗದಲ್ಲಿ ಒಟ್ಟು ಶೇ 72ರಷ್ಟು ಪೂರ್ಣಗೊಂಡಂತಾಗಿದೆ’ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ. ಒಟ್ಟಾರೆ 21,245 ಕಿಲೋ ಮೀಟರ್ ಸುರಂಗ ಕೊರೆಯುವ ಮಾರ್ಗವನ್ನು ನಾಲ್ಕು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದ್ದು, 9 ಯಂತ್ರಗಳನ್ನು ನಿಯೋಜಿಸಲಾಗಿದೆ. ಇವುಗಳ ಪೈಕಿ 3 ಟಿಬಿಎಂಗಳಾದ ಊರ್ಜಾ, ವರದ ಮತ್ತು ಅವ್ನಿ ಈಗಾಗಲೇ ತಮ್ಮ ಕಾಮಗಾರಿ ಪೂರ್ಣಗೊಳಿಸಿವೆ ಎಂದು ವಿವರಿಸಿದೆ.

15,210 ಮೀಟರ್ ಸುರಂಗ ಕೊರೆಯಲಾಗಿದ್ದು, ಪಾಟರಿ ಟೌನ್ ನಿಲ್ದಾಣದಿಂದ ಶಾದಿಮಹಲ್ ತನಕ ಸುರಂಗ ಕೊರೆಯುತ್ತಿರುವ ಟಿಬಿಎಂ ವಿಂಧ್ಯಾ, ಈ ತಿಂಗಳ ಅಂತ್ಯದ ವೇಳೆಗೆ ತನ್ನ ಕಾರ್ಯವನ್ನು ಪೂರ್ಣಗೊಳಿಸಲು ಯೋಜಿಸಿದೆ ಎಂದು ಹೇಳಿದೆ.

ಹುಲಿ ಸಾವು: ಸಿಗದ ಸುಳಿವು

ಪ್ರಜಾವಾಣಿ ವಾರ್ತೆ

ತುಮಕೂರು: ಗುಬ್ಬಿ ತಾಲ್ಲೂಕಿನ ಮಂಚಲದೊರೆ ಅರಣ್ಯ ಪ್ರದೇಶದಲ್ಲಿ ಹುಲಿ ಕಳೇಬರ ಪತ್ತೆ ಯಾಗಿರುವ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳು ತನಿಖೆ ಚುರುಕುಗೊಳಿಸಿದ್ದಾರೆ.

ಅರಣ್ಯ ಅಧಿಕಾರಿಗಳ ತನಿಖಾ ತಂಡ ಬುಧವಾರ ಮಂಚಲದೊರೆ ಅರಣ್ಯ ಪ್ರದೇಶದಲ್ಲಿ ಹುಲಿ ಜಾಡಿ ಗಾಗಿ ಹುಡುಕಾಟ ನಡೆಸಿದೆ. ಆದರೆ, ಕಳೇಬರ ಸಿಕ್ಕ ಪ್ರದೇಶದ ಸುತ್ತಮುತ್ತ ಎಲ್ಲಿಯೂ ಒಂದೂ ಕುರುಹು ಪತ್ತೆಯಾಗಿಲ್ಲ. ಹುಲಿಯ ಹೆಜ್ಜೆ ಗುರುತು, ಮಲ, ಮೂತ್ರದ ಕುರುಹು ಪತ್ತೆಯಾಗದಿರುವುದು ತನಿಖಾ ತಂಡಕ್ಕೆ ಸವಾಲಾಗಿ ಪರಿಣಮಿಸಿದೆ.

'ಹುಲಿ ದೇಹದ ಅಂಗಾಂಗ ಮಾದರಿಗಳನ್ನು ಬೆಂಗಳೂರಿನ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಬುಧವಾರ ಕಳುಹಿಸಿಕೊಡಲಾಗಿದೆ. ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ' ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಎಚ್. ಅನುಪಮಾ ತಿಳಿಸಿದರು.

ಎಲೆ ಮಲ್ಲಪ್ಪ ಶೆಟ್ಟಿ ಕೆರೆ ಸಂರಕ್ಷಣೆ: ಎನ್‌ಜಿಟಿಗೆ ವರದಿ ಸಲ್ಲಿಕೆ– ಬಿಬಿಎಂಪಿ ಧೋರಣೆಗೆ ಅಸಮಾಧಾನ

₹2.40 ಕೋಟಿ ಪಾವತಿಸದ ಪಾಲಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಸ ವಿಲೇವಾರಿ ನಿರ್ವಹಣಾ ಕಾಯ್ದೆಯನ್ನು ಸಮರ್ಪಕವಾಗಿ ಪಾಲಿಸದ ಕಾರಣಕ್ಕೆ ವಿಧಿಸಿರುವ ₹2.40 ಕೋಟಿ ಪರಿಸರ ಪರಿಹಾರವನ್ನು ಪಾವತಿಸಲು ಬಿಬಿಎಂಪಿಯ ಮಹದೇವಪುರ ವಲಯ ಮೀನಮೇಷ ಎಣಿಸುತ್ತಿದೆ.

ಕೆ.ಆರ್.ಪುರ ಸಮೀಪದ ಎಲೆ ಮಲ್ಲಪ್ಪ ಶೆಟ್ಟಿ ಕೆರೆಯ ಮಾಲಿನ್ಯ ಪ್ರಕರಣವನ್ನು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ವಿಚಾರಣೆ ನಡೆಸುತ್ತಿದೆ. ಜಲ ಕಾಯದ ಸಂರಕ್ಷಣೆಗೆ ಕೈಗೊಂಡ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಕೆಎಸ್‌ಪಿಸಿಬಿ) ಎನ್‌ಜಿಟಿ ಸೂಚಿಸಿತ್ತು. ಮಂಡಳಿಯು ಮಂಗಳವಾರ ವರದಿ ಸಲ್ಲಿಸಿದೆ. ಬಿಬಿಎಂಪಿಯ ಧೋರಣೆ ಕುರಿತು ಮಂಡಳಿ ಅಸಮಾಧಾನ ವ್ಯಕ್ತಪಡಿಸಿದೆ.

'ಕಾಯ್ದೆಯನ್ನು ಸಮರ್ಪಕವಾಗಿ ಪಾಲಿಸದ ಸ್ಥಳೀಯ ಸಂಸ್ಥೆಗಳು ಪರಿಸರ ಪರಿಹಾರವನ್ನು ಪಾವತಿಸಬೇಕು ಎಂದು ಎನ್‌ಜಿಟಿ ಆದೇಶ ಹೊರಡಿಸಿತ್ತು. ಆ ಪ್ರಕಾರ, ಬಿಬಿಎಂಪಿಯ ಎಂಟು ವಲಯಗಳು 24 ತಿಂಗಳ ಅವಧಿಗೆ ₹15.36 ಕೋಟಿ ಪರಿಸರ ಪರಿಹಾರ ಪಾವತಿಸಬೇಕಿದೆ. ಮಹದೇವಪುರ ವಲಯದ ಪರಿಸರ ಪರಿಹಾರದ ಬಗ್ಗೆ ಬಿಬಿಎಂಪಿಗೆ 2022ರ ಸೆಪ್ಟೆಂಬರ್‌ನಲ್ಲಿ ಪತ್ರ ಬರೆಯಲಾಗಿತ್ತು. ಆದರೆ, ಬಿಬಿಎಂಪಿ ಆಯುಕ್ತರು ಪ್ರತಿಕ್ರಿಯೆ ನೀಡಿಲ್ಲ. ಜತೆಗೆ, ಹಣ ಪಾವತಿಯೂ ಆಗಿಲ್ಲ' ಎಂದು ಮಂಡಳಿಯು ವರದಿಯಲ್ಲಿ ತಿಳಿಸಿದೆ.



ಎಲೆ ಮಲ್ಲಪ್ಪ ಶೆಟ್ಟಿ ಕೆರೆ

ಬೆಂಗಳೂರು ನಗರ ಜಿಲ್ಲಾಡಳಿತ, ಸಣ್ಣ ನೀರಾವರಿ ಇಲಾಖೆ, ಬಿಬಿಎಂಪಿ ಅಧಿಕಾರಿಗಳನ್ನು ಒಳಗೊಂಡ ಅಧಿಕಾರಿಗಳ ಸಮಿತಿ ಸ್ಥಳ ಪರಿಶೀಲನೆ ನಡೆಸಿದೆ. ಅದರ ಆಧಾರದಲ್ಲಿ ಈ ವರದಿ ಸಿದ್ಧಪಡಿಸಲಾಗಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

ಈ ಜಲಕಾಯಕ್ಕೆ ಸಣ್ಣ ನೀರಾವರಿ ಇಲಾಖೆ ಬೇಲಿ ಹಾಕಿಲ್ಲ. ಕೆರೆಯ ಶೇ 85ರಷ್ಟು ಜಾಗದಲ್ಲಿ ಕಳೆ ಗಿಡಗಳು ಬೆಳೆದು ನಿಂತಿವೆ. ಜಲಕಾಯದಲ್ಲಿ ಕಸ ವಿಲೇವಾರಿ ಮಾಡಲಾಗುತ್ತಿದೆ. ಕೆರೆಯ ಪೂರ್ವ ದಿಕ್ಕಿನಲ್ಲಿ ಎನ್.ಎಸ್. ಪ್ಯಾರಡೈಸ್ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿದೆ. ಮೀಸಲು ಪ್ರದೇಶದಲ್ಲಿ ಹಲವು ಮನೆಗಳು ನಿರ್ಮಾಣವಾಗಿವೆ. ಒತ್ತುವರಿ ತೆರವು ಕಾರ್ಯ ಆಗಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ಮುಖ್ಯಾಂಶಗಳು

- ಎನ್‌ಜಿಟಿಗೆ ವರದಿ ಸಲ್ಲಿಸಿದ ಮಾಲಿನ್ಯ ನಿಯಂತ್ರಣ ಮಂಡಳಿ
- ಕೆರೆಯ ಒತ್ತುವರಿ, ಮಾಲಿನ್ಯದ ಉಲ್ಲೇಖ
- ಇಲಾಖೆಗಳ ಧೋರಣೆಗೆ ಎನ್‌ಜಿಟಿ ತರಾಟೆ

ಈ ಕೆರೆಯ ಸಂರಕ್ಷಣೆಗೆ ಕ್ರಮಕೈಗೊಳ್ಳಬೇಕು ಎಂದು ಕೋರಿ ಸಾಮಾಜಿಕ ಹೋರಾಟಗಾರ ಜೆ. ಜಗನ್ ಕುಮಾರ್ ಅವರು ಎನ್‌ಜಿಟಿಗೆ ದೂರು ಸಲ್ಲಿಸಿದ್ದರು.

ಒತ್ತುವರಿ, ತ್ಯಾಜ್ಯ ಸುರಿಯುತ್ತಿರುವುದು ಹಾಗೂ ಸಣ್ಣ ನೀರಾವರಿ ಇಲಾಖೆಯೇ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಮತಿ ಪಡೆಯದೆಯೇ ಕೆರೆ ಪ್ರದೇಶದಲ್ಲಿ ಜಾಕ್‌ವೆಲ್ ಹಾಗೂ ಪಂಪ್‌ಹೌಸ್ ನಿರ್ಮಿಸುತ್ತಿರುವ ಅಂಶಗಳನ್ನು ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

ಐತಿಹಾಸಿಕವಾಗಿ ಮಹತ್ವ ಪಡೆದಿರುವ ಈ ವಿಶಾಲವಾದ ಕೆರೆಯಂಗಳವೂ ದಿನೇ ದಿನೇ ಕಿರಿದಾಗುತ್ತಿದೆ. ಒಳಚರಂಡಿಯ ಕೊಳಚೆ ನೀರು ಕೆರೆಯ ಒಡಲು ಸೇರುತ್ತಿದೆ. ಕಟ್ಟಡ ತ್ಯಾಜ್ಯ ಮತ್ತು ವೈದ್ಯಕೀಯ ತ್ಯಾಜ್ಯಗಳು ಹಾಗೂ ರಾಸಾಯನಿಕಗಳು ಈ ಕೆರೆಯಂಗಳವನ್ನು ಹಾಳುಗೆಡಹುತ್ತಿದ್ದರೆ, ಇನ್ನೊಂದೆಡೆ ಒತ್ತುವರಿಯಿಂದಾಗಿ ಈ ಜಲಕಾಯದ ಅಸ್ತಿತ್ವವೇ ಅಪಾಯಕ್ಕೆ ಸಿಲುಕಿದೆ ಎಂದು ಅವರು ದೂರಿದ್ದರು.

ಜಗನ್ ಕುಮಾರ್ ದೂರಿನ ಮೇರೆಗೆ, ಬೆಂಗಳೂರು ನಗರ ಜಿಲ್ಲೆ ಜಿಲ್ಲಾಧಿಕಾರಿ, ಪರಿಸರ ಮತ್ತು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಅಧಿಕಾರಿಗಳನ್ನು ಒಳಗೊಂಡ ಜಂಟಿ ಸಮಿತಿಯನ್ನು ಎನ್‌ಜಿಟಿ ರಚಿಸಿತ್ತು. ಈ ಸಮಿತಿಯು ಎನ್‌ಜಿಟಿಗೆ ವರದಿ ಸಲ್ಲಿಸಿತ್ತು. ಸಮಿತಿ ನಿರ್ದೇಶನ ಮೇರೆಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರು ಸರ್ವೇ ಕೈಗೊಂಡಿದ್ದರು. ಕೆರೆ ಒಟ್ಟು 508 ಎಕರೆ 16 ಗುಂಟೆಗಳಷ್ಟು ಪ್ರದೇಶ ಹೊಂದಿದೆ ಎಂದು ವಿವರ ನೀಡಿದ್ದರು. ಕೆರೆಯ ನಿರ್ವಹಣೆಗೆ ಹಾಗೂ ಅಭಿವೃದ್ಧಿಗೆ ನಿರ್ಲಕ್ಷ್ಯ ವಹಿಸಿದ ಇಲಾಖೆಗಳನ್ನು ಎನ್‌ಜಿಟಿ ತರಾಟೆಗೆ ತೆಗೆದುಕೊಂಡಿತ್ತು.



ಕರ್ನಾಟಕ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿಯ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಯದುಗಿರಿ ಯತಿರಾಜ ಜೀಯರ್ ಸ್ವಾಮೀಜಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಎಸ್‌ಆರ್ ಶೇಷಾದ್ರಿಭಟ್ಟ, ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಆರ್ ಲಕ್ಷ್ಮೀಕಾಂತ, ಎಸ್‌ಎನ್ ದೀಕ್ಷಿತ್ ಇದ್ದರು

ಧರ್ಮ ರಕ್ಷಣೆಯಲ್ಲಿ ಆಗಮಿಕರ ಮಹತ್ವದ ಕಾರ್ಯ: ಕಾಗೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧಾರ್ಮಿಕ ಆಧ್ಯಾತ್ಮಿಕ ಭಾವನೆಯನ್ನು ಸಮಾಜದಲ್ಲಿ ಸದಾ ಜಾಗೃತವಾಗಿಡಲು ಕರ್ನಾಟಕ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿ ಶ್ರಮಿಸುತ್ತಿರುವುದು ಶ್ಲಾಘನೀಯ' ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಕರ್ನಾಟಕ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸುವರ್ಣ ಮಹೋತ್ಸವ ಸಮಾರಂಭಲ್ಲಿ ಮಾತನಾಡಿದ ಅವರು, 'ನಮ್ಮ ಸಂಸ್ಕಾರ, ಸಂಸ್ಕೃತಿ ಹಿನ್ನೆಲೆಯಲ್ಲಿ ರಚನಾತ್ಮಕ ಭಾವನೆಯಿಂದ ಎಲ್ಲರನ್ನೂ ಒಗ್ಗೂಡಿಸಿಕೊಂಡು, ಸಮಸ್ಯೆಗಳಿಗೆ ಸರ್ಕಾರದಲ್ಲಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಸಮಿತಿಯು ಮುಂದಿನ ಇನ್ನೂ 50-100 ವರ್ಷಗಳಿಗೆ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಹೋಗಲು ಸಂಕಲ್ಪ ಮಾಡಬೇಕು. ಧಾರ್ಮಿಕ ವಿಶೇಷತೆ, ವೈಶಿಷ್ಟ್ಯತೆ, ವಿದ್ಯೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಬಗ್ಗೆ ಜವಾಬ್ದಾರಿಯುತ ನಿರ್ಧಾರಗಳನ್ನು ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು.

'ಸಮಿತಿಯು 50 ವರ್ಷಗಳ ಸುದೀರ್ಘ ಇತಿಹಾಸ ಹೊಂದಿದ್ದು, ಇದಕ್ಕಾಗಿ ಅನೇಕ ಹಿರಿಯರು ತಮ್ಮನ್ನು ತಾವು ಸಮರ್ಪಿಸಿಕೊಂಡು ಕೆಲಸ ನಿರ್ವಹಿಸುವ ಮೂಲಕ ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ಆ ಎಲ್ಲರನ್ನು ಸ್ಮರಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಉತ್ತಮವಾಗಿದೆ. ಇದು ಕೇವಲ ಸಿಂಹಾವಲೋಕನ ಆಗಬಾರದು' ಎಂದರು.

ಮೇಲುಕೋಟೆಯ ಯದುಗಿರಿ ಯತಿರಾಜ ಮಠದ ಡಾ. ಯದುಗಿರಿ ಯತಿರಾಜ ಜೀಯರ್ ಸ್ವಾಮೀಜಿ, ಸಮಿತಿ ಅಧ್ಯಕ್ಷ ಎಸ್.ಆರ್. ಶೇಷಾದ್ರಿ ಭಟ್ಟರ್, ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ಇದ್ದರು.

ಇದೇ ವೇಳೆ 50 ಮಂದಿ ಹಿರಿಯ ಆಗಮ ವಿದ್ವಾಂಸರಿಗೆ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜತೆಗೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

'ರಾಜ್ಯದಲ್ಲಿ ಬಿಜೆಪಿ ಪರ ಅಲೆ'

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಬರಲಾರಂಭಿಸಿದ ಬಳಿಕ ರಾಜ್ಯದಲ್ಲಿ ಬಿಜೆಪಿ ಪರ ಅಲೆ ಬೀಸಲಾರಂಭಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಅವರು ಮಾತನಾಡಿ, ಆಡಳಿತ ವಿರೋಧಿ ಅಲೆ ಇಲ್ಲ. ಯಾರೂ ಧೃತಿಗೆಡಬೇಕಾಗಿಲ್ಲ, ನಾವು ಮತ್ತೆ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ಹೇಳಿದರು.

ಕಾಂಗ್ರೆಸ್ ನವರ ಈಗಿನ ಅಬ್ಬರ ಚುನಾವಣೆ ವೇಳೆಗೆ ಇರುವುದಿಲ್ಲ ಎಂದೂ ಅವರು ಹೇಳಿದರು.

ಮಾರ್ಚ್ 1, 2 ಮತ್ತು 3 ರಂದು ರಥಯಾತ್ರೆಗೆ ಚಾಲನೆ ನೀಡಲಾಗುವುದು. ಮಾ. 1 ರಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ಯಾತ್ರೆಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಚಾಲನೆ ನೀಡಿದರೆ, ಮಾ. 2 ರಂದು ಬೆಳಗಾವಿ ಜಿಲ್ಲೆಯ ನಂದಗಢದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡುವರು. ಮಾ. 3 ರಂದು ಬೆಂಗಳೂರು ಮತ್ತು ಬಸವ ಕಲ್ಯಾಣದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ಚಾಲನೆ ನೀಡಲಿದ್ದಾರೆ ಎಂದು ಬೊಮ್ಮಾಯಿ ಹೇಳಿದರು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಶಾಸಕರಿಗೆ ರಥಯಾತ್ರೆ ಮತ್ತು ಸಮಾವೇಶಗಳ ವಿವರ ನೀಡಿದರು.

'ನಿಮ್ಮ ಸಲಹೆಗಳು ಇದ್ದರೆ ಕೊಡಿ' ಎಂದು ಶಾಸಕರಿಗೆ ಸಂತೋಷ್ ಹೇಳಿದಾಗ, 'ಪ್ರಧಾನಿ ಮೋದಿ ನಮ್ಮ ಭಾಗಕ್ಕೂ ಬರಲಿ, ಅದರಿಂದ ಅನುಕೂಲ ಆಗುತ್ತದೆ' ಎಂದು ಶಾಸಕರು ಮನವಿ ಮಾಡಿದರು.

ಯಾ ವು ದೇ ವ ಕಾ ರ ಣ ಕ್ಕೂ ಬಿಸಿಲಿನಲ್ಲಿ ಸಮಾವೇಶ ಆಯೋಜನೆ ಮಾಡುವುದು ಬೇಡ ಎಂದ ಕೆಲವು ಶಾಸಕರು ಹೇಳಿದರು.

'ನಮ್ಮ ಕ್ಲಿನಿಕ್': 8 ಸಾವಿರ ಮಂದಿಗೆ ಚಿಕಿತ್ಸೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಫೆ.7ರಂದು ಆರಂಭವಾಗಿರುವ 108 'ನಮ್ಮ ಕ್ಲಿನಿಕ್'ಗಳಲ್ಲಿ 8 ಸಾವಿರಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ.

'ನಮ್ಮ ಕ್ಲಿನಿಕ್'ಗಳಲ್ಲಿ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ನಿಯೋಜಿಸಲಾಗಿದೆ. ಒಂದು ವಾರದಲ್ಲಿ 3,911 ಪುರುಷರು, 4,871 ಮಹಿಳೆಯರು, 14 ಇತರರು ಸೇರಿ ಒಟ್ಟು 8,796 ಮಂದಿ ಹೊರ ರೋಗಿಗಳಾಗಿ ತಪಾಸಣೆ ಮಾಡಿಸಿಕೊಂಡಿದ್ದಾರೆ. 3,196 ಲ್ಯಾಬ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ಬಿಬಿಎಂಪಿ ಸಾರ್ವಜನಿಕ ಆರೋಗ್ಯ ವಿಭಾಗದ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದರು.

ಮಾನಹಾನಿ ಪ್ರಕರಣ: ಕೆಂಪಣ್ಣ ವಿರುದ್ಧದ ಸಮನ್ಸ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ತೋಟಗಾರಿಕೆ ಮತ್ತು ಯೋಜನಾ ಸಚಿವ ವಿ. ಮುನಿರತ್ನ ದಾಖಲಿಸಿರುವ ಕ್ರಿಮಿನಲ್ ಮಾನಹಾನಿ ಮೊಕದ್ದಮೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಮತ್ತು ಇತರರ ವಿರುದ್ಧ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜಾರಿಗೊಳಿಸಿದ್ದ ಸಮನ್ಸ್ ಅನ್ನು ಬೆಂಗಳೂರಿನ ಸಿಟಿ ಸಿವಿಲ್ ನ್ಯಾಯಾಲಯ ವಜಾಗೊಳಿಸಿದೆ.

'ಸಮನ್ಸ್ ಜಾರಿಗೆ ಆದೇಶಿಸಿರುವುದು ಕಾನೂನುಬಾಹಿರ' ಎಂದು ಆಕ್ಷೇಪಿಸಿ ಕೆಂಪಣ್ಣ ಸಲ್ಲಿಸಿದ್ದ ಕ್ರಿಮಿನಲ್ ಮರುಪರಿಶೀಲನಾ ಅರ್ಜಿಯನ್ನು 59ನೇ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಎನ್. ಕೃಷ್ಣಯ್ಯ ಮಾನ್ಯ ಮಾಡಿದ್ದಾರೆ.

ಪ್ರಕರಣವೇನು?: 'ಗುತ್ತಿಗೆ ಕಾಮಗಾರಿಗಳಲ್ಲಿ ಕಮಿಷನ್ ಮತ್ತು ಪರ್ಸೆಂಟೇಜ್ ಆರೋಪ ಹೊರಿಸಿರುವ ಕೆಂಪಣ್ಣ, ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ವಿ. ಕೃಷ್ಣಾ ರೆಡ್ಡಿ ಮತ್ತು ಇತರ ಪದಾಧಿಕಾರಿಗಳು ನೀಡಿರುವ ಹೇಳಿಕೆಗಳು ಮಾಧ್ಯಮಗಳಲ್ಲಿ ಪ್ರಕಟವಾಗಿವೆ. ನನ್ನ ವರ್ಚಸ್ಸಿಗೆ ಧಕ್ಕೆ ಉಂಟು ಮಾಡಿವೆ' ಎಂದು ಮುನಿರತ್ನ ಮಾನಹಾನಿ ಮೊಕದ್ದಮೆ ದಾಖಲಿಸಿದ್ದರು.

ಭಾರತೀಯ ದಂಡ ಸಂಹಿತೆ ಕಲಂ 499 ಮತ್ತು 500ರ ಅಡಿ ಸಂಜ್ಞೇಯ ಅಪರಾಧ ಎಂದು ಪರಿಗಣಿಸಿದ್ದ ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರು ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿದ್ದರು.

'ದೂರುದಾರ ಮುನಿರತ್ನ ಸಿಆರ್‌ಪಿಸಿ ಕಲಂ 204 (2)ರ ಅಡಿ ಸಾಕ್ಷಿಗಳ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕಿತ್ತು. ಇದರ ಅನುಪಾಲನೆಯ ಅನ್ವಯ ಸಮನ್ಸ್ ಜಾರಿಗೆ ಆದೇಶಿಸಬೇಕಿತ್ತು. ಆದರೆ, ಪ್ರಕರಣದಲ್ಲಿ ಈ ಕಾನೂನು ಪ್ರಕ್ರಿಯೆ ಪಾಲನೆಯಾಗಿಲ್ಲ' ಎಂದು ಆಕ್ಷೇಪಿಸಿದ್ದ ಕೆಂಪಣ್ಣ ಮ್ಯಾಜಿಸ್ಟ್ರೇಟ್ ಆದೇಶವನ್ನು ಪ್ರಶ್ನಿಸಿದ್ದರು.

ನಿವೃತ್ತಿ ವೇತನಕ್ಕಾಗಿ ಪ್ರತಿಭಟನೆ: ರಸ್ತೆತಡೆ ವೇಳೆ ತಳ್ಳಾಟ

ಬಿಸಿಯೂಟ ತಯಾರಕ ಸಿಬ್ಬಂದಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತಿ ವೇಳೆ ಬಿಸಿಯೂಟ ತಯಾರಕ ಸಿಬ್ಬಂದಿಗೆ ಇಡುಗಂಟು ಅಥವಾ ನಿವೃತ್ತಿ ವೇತನ ನೀಡಬೇಕು ಎಂದು ಆಗ್ರಹಿಸಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ನೇತೃತ್ವದಲ್ಲಿ ಬುಧವಾರ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಮುಂದಾಗಿದ್ದ ಒಂದು ಸಾವಿರಕ್ಕೂ ಹೆಚ್ಚು ಬಿಸಿಯೂಟ ತಯಾರಕ ಸಿಬ್ಬಂದಿಯನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ಗೌರವಾಧ್ಯಕ್ಷೆ ಎಸ್.ವರಲಕ್ಷ್ಮಿ ಹಾಗೂ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾ ಅವರ ನೇತೃತ್ವದಲ್ಲಿ ಪ್ರತಿಭಟನಕಾರರು ಮುತ್ತಿಗೆ ಹಾಕಲು ಮುಂದಾದರು. ಅವರನ್ನು ಸ್ವಾತಂತ್ರ್ಯ ಉದ್ಯಾನದ ಬಳಿಯೇ ಪೊಲೀಸರು ತಡೆದರು. ಬಳಿಕ ಆಕ್ರೋಶ ವ್ಯಕ್ತಪಡಿಸಿದ ಸಿಬ್ಬಂದಿ ರಸ್ತೆತಡೆ ನಡೆಸಲು ಮುಂದಾದರು. ಆಗ ಪ್ರತಿಭಟನಕಾರರನ್ನು ವಶಕ್ಕೆ ಪಡೆಯುವ ವೇಳೆ ಉಂಟಾದ ತಳ್ಳಾಟದಲ್ಲಿ ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

'ಶಿಕ್ಷಣ ಇಲಾಖೆಯ ಶಿಫಾರಸಿನಂತೆ ಮುಖ್ಯ ಅಡುಗೆಯವರಿಗೆ ₹ 6 ಸಾವಿರ ಹಾಗೂ ಸಹಾಯಕಿಯರಿಗೆ ₹ 5 ಸಾವಿರ ಹೆಚ್ಚಿಸಬೇಕು. ಬಜೆಟ್‌ನಲ್ಲಿ ಬಿಸಿಯೂಟ ಸಿಬ್ಬಂದಿಗೆ ಹೆಚ್ಚಿಸಿದ ₹1 ಸಾವಿರವನ್ನು 2022ರ ಜನವರಿಯಿಂದಲೇ ಅನ್ವಯ ಆಗುವಂತೆ ಜಾರಿಗೆ ತರಬೇಕು. ಯೋಜನೆಯನ್ನು ಕಾಯಂ ಮಾಡಬೇಕು. ಕಾಯಂ ಮಾಡುವ ತನಕ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸಿನಂತೆ ಕಾರ್ಮಿಕರೆಂದು ಪರಿಗಣಿಸಬೇಕು. ಬೇಸಿಗೆ ಹಾಗೂ ದಸರಾ ರಜೆ ಅವಧಿಯಲ್ಲೂ ವೇತನ ನೀಡಬೇಕು. ಒಂದು ವೇಳೆ ಅಪಘಾತದಲ್ಲಿ ಅಡುಗೆ ಸಿಬ್ಬಂದಿ ಮೃತಪಟ್ಟರೆ, ಅವರ ಕುಟುಂಬದರಿಗೆ ಕೆಲಸ ನೀಡಬೇಕು. ಪ್ರತಿ ಶಾಲೆಯಲ್ಲಿ ಇಬ್ಬರು ಅಡುಗೆ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಪ್ರತಿಭಟನಕಾರರು' ಆಗ್ರಹಿಸಿದರು.



ಸಾಧಕರಿಗೆ ಸನ್ಮಾನ...

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಪತ್ರಕರ್ತರಾದ ರುದ್ರಣ್ಣ ಹರ್ತಿಕೋಟೆ (ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ), ಪದ್ಮರಾಜ ದಂಡಾವತಿ (ಕೇಂದ್ರ ಸಾಹಿತ್ಯ ಅಕಾಡೆಮಿ), ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ನೀಡುವ ಪ್ರಶಸ್ತಿ ಭಾಜನರಾದ ಅಜಿತ್ ಹನುಮಕ್ಕನವರ್, ರಾಧಾಕೃಷ್ಣ ಭಡ್ತಿ, ಕೆ. ಎಸ್. ಸೋಮಶೇಖರ್ ಮತ್ತು ಡಿ. ಜಿ. ಮಮತಾ ಅವರನ್ನು ಸನ್ಮಾನಿಸಲಾಯಿತು. ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪತ್ರಕರ್ತ ಶೇಷ ಚಕ್ರವರ್ತಿ, ಈಶ್ವರ್ ದೈತೋಟ , ಪ್ರಧಾನ ಕಾರ್ಯದರ್ಶಿ ಜಿ. ಸಿ. ಲೋಕೇಶ್ ಇದ್ದರು –ಪ್ರಜಾವಾಣಿ ಚಿತ್ರ



ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದಲ್ಲಿ ಬುಧವಾರ ಪ್ರತಿಭಟನೆ ನಡೆಯಿತು

ಜೈನ್ ವಿ.ವಿಯಲ್ಲಿ ಅಂಬೇಡ್ಕರ್‌ಗೆ ಅವಮಾನ ಪ್ರಕರಣ

ನಿ. ನ್ಯಾಯಾಧೀಶರ ನೇತೃತ್ವದ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಆಡಳಿತ ಮಂಡಳಿಯವರು ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ಘಟನೆಯನ್ನು ರಾಜ್ಯ ಸರ್ಕಾರವು ಗಂಭೀರವಾಗಿ ಪರಿಗಣಿಸಿ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಬೆಂಗಳೂರು ವಿ.ವಿಯ ವಿದ್ಯಾರ್ಥಿಗಳು ಒತ್ತಾಯಿಸಿದರು.

ಬುಧವಾರ ಬೆಂಗಳೂರು ವಿವಿಯ ಜ್ಞಾನಭಾರತಿ ಆವರಣದಲ್ಲಿರುವ ಎಲ್ಲ ವಿಭಾಗಗಳಿಗೆ, ಕಚೇರಿಗಳಿಗೆ ಬೀಗ ಹಾಕಿ ಆಡಳಿತ ಕಚೇರಿಯ ಮುಂಭಾಗ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆಯ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಅಂಬೇಡ್ಕರ್ ಅವರನ್ನು ಅವಮಾನಿಸುವ ಉದ್ದೇಶದಿಂದಲೇ ಜೈನ್ ವಿವಿಯ ಉತ್ಸವದಲ್ಲಿ ವಿವಾದಿತ ಕಿರುಚಿತ್ರವನ್ನು ಪ್ರದರ್ಶನ ಮಾಡಿದ್ದಾರೆ. ಘಟನೆಯನ್ನು ನಿಷ್ಪಕ್ಷಪಾತವಾಗಿ ತನಿಖೆ ಮಾಡದ ಹೊರತು ಪ್ರಕರಣಕ್ಕೆ ನ್ಯಾಯ ಒದಗಿಸಲು ಸಾಧ್ಯವಿಲ್ಲ ಎಂದು ವಿದ್ಯಾರ್ಥಿಗಳು ಪಟ್ಟುಹಿಡಿದರು.

ವಿಶ್ವವಿದ್ಯಾಲಯದ ಮಾನ್ಯತೆಯನ್ನು ರದ್ದು ಮಾಡಬೇಕು. ಯುಜಿಸಿ ಗಂಭೀರವಾಗಿ ಪರಿಗಣಿಸಿ ಯುಜಿಸಿ ನಿಯಮಗಳ ಅಡಿ ವಿ.ವಿಗೆ ನಿರ್ಬಂಧ ವಿಧಿಸಬೇಕು ಎಂದು ಒತ್ತಾಯಿಸಿದರು.

ಅಸ್ಪೃಶ್ಯತೆ, ಜಾತಿ ಪದ್ಧತಿಯನ್ನು ತೊಡೆದು ಹಾಕಿ ಸಮಾನತೆಯನ್ನು ಸಾರಿ, ಇಡೀ ವಿಶ್ವಕ್ಕೆ ಮಾದರಿಯಾದಂತಹ ಅಂಬೇಡ್ಕರ್ ಅವರನ್ನು ಅತ್ಯಂತ ಕೀಳಾಗಿ ಚಿತ್ರಿಸಿರುವುದು ನೋವು ತಂದಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ, ಬಿಯುಟಿಸಿ ಅಧ್ಯಕ್ಷ ಪ್ರೊ.ಮುರಳೀಧರ್, ಬಿ.ಗೋಪಾಲ್, ಡಾ.ರಾಮಕೃಷ್ಣಯ್ಯ, ಪ್ರೊ.ಹೊನ್ನುಸಿದ್ಧಾರ್ಥ, ಟಿ.ಚ್. ಮೂರ್ತಿ, ಡಾ.ಪ್ರಭಾಕರ್, ಪ್ರೊ. ಕೃಷ್ಣಸ್ವಾಮಿ, ಹ.ರಾ.ಮಹೇಶ್, ಡಾ.ದೇವಾನಂದ್, ಸುರೇಶ್ ಗೌತಮ್, ಸಂಶೋಧನಾ ವಿದ್ಯಾರ್ಥಿ ಮುಖಂಡರಾದ ಲೋಕೇಶ್, ಶಶಿಕುಮಾರ್, ಬೈರಾಜ್, ನವೀನ್, ನಂದೀಶ್, ಚಂದ್ರ ಮಿಡ್ಲಮನೆ, ಈಶ್ವರ್ ಸಿರಿಗೇರಿ, ಲಿಂಗರಾಜು, ಅರಣ್ ಹಾಗೂ ವಿವಿಯ ಬೋಧಕ-ಬೋಧಕೇತರ ನೌಕರರ ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಗೂಂಡಾ ಕಾಯ್ದೆ ಅಡಿ ಬಂಧನಕ್ಕೆ ಡಿ.ಸಿ ಆದೇಶ

ಬೆಂಗಳೂರು: ಅಪರಾಧ ಚಟುವಟಿಕೆಯಲ್ಲಿ ತೊಡಗಿರುವ ಮೂವರು ರೌಡಿಶೀಟರ್‌ಗಳನ್ನು ಗೂಂಡಾ ಕಾಯ್ದೆ ಅಡಿ ಬಂಧಿಸಲು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ ಆದೇಶಿಸಿದ್ದಾರೆ.

ಆನೇಕಲ್ ತಾಲ್ಲೂಕಿನ ಎಸ್. ತಿಮ್ಮಸಂದ್ರ ಗ್ರಾಮದ (ಸೂರ್ಯನಗರ ಪೊಲೀಸ್ ಠಾಣೆ ವ್ಯಾಪ್ತಿ) ರೌಡಿಶೀಟರ್ ಕೃಷ್ಣಪ್ಪ ಅಲಿಯಾಸ್ ಕೋತಿ ಕೃಷ್ಣ (51), ಜಿಗಣಿ ಪೊಲೀಸ್ ಠಾಣೆ ರೌಡಿಶೀಟರ್ ಮಂಜೇಶ್ ಅಲಿಯಾಸ್ ಮಂಜೇಶ್ ಕುಮಾರ್ (29) ಹಾಗೂ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ರೌಡಿಶೀಟರ್ ಮಂಜುನಾಥ ಅಲಿಯಾಸ್ 'ನೇಪಾಳಿ' ಮಂಜ (29) ಎಂಬುವರನ್ನು ಬಂಧಿಸಲು ಆದೇಶಿಸಿದ್ದಾರೆ.

ಹೊಸ ಬಸ್ ನಿಲ್ದಾಣ– ಹಣ ಇಲ್ಲ

ಬೆಂಗಳೂರು: 'ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹಣಕಾಸು ಲಭ್ಯ ಇಲ್ಲದ ಕಾರಣ ಹೊಸ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಸದ್ಯಕ್ಕೆ ಆಗುತ್ತಿಲ್ಲ' ಎಂದು ಸಚಿವ ಬಿ. ಶ್ರೀರಾಮುಲು ಹೇಳಿದರು.

ಜೆಡಿಎಸ್‌ನ ಕೆ. ಅನ್ನದಾನಿ ಪ್ರಶ್ನೆಗೆ ಉತ್ತರಿಸಿದ ಅವರು, 'ಕೋವಿಡ್ ಕಾರಣದಿಂದ ನಾಲ್ಕೂ ನಿಗಮಗಳು ಆರ್ಥಿಕವಾಗಿ ಸಂಕಷ್ಟದಲ್ಲಿವೆ. ಸಿಬ್ಬಂದಿ ವೇತನಕ್ಕೆ ಯಾವುದೇ ತೊಂದರೆ ಆಗಬಾರದೆಂದು ಸರ್ಕಾರ ಆರ್ಥಿಕ ನೆರವು ನೀಡಿದೆ' ಎಂದರು.

ಸಾಕ್ರೆಟಿಸನ ತತ್ವ ಪಾಲಿಸುವೆ: ನ್ಯಾ.ಪಾಟೀಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಲು ನನಗೆ ದೊರೆತಿರುವ ಈ ಅವಕಾಶ ವಿಶೇಷವಾದುದು. ಹಿರಿ–ಕಿರಿಯ ವಕೀಲರ ಭೇದ ಎಣಿಸದೆ ಸಾಕ್ರೆಟಿಸನ ನ್ಯಾಯದಾನ ತತ್ವಗಳ ಅಡಿಯಲ್ಲಿ ಪರಿಪಾಲಿಸಲು ಪ್ರಯತ್ನಿಸುತ್ತೇನೆ. ವಕೀಲರು ಮತ್ತು ಕಕ್ಷಿದಾರರಿಗೆ ಅನ್ಯಾಯ ಎಸಗದಂತೆ ಪ್ರಾಮಾಣಿಕವಾಗಿ ನನ್ನ ಕರ್ತವ್ಯ ನಿರ್ವಹಿಸುತ್ತೇನೆ' ಎಂದು ರಾಜ್ಯ ಹೈಕೋರ್ಟ್‌ನ ನೂತನ ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಹೇಳಿದರು.

ಬೆಂಗಳೂರು ವಕೀಲರ ಸಂಘದ ವತಿಯಿಂದ ಬುಧವಾರ ಹೈಕೋರ್ಟ್ ವಕೀಲರ ಸಭಾಂಗಣದಲ್ಲಿ ನೀಡಲಾದ ಸ್ವಾಗತ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ವಕೀಲನಾಗಿ ನಾನು 21 ವರ್ಷಗಳ ಕಾಲ ನಿಮ್ಮೆಲ್ಲರಿಂದ ಕಲಿತಿದ್ದೇನೆ. ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯಲು ನ್ಯಾಯಮೂರ್ತಿಯಾಗಿ ಸರ್ವ ಪ್ರಯತ್ನ ಮಾಡುತ್ತೇನೆ' ಎಂದರು.


ಮತ್ತೊಬ್ಬ ನೂತನ ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ, 'ಜೀವನದಲ್ಲಿ ಮನುಷ್ಯ ತೃಪ್ತಿ ಮತ್ತು ಮಾನವೀಯತೆ ಮರೆಯಬಾರದು. ದೇವರ ಮೇಲೆ ನಂಬಿಕೆ ಇರಿಸಿಕೊಂಡಿರಬೇಕು. ಗುರು ಹಿರಿಯರ ಆಶೀರ್ವಾದೊಂದಿಗೆ ಪ್ರಾಮಾಣಿಕವಾಗಿ ನಾನು ನನ್ನ ಕರ್ತವ್ಯಗಳನ್ನು ನ್ಯಾಯೋಚಿತವಾಗಿ ಪೂರೈಸುವೆ' ಎಂದು ತಿಳಿಸಿದರು.

ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, 'ಹೈಕೋರ್ಟ್ ನ್ಯಾಯಮೂರ್ತಿಗಳ ಕುಟುಂಬದ ಸದಸ್ಯರ ಸಂಖ್ಯೆ ಈಗ ಮತ್ತಷ್ಟು ಹಿಗ್ಗಿದೆ. ನೂತನ ನ್ಯಾಯಮೂರ್ತಿಗಳು ತಮ್ಮ ಕರ್ತವ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುವ ವಿಶ್ವಾಸವಿದೆ' ಎಂದರು.

ಇದೇ ವೇಳೆ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಅವರ ಮನವಿಯನ್ನು ಪ್ರಸ್ತಾಪಿಸಿ, 'ವಕೀಲರು ಮೆಮೊಗಳನ್ನು ಪೋಸ್ಟಿಂಗ್ ಮಾಡುವಲ್ಲಿ ಆಗುತ್ತಿರುವ ವಿಳಂಬ ಮತ್ತು ದೋಷಗಳನ್ನು ಶೀಘ್ರವೇ ಸರಿಪಡಿಸಲಾಗುವುದು. ಸದ್ಯ ಹೈಕೋರ್ಟ್‌ನಲ್ಲಿ ದಸ್ತಾವೇಜು ಸಂಭಾಳಿಸುವ ಕಚೇರಿಗಳಿಗೆ ಸ್ಥಳಾಭಾವ ಇದೆ. ಅದನ್ನು ಶೀಘ್ರವೇ ಸರಿಪಡಿಸಲಾಗುವುದು. ಹೈಕೋರ್ಟ್‌ನಲ್ಲಿ ಮೊಬೈಲ್ ಫೋನ್‌ಗಳಿಗೆ ಸಂಪರ್ಕ ಕೊರತೆ ಇರುವುದರ ಬಗ್ಗೆಯೂ ಪರಿಶೀಲಿಸಲಾಗುವುದು' ಎಂದರು. ಪ್ರಾರ್ಥನೆ ಹಾಡಿದ ವಕೀಲ ಜಿ. ಭಾರ್ಗವ ಅವರನ್ನು ವರಾಳೆ ಶ್ಲಾಘಿಸಿದರು.

ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ.ರವಿ, ಖಜಾಂಚಿ ಎಂ.ಟಿ. ಹರೀಶ್, ಹೈಕೋರ್ಟ್ ಘಟಕದ ಜಂಟಿ ಕಾರ್ಯದರ್ಶಿ ಎಂ.ಚಾಮರಾಜ್, ಉಪಾಧ್ಯಕ್ಷ ಬಿ. ಬಾಲಕೃಷ್ಣ ಇದ್ದರು.

'ಸಂತರ ಕೃತಿಗಳನ್ನು ಎಲ್ಲ ಭಾಷೆಗಳಿಗೂ ಅನುವಾದಿಸಬೇಕು'



ನಾಗ್ಪುರ (ಪಿಟಿಐ): ದಾರ್ಶನಿಕ ಜ್ಞಾನೇಶ್ವರ ಅವರಂತಹ ಸಂತ ಕವಿಗಳ ಕೃತಿಗಳನ್ನು ಎಲ್ಲ ಭಾಷೆಗಳಿಗೂ ಅನುವಾದಿಸಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಬುಧವಾರ ಹೇಳಿದರು.

ಕವಿ ಕುಲಗುರು ಕಾಳಿದಾಸ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ.ಮಧುಸೂದನ್ ಪೆನ್ನಾ ಅವರ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂತ ಜ್ಞಾನೇಶ್ವರ ಅವರ ಕೃತಿ 'ಜ್ಞಾನೇಶ್ವರಿ'ಯನ್ನು ಸಂಸ್ಕೃತಕ್ಕೆ ಅನುವಾದಿಸಿದ ಕಾರಣಕ್ಕೆ ಡಾ.ಮಧುಸೂದನ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಸಾಧ್ಯತಾ ಅಧ್ಯಯನ: ಕೇಂದ್ರದ ಒಪ್ಪಿಗೆ ನಿರೀಕ್ಷೆಯಲ್ಲಿ ಸಿಎಂಆರ್‌ಎಲ್

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಹೊಸೂರು ಹಾಗೂ ಬೆಂಗಳೂರು ನಡುವೆ ಮೆಟ್ರೊ ರೈಲು ಸಂಪರ್ಕ ಒದಗಿಸುವ ಸಂಬಂಧ ಕಾರ್ಯಸಾಧ್ಯತಾ ಅಧ್ಯಯನ ನಡೆಸಲು ಮುಂದಾಗಿರುವ ಚೆನ್ನೈ ಮೆಟ್ರೊ ರೈಲು ನಿಗಮ (ಸಿಎಂಆರ್‌ಎಲ್), ಒಪ್ಪಿಗೆ ನೀಡುವಂತೆ ಕೋರಿ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯಕ್ಕೆ ಪತ್ರ ಬರೆದಿದೆ.

ಬೆಂಗಳೂರಿನ ಬೊಮ್ಮಸಂದ್ರದಿಂದ ರಾಜ್ಯದ ಗಡಿಯಲ್ಲಿರುವ ಕೈಗಾರಿಕಾ ನಗರ ಹೊಸೂರು ನಡುವೆ ಮೆಟ್ರೊ ರೈಲು ಸಂಪರ್ಕ ಒದಗಿಸುವುದನ್ನು ಈ ಉದ್ದೇಶಿತ ಯೋಜನೆ ಒಳಗೊಂಡಿದೆ.

'ಸಚಿವಾಲಯದಿಂದ ಒಪ್ಪಿಗೆ ದೊರೆತ ಕೂಡಲೇ ಕಾರ್ಯಸಾಧ್ಯತಾ ಅಧ್ಯಯನ ಆರಂಭಿಸಲಾಗುವುದು' ಎಂದು ಸಿಎಂಆರ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಎ.ಸಿದ್ದೀಕ್ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಈ ಅಧ್ಯಯನಕ್ಕಾಗಿ ತಮಿಳುನಾಡು ಸರ್ಕಾರವು ಸಿಎಂಆರ್‌ಎಲ್‌ಗೆ ₹ 75 ಲಕ್ಷ ಮಂಜೂರು ಮಾಡಿದೆ. ಒಟ್ಟು 20.5 ಕಿ.ಮೀ. ಉದ್ದದ ಈ ಮಾರ್ಗದ ಪೈಕಿ 11.7 ಕಿ.ಮೀ. ಉದ್ದದಷ್ಟು ಮಾರ್ಗ ಕರ್ನಾಟಕದಲ್ಲಿ ಇರಲಿದೆ.

ಟಿವಿಎಸ್, ಅಶೋಕ್ ಲೇಲ್ಯಾಂಡ್, ಟೈಟನ್ ಸೇರಿದಂತೆ ಹಲವು ಬೃಹತ್ ಕೈಗಾರಿಕೆಗಳು ಹೊಸೂರಿನಲ್ಲಿವೆ. ಎಲೆಕ್ಟ್ರಿಕ್ ವಾಹನಗಳ ತಯಾರಿಕೆ ಉದ್ದಿಮೆಗಳು ಸೇರಿದಂತೆ ಎರಡು ಸಾವಿರಕ್ಕೂ ಅಧಿಕ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳೂ (ಎಂಎಸ್‌ಎಂಇ) ಇಲ್ಲಿವೆ.

ಈ ಯೋಜನೆಗೆ ಕರ್ನಾಟಕ ಸರ್ಕಾರ ಕೂಡ ಸಮ್ಮತಿ ನೀಡಿ, ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯಕ್ಕೆ ಕಳೆದ ವರ್ಷ ಪತ್ರ ಬರೆದಿದೆ. ಬೆಂಗಳೂರು ಹಾಗೂ ಹೊಸೂರು ನಡುವೆ ನಿತ್ಯವೂ ಸಂಚರಿಸುವ ಸಾವಿರಾರು ಜನರಿಗೆ ಈ ಯೋಜನೆಯಿಂದ ಅನುಕೂಲವಾಗಲಿದೆ ಎಂದು ಕರ್ನಾಟಕ ಸರ್ಕಾರವು ಸಚಿವಾಲಯಕ್ಕೆ ಬರೆದ ಪತ್ರದಲ್ಲಿ ವಿವರಿಸಿದೆ.

ರಾಮನ್ ಸಂಶೋಧನಾ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮ

ವಿದ್ಯಾರ್ಥಿಗಳಿಗೆ ಖಗೋಳ ವಿಜ್ಞಾನ ದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನ್ ಸಂಶೋಧನಾ ಸಂಸ್ಥೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮವು ಖಗೋಳ ಲೋಕದ ಅಚ್ಚರಿಗಳು ಹಾಗೂ ಅಲ್ಲಿ ಘಟಿಸುವ ವಿಸ್ಮಯಗಳ ಬಗ್ಗೆ ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವಲ್ಲಿ ಯಶಸ್ವಿಯಾಯಿತು.

ಸಂಸ್ಥೆಯು ವಿಜ್ಞಾನ ಕಥೆಗಳು ಕಾರ್ಯಕ್ರಮದಡಿ ಸರಣಿ ಉಪನ್ಯಾಸವನ್ನು ಹಮ್ಮಿಕೊಂಡಿದೆ. ಜವಾಹರಲಾಲ್ ನೆಹರೂ ತಾರಾಲಯದ ವಿಜ್ಞಾನಿ ಡಾ.ಬಿ.ಎಸ್. ಶೈಲಜಾ, 'ಖಗೋಳ ವಿಜ್ಞಾನದ ವ್ಯಾಪ್ತಿ–ಕಲೆ, ಸಾಹಿತ್ಯ–ಎಲ್ಲೆಲ್ಲೂ!' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಗ್ರಹಣ, ನಕ್ಷತ್ರಗಳ ಚಲನೆ ಸೇರಿ ಖಗೋಳ ಲೋಕದಲ್ಲಿ ನಡೆಯುವ ಅಚ್ಚರಿಗಳ ಬಗ್ಗೆ ವಿವರಿಸಿದ ಅವರು, ಕಲೆ ಮತ್ತು ಸಾಹಿತ್ಯದಲ್ಲಿ ಖಗೋಳ ಶಾಸ್ತ್ರದ ಉಲ್ಲೇಖದ ಬಗ್ಗೆ ಮಲ್ಲೇಶ್ವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.



ವಿದ್ಯಾರ್ಥಿಗಳು ಡಾ.ಬಿ.ಎಸ್ ಶೈಲಜಾ ಅವರ ಜತೆಗೆ ಖಗೋಳ ವಿಜ್ಞಾನದ ಬಗ್ಗೆ ಚರ್ಚಿಸಿದರು – ಪ್ರಜಾವಾಣಿ ಚಿತ್ರ

'ಪ್ರಾಚೀನ ಕಾಲದಿಂದಲೂ ಪ್ರಕೃತಿಯನ್ನು ಅರ್ಥ ಮಾಡಿಕೊಳ್ಳುವ ಮಾನವ ಪ್ರಯತ್ನಗಳಿಗೆ ಅವಕಾಶ ಒದಗಿಸಿದ್ದು ಖಗೋಳ. ನಮ್ಮ ಸಂಸ್ಕೃತಿ ಹಾಗೂ ಸಂಪ್ರದಾಯಗಳ ಮೇಲೆ ಅದರ ಪ್ರಭಾವ ಪರಿಚಿತವಾಗಿದೆ. ಪಾರಂಪರಿಕ ಕಟ್ಟಡಗಳ ವಿನ್ಯಾಸಗಳು, ಸಾಹಿತ್ಯ ಕೃತಿಗಳು ಹಾಗೂ ಕಲಾಕೃತಿಗಳಲ್ಲಿ ಖಗೋಳದ ಛಾಪನ್ನು ಕಾಣಬಹುದು. ಜಾನಪದ ಕಥೆಗಳು, ನುಡಿಗಟ್ಟುಗಳು ಮತ್ತು ಗಾದೆಗಳೂ ನಮ್ಮ ದೈನಂದಿನ ವ್ಯವಹಾರಗಳಲ್ಲಿ ಹಾಸುಹೊಕ್ಕಾಗಿದ್ದು, ಅವುಗಳ ಮೂಲಕವೂ ಖಗೋಳ ಜ್ಞಾನ ದೊರೆಯಲಿದೆ' ಎಂದು ಹೇಳಿದರು.

'ಗಡಿಯಾರ ಇಲ್ಲದ ಕಾಲದಲ್ಲಿ ಸಾಂಪ್ರದಾಯಿಕ ಉಪಕರಣದ ನೆರವಿನಿಂದ ಸಮಯ ನಿಗದಿ ಮಾಡಲಾಗುತ್ತಿತ್ತು. ಶಂಕುಸ್ಥಾಪನೆ ಮೂಲಕ ಕಟ್ಟಡಗಳ ದಿಕ್ಕುಗಳನ್ನು ನಿರ್ಧರಿಸಲಾಗುತ್ತಿತ್ತು. ಖಗೋಳ ಜ್ಞಾನವು ಸಾಹಿತ್ಯ ಕೃತಿಯಲ್ಲಿಯೂ ಅಡಕವಾಗಿದೆ. ಹರಿಹರನ ರಗಳೆಗಳು, ಕುಮಾರವ್ಯಾಸ ಭಾರತದ ಅರಣ್ಯ ಪರ್ವ, ನೇಮಿಚಂದ್ರನ ಲೀಲಾವತಿ ಪ್ರಬಂಧ ಸೇರಿ ವಿವಿಧೆಡೆ ಖಗೋಳ ಶಾಸ್ತ್ರಕ್ಕೆ ಸಂಬಂಧಿಸಿದ ಸಂಗತಿಗಳು ಇವೆ. ಆಧುನಿಕ ಸಾಹಿತ್ಯದಲ್ಲಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು', ಎಸ್. ಎಲ್. ಭೈರಪ್ಪ ಅವರ 'ಗ್ರಹಣ' ಸೇರಿ ವಿವಿಧ ಕೃತಿಗಳ ಮೂಲಕ ಖಗೋಳ ಜ್ಞಾನವನ್ನು ತಿಳಿಯಬಹುದು' ಎಂದರು.

ಎಐ ಭಾಷಾಂತರ ವೇದಿಕೆ 'ಭಾಷಿಣಿ'

(BHASHINI-BHASA Interface for India)





ಚಿತ್ರ ಕೃಪೆ:bhashini.gov.in

ಐಎಎಸ್, ಕೆಎಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನ 'ಭಾಷಿಣಿ'– ಕೃತಕ ಬುದ್ಧಿಮತ್ತೆ ಆಧಾರಿತ ಭಾಷಾಂತರ ವೇದಿಕೆ ಕುರಿತ ಮಾಹಿತಿ ಇಲ್ಲಿದೆ.

ಆಯೆಷಾ ಟಿ ಫರ್ಝಾನ

ಗುಜರಾತಿನ ಗಾಂಧಿನಗರದಲ್ಲಿ ಕಳೆದ ವರ್ಷ ನಡೆದ 'ಡಿಜಿಟಲ್ ಇಂಡಿಯಾ ಸಪ್ತಾಹ 2022' ರ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 'ಡಿಜಿಟಲ್ ಇಂಡಿಯಾ ಭಾಷಿಣಿ' ಯನ್ನು ಉದ್ಘಾಟಿಸಿದರು.

ಡಿಜಿಟಲ್ ಇಂಡಿಯಾ ಭಾಷಿಣಿ

ಇದು ಭಾರತೀಯ ಭಾಷೆಗಳಲ್ಲಿ ಜ್ಞಾನ ಹಂಚುವಿಕೆಯ ಡಿಜಿಟಲ್ ಭಾಷಾಂತರ ವೇದಿಕೆ. ಇದು ಇಂಟರ್ನೆಟ್ ಮತ್ತು ಡಿಜಿಟಲ್ ಸೇವೆಗಳಿಗೆ ಎಲ್ಲಾ ಭಾರತೀಯ ಭಾಷೆಗಳಲ್ಲಿ ಸುಲಭ ಪ್ರವೇಶಾವಕಾಶ ನೀಡುತ್ತದೆ. ಅಲ್ಲದೇ, ಧ್ವನಿ ಆಧಾರದಲ್ಲಿಯೂ ಮಾಹಿತಿಯನ್ನು ಗ್ರಹಿಸುತ್ತದೆ. ಈ ಮೂಲಕ ಬಹುತೇಕ ಎಲ್ಲಾ ಭಾರತೀಯ ಭಾಷೆಗಳಲ್ಲಿ ಮಾಹಿತಿ ಹಂಚಿಕೆ ಮತ್ತು ಬರಹ ಕಾರ್ಯಗಳನ್ನು ಸುಲಭವಾಗಿಸಲು ಪ್ರಯತ್ನಿಸುತ್ತದೆ.

ಭಾಷಿಣಿ (ಭಾಷಾ ಇಂಟರ್ಫೇಸ್ ಫಾರ್ ಇಂಡಿಯಾ)

- ಡಿಜಿಟಲ್ ಇಂಡಿಯಾ ಭಾಷಿಣಿ, ಭಾರತದ ಕೃತಕ ಬುದ್ಧಿಮತ್ತೆ ಆಧಾರಿತ ಭಾಷಾಂತರ ವೇದಿಕೆ. ಇದು 'ಭಾಷಾದಾನ್' ಎಂಬ (ಜನರಿಂದಲೇ ಜ್ಞಾನವನ್ನು ಕ್ರೋಡೀಕರಿಸುವ ಮೂಲಕ ಅದನ್ನು ಬೆಳೆಸುವುದು) ಉಪಕ್ರಮದ ಮೂಲಕ ಬಹುಭಾಷೆಗಳ ಡೇಟಾಗಳ ಸೆಟ್‌ಗಳನ್ನು ನಿರ್ಮಿಸಲು ಭಾರತದ ನಾಗರಿಕರ ತೊಡಗಿಸಿಕೊಳ್ಳುವಿಕೆಯನ್ನು ಸಕ್ರಿಯಗೊಳಿಸುತ್ತದೆ.
- ಇದು ರಾಷ್ಟ್ರೀಯ ಭಾಷಾ ಅನುವಾದ ಮಿಷನ್‌ನ ಒಂದು ಭಾಗವಾಗಿದ್ದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ರೂಪಿಸಿದ ಉಪಕ್ರಮವಾಗಿದೆ.

ಡಿಜಿಟಲ್ ಇಂಡಿಯಾ ಭಾಷಿಣಿಯ ಗುರಿ :

ಈ ಯೋಜನೆಯು ಭಾರತೀಯ ನಾಗರಿಕರನ್ನು ಅವರ ಮಾತೃಭಾಷೆ ಅಥವಾ ಆಡುಭಾಷೆಗಳಲ್ಲಿ ದೇಶದ ಡಿಜಿಟಲ್ ಜಗತ್ತಿಗೆ ಸಂಪರ್ಕಿಸುವುದು. ಈ ಮೂಲಕ ಅವರನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ. ಇದು ಜನಸಾಮಾನ್ಯರು ಸುಲಭವಾಗಿ ಡಿಜಿಟಲ್ ಲೋಕ ಪ್ರವೇಶಿಸಲು ಕಾರಣವಾಗುತ್ತದೆ.

ಭಾಷಿಣಿ ವೇದಿಕೆ ಒಂದು ಸಂಪೂರ್ಣ ಡಿಜಿಟಲ್ ಪರಿಸರ ವ್ಯವಸ್ಥೆಯಾಗಿ ರೂಪುಗೊಂಡು, ಸರ್ಕಾರವನ್ನು ಡಿಜಿಟಲೀಕರಣಗೊಳಿಸುವತ್ತಲೂ ಒಂದು ಬೃಹತ್ ಹೆಜ್ಜೆಯಾಗಿದೆ.

ಕೃತಕ ಬುದ್ಧಿಮತ್ತೆ ಮತ್ತು ಇತರ ಉದಯೋನ್ಮುಖ ತಂತ್ರಜ್ಞಾನಗಳ ಶಕ್ತಿ ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ಮೂಲಕ ಈ ವೇದಿಕೆಯು ನಾಗರಿಕರಿಗೆ ಎಲ್ಲಾ ರೀತಿಯ ಸೇವೆಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ. ಮಾತ್ರವಲ್ಲ, ಭಾರತದ ಎಲ್ಲಾ ಭಾಷೆಗಳಿಗೆ ಅನ್ವಯವಾಗುವಂತೆ ರಾಷ್ಟ್ರೀಯ ಸಾರ್ವಜನಿಕ ಡಿಜಿಟಲ್ ವೇದಿಕೆ ನಿರ್ಮಿಸುವ ಗುರಿಯನ್ನೂ ಭಾಷಿಣಿ ಹೊಂದಿದೆ.

ಭಾಷಿಣಿಯು ಸಾರ್ವಜನಿಕರ ಆಸಕ್ತಿಗೆ ಪೂರಕವಾಗಿ, ಆಡಳಿತ ಮತ್ತು ನೀತಿ, ವಿಜ್ಞಾನ ಮತ್ತು ತಂತ್ರಜ್ಞಾನ ಮುಂತಾದ ನಿರ್ದಿಷ್ಟ ವಿಷಯಗಳ ಬಗೆಗಿನ ಸಾಕಷ್ಟು ಮಾಹಿತಿಗಳನ್ನು, ಎಲ್ಲಾ ಭಾರತೀಯ ಭಾಷೆಗಳಲ್ಲಿ ಅಂತರ್ಜಾಲದಲ್ಲಿ ಲಭ್ಯವಾಗಿಸುವ ಗುರಿ ಹೊಂದಿದೆ. ಈ ಮೂಲಕ ನಾಗರಿಕರು ತಮ್ಮ ಮಾತೃಭಾಷೆಯಲ್ಲಿ ಇಂಟರ್ನೆಟ್ ಬಳಸಲು ಭಾಷಿಣಿ ಉತ್ತೇಜಿಸುತ್ತದೆ.

ಪ್ರಮುಖ ಅಂಶಗಳು :

- ಉದ್ಯಮವಲಯ, ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಸ್ಟಾರ್ಟ್ ಅಪ್‌ಗಳಿಗೆ ತಮ್ಮ ಎಲ್ಲಾ ಕೊಡುಗೆಗಳನ್ನು 'ಭಾಷಿಣಿ ವೇದಿಕೆ'ಯೊಳಗೆ ತರುವಂತೆ ದೊಡ್ಡ ನೆಟ್‌ವರ್ಕ್ ಅನ್ನು ರೂಪಿಸಲು ಭಾಷಿಣಿಯು ಸರ್ಕಾರವನ್ನು ಪ್ರೇರೇಪಿಸುತ್ತದೆ.
- ಯಾವುದೇ ಜ್ಞಾನಾಧಾರಿತ ವಿಷಯಗಳಿಗೆ ಸಾರ್ವತ್ರಿಕ ಪ್ರವೇಶ ಒದಗಿಸಲು ಭಾಷಿಣಿ ರಾಷ್ಟ್ರೀಯ ಡಿಜಿಟಲ್ ಸಾರ್ವಜನಿಕ ವೇದಿಕೆಯನ್ನು ಅಭಿವೃದ್ಧಿಪಡಿಸುತ್ತದೆ. ಈ ಮೂಲಕ ಜ್ಞಾನ ಆಧಾರಿತ ಸಮಾಜದ ಸೃಷ್ಟಿಗೆ ಕಾರಣವಾಗುತ್ತದೆ. ಇಲ್ಲಿ ಮಾಹಿತಿಯು ಮುಕ್ತ ಮತ್ತು ಸುಲಭವಾಗಿ ಲಭ್ಯವಿರುತ್ತದೆ.
- ನಾಗರಿಕರಿಗೆ ಬಳಸಲು ಸುಲಭವಾಗುವ ರೀತಿಯಲ್ಲಿ ಈ ವೇದಿಕೆ ರೂಪಿಸಲಾಗಿದೆ. ಜನ ಸಮೂಹಕ್ಕೆ ಈ ವೇದಿಕೆಯ ಮೂಲಕ ಅವರ ಇಷ್ಟದ ಭಾಷೆಗಳಿಗೆ ಕೊಡುಗೆ ನೀಡಲು ಭಾಷಿಣಿಯು ಪ್ರೇರೇಪಿಸುತ್ತದೆ. ಸಾಮಾನ್ಯ ನಾಗರಿಕರು ಈ ಉಪಕ್ರಮದ ಪ್ರಧಾನ ಫಲಾನುಭವಿಗಳಾಗುತ್ತಾರೆ.
- ಭಾಷಣಿಯು ಸಂಪನ್ಮೂಲಗಳನ್ನು ಬಳಸುವ ಹೊಸ ಅಪ್ಲಿಕೇಶನ್‌ಗಳನ್ನು ರಚಿಸಲು ಸ್ಟಾರ್ಟ್ ಅಪ್ ಗಳನ್ನು ಪ್ರೋತ್ಸಾಹಿಸುತ್ತದೆ.

ಭಾಷಾದಾನ್ :

- ಭಾಷಾದಾನ್ ಎನ್ನುವುದು ಭಾಷಿಣಿ ಯೋಜನೆಯ ಭಾಗವಾಗಿ ಭಾರತದ ಜನಸಮೂಹ ನಿರ್ಮಿತ ಭಾಷೆಗಳ ಬೆಳವಣಿಗೆಯ ನಿಟ್ಟಿನಲ್ಲಿ ಹೊರತಂದ ಉಪಕ್ರಮ. ವ್ಯಕ್ತಿಯು ತನ್ನ ಸ್ವಂತ ಭಾಷೆಯನ್ನು ಡಿಜಿಟಲ್ ರೂಪದಲ್ಲಿ ಉತ್ಕೃಷ್ಟಗೊಳಿಸಲು, ದತ್ತಾಂಶದ ಮುಕ್ತ ಭಂಡಾರ ನಿರ್ಮಾಣಕ್ಕೆ ಸಹಾಯ ಮಾಡಲು ನಾಗರಿಕರನ್ನು ಆಹ್ವಾನಿಸುತ್ತದೆ.
- ಭಾರತೀಯ ಭಾಷೆಗಳಲ್ಲಿ ದೊಡ್ಡ ಡೇಟಾ ಸೆಟ್(ಸಮಗ್ರ ಮಾಹಿತಿ ಭಂಡಾರ)ಗಳನ್ನು ರಚಿಸುವುದು ಇದರ ಗುರಿಯಾಗಿದೆ. ಈ ಮೂಲಕ ಸಮಾಜವನ್ನು ಇನ್ನಷ್ಟು ಉತ್ತಮಗೊಳಿಸುವ ಸಲುವಾಗಿ ಉತ್ಪನ್ನಗಳು ಅಥವಾ ಸೇವೆಗಳನ್ನು ರಚಿಸಲು ಕೃತಕ ಬುದ್ಧಿಮತ್ತೆಯ ಮಾದರಿಗಳಿಗೆ (AI Models) ತರಬೇತಿ ನೀಡಲು ಈ ಮಾಹಿತಿಗಳನ್ನು ಬಳಸಬಹುದು. ಈ ವೇದಿಕೆಗೆ ಯಾವುದೇ ಸಾಮಾನ್ಯ ವ್ಯಕ್ತಿಗಳೂ ಕೊಡುಗೆ ನೀಡಬಹುದು.

ಭಾಷಾದಾನ್ ವರ್ಗಗಳು :

ಸುನೊ ಇಂಡಿಯಾ : ಯಾವುದೇ ವ್ಯಕ್ತಿ ತಾನು ಆಲಿಸಿದ ಆಡಿಯೊಗಳನ್ನು ಬರಹರೂಪಕ್ಕಿಳಿಸುವ ಮೂಲಕ ಅಥವಾ ಇತರರು ಬರೆದಿರುವ ಪಠ್ಯವನ್ನು ಮೌಲ್ಯೀಕರಿಸುವ ಮೂಲಕ ತಮ್ಮ ಭಾಷೆಯನ್ನು ಮತ್ತಷ್ಟು ಶ್ರೀಮಂತಗೊಳಿಸಬಹುದು.

ಬೋಲೊ ಇಂಡಿಯಾ : ಬರೆದಿರುವ ವಾಕ್ಯಗಳನ್ನು ಧ್ವನಿರೂಪದಲ್ಲಿ ಮುದ್ರಿಸುವ ಮೂಲಕ ಆ ಭಾಷೆಯನ್ನು ತನ್ನದೇ ಆದ ಉಚ್ಚಾರಣಾ ರೀತಿಯೊಂದಿಗೆ (Accent)ಬಳಸುವುದು ಹೇಗೆಂದು ತಿಳಿಸಿ ತನ್ನ ಭಾಷೆಯನ್ನು ಶ್ರೀಮಂತ ಗೊಳಿಸಬಹುದು. ಅದಾಗಲೇ ರೆಕಾರ್ಡ್ ಮಾಡಿದ ಆಡಿಯೊಗಳನ್ನೂ ಮತ್ತಷ್ಟು ಮೌಲ್ಯೀಕರಿಸಬಹುದು.

ಲಿಖೊ ಇಂಡಿಯಾ: ಇರುವ ಪಠ್ಯವನ್ನು ತಮ್ಮ ಭಾಷೆಗಳಿಗೆ ಅನುವಾದಿಸುವ ಮೂಲಕ ತಮ್ಮ ಕೊಡುಗೆಗಳನ್ನು ನೀಡಬಹುದು ಮತ್ತು ಬೇರೆಯವರ ಭಾಷಾಂತರಗಳನ್ನು ಕೂಡಾ ಮೌಲ್ಯೀಕರಿಸಬಹುದು.

ದೇಖೊ ಇಂಡಿಯಾ : ನೋಡಿದ ಪಠ್ಯವನ್ನು ಟೈಪ್ ಮಾಡುವ ಮೂಲಕ ಅಥವಾ ಅದಕ್ಕೆ ಸಂಬಂಧಿಸಿದ ಚಿತ್ರಗಳನ್ನು ಅಂಟಿಸುವ ಮೂಲಕ ಭಾಷೆಯನ್ನು ಶ್ರೀಮಂತ ಗೊಳಿಸಬಹುದು ಅಥವಾ ಚಿತ್ರವಿದ್ದರೆ ಅದಕ್ಕೆ ಹೆಸರು ನೀಡಬಹುದು. ಇತರರು ಕೊಡುಗೆ ನೀಡಿದ ಚಿತ್ರಗಳನ್ನು ಸಹ ಮೌಲ್ಯೀಕರಿಸಬಹುದು. ❖

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು ಮಾಹಿತಿಗಾಗಿ

'ಭಾಷಿಣಿ'– ಭಾಷಾ ಇಂಟರ್ಫೇಸ್ ಫಾರ್ ಇಂಡಿಯಾ ಕುರಿತ ವಿಸ್ತೃತ ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗಳಿಗೆ ಅಗತ್ಯವಾದ ಇಂಥ ಪ್ರಚಲಿತ ವಿದ್ಯಮಾನಗಳು ಕುರಿತ ಮಾಹಿತಿ ಹಾಗೂ ವಿಡಿಯೊಗಳಿಗಾಗಿ 'ಪ್ರಜಾವಾಣಿ – ಡೆಕ್ಕನ್‌ಹೆರಾಲ್ಡ್' ಪತ್ರಿಕೆಯ' ಮಾಸ್ಟರ್ ಮೈಂಡ್' ಇ–ಪತ್ರಿಕೆಗೆ ಚಂದಾದಾರರಾಗಿ. ಚಂದಾಕ್ಕಾಗಿ ಪಕ್ಕದಲ್ಲಿರುವ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ.

www.exammastermind.com

'ಪರವಾನಗಿ ಸರ್ವೇಯರ್' ನೇಮಕಕ್ಕೆ ಅರ್ಜಿ ಆಹ್ವಾನ

ಆತ್ರೇಯ

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯು, 2000 ಪರವಾನಗಿ ಭೂಮಾಪಕರ ನೇಮಕಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದ್ದು, ಈ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ: ಫೆಬ್ರುವರಿ 2 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದೆ. ಇದೇ 20ನೇ ತಾರೀಖು ಅರ್ಜಿ ಸಲ್ಲಿಕೆಗೆ ಕೊನೆ ದಿನ. ಅಂದು ಸಂಜೆ 5ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದು. www.landrecords.karnataka.gov.in/service201 ಈ ಜಾಲತಾಣದ ಮೂಲಕವೇ ಅರ್ಜಿ ಸಲ್ಲಿಸಬೇಕು. ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.

ಮೇಲಿನ ಜಾಲತಾಣಕ್ಕೆ ಭೇಟಿ ನೀಡಿ. ಅಲ್ಲಿ ಅಭ್ಯರ್ಥಿಯ ಮೊಬೈಲ್ ಸಂಖ್ಯೆ ನಮೂದಿಸಬೇಕು. ನಂತರ CAPTCHA ದಾಖಲಿಸಬೇಕು. ನಮೂದಿಸಿದ ಮೊಬೈಲ್ ಸಂಖ್ಯೆಗೆ ಒಂದು ಒಟಿಪಿ (ಒನ್ ಟೈಮ್ ಪಾಸ್‌ವರ್ಡ್) ಬರುತ್ತದೆ. ಅದನ್ನು ಜಾಲತಾಣದಲ್ಲಿ ಸೂಚಿಸಿರುವ ಸ್ಥಳದಲ್ಲಿ ದಾಖಲಿಸಿ, 'submit' ಗುಂಡಿ ಒತ್ತಿ. ನಂತರ ಅರ್ಜಿ ನಮೂನೆ ತೆರೆಯುತ್ತದೆ. ಅಲ್ಲಿ ಅರ್ಜಿದಾರರ ಉಳಿದ ವಿವರಗಳನ್ನು ದಾಖಲಿಸಬೇಕು.

ವಯೋಮಿತಿ : ಕನಿಷ್ಠ 18 ವರ್ಷ. ಗರಿಷ್ಠ 65 ವರ್ಷ

ಅರ್ಜಿ ಶುಲ್ಕ: ₹1000. ಅರ್ಜಿ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಅರ್ಜಿ ಭರ್ತಿ ಮಾಡಿ, ಶುಲ್ಕ ಪಾವತಿಸಿದ ನಂತರ, Submit ಬಟನ್ ಒತ್ತಿದ ಮೇಲೆ ಕಂಪ್ಯೂಟರ್ ಪರದೆಯ ಮೇಲೆ ಸ್ವೀಕೃತಿ ಪತ್ರ ಮೂಡುತ್ತದೆ. ಅದನ್ನು ಪ್ರಿಂಟ್ ತೆಗೆದುಕೊಂಡು, ಅದರಲ್ಲಿರುವ ಅರ್ಜಿ ಸಂಖ್ಯೆ(Application ID)ಯನ್ನು ಇಲಾಖೆಯೊಂದಿಗೆ ವ್ಯವಹರಿಸುವಾಗ ಬಳಸಬೇಕು.



ಶೈಕ್ಷಣಿಕ ಅರ್ಹತೆಗಳು

- ಕನಿಷ್ಠ ಪದವಿ ಪೂರ್ವ ಶಿಕ್ಷಣ(ಪಿಯುಸಿ) ಅಥವಾ ಸಿಬಿಎಸ್‌ಇ ಅಥವಾ ಐಸಿಎಸ್‌ಇ ಪಠ್ಯಕ್ರಮದಲ್ಲಿ 12ನೇ ತರಗತಿಯಲ್ಲಿ ವಿಜ್ಞಾನ ವಿಷಯದ ಕಾಂಬಿನೇಷನ್ ಕೋರ್ಸ್ ತೆಗೆದುಕೊಂಡು, ಅದರಲ್ಲಿ ಗಣಿತ ವಿಷಯದಲ್ಲಿ ಶೇಕಡ 60 ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು. ಅಥವಾ
- ಮಾನ್ಯತೆ ಪಡೆದ ವಿಶ್ವವಿದ್ಯಾಲಯದಲ್ಲಿ ಬಿಇ /ಬಿ.ಟೆಕ್ ಸಿವಿಲ್ ಪದವಿ ಅಥವಾ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಾಸ್ ಮಾಡಿರಬೇಕು.
- ವೃತ್ತಿ ಶಿಕ್ಷಣ ಇಲಾಖೆ ನಡೆಸುವ 'ಲ್ಯಾಂಡ್ ಅಂಡ್ ಸಿಟಿ ಸರ್ವೆ'ಯಲ್ಲಿ ಪದವಿ ಪೂರ್ವ ಡಿಪ್ಲೊಮಾ ಪಾಸ್ ಮಾಡಿರಬೇಕು. ಅಥವಾ
- ಸರ್ಕಾರದ ಉದ್ಯೋಗ ಹಾಗೂ ತರಬೇತಿ ಇಲಾಖೆ ನಡೆಸುವ ಸರ್ವೆ ಟ್ರೇಡ್ ವಿಷಯದಲ್ಲಿ ಐಟಿಐ ಪಾಸಾಗಿರಬೇಕು. ಅಥವಾ
- ಕನಿಷ್ಠ 10 ವರ್ಷಗಳ ಭೂಮಾಪನ ಸೇವೆ ಸಲ್ಲಿಸಿ ನಿವೃತ್ತರಾದವರು ಅರ್ಜಿ ಸಲ್ಲಿಸಬಹುದು.

ಸ್ಪರ್ಧಾತ್ಮಕ ಪರೀಕ್ಷೆ: ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಎರಡು ವಿಷಯಗಳ ಲಿಖಿತ ಪರೀಕ್ಷೆ ನಡೆಯುತ್ತದೆ. ಎಸ್ಸೆಸ್ಸೆಲ್ಸಿ ಜ್ಞಾನಮಟ್ಟಕ್ಕೆ ಹೊಂದುವಂತಹ ಪ್ರಶ್ನೆಗಳಿರುತ್ತವೆ. ಪರೀಕ್ಷೆಯಲ್ಲಿ ತಲಾ ಒಂದು ವಿಷಯಕ್ಕೆ 100 ಅಂಕಗಳಿಗೆ ವಸ್ತುನಿಷ್ಠ ಮಾದರಿ(Objective Multiple Choice) ಪ್ರಶ್ನೆಗಳನ್ನೊಳಗೊಂಡಂತೆ, ಪ್ರತ್ಯೇಕ ಪರೀಕ್ಷೆ ನಡೆಸಲಾಗುತ್ತದೆ. ರಾಜ್ಯದ ನಿಗದಿತ ಜಿಲ್ಲಾ ಕೇಂದ್ರಗಳಲ್ಲಿ ಏಕಕಾಲಕ್ಕೆ 'ಆನ್‌ಲೈನ್ ಪರೀಕ್ಷೆ' ಅಥವಾ ಲಿಖಿತ ಪರೀಕ್ಷೆ ನಡೆಸಲಾಗುತ್ತದೆ.

ಪತ್ರಿಕೆ –1 (ಸಾಮಾನ್ಯ ಪತ್ರಿಕೆ): ಇದು ಎರಡು ಗಂಟೆಯ ಅವಧಿಯ ಪರೀಕ್ಷೆ. ಒಟ್ಟು 100 ಅಂಕಗಳಿರುತ್ತವೆ. ಈ ಪತ್ರಿಕೆ ಯಲ್ಲಿ ಕರ್ನಾಟಕ ಹಾಗೂ ಭಾರತದ ಇತಿಹಾಸ, ರಾಜ್ಯಶಾಸ್ತ್ರ, ಸಾಮಾನ್ಯ ಜ್ಞಾನ ಮತ್ತು ಇತ್ತೀಚಿನ ವಿದ್ಯಮಾನಗಳ ಅರಿವು, ಸಾಮಾನ್ಯ ವಿಜ್ಞಾನ ಹಾಗೂ ನಿತ್ಯದ ವಿದ್ಯಮಾನಗಳು ಮತ್ತು ಪ್ರಾಯೋಗಿಕ ಜ್ಞಾನ ಕುರಿತು ಪ್ರಶ್ನೆಗಳಿರುತ್ತವೆ.

ಪತ್ರಿಕೆ –2 (ನಿರ್ದಿಷ್ಟ ಪತ್ರಿಕೆ): ಒಟ್ಟು 100 ಅಂಕಗಳ, 2 ಗಂಟೆ ಕಾಲಾವಧಿಯ ಪರೀಕ್ಷೆ. ಈ ಪತ್ರಿಕೆಯ ಕುರಿತು ಭೂಮಾಪನ ಇಲಾಖೆ ಜಾಲತಾಣ https://landrecords.karnataka.gov.in/service201/ ಅನುಬಂಧ– 2ನ್ನು ನೋಡುವುದು.

ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಪಡೆಯುವ ಗರಿಷ್ಠ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಯಾವುದೇ ಸಂದರ್ಶನ ಇರುವುದಿಲ್ಲ. ಆಯ್ಕೆಯಾದ ಅಭ್ಯರ್ಥಿಗಳಿಗೆ ಮೊದಲು ತರಬೇತಿ ನೀಡಿ, ಇದರಲ್ಲಿ ಉತ್ತೀರ್ಣರಾದವರಿಗೆ ಪರವಾನಗಿ ನೀಡಲಾಗುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಎಸ್ಸೆಸ್ಸೆಲ್ಸಿ

40) ಬಾಲ ಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಕಡ್ಡಾಯವಾಗಿ ಭರಿಸಬೇಕಾದ್ದು ಏನು?

ಉತ್ತರ: ಬಾಲಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಪ್ರತಿಯೊಬ್ಬ ಬಾಲಕಾರ್ಮಿಕನ ಪರವಾಗಿ ₹ 20,000 ಗಳ ದಂಡವನ್ನು ಬಾಲಕಾರ್ಮಿಕರ ಕಲ್ಯಾಣ ನಿಧಿಗೆ ಕಡ್ಡಾಯವಾಗಿ ಭರಿಸಬೇಕಾಗುತ್ತದೆ.

41) ಭಾರತವನ್ನು ಪ್ರವೇಶಿಸುವ ನೈರುತ್ಯ ಮಾನ್ಸೂನ್ ಮಾರುತಗಳ ಎರಡು ಕವಲುಗಳು ಯಾವವು?

ಉತ್ತರ: ನೈರುತ್ಯ ಮಾನ್‌ಸೂನ್ ಮಾರುತಗಳು ಅರಬ್ಬಿ ಸಮುದ್ರ ಶಾಖೆ ಮತ್ತು ಬಂಗಾಳಕೊಲ್ಲಿಯ ಶಾಖೆ ಎಂಬ ಎರಡು ಕವಲುಗಳಾಗಿ ಭಾರತವನ್ನು ಪ್ರವೇಶಿಸುತ್ತವೆ.

42) ತಲಾ ಆದಾಯವನ್ನು ಹೇಗೆ ಕಂಡುಹಿಡಿಯಲಾಗುತ್ತದೆ.?

ಉತ್ತರ : ದೇಶದ ರಾಷ್ಟ್ರೀಯ ಆದಾಯವನ್ನು ಆ ರಾಷ್ಟ್ರದ ಜನಸಂಖ್ಯೆಯಿಂದ ಭಾಗಿಸುವ ಮೂಲಕ ತಲಾ ಆದಾಯವನ್ನು ಕಂಡುಹಿಡಿಯಲಾಗುತ್ತದೆ.

43) 'ಎರಡನೇ ಹಸಿರು ಕ್ರಾಂತಿ' ಎಂದರೇನು?

ಉತ್ತರ: ಕೃಷಿಯಲ್ಲಿ ಎಲ್ಲ ರೀತಿಯ ಪರಸರಸ್ನೇಹಿ ತಂತ್ರಗಳನ್ನು ಬಳಸುವ ಮೂಲಕ, ಕೃಷಿ ಉತ್ಪಾದನೆಯನ್ನು ದ್ವಿಗುಣಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದನ್ನು 'ಎರಡನೇ ಹಸಿರು ಕ್ರಾಂತಿ' ಅಥವಾ 'ಸದಾ ಹಸಿರು ಕ್ರಾಂತಿ' ಎಂದು ಗುರುತಿಸಲಾಗುತ್ತಿದೆ.

44) ಮಹಿಳಾ ಸಬಲೀಕರಣ ಎಂದರೇನು?

ಉತ್ತರ: ಮಹಿಳೆಯರಿಗೆ ಪುರುಷರಷ್ಟೇ ಸಮಾನವಾದ ಶಿಕ್ಷಣ, ಸ್ಥಾನಮಾನ, ಉದ್ಯೋಗ, ವೇತನ ರಕ್ಷಣೆ ಮುಂತಾದವುಗಳನ್ನು ನೀಡುವುದನ್ನು ಮಹಿಳಾ ಸಬಲೀಕರಣ ಎನ್ನುತ್ತೇವೆ.

45) ಪಶ್ಚಿಮ ಯೂರೋಪಿಯನ್ ದೇಶಗಳು ಭಾರತಕ್ಕೆ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಪ್ರಯತ್ನಕ್ಕೆ ಕಾರಣವೇನು?

ಉತ್ತರ: ಪಶ್ಚಿಮ ಯೂರೋಪಿಯನ್ ದೇಶಗಳು ಭಾರತಕ್ಕೆ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಪ್ರಯತ್ನಕ್ಕೆ ಕಾರಣ:-

1. ಕ್ರಿ.ಶ 1453ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟೆಂಟಿನೋಪಲ್ ನಗರವನ್ನು ವಶಪಡಿಸಿಕೊಂಡಿದ್ದರಿಂದ ಯೂರೋಪಿಯನ್ನರು ಭಾರತಕ್ಕೆ ಬರಲು ಬಳಸುತ್ತಿದ್ದ ಮಾರ್ಗಗಳು ರದ್ದಾದವು.
2. ಯೂರೋಪಿಯನಲ್ಲಿ ಭಾರತದ ಸಂಬಾರ್ ಪದಾರ್ಥ ಮತ್ತಿತರ ವಸ್ತುಗಳ ಬೇಡಿಕೆ ಅಪಾರವಾಗಿತ್ತು. ಆದ್ದರಿಂದ ಅವರು ಅನಿವಾರ್ಯವಾಗಿ ಪರ್ಯಾಯ ಮಾರ್ಗವನ್ನು ಹುಡುಕಲು ಪ್ರಯತ್ನಿಸಿದರು.

46) ಮೂರನೇ ಆಂಗ್ಲೋ- ಮೈಸೂರು ಯುದ್ಧಕ್ಕೆ ಕಾರಣವೇನು?

ಉತ್ತರ : ಮೂರನೇ ಆಂಗ್ಲೋ- ಮೈಸೂರು ಯುದ್ಧಕ್ಕೆ ಕಾರಣಗಳು

(1) ಬ್ರಿಟಿಷರು ಟಿಪ್ಪುಸುಲ್ತಾನನನ್ನು ದಕ್ಷಿಣ ಭಾರತದಲ್ಲಿ ಪ್ರಬಲ ವೈರಿಯೆಂದೇ ಪರಿಗಣಿಸಿದ್ದರು. ಬ್ರಿಟಿಷರನ್ನು ಓಡಿಸಲು ಟಿಪ್ಪು ನಿರ್ಧರಿಸಿದ್ದ, ಟಿಪ್ಪುವನ್ನು ಸೋಲಿಸಲು ಬ್ರಿಟಿಷರು ಹವಣಿಸುತ್ತಿದ್ದರು.

(2) ಟಿಪ್ಪುವು ಬ್ರಿಟಿಷರ ಸ್ನೇಹಿತನಾಗಿದ್ದ ತಿರುವಾಂಕೂರಿನ ಅರಸನ ಮೇಲೆ ದಾಳಿ ಮಾಡಿದನು. ಬ್ರಿಟಿಷರು ತಿರುವಾಂಕೂರಿನ ಅರಸನ ಸಹಾಯಕ್ಕೆ ನಿಂತಾಗ ಮೂರನೇ ಆಂಗ್ಲೋ ಮೈಸೂರು ಯುದ್ಧ ಆರಂಭವಾಯಿತು

47) ಭಾರತದ ಸಾಮಾಜಿಕ ಕ್ರಾಂತಿಯಲ್ಲಿ ಸರ್ ಸಯ್ಯದ್ ಅಹಮದ್ ಖಾನ್‌ರ ಪಾತ್ರವೇನು?

ಉತ್ತರ : ಸರ್. ಸಯ್ಯದ್ ಅಹಮದ್ ಖಾನ್ ಅವರು ಭಾರತೀಯ ಮುಸ್ಲಿಂ ಸಮಾಜದಲ್ಲಿದ್ದ ಧಾರ್ಮಿಕ ನಂಬಿಕೆಗಳ ಜೊತೆಗೆ ಪಾಶ್ಚಿಮಾತ್ಯ ವಿದ್ಯಾಭ್ಯಾಸ ಅತ್ಯಗತ್ಯ ಎಂಬುದನ್ನು ಅರಿತು ಮುಸ್ಲಿಂರ ಶಿಕ್ಷಣಕ್ಕಾಗಿ ಅಲಿಘರ್‌ನಲ್ಲಿ ಆಂಗ್ಲೋ-ಓರಿಯಂಟಲ್ ಕಾಲೇಜನ್ನು ಸ್ಥಾಪಿಸಿದರು. ಇವರು ಮುಸ್ಲಿಂ ಸಮಾಜದ ಸ್ತ್ರೀಯರು ಶಿಕ್ಷಣ ಪಡೆಯಬೇಕೆಂದು ಒತ್ತಾಯಿಸಿದರು. ಬಹುಪತ್ನಿತ್ವ ವಿರುದ್ಧ ಹೋರಾಡಿದರು ಮತ್ತು ವಿಧವಾ ವಿವಾಹಕ್ಕೆ ಪ್ರೋತ್ಸಾಹಿಸಿದರು.

48) ಲಾಭಕೋರತನವು ಉತ್ಪಾದಕ ಮತ್ತು ಗ್ರಾಹಕರೀರ್ವರಿಗೂ ನಷ್ಟ ಉಂಟು ಮಾಡುತ್ತದೆ. ವಿವರಿಸಿ.

ಉತ್ತರ:- ಆರ್ಥಿಕ ರಂಗದಲ್ಲಿ ಲಾಭ ಬಡುಕತನ ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆ ನೀಡುತ್ತದೆ. ಇದರಿಂದ ಬೆಲೆ ಏರಿಕೆ ಸತತವಾಗಿ ನಡೆದು ಹಣದುಬ್ಬರಕ್ಕೂ ಎಡೆಮಾಡಿಕೊಡುತ್ತದೆ. ಜನ ಸಮುದಾಯದ ಆದಾಯದ ಬಹುಪಾಲು ಸೀಮಿತ ಶ್ರೀಮಂತ ವ್ಯಾಪಾರಿ ವರ್ಗದ ಕೈ ಸೇರುತ್ತದೆ. ಉತ್ಪಾದಕರು ಅವರಿಗಿಂತ ಹೆಚ್ಚಾಗಿ ವಿತರಕರು ಬಹುವಾಗಿ ಲಾಭಕ್ಕೆ ಆಸೆಪಟ್ಟು ಕಾರ್ಯೋನ್ಮುಖರಾಗಿರುವುದರಿಂದ ಈ ಲಾಭ ಬಡುಕತನ ಹೆಚ್ಚುವಂತಾಗಿದೆ ಇದರಿಂದ ಉತ್ಪಾದಕ ಮತ್ತು ಗ್ರಾಹಕನಿಗೆ ನಷ್ಟವಾಗಿ ಮಧ್ಯವರ್ತಿ ವ್ಯಾಪಾರಿ ವರ್ಗಕ್ಕೆ ಲಾಭವಾಗುತ್ತದೆ.

49) ಪರಿಸರ ಸಂರಕ್ಷಣೆಗಾಗಿ ನಡೆಸಿರುವ ಕೆಲವು ಸಾಮೂಹಿಕ ಪ್ರತಿಭಟನೆಗಳನ್ನು ಪಟ್ಟಿ ಮಾಡಿ?

ಉತ್ತರ : ಚಿಪ್ಕೊ ಚಳವಳಿ, ಅಪ್ಪಿಕೋ ಚಳವಳಿ, ನರ್ಮದಾ ಆಂದೋಲನ, ಮೌನ ಕಣಿವೆ ಆಂದೋಲನ, ಕರ್ನಾಟಕ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋಧಿ ಚಳವಳಿಗಳು, ಕೈಗಾ ಅಣುಸ್ಥಾವರ ವಿರೋಧಿ ಚಳವಳಿ ಮುಂತಾದ ಅನೇಕ ಸಾಮೂಹಿಕ ಪ್ರತಿಭಟನೆಗಳು ಪರಿಸರ ಸಂರಕ್ಷಣೆಗಾಗಿ ನಡೆದವು.

50) ಭಾರತದ ವಾಯುಗುಣದ ಮೇಲೆ ಹಿಮಾಲಯ ಹೇಗೆ ಪ್ರಭಾವ ಬೀರುತ್ತದೆ?

ಉತ್ತರ: 1. ಸೈಬೀರಿಯಾ ಪ್ರದೇಶದಿಂದ ಬೀಸುವ ಶೀತ ಮಾರುತಗಳಿಂದ ಭಾರತವನ್ನು ರಕ್ಷಿಸುತ್ತದೆ.

2. ಹಿಮಾಲಯ ಪರ್ವತದ ಎತ್ತರವಾದ ಬೆಟ್ಟಗಳು ಮಳೆಯ ಮಾರುತಗಳನ್ನು ತಡೆಯುತ್ತವೆ. ಇದರಿಂದ ಉತ್ತರ ಭಾರತದಾದ್ಯಂತ ಮಳೆಯಾಗುತ್ತದೆ.

3. ಮಳೆಯಾಗದ ಕಾಲದಲ್ಲಿ ಹಿಮಾಲಯದ ಶಿಖರಗಳ ಹಿಮವು ಕರಗಿ (ಬೇಸಿಗೆಯಲ್ಲಿ) ಉತ್ತರ ಭಾರತದ ನದಿಗಳು ತುಂಬಿ ಹರಿಯಲು ಅನುವು ಮಾಡಿಕೊಡುತ್ತದೆ.

4. ಹಿಮಾಲಯವು ದಟ್ಟವಾದ ಕಾಡನ್ನು ಹೊಂದಿದೆ. ಹೀಗೆ ಭಾರತದ ವಾಯುಗುಣದ ಮೇಲೆ ಹಿಮಾಲಯ ತನ್ನದೇ ಆದ ಪ್ರಭಾವ ಹೊಂದಿದೆ.

51) ಮಾನ್‌ಸೂನ್ ಕಾಡುಗಳು ಮತ್ತು ಮ್ಯಾಂಗ್ರೋವ್ ಕಾಡುಗಳಲ್ಲಿ ಕಂಡುಬರುವ ವ್ಯತ್ಯಾಸಗಳೇನು?

ಉತ್ತರ : ಮಾನ್‌ಸೂನ್ ಕಾಡುಗಳು ಮಾನ್ಸೂನ್ ಮಳೆ ಹೆಚ್ಚಾಗಿ ಬೀಳುವ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. ಭಾರತದಲ್ಲಿ ಇವುಗಳ ಪ್ರಮಾಣ ಹೆಚ್ಚಾಗಿದೆ. ಒಂದು ನಿರ್ದಿಷ್ಟ ಋತುವಿನಲ್ಲಿ ಎಲೆಯುದುರುತ್ತದೆ. ಆದರೆ ಮ್ಯಾಂಗ್ರೋವ್ ಕಾಡುಗಳು ಸಮುದ್ರ ತೀರ ಪ್ರದೇಶದ ತಗ್ಗು ವಲಯಗಳಲ್ಲಿ ಬೆಳೆಯುತ್ತವೆ. ನದಿ ಮುಖಜಭೂಮಿಗಳು ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಬೆಳೆಯುತ್ತವೆ. ಭಾರತದ ಈ ಅರಣ್ಯ ಪ್ರದೇಶ ಸುಮಾರು 4.4 ಸಾವಿರ ಚದರ ಕಿ.ಮೀ ವ್ಯಾಪಿಸಿದೆ. ಇವುಗಳು ಗಂಗಾ, ಕೃಷ್ಣಾ, ಗೋದಾವರಿ, ಮಹಾನದಿಗಳ ಮುಖಜಭೂಮಿಯಲ್ಲಿ ಸಹಾ ನೋಡಬಹುದು. ಪಶ್ಚಿಮ ಬಂಗಾಲ, ತಮಿಳುನಾಡು, ಗುಜರಾತ್, ಕರ್ನಾಟಕದ ಕೆಲವು ಭಾಗ ಮುಂತಾದ ಕಡೆಗಳಲ್ಲಿ ಈ ತರಹದ ಕಾಡುಗಳನ್ನು ನೋಡಬಹುದು.

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಮಾದರಿ ಪ್ರಶ್ನೋತ್ತರ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ರಸಾಯನ ವಿಜ್ಞಾನ

ಪಿಯುಸಿ

5) ಜಲವಿಭಜನೆ ಕ್ರಿಯೆಯಲ್ಲಿ ವರ್ತಿಸುವಿಕೆಯ ಆಧಾರದ ಮೇಲೆ ಕಾರ್ಬೋಹೈಡ್ರೇಟ್‌ಗಳ ವರ್ಗೀಕರಣದ ಬಗ್ಗೆ ಬರೆಯಿರಿ .

ಉತ್ತರ:- ರಾಸಾಯನಿಕವಾಗಿ ಕಾರ್ಬೋಹೈಡ್ರೇಟ್‌ಗಳನ್ನು ಈ ರೀತಿ ವ್ಯಾಖ್ಯಾನಿಸಬಹುದು. ದ್ಯುತಿಪಟುತ್ವ ಹೊಂದಿರುವ ಪಾಲಿಹೈಡ್ರಾಕ್ಸಿ ಅಲ್ಡಿಹೈಡ್ ಅಥವಾ ಕಿಟೋನ್‌ಗಳು ಅಥವಾ ಜಲವಿಭಜನೆಯ ನಂತರ ಅಂತಹ ಘಟಕಗಳನ್ನು ನೀಡುವ ಸಂಯುಕ್ತಗಳು. ಕೆಲವು ಕಾರ್ಬೋಹೈಡ್ರೆಟ್ಸ್‌ಗಳು ಸಿಹಿಯಾಗಿದ್ದು ಅವುಗಳನ್ನು ಸಕ್ಕರೆಗಳು (ಶುಗರ್) ಎಂದು ಸಹ ಕರೆಯುವರು. ಸಾಮಾನ್ಯವಾಗಿ ಮನೆಯಲ್ಲಿ ಬಳಸುವ ಸಕ್ಕರೆಯು ಸುಕ್ರೋಸ್ ಆಗಿದ್ದರೆ, ಹಾಲಿನಲ್ಲಿರುವ ಸಕ್ಕರೆಯನ್ನು ಲ್ಯಾಕ್ಟೋಸ್ ಎನ್ನುವರು. ಕಾರ್ಬೋಹೈಡ್ರೆಟ್ಸ್ ಗಳನ್ನು ಸಕರೈಡ್‌ಗಳೆಂದು ಸಹ ಕರೆಯುವರು. (ಗ್ರೀಕ್ ಭಾಷೆಯಲ್ಲಿ ಸಕರಾನ್‌ನ ಅರ್ಥ ಸಕ್ಕರೆ) ಕಾರ್ಬೋಹೈಡ್ರೇಟ್‌ಗಳನ್ನು, ಅವು ಜಲವಿಭಜನೆ ಕ್ರಿಯೆಯಲ್ಲಿ ವರ್ತಿಸುವಿಕೆಯ ಆಧಾರದ ಮೇಲೆ ವರ್ಗೀಕರಿಸಲಾಗಿದೆ. ಅವುಗಳನ್ನು ಈ ಕೆಳಗಿನ ಮೂರು ಗುಂಪುಗಳಾಗಿ ವಿಂಗಡಿಸಲಾಗಿದೆ.

(i) ಮೋನೋಸಕರೈಡ್‌ಗಳು : ಜಲವಿಭಜನೆಯಿಂದ ಸರಳ ಘಟಕಗಳಾದ ಪಾಲಿಹೈಡ್ರಾಕ್ಸಿ ಅಲ್ಡಿಹೈಡ್ ಅಥವಾ ಕಿಟೋನ್ ಗಳನ್ನು ನೀಡದ ಕಾರ್ಬೋಹೈಡ್ರೆಟ್ಸ್‌ಗಳನ್ನು ಮೋನೋಸಕರೈಡ್‌ಗಳೆನ್ನುವರು. ಪ್ರಕೃತಿಯಲ್ಲಿ ಸುಮಾರು 20 ಮೋನೋಸಕರೈಡ್‌ಗಳಿರಬಹುದೆಂದು ತಿಳಿಯಲಾಗಿದೆ. ಸಾಮಾನ್ಯ ಉದಾಹರಣೆಗಳೆಂದರೆ ಗ್ಲುಕೋಸ್, ಫ್ರಕ್ಟೋಸ್, ರೈಬೋಸ್ ಮುಂತಾದವುಗಳು.

(ii) ಒಲಿಗೊಸಕರೈಡ್‌ಗಳು : ಜಲವಿಭಜನೆಯಲ್ಲಿ ಎರಡರಿಂದ ಹತ್ತು ಮೋನೋಸಕರೈಡ್ ಘಟಕಗಳನ್ನು ನೀಡುವ ಕಾರ್ಬೋಹೈಡ್ರೇಟ್‌ಗಳನ್ನು ಒಲಿಗೊಸಕರೈಡ್‌ಗಳೆನ್ನುವರು. ಜಲವಿಭಜನೆ ಹೊಂದಿದಾಗ ನೀಡುವ ಮೋನೋಸಕರೈಡ್‌ಗಳ ಸಂಖ್ಯೆಗೆ ಅನುಗುಣವಾಗಿ ಇವುಗಳನ್ನು ಪುನಃ ಡೈಸಕರೈಡ್, ಟ್ರೈಸಕರೈಡ್, ಟೆಟ್ರಾಸಕರೈಡ್‌ಗಳೆಂದು ವರ್ಗೀಕರಿಸಲಾಗಿದೆ. ಇವುಗಳಲ್ಲಿ ಸಾಮಾನ್ಯವಾಗಿರುವಂತಹದ್ದು ಡೈಸಕರೈಡ್‌ಗಳು. ಡೈಸಕರೈಡ್‌ಗಳು ಜಲವಿಭಜನೆ ಹೊಂದಿದಾಗ ಸಿಗುವ ಎರಡು ಮೋನೋಸಕರೈಡ್‌ಗಳು ಒಂದೇ ರೀತಿಯವು ಅಥವಾ ಬೇರೆ ಬೇರೆ ರೀತಿಯವು ಇರಬಹುದು. ಉದಾಹರಣೆಗೆ ಸುಕ್ರೋಸ್ ಜಲವಿಭಜನೆ ಹೊಂದಿದಾಗ ಒಂದು ಗ್ಲುಕೋಸ್ ಮತ್ತು ಒಂದು ಫ್ರಕ್ಟೋಸ್ ಅಣುಗಳನ್ನು ನೀಡಿದರೆ, ಮಾಲ್ಟೋಸ್ ಎರಡು ಗ್ಲುಕೋಸ್ ಅಣುಗಳನ್ನು ನೀಡುತ್ತದೆ.

(iii) ಪಾಲಿಸಕರೈಡ್‌ಗಳು: ಜಲವಿಭಜನೆಯಿಂದ ಬಹುಸಂಖ್ಯೆಯ ಮೋನೋಸಕರೈಡ್ ಘಟಕಗಳನ್ನು ನೀಡುವ ಕಾರ್ಬೋಹೈಡ್ರೇಟ್‌ಗಳನ್ನು ಪಾಲಿಸಕರೈಡ್‌ಗಳೆನ್ನುವರು. ಕೆಲವು ಸಾಮಾನ್ಯ ಉದಾಹರಣೆಗಳೆಂದರೆ ಪಿಷ್ಟ, ಸೆಲ್ಯುಲೋಸ್, ಗ್ಲೈಕೋಜನ್, ಅಂಟು (ಗಮ್) ಮುಂತಾದವುಗಳು. ಪಾಲಿಸಕರೈಡಗಳಿಗೆ ಸಿಹಿರುಚಿ ಇರುವುದಿಲ್ಲ. ಕಾರಣ ಅವುಗಳನ್ನು ಸಿಹಿರಹಿತ ಸಕ್ಕರೆಗಳು (ನಾನ್ ಶುರ್ಸ್) ಎನ್ನುವರು. ಕಾರ್ಬೋಹೈಡ್ರೇಟ್‌ಗಳನ್ನು, ಅಪಕರ್ಷಕ ಅಥವಾ ಅಪಕರ್ಷಕವಲ್ಲದ ಸಕ್ಕರೆಗಳೆಂದು ಸಹ ವರ್ಗೀಕರಿಸಲಾಗಿದೆ. ಫಾಲಿಂಗ್ ದ್ರಾವಣ ಅಥವಾ ಟಾಲಿನ್ ಕಾರಕವನ್ನು ಅಪಕರ್ಷಿಸುವ ಎಲ್ಲ ಕಾರ್ಬೋಹೈಡ್ರೇಟ್‌ಗಳನ್ನು ಅಪಕರ್ಷಕ ಸಕ್ಕರೆ ಎನ್ನುವರು. ಎಲ್ಲ ಮೋನೋಸಕರೈಡ್‌ಗಳು, ಅಲ್ಡಿಹೈಡ್‌ಗಳಿರಬಹುದು ಅಥವಾ ಕಿಟೋನ್‌ಗಳಿರಬಹುದು. ಅವು ಅಪಕರ್ಷಕ ಸಕ್ಕರೆಗಳಾಗಿವೆ. ಡೈಸಕರೈಡ್‌ಗಳಲ್ಲಿ ಎರಡೂ ಮೋನೋಸಕರೈಡ ಘಟಕಗಳ ಅಪಕರ್ಷಕ ಗುಂಪುಗಳು ಅಂದರೆ ಅಲ್ಡಿಹೈಡಿಕ್ ಅಥವಾ ಕಿಟೋನಿಕ್ ಗುಂಪುಗಳು ರಾಸಾಯನಿಕ ಬಂಧದಲ್ಲಿದ್ದರೆ ಅಂತವುಗಳು ಅಪಕರ್ಷಕವಲ್ಲದ ಸಕ್ಕರೆಗಳಾಗಿರುತ್ತವೆ. ಉದಾಹರಣೆಗೆ ಸುಕ್ರೋಸ್. ಹಾಗೆಯೇ ಸ್ವತಂತ್ರ ಕ್ರೀಯಾಶೀಲ ಗುಂಪುಗಳನ್ನು ಹೊಂದಿರುವ ಸಕ್ಕರೆಗಳನ್ನು ಅಪಕರ್ಷಕ ಸಕ್ಕರೆಗಳೆನ್ನುವರು. ಉದಾಹರಣೆಗೆ ಮಾಲ್ಟೋಸ್ ಮತ್ತು ಲಾಕ್ಟೋಸ್.

6) ಗ್ಲುಕೋಸ್ ತಯಾರಿಸುವ ವಿಧಾನಗಳ ಬಗ್ಗೆ ಬರೆಯಿರಿ.

ಉತ್ತರ : ಪ್ರಕೃತಿಯಲ್ಲಿ ಗ್ಲುಕೋಸ್ ಮೂಲ ರೂಪದಲ್ಲಲ್ಲದೇ ಸಂಯೋಜನೆ ಹೊಂದಿದ ರೂಪದಲ್ಲೂ ಸಿಗುತ್ತದೆ. ಇದು ಸಿಹಿಯಾದ ಹಣ್ಣು ಮತ್ತು ಜೇನುತುಪ್ಪಗಳಲ್ಲೂ ಇರುತ್ತದೆ. ಕಳಿತ ದ್ರಾಕ್ಷಿಯಲ್ಲಿ ಗ್ಲುಕೋಸ್ ಸಮೃದ್ಧವಾಗಿದೆ.

ಇದನ್ನು ಈ ಕೆಳಗಿನ ವಿಧಾನಗಳಿಂದ ತಯಾರಿಸುವರು:

(1) ಸುಕ್ರೋಸ್‌ನಿಂದ (ಕಬ್ಬಿನ ಸಕ್ಕರೆ): ದುರ್ಬಲ ಹೈಡ್ರೊಕ್ಲೋರಿಕ್ ಆಮ್ಲ ಅಥವಾ ಸಲ್ಫೂರಿಕ್ ಆಮ್ಲದೊಂದಿಗೆ ಆಲ್ಕೋಹಾಲ್‌ಯುಕ್ತ ಸುಕ್ರೋಸ್ ದ್ರಾವಣವನ್ನು ಕುದಿಸಿದಾಗ, ಗ್ಲುಕೋಸ್ ಮತ್ತು ಫ್ರಕ್ಟೋಸ್ ಸಮ ಪ್ರಮಾಣದಲ್ಲಿ ಸಿಗುತ್ತದೆ.

$$\underset{\text{ಸುಕ್ರೋಸ್}}{C_{12}H_{22}O_{11}} + H_2O \xrightarrow{H^+} \underset{\text{ಗ್ಲುಕೋಸ್}}{C_6H_{12}O_6} + \underset{\text{ಫ್ರಕ್ಟೋಸ್}}{C_6H_{12}O_6}$$

(2) ಪಿಷ್ಟದಿಂದ : ವಾಣಿಜ್ಯಿಕವಾಗಿ ಪಿಷ್ಟವನ್ನು ದುರ್ಬಲ ಸಲ್ಫೂರಿಕ್ ಆಮ್ಲದೊಡನೆ 393 K ಉಷ್ಣತೆಯಲ್ಲಿ ಮತ್ತು 2-3 atm ಒತ್ತಡದಲ್ಲಿ ಕುದಿಸಿ ಜಲವಿಭಜನೆಯಿಂದ ಪಡೆಯುತ್ತಾರೆ.

$$\underset{\text{ಪಿಷ್ಟ ಅಥವಾ ಸೆಲ್ಯುಲೊಸ್}}{(C_6H_{10}O_5)_n} + nH_2O \xrightarrow[393K;\ 2\text{-}3\ atm]{H^+} \underset{\text{ಗ್ಲುಕೋಸ್}}{nC_6H_{12}O_6}$$

7) ಯಾವುದನ್ನು ಗ್ಲೈಕೊಸೈಡಿಕ್ ಬಂಧ ಎನ್ನುವರು?

ಉತ್ತರ:- ಎರಡು ಮೋನೋಸಕರೈಡ್‌ಗಳು ಆಕ್ಸೈಡ್ ಬಂಧದ ಮೂಲಕ ಒಂದು ನೀರಿನ ಅಣುವಿನ ನಷ್ಟದೊಂದಿಗೆ ಒಟ್ಟಿಗೆ ಸೇರಿಕೊಳ್ಳುತ್ತವೆ. ಈ ರೀತಿ ಎರಡು ಮೋನೋಸಕರೈಡ್ ಘಟಕಗಳು ಆಮ್ಲಜನಕ ಪರಮಾಣುವಿನ ಮೂಲಕ ಹೊಂದುವ ಸಂಪರ್ಕವನ್ನು ಗ್ಲೈಕೊಸೈಡಿಕ್ ಬಂಧ ಎನ್ನುವರು.

8) ಯಾವ ಉತ್ಪನ್ನಕ್ಕೆ ವಿಲೋಮ ಸಕ್ಕರೆ ಎಂದು ಹೆಸರು.? ಮತ್ತು ಯಾಕೆ?

ಉತ್ತರ:- ಸುಕ್ರೋಸ್.

ಕಾರಣ:- ಸುಕ್ರೋಸ್ ಬಲಭ್ರಾಮಕವಾಗಿರುತ್ತದೆ. ಆದರೆ ಜಲವಿಭಜನೆ ನಂತರ ಬಲಭ್ರಾಮಕ ಗ್ಲುಕೋಸ್ ಮತ್ತು ಎಡಭ್ರಾಮಕ ಫ್ರಕ್ಟೋಸ್‌ನ್ನು ನೀಡುತ್ತದೆ. ಫ್ರಕ್ಟೋಸ್‌ನ ಎಡಭ್ರಮಣ (–92.4ಲಿ) ಅಂಶವು, ಗ್ಲುಕೋಸ್‌ನ ಬಲಭ್ರಮಣ (+ 52.5ಲಿ) ಅಂಶಕ್ಕಿಂತ ಹೆಚ್ಚಾಗಿರುವುದರಿಂದ, ಇದರ ಮಿಶ್ರಣವು ಎಡಭ್ರಾಮಕವಾಗಿರುತ್ತದೆ. ಹೀಗಾಗಿ ಸುಕ್ರೋಸ್‌ನ ಜಲವಿಭಜನೆಯು ಭ್ರಮಣದ ಚಿಹ್ನೆಯಲ್ಲಿ, ಬಲ (+) ದಿಂದ ಎಡ(-) ಕ್ಕೆ ಬದಲಾವಣೆಯನ್ನು ತರುತ್ತದೆ ಈ ಕಾರಣಕ್ಕಾಗಿ ಉತ್ಪನ್ನಕ್ಕೆ ವಿಲೋಮ ಸಕ್ಕರೆ ಎಂದು ಹೆಸರು.

9) ಕಾರ್ಬೋಹೈಡ್ರೇಟ್‌ನ ಪ್ರಾಮುಖ್ಯತೆ ಏನು?

ಉತ್ತರ:- ಕಾರ್ಬೋಹೈಡ್ರೇಟ್‌ಗಳು ಸಸ್ಯ ಮತ್ತು ಪ್ರಾಣಿಗಳೆರಡರ ಜೀವನಕ್ಕೆ ಅವಶ್ಯಕವಾಗಿವೆ. ಅವು ನಮ್ಮ ಆಹಾರದ ಪ್ರಮುಖ ಭಾಗಗಳಾಗಿವೆ. ಜೇನುತುಪ್ಪವನ್ನು ಬಹಳ ಹಿಂದಿನಿಂದ ಆಯುರ್ವೇದ ವೈದ್ಯಶಾಸ್ತ್ರದ ವೈದ್ಯರು ತ್ವರಿತ ಶಕ್ತಿಯ ಮೂಲವಾಗಿ ಬಳಸುತ್ತಾ ಬಂದಿದ್ದಾರೆ. ಕಾರ್ಬೋಹೈಡ್ರೇಟ್‌ಗಳನ್ನು ಸಸ್ಯಗಳಲ್ಲಿ ಪಿಷ್ಟದ ರೂಪದಲ್ಲಿ ಶೇಖರಣಾ ಕಣಗಳಾಗಿ ಮತ್ತು ಪ್ರಾಣಿಗಳಲ್ಲಿ ಗ್ಲೈಕೋಜನ್ ರೂಪದಲ್ಲಿ ಬಳಸಲಾಗುತ್ತದೆ. ಬ್ಯಾಕ್ಟೀರಿಯಾ ಮತ್ತು ಸಸ್ಯಗಳ ಜೀವಕೋಶದ ಗೋಡೆಯು ಸೆಲ್ಯುಲೋಸ್‌ನಿಂದ ಮಾಡಲ್ಪಟ್ಟಿದೆ. ಸೆಲ್ಯುಲೋಸನ್ನು ಕಟ್ಟಿಗೆ ರೂಪದಲ್ಲಿ ಪೀಠೋಪಕರಣ ಮುಂತಾದವುಗಳನ್ನು ತಯಾರಿಸಲು ಹಾಗೂ ಹತ್ತಿ ಫೈಬರ್ ರೂಪದಲ್ಲಿ ಧರಿಸಲು ಬಳಸುವರು. ಇವು ಅನೇಕ ಪ್ರಮುಖ ಕೈಗಾರಿಕೆಗಳಾದ ಜವಳಿ, ಕಾಗದ, ಮೆರಗು ಸಾಮಾನು ಮತ್ತು ಬ್ರುವರಿ ಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತವೆ.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಗೊಂದಲ ಇರುವ 30ರಿಂದ 40 ಕ್ಷೇತ್ರಗಳಿಗೆ ಇಬ್ಬರ ಹೆಸರು ಶಿಫಾರಸು

150 ಕ್ಷೇತ್ರಗಳಿಗೆ 'ಕೈ' ಅಭ್ಯರ್ಥಿ ಹೆಸರು ಅಂತಿಮ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೋಹನ್ ಪ್ರಕಾಶ್ ನೇತೃತ್ವದ ಕಾಂಗ್ರೆಸ್ ಸ್ಕ್ರೀನಿಂಗ್ ಸಮಿತಿ ಹೆಚ್ಚಿನ ಗೊಂದಲಗಳಿಲ್ಲದ 150 ಕ್ಷೇತ್ರಗಳಿಗೆ ಒಂದು ಹೆಸರು ಅಂತಿಮಗೊಳಿಸಿದ್ದು, ಶೀಘ್ರದಲ್ಲಿ ಮೊದಲ ಪಟ್ಟಿ ಪ್ರಕಟಗೊಳ್ಳುವ ಸಾಧ್ಯತೆಯಿದೆ.

ಮಂಗಳವಾರ ರಾತ್ರಿ ಸುಮಾರು ಮೂರು ತಾಸು ನಡೆದ ಸಭೆಯಲ್ಲಿ ಸ್ಕ್ರೀನಿಂಗ್ ಸಮಿತಿ ಅಧ್ಯಕ್ಷ ಮೋಹನ್ ಪ್ರಕಾಶ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಎಂ.ಬಿ. ಪಾಟೀಲ ಸೇರಿದಂತೆ ಪ್ರಮುಖ ನಾಯಕರು ಭಾಗವಹಿಸಿದ್ದರು. ಈ ಸಭೆಯಲ್ಲಿ ಸಂಭಾವನೀಯ ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಿ ಕೇಂದ್ರ ಚುನಾವಣಾ ಸಮಿತಿಗೆ ಸಲ್ಲಿಸಲು ಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಒಟ್ಟು 68 ಹಾಲಿ ಶಾಸಕರ ಪೈಕಿ ಐದು ಬಾರಿ ಕಡಿಮೆ ಅಂತರದಲ್ಲಿ ಸೋತಿರುವವರಿಗೆ ಟಿಕೆಟ್ ಖಚಿತವಾಗಿದ್ದು, ಅವರ ಹೆಸರು ಅಂತಿಮ ಪಟ್ಟಿಯಲ್ಲಿದೆ. ಉಳಿದಂತೆ, ಸ್ವಲ್ಪ ಗೊಂದಲ ಇರುವ 30ರಿಂದ 40 ಕ್ಷೇತ್ರಗಳಿಗೆ ಇಬ್ಬರ ಹೆಸರುಗಳನ್ನು ಶಿಫಾರಸು ಮಾಡಲಾಗಿದೆ. ಇನ್ನೂ 40ರಿಂದ 50 ಕ್ಷೇತ್ರಗಳಲ್ಲಿ ಪೈಪೋಟಿ ಹೆಚ್ಚಿದ್ದು, 3–4 ಹೆಸರುಗಳಿವೆ ಎಂದೂ ಗೊತ್ತಾಗಿದೆ. 'ಸ್ಕ್ರೀನಿಂಗ್ ಕಮಿಟಿಯಲ್ಲಿ ವ್ಯಕ್ತವಾಗಿರುವ ಅಭಿಪ್ರಾಯ ಆಧರಿಸಿ ಸಮಾಲೋಚನೆ ನಡೆಸಿದ ನಾಯಕರು ಅಭ್ಯರ್ಥಿಗಳ ಹೆಸರು ಅಂತಿಮಗೊಳಿಸಿದ್ದಾರೆ. ಗೊಂದಲಕ್ಕೆ ಯಾವುದೇ ಅವಕಾಶ ಇಲ್ಲದಂತೆ ಯಾವ ರೀತಿಯ ಹೆಜ್ಜೆ ಇಡಬೇಕು ಮತ್ತು ಚುನಾವಣಾ ರಣತಂತ್ರ ಸೇರಿದಂತೆ ಹಲವು ವಿಚಾರಗಳ ಬಗ್ಗೆಯೂ ಮಹತ್ವದ ಚರ್ಚೆ ಸಭೆಯಲ್ಲಿ ನಡೆದಿದೆ' ಎಂದು ಮೂಲಗಳು ತಿಳಿಸಿವೆ.

'ವೀರಶೈವ ಲಿಂಗಾಯತರಿಗೆ ಹೆಚ್ಚಿನ ಅವಕಾಶ ನೀಡಲು ಮನವಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನ ಸಭೆ ಚುನಾವಣೆಯಲ್ಲಿ ವೀರಶೈವ ಲಿಂಗಾಯತ ಸಮಾಜದ ಅಭ್ಯರ್ಥಿಗಳಿಗೆ ಹೆಚ್ಚಿನ ಅವಕಾಶ ನೀಡಬೇಕು ಎಂದು ಕಾಂಗ್ರೆಸ್‌ನಲ್ಲಿರುವ ವೀರಶೈವ ಲಿಂಗಾಯತ ನಾಯಕರು ಪಕ್ಷದ ಸ್ಕ್ರೀನಿಂಗ್ ಸಮಿತಿ ಅಧ್ಯಕ್ಷ ಮೋಹನ್ ಪ್ರಕಾಶ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಕೆಪಿಸಿಸಿ ಮಾಜಿ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ, ಶಾಸಕ ಶಾಮನೂರು ಶಿವಶಂಕರಪ್ಪ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ಮಾಜಿ ಶಾಸಕರಾದ ವಿಜಯಾನಂದ ಕಾಶಪ್ಪನವರ ಮತ್ತು ವಿನಯ ಕುಲ ಕರ್ಣಿ ಮನವಿಗೆ ಸಹಿ ಹಾಕಿದ್ದಾರೆ.

'ಇದೇ 13ರಂದು ನಡೆದ ಸಮಾಜದ ಸಭೆಯನ್ನು ಪತ್ರದಲ್ಲಿ ಉಲ್ಲೇಖಿಸಿರುವ ಅವರು, 'ಚಾಮ ರಾಜನಗರ, ಮೈಸೂರು, ಮಂಡ್ಯ, ಹಾಸನ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಜಿಲ್ಲೆಗಳ ವಿಧಾನಸಭಾ ಕ್ಷೇತ್ರಗಳಲ್ಲಿ ಸುಮಾರು 30 ಸಾವಿರದಿಂದ 40 ಸಾವಿರ ವೀರಶೈವ ಲಿಂಗಾಯತ ಮತದಾರರಿದ್ದು, ಈ ಮತಗಳೆ ನಿರ್ಣಾಯಕ. ಈ ಹಿಂದೆ 15ರಿಂದ 20 ಶಾಸಕರು ಈ ಜಿಲ್ಲೆಗಳಿಂದ ಕಾಂಗ್ರೆಸ್‌ನಿಂದ ಆಯ್ಕೆ ಯಾಗುತ್ತಿದ್ದರು. ಆದರೆ, ಇತ್ತೀಚೆಗೆ ಅವಕಾಶ ಸಿಗದೇ ಕೆಲವೇ ಶಾಸಕರು ಆರಿಸಿ ಬರುತ್ತಿದ್ದಾರೆ' ಎಂದಿದ್ದಾರೆ.

'ಸಾವರ್ಕರ್, ಅಂಬೇಡ್ಕರ್ ಸಿದ್ಧಾಂತದ ನಡುವೆ ಚುನಾವಣೆ'

ಶಿರಸಿ: 'ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆ ಸಾವರ್ಕರ್ ಹಾಗೂ ಅಂಬೇಡ್ಕರ್ ಸಿದ್ಧಾಂತಗಳ ನಡುವೆ ನಡೆಯಲಿದೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಹೇಳಿದರು.

ನಗರದಲ್ಲಿ ಬುಧವಾರ ಮಾಧ್ಯಮದವರ ಜತೆ ಮಾತನಾಡಿದ ಅವರು, 'ಸಾವರ್ಕರ್ ಮತ್ತು ಅಪ್ಪು ಸಿದ್ಧಾಂತದ ನಡುವೆ ಚುನಾವಣೆ ನಡೆಯಲಿದೆ' ಎಂಬ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಇತ್ತೀಚಿನ ಹೇಳಿಕೆಗೆ ತಿರುಗೇಟು ನೀಡಿದರು.

'ಅಪ್ಪು ಬಿಜೆಪಿಗರಂತೆ ಹೇಡಿಯಲ್ಲ, ಅವನೊಬ್ಬ ಸ್ವಾತಂತ್ರ್ಯ ವೀರ. ಬಿಜೆಪಿಯವರು ಸುಮ್ಮನೆ ಅಂಬೇಡ್ಕರ್ ಎನ್ನುತ್ತಾರೆ, ಆದರೆ ಮಾಡುವ ಕೆಲಸ ಸಾವರ್ಕರ್ ಅವರದ್ದು. ಗಾಂಧೀಜಿ ಕಂಡ ರಾಮರಾಜ್ಯದ ಬದಲು ಬೇರೆಯದೇ ಆದ ಆಶಯ ಬಿಜೆಪಿ ಸರ್ಕಾರದಿಂದ ನಡೆಯುತ್ತಿದೆ. ಗೋಡ್ಸೆ ಸಂತತಿಯ ಬಿಜೆಪಿಯನ್ನು ಸೋಲಿಸುವುದೇ ನಮ್ಮ ಗುರಿ' ಎಂದರು.

'ಆರ್‌ಎಸ್‌ಎಸ್, ಹಿಂದೂ ಮಹಾಸಭಾದವರು ಗಾಂಧಿಯನ್ನು ಕೊಲ್ಲುವ ಮೂಲಕ ದೇಶದಲ್ಲಿ ಮೊಟ್ಟ ಮೊದಲು ಭಯೋತ್ಪಾದನೆಗೆ ಹುಟ್ಟು ಹಾಕಿದ್ದರು' ಎಂದು ಆರೋಪಿಸಿದರು.

'ಕೋವಿಡ್, ಪ್ರವಾಹದ ಕಾಲದಲ್ಲಿ ರಾಜ್ಯಕ್ಕೆ ಬಾರದ ಪ್ರಧಾನಿ ಮೋದಿ, ಅಮಿತ್ ಶಾ ಈಗ ರಾಜ್ಯ ಪ್ರವಾಸ ಪದೇ ಪದೇ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.

ಸಿದ್ದರಾಮಯ್ಯ ವಿರುದ್ಧ ಬಿಜೆಪಿ ನಾಯಕರ ವಾಗ್ದಾಳಿ

ಟಿಪ್ಪು: ಬಿಜೆಪಿ– ಕಾಂಗ್ರೆಸ್ ವಾಕ್ ಸಮರ

ಬಿಜೆಪಿ, ಕಾಂಗ್ರೆಸ್ ನಾಯಕರ ನಡುವೆ ವಾಕ್‌ಸಮರ ಜೋರಾಗಿದೆ. 'ಟಿಪ್ಪುವನ್ನು ಪ್ರೀತಿಸುವವರು ಉಳಿಯಬಾರದು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದರೆ, 'ಟಿಪ್ಪುವನ್ನು ಮೇಲಕ್ಕೆ ಕಳುಹಿಸಿದಂತೆ ಸಿದ್ದರಾಮಯ್ಯ ಅವರನ್ನೂ ಕಳುಹಿಸಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದ್ದಾರೆ. 'ನನ್ನನ್ನು ಟಿಪ್ಪುವಿನಂತೆ ಹೊಡೆಯಲು ಬಿಡುತ್ತೀರಾ' ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಜನರನ್ನು ಪ್ರಶ್ನಿಸಿದ್ದಾರೆ.

'ಟಿಪ್ಪು ಪ್ರೀತಿಸುವವರು ಉಳಿಯಬಾರದು'

ಕೊಪ್ಪಳ: 'ಆಂಜನೇಯನ ಪುಣ್ಯಭೂಮಿಯಲ್ಲಿ ನಿಂತು ಹೇಳುವೆ. ಟಿಪ್ಪುವನ್ನು ಪ್ರೀತಿಸುವವರು ಈ ನೆಲದಲ್ಲಿ ಉಳಿಯಬಾರದು. ಹನುಮನ ಭಜನೆ ಮಾಡುವವರು ಇರಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.


ನಳೀನ್ ಕುಮಾರ್ ಕಟೀಲ್

ಜಿಲ್ಲೆಯ ಕುಕನೂರಿನಲ್ಲಿ ಮಂಗಳವಾರ ನಡೆದ ಪೇಜ್ ಪ್ರಮುಖರ ವಿಜಯ ಸಂಕಲ್ಪ ಯಾತ್ರೆಯ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ನಾವು ಆಂಜನೇಯನ ಭಕ್ತರು. ಟಿಪ್ಪು ಸಂತಾನದವರಲ್ಲ. ನೀವೆಲ್ಲ ಆಂಜನೇಯನ ಪೂಜೆ ಮಾಡುತ್ತೀರಾ? ಟಿಪ್ಪುವಿನ ಭಜನೆ ಮಾಡುತ್ತೀರಾ?' ಎಂದು ಪ್ರಶ್ನಿಸಿದರು.

'ಟಿಪ್ಪುವಿನ ಭಜನೆ ಮಾಡುವವರನ್ನು ಕಾಡಿಗೆ ಓಡಿಸುತ್ತಿರೊ ಇಲ್ಲವೊ? ರಾಜ್ಯಕ್ಕೆ ಹನುಮನ ಭಕ್ತರು ಬೇಕಾ? ಟಿಪ್ಪು ಸಂತಾನ ಬೇಕಾ? ರಾಮನ ಭಕ್ತರು ಬೇಕಾ? ಎನ್ನುವುದನ್ನು ನೀವೇ ನಿರ್ಧಾರ ಮಾಡಿ. ಟಿಪ್ಪುವಿನ ಪ್ರೀತಿ ಮಾಡುವವರು ಈ ನೆಲದಲ್ಲಿ ಉಳಿಯಬಾರದು' ಎಂದರು.

'ಸಿದ್ದರಾಮಯ್ಯ ಅವರನ್ನೂ ಹೊಡೆದು ಹಾಕಬೇಕು'

ಮಂಡ್ಯ: 'ಟಿಪ್ಪು ಎಂದೊಡನೆ ಸಿದ್ದರಾಮಯ್ಯ ಬಂದುಬಿಡುತ್ತಾರೆ. ಉರಿಗೌಡ, ನಂಜೇಗೌಡ ಟಿಪ್ಪುವನ್ನು ಮೇಲಕ್ಕೆ ಕಳುಹಿಸಿದಂತೆ ಇವರನ್ನೂ ಕಳುಹಿಸಬೇಕು, ಹೊಡೆದು ಹಾಕಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ-ನಾರಾಯಣ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.


ಡಾ.ಸಿ.ಎನ್. ಅಶ್ವತ್ಥ ನಾರಾಯಣ

ಸಾತನೂರು ಗ್ರಾಮದ ಹೊರವಲಯದ ಕಂಬ-ದನರಸಿಂಹಸ್ವಾಮಿ ದೇವಾಲಯದ ಆವರಣದಲ್ಲಿ ಮಂಗಳವಾರ ನಡೆದ ಬಿಜೆಪಿ ಮಹಾಶಕ್ತಿ ಕೇಂದ್ರದ ಸಭೆಯಲ್ಲಿ ಸಚಿವರು ಮಾತನಾಡಿದ್ದಾರೆ.

ಸಿದ್ದರಾಮಯ್ಯ ಅವರನ್ನು ಟಿಪ್ಪುವಿಗೆ ಹೋಲಿಸಿದ ಸಚಿವರು, 'ಉರಿಗೌಡ, ನಂಜೇಗೌಡ ಟಿಪ್ಪುವನ್ನು ಏನು ಮಾಡಿದರು' ಎಂದು ಪ್ರಶ್ನಿಸುವುದು, ಅದಕ್ಕೆ ಕಾರ್ಯಕರ್ತರು, 'ಮೇಲಕ್ಕೆ ಕಳುಹಿಸಿದರು, ಹೊಡೆದು ಹಾಕಿದರು' ಎಂದು ಉತ್ತರಿಸುವುದು ವಿಡಿಯೊದಲ್ಲಿದೆ. 'ಅದೇ ರೀತಿ ಇವರನ್ನೂ ಹೊಡೆದು ಹಾಕಬೇಕು, ಮೇಲಕ್ಕೆ ಕಳುಹಿಸಬೇಕು' ಎಂದು ಹೇಳಿದ್ದಾರೆ.

'ನನ್ನನ್ನು ಹೊಡೆಯಲು ಬಿಡುತ್ತೀರಾ'

ಬಾಗಲಕೋಟೆ: 'ನಾನು ಮನುಷ್ಯತ್ವ ಇರುವವನು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬುದ್ಧ ಸೇರಿದಂತೆ ಎಲ್ಲ ಧರ್ಮದವರ-ನ್ನೂ ಪ್ರೀತಿಸುತ್ತೇನೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.


ಸಿದ್ದರಾಮಯ್ಯ

ಜಿಲ್ಲೆಯ ಕಲಾದಗಿಯಲ್ಲಿ ಬುಧವಾರ ನಡೆದ 'ಪ್ರಜಾಧ್ವನಿ' ಯಾತ್ರೆಯ ಸಮಾವೇಶದ ಅಂತ್ಯದಲ್ಲಿ ಭಾವುಕರಾಗಿ ಮಾತನಾಡಿದ ಅವರು, 'ಮಂಡ್ಯದಲ್ಲಿ ಸಚಿವ ಅಶ್ವತ್ಥ ನಾರಾಯಣ, ಸಿದ್ದರಾಮಯ್ಯನನ್ನು ಟಿಪ್ಪು ರೀತಿ ಹೊಡೆದು ಹಾಕಬೇಕು ಎಂದಿದ್ದಾರೆ. ನನ್ನನ್ನು ಹೊಡೆಯಲು ಬಿಡುತ್ತೀರಾ?' ಎಂದು ಜನರನ್ನು ಪ್ರಶ್ನಿಸಿದರು. 'ಇಲ್ಲ' ಎಂಬ ಕೂಗು ಜನರಿಂದ ಮಾರ್ದನಿಸಿತು.

'ಟಿಪ್ಪು ಸುಲ್ತಾನ್, ಸೇವಾಲಾಲ್, ಸಂಗೊಳ್ಳಿ ರಾಯಣ್ಣ, ಚನ್ನಮ್ಮ, ಬಸವಣ್ಣ ಸೇರಿದಂತೆ ಎಲ್ಲರನ್ನೂ ನಾನು ಗೌರವಿಸುತ್ತೇನೆ' ಎಂದು ಹೇಳಿದರು.

ಬಹುಮತಕ್ಕೆ ದೃಢ ಸಂಕಲ್ಪ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಸಮರ ಆರಂಭವಾಗಿದೆ. ಮುಂದಿನ ಮೂರು ತಿಂಗಳು ದಣಿವರಿಯದೇ ಪ್ರತಿ ನಿತ್ಯ 24 ತಾಸುಗಳಷ್ಟು ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಕ್ಷದ ಕಾರ್ಯಕರ್ತರಿಗೆ ಸಲಹೆ ನೀಡಿದರು.

ನಗರದ ಕ್ಯಾಪಿಟಲ್ ಹೋಟೆಲ್‌ನಲ್ಲಿ ಬುಧವಾರ ನಡೆದ ವಿಧಾನಸಭಾ ಕ್ಷೇತ್ರ ಗಳ ಪ್ರಭಾರಿಗಳ ಕಾರ್ಯಾಗಾರ ಉದ್ಘಾಟಿಸಿದ ಅವರು, 'ನಾವು ದೃಢ ಸಂಕಲ್ಪ ಮಾಡಿಕೊಂಡು ಪ್ರಾಮಾಣಿಕತೆ ಮತ್ತು ಶ್ರದ್ಧೆಯಿಂದ ಕಾರ್ಯನಿರ್ವಹಿಸಿ-ದರೆ ಬಹುಮತ ಪಡೆಯಲು ಸಾಧ್ಯವಿದೆ' ಎಂದು ಹೇಳಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನರಿಗೆ ನೀಡಿರುವ ಕಾರ್ಯಕ್ರಮ-ಗಳ ಬಗ್ಗೆ ಮನವರಿಕೆ ಮಾಡಬೇಕು. ರಿಪೋರ್ಟ್ ಕಾರ್ಡ್ ಜನರ ಮುಂದಿಡಬೇಕು. ಪಕ್ಷದ ವಿಜಯರಥದ ಸಾರಥಿಗಳು ನೀವೇ. ಎಲ್ಲರೂ ಸೇರಿ ಪಕ್ಷವನ್ನು ಗೆಲ್ಲಿಸೋಣ' ಎಂದರು.


ಬೆಂಗಳೂರಿನಲ್ಲಿ ಬುಧವಾರ ಬಿಜೆಪಿ ಆಯೋಜಿಸಿದ್ದ ವಿಧಾನಸಭಾ ಕ್ಷೇತ್ರಗಳ ಪ್ರಭಾರಿಗಳ ಕಾರ್ಯಾಗಾರದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಚರ್ಚೆಯಲ್ಲಿ ತೊಡಗಿದ್ದರು. ಬಿ.ಎಸ್. ಯಡಿಯೂರಪ್ಪ, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಹಾಜರಿದ್ದರು.

'ಮಾರ್ಚ್ 1 ರಿಂದ ರಾಜ್ಯದ ನಾಲ್ಕು ದಿಕ್ಕುಗಳಿಂದ ರಥಯಾತ್ರೆ ಆರಂಭಿ-ಸಲಿದ್ದೇವೆ. ಅಲ್ಲದೆ, ವಿಧಾನಸಭಾ ಕ್ಷೇತ್ರಗಳ ಮಟ್ಟದಲ್ಲಿ ಫಲಾನುಭವಿಗಳ ಸಮ್ಮೇಳನ ನಡೆಯಲಿದೆ. ಇದರಲ್ಲಿ ಎಲ್ಲ ಫಲಾನುಭವಿಗಳೂ ಭಾಗವಹಿಸುವಂತೆ ಮಾಡಬೇಕು ಮತ್ತು ಅವರ ಮನವೊಲಿಸಿ ಪಕ್ಷದ ಪರವಾಗಿ ಮತಚಲಾಯಿಸುವಂತೆ ಮಾಡುವುದು ಕಾರ್ಯಕರ್ತರ ಜವಾಬ್ದಾರಿ' ಎಂದು ಬೊಮ್ಮಾಯಿ ಹೇಳಿದರು.

'ಸ್ವಾತಂತ್ರ್ಯ ಬಂದಾಗಿನಿಂದ ಎಲ್ಲ ಸರ್ಕಾರಗಳೂ ಎಸ್‌ಸಿ– ಎಸ್‌ಟಿ ಪಟ್ಟಿಗೆ ಹೊಸ ಜಾತಿಗಳನ್ನು ಸೇರಿಸುವ ಕೆಲಸ ಮಾಡುತ್ತಿದ್ದವೇ ಹೊರತು, ಬೇರೆ ಏನೂ ಮಾಡಿಲ್ಲ. ಆದರೆ, ಮೊದಲ ಬಾರಿಗೆ ನಮ್ಮ ಸರ್ಕಾರವು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಕೆಲಸ ಮಾಡಿದೆ. ಆ ವರ್ಗದಲ್ಲಿ ದೊಡ್ಡ ಮಟ್ಟದಲ್ಲಿ ಆತ್ಮ ವಿಶ್ವಾಸ ಮೂಡಿಸುವ ಕೆಲಸ ಮಾಡಿದ್ದೇವೆ' ಎಂದರು.

ಅಸಮಾಧಾನವಾದರೆ ಶಮನ ಮಾಡಿ: ಚುನಾವಣೆಯಲ್ಲಿ ಸ್ಪರ್ಧಿಸಲು ಸಾಕಷ್ಟು ಪೈಪೋಟಿ ಇರುತ್ತದೆ. ಟಿಕೆಟ್ ಹಂಚಿಕೆಯ ಬಳಿಕ ಸಣ್ಣಪುಟ್ಟ ಅಸಮಾಧಾನ ಆಗುವುದು ಸಹಜ. ಆ ರೀತಿ ಆದರೆ ಅದನ್ನು ಅಲ್ಲೇ ಶಮನಗೊಳಿಸಬೇಕು ಎಂದು ಬಿ.ಎಸ್. ಯಡಿಯೂರಪ್ಪ ಹೇಳಿದರು.

'ಪ್ರತಿಯೊಂದು ಮನೆಯಲ್ಲೂ ಸರ್ಕಾರದ ಕಾರ್ಯಕ್ರಮಗಳ ಫಲಾನುಭವಿಗಳು ಒಬ್ಬರಾದರೂ ಇರುತ್ತಾರೆ. ಅಂಥ ಫಲಾನುಭವಿಗಳನ್ನು ಗುರುತಿಸಿ, ಅವರನ್ನು ತಲುಪುವ ಕೆಲಸ ನಮ್ಮಿಂದ ಆಗಬೇಕು' ಎಂದರು.

'ಜನರ ಒಲವು ಬಿಜೆಪಿ ಕಡೆಗಿದೆ. ಬಿಜೆಪಿ ಮತ್ತೆ ಅಧಿಕಾರ ಪಡೆಯುವುದು ಖಚಿತ. ಮೋದಿ ಅವರ ಶ್ರೇಷ್ಠ ನಾಯಕತ್ವ ನಮ್ಮ ಜೊತೆಗಿದೆ. ಎಂಕ, ನಾಣಿ, ಸೀನರಂತಹವರು ಕಾಂಗ್ರೆಸ್‌ನಲ್ಲಿದ್ದಾರೆ. ಅವರು ಮೋದಿಗೆ ಸಾಟಿಯಾಗುವುದಿಲ್ಲ. ಕಾಂಗ್ರೆಸ್ ಪಕ್ಷಕ್ಕೆ ಭವಿಷ್ಯವಿಲ್ಲ' ಎಂದು ಯಡಿಯೂರಪ್ಪ ಹೇಳಿದರು.

ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನಕಾರ್ಯದರ್ಶಿ ಬಿ.ಎಲ್.ಸಂತೋಷ್ ಇದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆರವರ ಕಛೇರಿ
(ರಾಜರಾಜೇಶ್ವರಿನಗರ ವಲಯ), 340/ಎ, 5ನೇ ಮೈನ್, ಆರ್.ಸಿ.ಹೆಚ್.ಎಸ್. ಲೇಔಟ್, ಅನ್ನಪೂರ್ಣೇಶ್ವರಿ ನಗರ, ನಾಗರಬಾವಿ, ಬೆಂಗಳೂರು–91
ನಂ.: ಬಿಬಿಎಂಪಿ/ಹಿಸನಿತೋ/ರಾರಾನ/ಟೆಂಡರ್/ಪಿಆರ್/216/2022–23 ದಿನಾಂಕ: 15.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ (ರಾಜರಾಜೇಶ್ವರಿನಗರ ವಲಯ), ಬಿಬಿಎಂಪಿ, ಬೆಂಗಳೂರು (ಈ ದಸ್ತಾವೇಜಿನಲ್ಲಿ ಉದ್ಯೋಗದಾತ ಎಂದು ಉಲ್ಲೇಖಿಸಲಾಗಿದೆ), ಇವರು ಉದ್ಯಾನವನಗಳ ನಿರ್ವಹಣೆ ಕಾಮಗಾರಿಗಳನ್ನು ಮಾಡಲು ಕೆಟಿಪಿಪಿ ನಿಯಮ 2000ರಂತೆ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಅರ್ಹ ಮತ್ತು ಅನುಭವಿ ವ್ಯಕ್ತಿ / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಸ್ತಾವೇಜಿನಲ್ಲಿ ಟೆಂಡರ್‌ದಾರರು ಎಂದು ಉಲ್ಲೇಖಿಸಲಾಗಿದೆ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಗಳಲ್ಲಿ)
1	ಜೆಪಿ ಪಾರ್ಕ್, ವಾರ್ಡ್ ನಂ. 17ರಲ್ಲಿ ಜೆಪಿ ಪಾರ್ಕ್ ಲೇಕ್ ಸುತ್ತ ಭೂ ವಿನ್ಯಾಸ ಅಭಿವೃದ್ಧಿ. ವರ್ಗ: ಸಾಮಾನ್ಯ (2ನೇ ಕರೆ)	75.00	1,12,500/–

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: **17.02.2023, ಬೆಳಿಗ್ಗೆ 10:00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **23.02.2023ರ ಸಂಜೆ 4:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಮತ್ತು ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (3) ತಾಂತ್ರಿಕ ಬಿಡ್‌ಗಳನ್ನು ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆರವರ ಕಛೇರಿ (ರಾಜರಾಜೇಶ್ವರಿನಗರ ವಲಯ)ಯಲ್ಲಿ ವೆಬ್‌ಸೈಟ್ **https://eproc.karnataka.gov.in** ಮೂಲಕ ದಿನಾಂಕ: **25.02.2023ರ ಸಂಜೆ 4:30 ಗಂಟೆಗೆ** ತೆರೆಯಲಾಗುವುದು. (4) ಆರ್ಥಿಕ ಬಿಡ್‌ಗಳನ್ನು ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆರವರ ಕಛೇರಿ (ರಾಜರಾಜೇಶ್ವರಿನಗರ ವಲಯ)ಯಲ್ಲಿ ವೆಬ್‌ಸೈಟ್ **https://eproc.karnataka.gov.in** ಮೂಲಕ ದಿನಾಂಕ: **28.02.2023**ರಂದು ತೆರೆಯಲಾಗುವುದು, ಸಾಧ್ಯವಾದಲ್ಲಿ. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಹಿರಿಯ ಸಹಾಯಕ ನಿರ್ದೇಶಕರು, ತೋಟಗಾರಿಕೆ
(ರಾಜರಾಜೇಶ್ವರಿನಗರ ವಲಯ), ಬಿಬಿಎಂಪಿ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್
(Formerly Known as Mysore Minerals Limited)
(A Government of Karnataka Undertaking)
Regd. ಕಚೇರಿ: ಟಿಟಿಎಂಸಿ, 'ಎ' ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027.
ಫ್ಯಾಕ್ಸ್: 080–2221 3172 ದೂರವಾಣಿ: 080–22278813 / 14 / 15 / 16
Website: www.ksmcl.org
No.275/KSMCL/MECH/BKW/TIPPER/2022-23/3160 Date: 15.02.2023

ಇ–ಟೆಂಡರ್ ಆಹ್ವಾನ
ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿರುವ ಭಾಗೇಶಪುರದಲ್ಲಿ ಸಂಸ್ಥೆಯ ನಂದಿಹಳ್ಳಿ ಜೇಡಿ ಮಣ್ಣಿನ ಗಣಿಗೆ 10 ಟನ್ ಟಿಪ್ಪರ್ ಖರೀದಿಸಲು ಇ–ಟೆಂಡರ್ ಆಹ್ವಾನಿಸಲಾಗಿದೆ.

ವೇಳಾಪಟ್ಟಿ

ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	10.03.2023 ಸಂಜೆ 17.00 ಗಂಟೆಯವರೆಗೆ.
ಟೆಂಡರ್ ತೆರೆಯುವ ದಿನಾಂಕ	13.03.2023 ಬೆಳಗ್ಗೆ 11.00 ಗಂಟೆಗೆ.
ಇ.ಎಂ.ಡಿ ಠೇವಣಿ ಮೊತ್ತ	ರೂ.80,000/– (ರೂ. ಎಂಬತ್ತು ಸಾವಿರಗಳು ಮಾತ್ರ)

ಇ-ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಫ್ಲಾಟ್‌ಫಾರ್ಮ್ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ಮಾಹಿತಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆ: **080-4601 0000 /6894 8777.**

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ&ಜಾ).
DIPR/CP/AAPL/RO4710/22-23

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಂಡ್ಯ.
ಸಂಖ್ಯೆ:ಕಾ.ಇಂ:ಗ್ರಾಕುನೀ&ನೈ:ವಿ.ಮಂ:JJMTENDER22–23/2022–23/2807
ದಿನಾಂಕ:13–02–2023.

1. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:07/2022–23 (ದ್ವಿ–ಲಕೋಟೆ ಪದ್ಧತಿ) 3ನೇ ಕರೆ
2. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:11/2022–23 (ದ್ವಿ–ಲಕೋಟೆ ಪದ್ಧತಿ) 3ನೇ ಕರೆ
3. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:12/2022–23 (ದ್ವಿ–ಲಕೋಟೆ ಪದ್ಧತಿ) 3ನೇ ಕರೆ
4. ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ ಸಂಖ್ಯೆ:16/2022–23 (ದ್ವಿ–ಲಕೋಟೆ ಪದ್ಧತಿ) 2ನೇ ಕರೆ

(e-procurement portal)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರಿಂದ ಜೆ.ಜೆ.ಎಂ ಯೋಜನೆಯಡಿ ಮಂಡ್ಯ ಜಿಲ್ಲೆ ಮಂಡ್ಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸುವ (FHTC) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ದರ್ಜೆಯ ಗುತ್ತಿಗೆದಾರರಿಂದ ಐಟಂವಾರು ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ **ರೂ.278.44 ಲಕ್ಷ**ಗಳು. ಪೂರ್ವಭಾವಿ ಸಭೆ **ದಿನಾಂಕ:16.02.2023 ಸಮಯ: ಬೆಳಿಗ್ಗೆ 11:00 ಗಂಟೆಗೆ (ಸ್ಥಳ:ಕಾ.ಇಂ ಕಛೇರಿ, ಗ್ರಾ.ಕು.ನೀ&ನೈ ವಿಭಾಗ, ಮಂಡ್ಯ)**, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:20.02.2023 ಸಂಜೆ: 5:30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:21.02.2023 ಸಂಜೆ:05:35 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ:23.02.2023 ಬೆಳಿಗ್ಗೆ:11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ವೆಬ್‌ಸೈಟ್‌ನಲ್ಲಿ ಅಥವಾ ಕಾ.ಇಂ, ಗ್ರಾ.ಕು.ನೀ & ನೈ ವಿ, ಮಂಡ್ಯರವರ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08232–222363.

ಸಹಿ/–ಕಾರ್ಯಪಾಲಕ ಇಂಜಿನಿಯರರು,
ಗ್ರಾ.ಕು.ನೀ.&ನೈ.ವಿಭಾಗ, ಮಂಡ್ಯ
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/672/2022–23

ಬೆಳಗಾವಿ ಸ್ಮಾರ್ಟ್ ಸಿಟಿ ನಿಯಮಿತ
1ನೇ ಮಹಡಿ, ಬುಡಾಕಚೇರಿ, ಅಶೋಕ ನಗರ, ಬೆಳಗಾವಿ–590006.
ದೂರವಾಣಿ ಸಂ.:0831–2461352
Website: www.belagavismartcity.in , Email: bscltd16@gmail.com
TAN: BLRB14232B PAN: AAGCB9785J CIN: U74999KA2016PLC093099

ಕೋಟೇಶನ್ ಪ್ರಕಟಣೆ
ಕ್ರ.ಸಂ:ಬಿ.ಎಸ್.ಸಿ.ಎಲ್/ಕೋಟೇಶನ್/2022–23/1111 ದಿನಾಂಕ:15–02–2023

ಸ್ಮಾರ್ಟ್‌ಸಿಟಿ ಯೋಜನೆ ವತಿಯಿಂದ ಅನುಷ್ಠಾನಗೊಳಿಸಲಾಗಿರುವ ಕಾಮಗಾರಿಗಳ ಅನುಷ್ಠಾನ ಪೂರ್ವ ಹಾಗೂ ಅನುಷ್ಠಾನ ನಂತರದ ಪೋಟೊ ಒಳಗೊಂಡ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಕಾಮಗಾರಿಗಳ 15 ನಿಮಿಷಗಳ ದೃಶ್ಯ ಚಿತ್ರೀಕರಣ (Photos, Google Images, Video Record etc,) ಮಾಡಲು ಅಂದಾಜು ಪತ್ರಿಕೆ ತಯಾರಿಸಲು ಅರ್ಹ ಸಂಸ್ಥೆ (Agency) ಯವರಿಂದ ಎಲ್ಲಾ ತೆರಿಗಳನ್ನೊಳಗೊಂಡಂತೆ ದರ ಪಟ್ಟಿಯನ್ನು ಅಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅರ್ಹ ಸಂಸ್ಥೆ (Agency) ಯವರು ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ:20.02.2023 ರ ಸಂಜೆ 4.00 ಗಂಟೆಯ ಒಳಗೆ ಖುದ್ದಾಗಿ ದರಪಟ್ಟಿಗಳನ್ನು ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್‌ಸಿಟಿ ನಿಯಮಿತ, ಬೆಳಗಾವಿ ಇವರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಬೆಳಗಾವಿ ಸ್ಮಾರ್ಟ್‌ಸಿಟಿ ಲಿಮಿಟೆಡ್, ಬೆಳಗಾವಿ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

Sl No:01:Particulars:Preparation & Providing 15 min Duration Video including , Photos, Videos & Aerial view by DRON 4K/HD recording of all works as directed by Belagavi Smart City Ltd. ,Rate: -, Amount: -

ಸಹಿ/–ಉಪ ಪ್ರಧಾನ ವ್ಯವಸ್ಥಾಪಕರು (ಪ್ರೋಕ್ಯೂರಮೆಂಟ್)
ಬೆಳಗಾವಿ ಸ್ಮಾರ್ಟ್‌ಸಿಟಿ ಲಿಮಿಟೆಡ್, ಬೆಳಗಾವಿ.
DIPR/BGM/RO-NO-1753/MCA/2022-23

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.1, ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು. ಫೋನ್: 080–22255210, ಫ್ಯಾಕ್ಸ್: 080–22250755 ಇ–ಮೇಲ್: eebld1@yahoo.com
ಐಎಫ್‌ಟಿ ಸಂಖ್ಯೆ: ಇಇ/ಬಿಲ್ಡಿಂಗ್1/ಜೆಇ–3/56/2022–23 ದಿನಾಂಕ: 15–02–2023

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ)
1) ಕಾರ್ಯಪಾಲಕ ಇಂಜಿನಿಯರ್, ನಂ. 1, ಕಟ್ಟಡಗಳ ವಿಭಾಗ, ಬೆಂಗಳೂರು ರವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ಪಟ್ಟಿಯಲ್ಲಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಟೆಂಡರ್‌ದಾರರು ಈ ಕೆಳಗಿನ ಪಟ್ಟಿಯಲ್ಲಿನ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://eproc.karnataka.gov.in)** ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದು. **ಟೆಂಡರುದಾರರು ಗುತ್ತಿಗೆ ನೀಡಿಕೆಗೆ ಅರ್ಹವಾಗಲು ಟೆಂಡರುದಾರರಿಗೆ ಸೂಚನೆಗಳ ಕಲಂ 3 ರಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಅರ್ಹತಾ ಅಗತ್ಯತೆ ಗಮನಿಸಲು ತಿಳಿಸಲಾಗಿದೆ. (ನಿಗದಿತ ಟೆಂಡರ್ ದಸ್ತಾವೇಜು – ಕೆಡಬ್ಲ್ಯೂ–3).** 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ದಿನಾಂಕ: **22–02–2023 ರವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದು. 3) ಈ ಕೆಳಗಿನ ಪಟ್ಟಿಯಲ್ಲಿ ಸೂಚಿಸಿರುವ ಕಾಮಗಾರಿಗೆ ಇ.ಎಂ.ಡಿ ಮೊತ್ತದೊಂದಿಗೆ ಟೆಂಡರ್‌ಗಳನ್ನು ಸಲ್ಲಿಸಬೇಕು. ಟೆಂಡರ್ ದಸ್ತಾವೇಜಿನಲ್ಲಿ ಸೂಚಿಸಿರುವ ಯಾವುದಾದರೂ ಒಂದು ವಿಧದಲ್ಲಿ ಇ.ಎಂ.ಡಿ ಮೊತ್ತವನ್ನು ಪಾವತಿಸಬಹುದು ಮತ್ತು ಟೆಂಡರ್ ಸಿಂಧುತ್ವದಿಂದ ಮುಂದಿನ **45 ದಿನಗಳವರೆಗೆ** ಇ.ಎಂ.ಡಿ ಮೊತ್ತದ ಪಾವತಿಗೆ ಸಿಂಧುತ್ವವು ಇರಬೇಕು. 4) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **22–02–2023ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ** ಸಲ್ಲಿಸಬಹುದು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮಾರ್ಗಸೂಚಿಯನ್ವಯ ಟೆಂಡರ್‌ಗಳನ್ನು ತೆರೆಯಲಾಗುವುದು. 5) ಇತರೆ ವಿವರಗಳನ್ನು ಟೆಂಡರ್ ದಸ್ತಾವೇಜುಗಳಲ್ಲಿ ವೀಕ್ಷಿಸಬಹುದು.

ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೌಲ್ಯ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)
ಅಂಬೇಡ್ಕರ್ ಭವನ, ವಸಂತನಗರ, ಬೆಂಗಳೂರು ಇಲ್ಲಿನ ನೆಲ ಮಹಡಿಯಲ್ಲಿರುವ ಸಮ್ಮೇಳನಾ ಸಭಾಂಗಣಕ್ಕೆ ಇಂಟೀರಿಯರ್ ಮತ್ತು ಸಜ್ಜುಕೆಗಳನ್ನು ಒದಗಿಸುವುದು. ಕೆಪಿಡಬ್ಲ್ಯೂಡಿ/2022–23/ಬಿಡಿ/ವರ್ಕ್_ಇಂಡೆಂಟ್164668	76.59	1,53,200/-

ದಸ್ತಾವೇಜು ಬೆಲೆ (ರೂ. ಗಳಲ್ಲಿ): ಇ–ಪೋರ್ಟಲ್‌ನಲ್ಲಿ ಇರುವಂತೆ
ಪೂರ್ಣಗೊಳಿಸುವ ಕಾಲಾವಧಿ: 4 ತಿಂಗಳು (ಮಳೆಗಾಲ ಸೇರಿದಂತೆ)
ಕರೆ ಸಂಖ್ಯೆ: 1ನೇ ಕರೆ

ಸಹಿ/– ಕಾರ್ಯಪಾಲಕ ಇಂಜಿನಿಯರ್
ನಂ.1, ಕಟ್ಟಡಗಳ ವಿಭಾಗ, ಬೆಂಗಳೂರು.
ವಾಸಾಸಂಇ/ವಾ.ಪ್ರ/4725/ಅಡ್ವರ್ಟೋ/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2022–23/3146 ದಿನಾಂಕ:15.02.2023

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1)** "Improvements and Developments of Aycut Road coming under command area of Herkal (south) LIS and Herkal (south) Extension LIS, under UKP Stage-III in Bilagi Constituency Badami Taluk, Bagalkot District. [1)Yandigeri to Kalabandakeri, 2)Anawal to Kalabandakeri,3) Sulikeri to Kagalagomb-Gaddanakeri, 4) Narenur L.T-2 to Kerur Main Road, 5) Havalakoda-High Way-Hosakoti and 6) Mohanapur to Yaragoppa. - **Indent No. 23237 Rs. 1837.86 Lakhs** ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು E-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ **1.1** ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ **ಕೊನೆಯ ದಿನಾಂಕ: 16.02.2023 ರಿಂದ 28.02.2023 ಸಾಯಂಕಾಲ 5.00 ಘಂಟೆಯವರೆಗೆ** 2) ಪೂರ್ವಭಾವಿ ಸಭೆ (ಪ್ರೀಬಿಡ್ ಮೀಡಿಂಗ್) (1) **ದಿನಾಂಕ: 22.02.2023 ಮುಂಜಾನೆ 11.00 ಘಂಟೆ. ಮುಖ್ಯ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಲಯ, ಆಲಮಟ್ಟಿ ಕಚೇರಿಯಲ್ಲಿ.** 3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 02.03.2023 ಮುಂಜಾನೆ 11.00 ಘಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 07.03.2023 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnata.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/873/ಕೆಎಸ್‌ಎಂಸಿಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಬಸವನಗುಡಿ ವಿಭಾಗ, ಬಿಎಸ್‌ಕೆ 3ನೇ ಹಂತ, ಚನ್ನಮ್ಮನಕೆರೆ, ವಿದ್ಯಾಪೀಠ, ಬೆಂಗಳೂರು.
ಸಂಖ್ಯೆ: ಕಾಅ(ಬಗು)/ಇ-ಪ್ರೋ/22/2022-23 ದಿನಾಂಕ: 15-02-2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ) (ಐಎಫ್‌ಟಿ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) 2ನೇ ಕರೆ
ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ, ಬೃಬೆಂಮಪಾ ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಪ್ಯಾಕೇಜ್ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1)	ವಾರ್ಡ್ ನಂ.212ರ ಶ್ರೀನಿವಾಸನಗರದಲ್ಲಿನ ಒಳಚರಂಡಿಗಳ ಸುಧಾರಣೆಗಳು ಮತ್ತು ನಿರ್ವಹಣೆ.	51.00	1,02,000/–
2)	ವಾರ್ಡ್ ನಂ.210ರ ಬಸವನಗುಡಿಯಲ್ಲಿರುವ ಬಿಬಿಎಂಪಿ ಕಟ್ಟಡಗಳು ಮತ್ತು ಟೈಲರಿಂಗ್ ಹಾಲ್, ಇಂದಿರಾ ಕ್ಯಾಂಟೀನ್ ಮಾರ್ಗ ಮತ್ತು ಶೌಚಾಲಯಗಳ ದುರಸ್ತಿ ಮತ್ತು ಸುಧಾರಣೆ.	51.00	1,02,000/–
3)	ವಾರ್ಡ್ ನಂ.213ರ ಶ್ರೀನಗರದಲ್ಲಿ ಹಾಲಿ ಇರುವ ನಾಮಫಲಕಗಳಿಗೆ ಸ್ಟಿಕ್ಕರಿಂಗ್ ಮತ್ತು ನಾಮಫಲಕಗಳನ್ನು ಒದಗಿಸುವುದು ಗ್ಯಾಂಗ್‌ಮ್ಯಾನ್‌ಗಳನ್ನು ಸಂಗ್ರಹಿಸಿ ತೊಡಗಿಸಿ ಕೊಳ್ಳುವುದು.	51.00	1,02,000/–
4)	ವಾರ್ಡ್ ನಂ.216ರ ವಿದ್ಯಾಪೀಠದಲ್ಲಿ ಸಿಸಿ ರಸ್ತೆಗಳ ನಿರ್ವಹಣೆ ಮತ್ತು ಹೊಸ ಬೀದಿ ನಾಮಫಲಕಗಳನ್ನು ಒದಗಿಸುವುದು ಮತ್ತು ಹಾಲಿ ಇರುವ ನಾಮಫಲಕಗಳಿಗೆ ಸ್ಟಿಕ್ಕರಿಂಗ್ ಮಾಡುವುದು.	51.00	1,02,000/–

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 20–02–2023 ರಿಂದ ಡೌನ್‌ಲೋಡ್ ಮಾಡಬಹುದು. 2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 01–03–2023 ರಂದು ಸಂಜೆ 4:00 ಗಂಟೆಯವರೆಗೆ. 3) ಪೂರ್ವ-ಬಿಡ್ ಸಭೆಯು ಮುಖ್ಯ ಅಭಿಯಂತರರು–ದಕ್ಷಿಣ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560 011 ಇಲ್ಲಿ ದಿನಾಂಕ: 22–02–2023 ಸಂಜೆ 4:00 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ದಾಖಲೆಯನ್ನು ತೆರೆಯುವ ದಿನಾಂಕ: 03–03–2023ರ ಸಂಜೆ 4:00 ಗಂಟೆಗೆ. 5) ಆರ್ಥಿಕ ದಾಖಲೆಯನ್ನು ತೆರೆಯುವ ದಿನಾಂಕ: 06–03–2023ರ ಸಂಜೆ 4:00 ಗಂಟೆಗೆ. 6) ತಿದ್ದುಪಡಿ/ಅನುಸೂಚಿ/ಯಾವುದೇ ಇತರ ಸ್ಪಷ್ಟೀಕರಣವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ. 7. ಈ ಟೆಂಡರ್ ಸೂಚನೆಯನ್ನು ಬಿ.ಬಿ.ಎಂ.ಪಿ ವೆಬ್‌ಸೈಟ್‌ನಲ್ಲಿಯೂ ನೋಡಬಹುದು: **www.bbmp.gov.in.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ನಲ್ಲಿ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ವಿಭಾಗ, ಬೃಬೆಂಮಪಾ.

ಮೈಸೂರು ಸಕ್ಕರೆ ಕಂಪನಿ ನಿಯಮಿತ, ಮಂಡ್ಯ.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಕ್ಕರೆ ನಗರ, ಮಂಡ್ಯ 571 402.
ಎಂಸಿ/ಸಕ್ಕರೆ/ 19/2022–23, ದಿನಾಂಕ:15–02–2023

ಅಲ್ಪಾವಧಿ ಟೆಂಡರ್ ಪ್ರಕಟಣೆ
ಮೈಸೂರು ಸಕ್ಕರೆ ಕಂಪನಿಯ, ನಿಯಮಿತ, ಮಂಡ್ಯ ಇಲ್ಲಿ ಉತ್ಪಾದನೆಯಾದ ಸಕ್ಕರೆಯನ್ನು ಮಾರಾಟ ಮಾಡಲು ಅಲ್ಪಾವಧಿ ಟೆಂಡರ್ ಪ್ರಕಟಣೆಯ ಮುಖಾಂತರ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರಿನ ಮುಂಗಡ ಹಣ ಹಾಗೂ ಇನ್ನಿತರ ನಿಬಂಧನೆಗಳನ್ನು ಈ ಕೆಳಕಂಡಂತೆ ಇರುತ್ತದೆ.

ಐಟಮ್ ನಂ	ಸಾಮಾಗ್ರಿ ವಿವರ	ಮಾರಾಟದ ಪ್ರಮಾಣ	ಮುಂಗಡ ಹಣ ಪ್ರತಿ ಕ್ವಿಂಟಾಲಿಗೆ
01	ಎಸ್–30 ವೈಟ್ ಕ್ರಿಸ್ಟಲ್ ಷುಗರ್	2900 ಕ್ವಿಂಟಾಲ್	ರೂ. 100/– ಪ್ರತಿ ಕ್ವಿಂಟಾಲ್‌ಗೆ

ಸೂಚನೆ: (1) ಮೇಲೆ ನಮೂದಿಸಿರುವ ಎಸ್–30 ವೈಟ್ ಕ್ರಿಸ್ಟಲ್ ಸಕ್ಕರೆಯು ಈ ಸಾಲಿನಲ್ಲಿ (2022–23 ಸಾಲು) ಉತ್ಪಾದನೆ ಮಾಡಲಾಗಿದ್ದು, ಆದರೆ ಸದರಿ ಸಕ್ಕರೆಯನ್ನು 50 ಕೆ.ಜಿ ಪಿ.ಪಿ ವೈಟ್ ಬ್ಯಾಗ್‌ಗೆ ಭರ್ತಿ ಮಾಡುವ ವೇಳೆ ಈ ಹಿಂದಿನ 2018–19 ಸಾಲಿನ ಬ್ಯಾಗ್‌ಗಳಿಗೆ ಭರ್ತಿ ಮಾಡಲಾಗಿರುತ್ತದೆ. ಈ ರೀತಿಯಾಗಿ 2022–23ನೇ ಸಾಲಿನ ಸಕ್ಕರೆಯನ್ನು 2018–19 ನೇ ಸಾಲಿನ ಬ್ಯಾಗ್‌ಗಳಿಗೆ ಭರ್ತಿ ಮಾಡಿದ್ದು, ಸದರಿ ಬ್ಯಾಗ್‌ಗಳ ಮೇಲೆ 2022–23ನೇ ಸಾಲು ಎಂದು ನಮೂದು ಮಾಡಲಾಗಿರುತ್ತದೆ. ಈ ಸಂಬಂಧ ಬಿಡ್‌ದಾರರು ಮೈಸೂರು ಸಕ್ಕರೆ ಕಂಪನಿ, ಮಂಡ್ಯದ ಗೋದಾಮುಗಳಿಗೆ/ ಕಾರ್ಖಾನೆಗೆ ಭೇಟಿ ನೀಡಿ, ಸಕ್ಕರೆಯ ಗುಣಮಟ್ಟವನ್ನು ಪರಿಶೀಲಿಸಿಕೊಂಡು ನಂತರ ದರವನ್ನು ನಮೂದಿಸುವುದು. (2) ಬಿಡ್‌ದಾರರು ಮುಂಗಡ ಹಣವನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಮೈಸೂರು ಸಕ್ಕರೆ ಕಂಪನಿ, ಮಂಡ್ಯ ಪರವಾಗಿ ಡಿಡಿ ರೂಪದಲ್ಲಿ ಮಾತ್ರ ಪಾವತಿಸುವುದು. (3) ಬಿಡ್‌ದಾರರು 500.00 ಕ್ವಿಂಟಾಲ್ ಗಿಂತ ಹೆಚ್ಚಿನ ಪ್ರಮಾಣಕ್ಕೆ ದರ ನಮೂದಿಸುವುದು (5) ಇಎಂಡಿಯೊಂದಿಗೆ ಸರಿಯಾಗಿ ತುಂಬಿದ ಟೆಂಡರ್ ಅರ್ಜಿಗಳನ್ನು ಎರಡು ಮುಚ್ಚಿದ ಲಕ್ಕೋಟೆಯಲ್ಲಿ (ಒಂದರಲ್ಲಿ ಇ.ಎಂ.ಡಿ ಮತ್ತು ಎರಡನೇ ಲಕ್ಕೋಟೆಯಲ್ಲಿ ವಾಣಿಜ್ಯ ಬಿಡ್) ಕೊನೆಯ ದಿನಾಂಕ:21–02–2023 ರ ಮಧ್ಯಾಹ್ನ 2.30 ಗಂಟೆಯೊಳಗೆ ಮೈಷುಗರ್ ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕರ ಕಛೇರಿ ಇಲ್ಲಿಗೆ ಸಲ್ಲಿಸುವುದು ಹಾಗೂ ಅದೇ ದಿನ ಮಧ್ಯಾಹ್ನ 3.00 ಗಂಟೆಗೆ ಟೆಂಡರನ್ನು ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಮೈಸೂರು ಸಕ್ಕರೆ ಕಂಪನಿ, ಷುಗರ್ ಟೌನ್, ಮಂಡ್ಯ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ವಾಣಿಜ್ಯ ನಿರ್ವಾಹಕರ ಮೊಬೈಲ್ ಸಂಖ್ಯೆ:9481736999 ಗೆ ಸಂಪರ್ಕಿಸುವುದು. ಟೆಂಡರ್ ಅನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.

ಸೂಚನೆ:– ಸಕ್ಕರೆಯನ್ನು ಮಾರಾಟ ಮಾಡುವ ಪ್ರಮಾಣವು ಕಾರ್ಖಾನೆಯಲ್ಲಿ ಲಭ್ಯವಿರುವ ಭೌತಿಕ ಪ್ರಮಾಣದ ಮೇಲೆ ಅವಲಂಭಿಸಿರುತ್ತದೆ.

ಸಹಿ/–ಪ್ರಧಾನ ವ್ಯವಸ್ಥಾಪಕರು ಸಹಿ/–ವ್ಯವಸ್ಥಾಪಕ ನಿರ್ದೇಶಕರು.
ದಿನಾಂಕ: 15–02–2023.
ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/682/2022–23

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಉನ್ನತ ವ್ಯಕ್ತಿತ್ವವುಳ್ಳವರು ತಮ್ಮ ಬಗ್ಗೆ ತಾವು ಕಠಿಣವಾಗಿ ಇರುತ್ತಾರೆ, ಅದೇ ಸಂಕುಚಿತ ಮನೋಭಾವದ ವ್ಯಕ್ತಿಗಳು ಇತರರೊಂದಿಗೆ ಕಠಿಣವಾಗಿ ವರ್ತಿಸುತ್ತಾರೆ.

–ಕನ್‌ಫ್ಯೂಷಿಯಸ್

ಕೇಂದ್ರದಿಂದ ರಾಜ್ಯಪಾಲರ ನೇಮಕ ಸೂಕ್ತವಲ್ಲದ ನಡೆ, ತಪ್ಪು ಸಂದೇಶ

ರಾಜ್ಯಪಾಲರ ಬದಲಾವಣೆ ಹಾಗೂ ಹೊಸ ನೇಮಕಗಳ ವಿಚಾರದಲ್ಲಿ ಕೇಂದ್ರ ಸರ್ಕಾರ ಈಚೆಗೆ ಇರಿಸಿರುವ ಹೆಜ್ಜೆಯು ಬಹಳ ಮಹತ್ವದ್ದು. ಇದು ಮಹತ್ವ ಪಡೆದಿರುವುದಕ್ಕೆ ನೇಮಕಗೊಂಡ ರಾಜ್ಯಪಾಲರ ಸಂಖ್ಯೆ ಕಾರಣವಲ್ಲ. ಬದಲಿಗೆ, ಹೊಸದಾಗಿ ರಾಜ್ಯಪಾಲರಾಗಿ ನೇಮಕ ಆದವರಲ್ಲಿ ಯಾರೆಲ್ಲ ಇದ್ದಾರೆ ಎಂಬ ಕಾರಣಕ್ಕಾಗಿ ಇದು ಮಹತ್ವ ಪಡೆದಿದೆ. ಒಬ್ಬ ರಾಜ್ಯಪಾಲರು ರಾಜೀನಾಮೆ ನೀಡಿದರು. ಕೆಲವು ರಾಜ್ಯಪಾಲರನ್ನು ವರ್ಗಾವಣೆ ಮಾಡಲಾಯಿತು. ಇನ್ನು ಕೆಲವರನ್ನು ಹೊಸದಾಗಿ ನೇಮಕ ಮಾಡಲಾಯಿತು. ಕೇಂದ್ರಾಡಳಿತ ಪ್ರದೇಶ ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ರಾಧಾಕೃಷ್ಣ ಮಾಥುರ್ ಅವರನ್ನು ಕೈಬಿಡಲಾಯಿತು. ಅವರ ಕೆಲವು ಕ್ರಮಗಳು ಹಾಗೂ ಅವರು ಅನುಸರಿಸಿದ ನೀತಿಗಳು ಅಲ್ಲಿ ಪ್ರತಿಭಟನೆಗೆ ಕಾರಣವಾಗಿದ್ದರಿಂದಾಗಿ ಅವರನ್ನು ಕೈಬಿಟ್ಟಿರಬಹುದು. ಹೊಸದಾಗಿ ರಾಜ್ಯಪಾಲರಾಗಿ ನೇಮಕ ಆದವರಲ್ಲಿ ಬಿಜೆಪಿಯ ನಾಲ್ವರು ಮುಖಂಡರು ಸೇರಿದ್ದಾರೆ. ನಿವೃತ್ತ ಸೇನಾಧಿಕಾರಿಗಳು ಹಾಗೂ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರೂ ರಾಜ್ಯಪಾಲರಾಗಿ ನೇಮಕಗೊಂಡವರ ಸಾಲಿನಲ್ಲಿ ಇದ್ದಾರೆ. ಬಿಜೆಪಿಯನ್ನು ವಿರೋಧಿಸುತ್ತಿರುವ ಪಕ್ಷಗಳ ಆಡಳಿತ ಇರುವ ರಾಜ್ಯಗಳಲ್ಲಿಯೂ ರಾಜ್ಯಪಾಲರ ಬದಲಾವಣೆ ಆಗಿದೆ. ರಾಜ್ಯಪಾಲರ ಹುದ್ದೆಯು ಈಗ ರಾಜಕೀಯ ಹುದ್ದೆಯಂತೆ ಆಗಿರುವ ಕಾರಣ, ಈ ಹುದ್ದೆಗೆ ಆಗುವ ವರ್ಗಾವಣೆ ಅಥವಾ ನೇಮಕಾತಿಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ಆದರೆ, ಈ ಬಾರಿ ಅತಿಹೆಚ್ಚಿನ ಗಮನ ಸೆಳೆದಿರುವುದು ನ್ಯಾಯಮೂರ್ತಿ ನಜೀರ್ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ನೇಮಕ ಮಾಡಿದ ಕ್ರಮ.



ನಿವೃತ್ತ ನ್ಯಾಯಮೂರ್ತಿಗಳು ಇಂತಹ ಹುದ್ದೆಗಳನ್ನು ಒಪ್ಪಿಕೊಳ್ಳಬಾರದು ಎಂಬ ನಿಯಮವೇನೂ ಇಲ್ಲವಾದರೂ ಹೀಗೆ ಮಾಡುವುದು ಎಷ್ಟು ತಪ್ಪು ಎಂಬುದನ್ನು ಹೇಳಲು ತರ್ಕದ ಬಲವೇನೂ ಬೇಕಾಗದು

ನ್ಯಾಯಮೂರ್ತಿಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದವರೊಬ್ಬರಿಗೆ ರಾಜ್ಯಪಾಲ ಹುದ್ದೆಯನ್ನು ನೀಡಿರುವುದು ಸರ್ಕಾರ ಎಸಗಿರುವ ತಪ್ಪು. ಹಾಗೆಯೇ, ಆ ಹುದ್ದೆಯನ್ನು ಒಪ್ಪಿಕೊಂಡಿದ್ದು ಕೂಡ ನ್ಯಾಯಮೂರ್ತಿಯಾಗಿ ನಿವೃತ್ತರಾದವರು ಮಾಡಿದ ತಪ್ಪು. ನ್ಯಾಯಮೂರ್ತಿ ನಜೀರ್ ಅವರು ಹಿಂದಿನ ತಿಂಗಳು ನಿವೃತ್ತರಾಗಿದ್ದಾರೆ. ಅದಾದ ಕೆಲವೇ ವಾರಗಳಲ್ಲಿ ಅವರು ರಾಜಕೀಯ ಹುದ್ದೆಯೊಂದನ್ನು ಒಪ್ಪಿಕೊಂಡಿದ್ದಾರೆ. ಸಶಸ್ತ್ರ ಪಡೆಗಳ ನಿವೃತ್ತ ಅಧಿಕಾರಿಗಳು ಅಥವಾ ಕಾರ್ಯಾಂಗದ ಮಾಜಿ ಅಧಿಕಾರಿಗಳನ್ನು ರಾಜ್ಯಪಾಲರನ್ನಾಗಿ ನೇಮಕ ಮಾಡುವುದಕ್ಕೂ ಇದಕ್ಕೂ ವ್ಯತ್ಯಾಸವಿದೆ. ಏಕೆಂದರೆ, ಕಾರ್ಯಾಂಗದ ಅಧಿಕಾರಿಗಳು ಹಾಗೂ ಸಶಸ್ತ್ರ ಪಡೆಗಳ ಅಧಿಕಾರಿಗಳು ಸರ್ಕಾರದ ಜೊತೆ ಸಂವಹನ ನಡೆಸುವ ಬಗೆಗೂ, ನ್ಯಾಯಾಂಗದ ಅಧಿಕಾರಿಗಳು ಸರ್ಕಾರದ ಜೊತೆ ಸಂವಹನ ನಡೆಸುವುದಕ್ಕೂ ವ್ಯತ್ಯಾಸವಿದೆ. ನ್ಯಾಯಮೂರ್ತಿ ಸ್ಥಾನದಲ್ಲಿ ಇದ್ದವರು ಸರ್ಕಾರದ ತೀರ್ಮಾನಗಳ ಬಗ್ಗೆ ಹಾಗೂ ನೀತಿಗಳ ಬಗ್ಗೆ ತೀರ್ಪು ನೀಡಿರುತ್ತಾರೆ. ಅವರು ನಿವೃತ್ತಿಯ ನಂತರದಲ್ಲಿ ರಾಜಕೀಯ ಹುದ್ದೆಯನ್ನು ಒಪ್ಪಿಕೊಳ್ಳುವುದು ಖಂಡಿತವಾಗಿಯೂ ತಪ್ಪು ಸಂದೇಶ ರವಾನಿಸುತ್ತದೆ. ಅಯೋಧ್ಯೆಯಲ್ಲಿ ವಿವಾದಕ್ಕೆ ಗುರಿಯಾಗಿದ್ದ ಜಮೀನನ್ನು ಹಿಂದೂಗಳಿಗೆ ಹಸ್ತಾಂತರಿಸಿ ತೀರ್ಪು ನೀಡಿದ ಪೀಠದಲ್ಲಿ ನ್ಯಾಯಮೂರ್ತಿ ನಜೀರ್ ಅವರೂ ಇದ್ದರು. ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೈಗೊಂಡ ನೋಟು ರದ್ದತಿ ತೀರ್ಮಾನದ ಕಾನೂನು ಮಾನ್ಯತೆಯನ್ನು ಎತ್ತಿಹಿಡಿದ ನ್ಯಾಯಪೀಠದಲ್ಲಿಯೂ ನ್ಯಾಯಮೂರ್ತಿ ನಜೀರ್ ಅವರು ಇದ್ದರು.

ಈ ನೇಮಕವು ನ್ಯಾಯಾಂಗದ ಘನತೆಗೆ ಕುಂದು ತರುವಂಥದ್ದು ಹಾಗೂ ನ್ಯಾಯಮೂರ್ತಿ ನಜೀರ್ ಅವರ ವೈಯಕ್ತಿಕ ವರ್ಚಸ್ಸಿಗೆ ಕೂಡ ಕುಂದು ಉಂಟುಮಾಡುವಂಥದ್ದು. ಹಿಂದೆಯೂ ಈ ಮಾದರಿಯಲ್ಲಿ ಕೆಲವು ನೇಮಕಾತಿಗಳು ಆಗಿವೆ ಎಂದು ಈಗ ಹೇಳಲಾಗುತ್ತಿದೆ. ಆದರೆ, ತಪ್ಪು ನಿದರ್ಶನಗಳನ್ನು ಉಲ್ಲೇಖಿಸಿ ಈಗಿನ ತಪ್ಪೊಂದನ್ನು ಸಮರ್ಥಿಸಿಕೊಳ್ಳುವುದು ಸರಿಯಲ್ಲ. ನ್ಯಾಯಮೂರ್ತಿಯಾಗಿ ನಿವೃತ್ತರಾದವರು ಇಂತಹ ಹುದ್ದೆಗಳನ್ನು ಒಪ್ಪಿಕೊಳ್ಳಬಾರದು ಎಂಬ ನಿಯಮವೇನೂ ಇಲ್ಲ. ಆದರೆ, ಇಂತಹ ಹುದ್ದೆಗಳನ್ನು ಒಪ್ಪಿಕೊಳ್ಳುವುದು ಎಷ್ಟು ತಪ್ಪು ಎಂಬುದನ್ನು ಹೇಳಲು ತರ್ಕದ ಬಲವಾಗಲೀ, ಅಪಾರ ಪಾಂಡಿತ್ಯವಾಗಲೀ ಬೇಕಿಲ್ಲ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನಿವೃತ್ತರಾದ ನಂತರದಲ್ಲಿ ರಂಜನ್ ಗೊಗೊಯ್ ಅವರು ರಾಜ್ಯಸಭೆಯ ಸದಸ್ಯರಾಗಿ ನಾಮನಿರ್ದೇಶನಗೊಂಡರು. ಇದು ಕೂಡ ತಪ್ಪು. ಇಂತಹ ನೇಮಕಾತಿಗಳು ನ್ಯಾಯಾಂಗದ ವಿಶ್ವಾಸಾರ್ಹತೆಗೆ ಧಕ್ಕೆ ತರುತ್ತವೆ. ಇಂತಹ ಸ್ಥಾನಗಳಿಗೆ, ಹುದ್ದೆಗಳಿಗೆ ನೇಮಕಗೊಂಡವರು ಹಿಂದೆ ನ್ಯಾಯಮೂರ್ತಿಗಳಾಗಿದ್ದ ಸಂದರ್ಭದಲ್ಲಿ ನೀಡಿದ ತೀರ್ಪುಗಳು ಎಷ್ಟರಮಟ್ಟಿಗೆ ಸರಿಯಾಗಿದ್ದವು ಎಂಬ ಪ್ರಶ್ನೆ ಜನಸಾಮಾನ್ಯರ ಮನಸ್ಸಿನಲ್ಲಿ ಮೂಡುವಂತೆ ಮಾಡುತ್ತವೆ. ಕೇಂದ್ರದ ಮಾಜಿ ಸಚಿವ ಹಾಗೂ ಬಿಜೆಪಿ ಮುಖಂಡ ಅರುಣ್ ಜೇಟ್ಲಿ ಅವರು ಹೇಳಿದಂತೆ, 'ನಿವೃತ್ತಿ ನಂತರದ ಹುದ್ದೆಗಳು, ನಿವೃತ್ತಿಪೂರ್ವದ ತೀರ್ಪುಗಳ' ಕುರಿತು ಪ್ರಶ್ನೆಗಳು ಏಳುವಂತೆ ಮಾಡುವುದು ನ್ಯಾಯಾಂಗದ ಪಾಲಿಗೆ ಒಳ್ಳೆಯದಲ್ಲ. ಸಾಂವಿಧಾನಿಕ ವ್ಯವಸ್ಥೆಗೂ ಒಳ್ಳೆಯದಲ್ಲ.

ದಿನದ ಟ್ವೀಟ್

ಶುರುವಾಗಲಿ ಲೆಕ್ಕಾಚಾರ



ತೆರಿಗೆ ಪಾವತಿದಾರರು ತಾವು ಪಾವತಿಸಬೇಕಾದ ತೆರಿಗೆ ಅಂದಾಜಿಸಲು ಮತ್ತು ಐಟಿಆರ್ ನಮೂನೆಯಲ್ಲಿ ನೀಡಬೇಕಿರುವ ವಿವರ ಕಲೆಹಾಕಲು ಶುರುಮಾಡಬಹುದು. ಐ.ಟಿ ವಿವರ ಸಲ್ಲಿಕೆ ನಮೂನೆಗಳು ಸಕಾಲದಲ್ಲಿ ಲಭ್ಯವಾಗುವಂತೆ ಮಾಡಿರುವುದರಿಂದ, ಜುಲೈ 31ರ ಕಡೇ ದಿನಾಂಕವನ್ನು ವಿಸ್ತರಣೆ ಮಾಡಲಿ ಎಂದು ನಿರೀಕ್ಷಿಸಬಾರದು. ಹಣಕಾಸು ವರ್ಷ ಮುಗಿದ ತಕ್ಷಣವೇ ವಿವರ ಸಲ್ಲಿಸಬೇಕು.

ಚಿರಾಗ್ ಚೌಹಾಣ್, ಚಾರ್ಟರ್ಡ್ ಅಕೌಂಟೆಂಟ್

ಕಿಡಿನುಡಿ



ಸಾನಿಯಾ ಮಿರ್ಜಾ ಅವರು ಆರ್‌ಸಿಬಿಯ ಮೆಂಟರ್ ಆಗಿ ನೇಮಕಗೊಂಡಿದ್ದಾರೆ. ಕೋಚ್ ಮತ್ತು ಮೆಂಟರ್ ನಡುವಿನ ವ್ಯತ್ಯಾಸ ತಿಳಿಯದ ಜನ ರೋದಿಸಲು ಆರಂಭಿಸಿದ್ದಾರೆ. ಸಾನಿಯಾ ಟೆನಿಸ್‌ನಲ್ಲಿ ಭಾರತಕ್ಕಾಗಿ ಏನೆಲ್ಲಾ ಸಾಧಿಸಿದ್ದಾರೆ ಎನ್ನುವುದನ್ನು ಅವರೆಲ್ಲಾ ಮರೆತಿದ್ದಾರೆ ಮತ್ತು ಆಕೆ ಪಾಕಿಸ್ತಾನಿ ಎನ್ನುವ ಮಟ್ಟಕ್ಕೂ ಹೋಗಿದ್ದಾರೆ. ಇವೆಲ್ಲಾ ಅವರಿಗೆ ಸಾಮಾನ್ಯ ಸಂಗತಿಗಳು.

ಶೈಲೇಶ್ ಕೆಂಪೇಗೌಡ, ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 16-2-1998

- **222 ಕ್ಷೇತ್ರಗಳಲ್ಲಿ ಇಂದು ಮೊದಲ ಹಂತದ ಮತದಾನ**

ನವದೆಹಲಿ ಫೆ.15 (ಪಿಟಿಐ) ಹನ್ನೆರಡನೇ ಲೋಕಸಭೆಗಾಗಿ ನಾಳೆ ಹದಿನೈದು ರಾಜ್ಯಗಳು ಹಾಗೂ ಐದು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೊದಲ ಹಂತದ ಮತದಾನ ನಡೆಯಲಿದೆ. ಮೊದಲ ಹಂತದ ಚುನಾವಣೆಯನ್ನು ಎದುರಿಸುತ್ತಿರುವವರಲ್ಲಿ ಪ್ರಧಾನಿ ಐ.ಕೆ. ಗುಜ್ರಾಲ್, ಮಾಜಿ ಪ್ರಧಾನಿಗಳಾದ ಎಚ್.ಡಿ.ದೇವೇಗೌಡ, ಚಂದ್ರಶೇಖರ್, ವಿಸರ್ಜಿತ ಲೋಕಸಭೆಯ ಸ್ಪೀಕರ್ ಪಿ.ಎ.ಸಂಗ್ಮಾ ಮುಂತಾದವರು ಸೇರಿದ್ದಾರೆ. ಒಟ್ಟು 222 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು 2 ಸಾವಿರದ 200 ಮಂದಿ ಕಣದಲ್ಲಿ ಇದ್ದಾರೆ; 27 ಕೋಟಿ ಮತದಾರರು ಭವಿಷ್ಯ ನಿರ್ಧರಿಸಲಿದ್ದಾರೆ.

- **ಕೊಯಮತ್ತೂರು: ಸತ್ತವರ ಸಂಖ್ಯೆ 54ಕ್ಕೆ**

ಕೊಯಮತ್ತೂರು, ಫೆ. 15 (ಪಿಟಿಐ)– ನಿನ್ನೆಯಿಂದ ನಡೆದ ಸರಣಿ ಬಾಂಬ್ ಸ್ಫೋಟಗಳಿಂದ ತತ್ತರಿಸಿರುವ ನಗರದಲ್ಲಿ ಇಂದೂ ಎರಡು ಕಡೆ ಬಾಂಬ್ ಸ್ಫೋಟಿಸಿ 6 ಮಂದಿ ಸತ್ತಿದ್ದು, ಇದುವರೆಗೆ ಸರಣಿ ಬಾಂಬ್ ಸ್ಫೋಟದಲ್ಲಿ ಸತ್ತವರ ಸಂಖ್ಯೆ 54ಕ್ಕೆ ಏರಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 16-2-1973

- **ಕಾರ್ಕಳದಿಂದ ಧರ್ಮಸ್ಥಳಕ್ಕೆ ಬ್ರಹ್ಮಸ್ತಂಭ ರವಾನೆ**

ಮಂಗಳೂರು ಫೆ.15 – ಹೊಸದಾಗಿ ತಯಾರು ಮಾಡಲಾಗಿರುವ ಬಾಹುಬಲಿ ವಿಗ್ರಹವನ್ನು ಕಾರ್ಕಳದಿಂದ ಧರ್ಮಸ್ಥಳಕ್ಕೆ ಸಾಗಿಸುವ ಕಾರ್ಯದ ಪ್ರಥಮ ಹಂತವಾಗಿ 54 ಅಡಿ ಎತ್ತರದ ಬ್ರಹ್ಮಸ್ತಂಭವನ್ನು ಸಾಗಿಸುವ ಕೆಲಸ ಇಂದು ಆರಂಭವಾಯಿತು. ಬ್ರಹ್ಮಸ್ತಂಭವನ್ನು ಹೇರಿದ ದೈತ್ಯಾಕಾರದ ಟ್ರೇಲರ್ ಅನ್ನು ಎರಡು ಟ್ರ್ಯಾಕ್ಟರುಗಳು ಎಳೆದು ಹೊರಟವು. ವಾದ್ಯಗೋಷ್ಠಿ, ಅಲಂಕೃತ ಆನೆ, ಅಸಂಖ್ಯಾತ ಭಕ್ತಜನರೊಂದಿಗೆ ಹೊರಟ ಮೆರವಣಿಗೆ ಬ್ರಹ್ಮಸ್ತಂಭವನ್ನು ಬೀಳ್ಕೊಟ್ಟಿತು.

- **ಜನ ಸಹಕಾರದಿಂದ ಅಭಾವಸ್ಥಿತಿ ನಿವಾರಣೆ: ರಾಜ್ಯಪಾಲರ ವಿಶ್ವಾಸ**

ಬೆಂಗಳೂರು, ಫೆ. 15– ರಾಜ್ಯದ ಉತ್ತರದ ಅಭಾವಪೀಡಿತ ಜಿಲ್ಲೆಗಳಲ್ಲಿ ಪರಿಸ್ಥಿತಿ ತೀರಾ ಕಠಿಣವಾಗಿದೆಯಾದರೂ, ಕೇಂದ್ರದ ಉದಾರ ನೆರವು ಮತ್ತು ಜನತೆಯ ಸಹಕಾರದಿಂದ, ಸರ್ಕಾರ ಈ ಸಂಕಷ್ಟವನ್ನು ಯಶಸ್ವಿಯಾಗಿ ಪರಿಹರಿಸಬಲ್ಲದು ಎಂಬ ವಿಶ್ವಾಸವನ್ನು ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಅವರು ವ್ಯಕ್ತಪಡಿಸಿದ್ದಾರೆ.

ಡಬಲ್ ಎಂಜಿನ್ ಹೊಗೆ ಕನ್ನಡಿಗರಿಗೆ, ಬೋಗಿಯ ಸರಕು ಅನ್ಯರಿಗೆ!

ಎಂಜಿನ್ ದಕ್ಷಿಣಕ್ಕೆ, ಬೋಗಿ ಉತ್ತರಕ್ಕೆ



ಗತಿಬಿಂಬ

ವೈ.ಗ.ಜಗದೀಶ್

ಒಕ್ಕೂಟ ಸರ್ಕಾರದ ಪಾಲಿಗೆ 'ಡಬಲ್ ಎಂಜಿನ್'ನಂತೆ ಇರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ದೃಷ್ಟಿ ದೇಶದ ಗಡಿ ಮತ್ತು ವಿವಿಧ ರಾಜ್ಯಗಳನ್ನು ಬಿಟ್ಟು ಕರ್ನಾಟಕದತ್ತ ನೆಟ್ಟಿದೆ.

ಭಾರತವನ್ನು 'ವಿಶ್ವಗುರು' ಪಟ್ಟಕ್ಕೇರಿಸಲು 'ಶ್ರಮ'ಪಡುತ್ತಿರುವ ಮೋದಿಯವರು ನಮಗೂ ಪ್ರಧಾನಿಯೇ. ಅವರು ಪದೇಪದೇ ಬಂದರೆ ಕನ್ನಡಿಗರಿಗೂ ಖುಷಿ. ಏಕೆಂದರೆ, ಗುಂಡಿ ಬಿದ್ದ ರಸ್ತೆಗಳಿಗೆ ಥಳುಕು ಬರುತ್ತದೆ, ಹದಗೆಟ್ಟಿದ್ದ ಮೂಲ ಸೌಕರ್ಯಗಳು ಓರಣಗೊಳ್ಳುತ್ತವೆ, ಕಟ್ಟಡಗಳು ಚೆಂದಗಾಣುತ್ತವೆ. ನಮ್ಮ ಹೆಮ್ಮೆಯ ಪ್ರಧಾನಿ ದೇಶದ ಬೇರೆ ರಾಜ್ಯಗಳು, ಹೊರದೇಶಗಳನ್ನು ಸುತ್ತುವುದು ಬಿಟ್ಟು, ನಮ್ಮ ಮೇಲೆ ಅಕ್ಕರೆ ತೋರುತ್ತಾರೆ ಎಂದರೆ ಅದಕ್ಕಿಂತ ಸಂಭ್ರಮ ಬೇರೆ ಏನಿದೆ?

ನೆರೆ-ಬರದಿಂದ ನಾಡಿನ ಜನ ಕಂಗೆಟ್ಟಾಗ ಇತ್ತ ಕಾಲಿಡದಿದ್ದವರು, ನಮ್ಮ ಅಳಲಿಗೆ ಕಿವಿಯಾಗದವರು, ನೆರವಿಗೆ ಧಾವಿಸದವರು ಈಗ ಏಕಾಏಕಿ ದೌಡಾಯಿಸಿ, ಇಲ್ಲಿಯೇ ಮೊಕ್ಕಾಂ ಹೂಡಿದ್ದಾರೋ ಎಂಬಂತೆ ತೋರಿಸಿಕೊಳ್ಳುವುದರ ಹಿಂದೆ ವಿಧಾನಸಭೆ ಚುನಾವಣೆಯ ಗೌಲಿದೆ. 'ಆಪರೇಷನ್ ಕಮಲ' ನಡೆಸಿ ಅಡ್ಡದಾರಿಯಲ್ಲಿ ಅಟ್ಟಕ್ಕೇರಿಸಿದ ಸರ್ಕಾರವನ್ನು ಮತ್ತೆ ಉಳಿಸಿಕೊಳ್ಳಬೇಕೆಂಬ ತವಕ ಇದರ ಹಿಂದಿರುವುದು ಗುಟ್ಟೇನಲ್ಲ. ಈಗ ನಾಡಿನ ಬಗ್ಗೆ ತೋರಿಸುವ ಮಮಕಾರವನ್ನು ಮೂರೂವರೆ ವರ್ಷಗಳಿಂದಲೂ ತೋರಿದ್ದರೆ, ರಾಜ್ಯಕ್ಕೆ ಬರಬೇಕಾದ ಅನುದಾನ, ನೆರವಿನ ಪಾಲನ್ನು ನೀಡಿದ್ದರೆ ಅವರ ಬರುವಿಕೆಯಲ್ಲಿನ ಆನಂದ ಇಮ್ಮಡಿಯಾಗುತ್ತಿತ್ತು!

ಮೋದಿ, ಅಮಿತ್ ಶಾ ಅವರು ಬಿಜೆಪಿ ಪಕ್ಷಕ್ಕಷ್ಟೇ ಪ್ರಧಾನಿ ಹಾಗೂ ಗೃಹ ಸಚಿವರಲ್ಲ. ಒಕ್ಕೂಟ ವ್ಯವಸ್ಥೆಯಡಿ ಇರುವ ರಾಜ್ಯಗಳಿಗೂ ಅವರು ಪ್ರಧಾನಿ ಮತ್ತು ಗೃಹ ಸಚಿವರು. ಗುಜರಾತ್ ಚುನಾವಣೆಯಲ್ಲಿ ಅವರು ಮೊಕ್ಕಾಂ ಹೂಡಿದ್ದರು. ಒಂದು ರಾಜ್ಯದಲ್ಲಿ ಚುನಾವಣೆ ಬಂತೆಂದರೆ ಆ ರಾಜ್ಯದ ಮೇಲೆ ಗಮನ ಕೇಂದ್ರೀಕರಿಸುವುದು ವಿಶ್ವನಾಯಕರೆಂದು ಕರೆಸಿಕೊಳ್ಳುವ ಮೋದಿಯವರ ಔನ್ನತ್ಯ ಹಾಗೂ ಹಿರಿಮೆಗೆ ತಕ್ಕುದಲ್ಲ.

ಚುನಾವಣೆಯನ್ನು ನಡೆಸಬೇಕಾದುದು ಪಕ್ಷದ ಮುಖಂಡರೇ ವಿನಾ ಪ್ರಧಾನಿ, ಗೃಹ ಸಚಿವರಂಥ ಸಾಂವಿಧಾನಿಕವಾಗಿ ಉನ್ನತ ಹುದ್ದೆಗಳಲ್ಲಿ ಇರುವವರಲ್ಲ. ಹಾಗೆ ಮಾಡಿದಲ್ಲಿ, ತಮ್ಮ ಪಕ್ಷದ ಅಧ್ಯಕ್ಷರು ಹಾಗೂ ಸ್ಥಳೀಯ ನಾಯಕರ ಸಾಮರ್ಥ್ಯ ಹಾಗೂ ಪ್ರಭಾವಳಿಯನ್ನು ಕಡೆಗಣಿಸುವ ಧೋರಣೆಯಾಗಿರುತ್ತದೆ. ಹಾಗೆಯೇ ಅವರಿಗೆ ಪಕ್ಷವನ್ನು ಗೆಲ್ಲಿಸಿಕೊಳ್ಳುವ ವರ್ಚಸ್ಸು ಮತ್ತು ಪ್ರಭಾವ ಇಲ್ಲವೆಂಬುದನ್ನು ಹೇಳಿದಂತಾಗುತ್ತದೆ.

ಬಿಜೆಪಿಯಲ್ಲಿ ನಾಯಕರೇನೂ ಕಮ್ಮಿ ಇಲ್ಲ. ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ, ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಕರ್ನಾಟಕದ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಹಾಗೂ ಸಹ ಉಸ್ತುವಾರಿ ಅಣ್ಣಾಮಲೈ ಇದ್ದಾರೆ. ಇಡೀ ದೇಶದ ಚುನಾವಣೆಯನ್ನು ನಡೆಸಬಲ್ಲ ತಂತ್ರಗಾರಿಕೆಯನ್ನು ಕರತಲಾಮಲಕ ಮಾಡಿಕೊಂಡಿರುವ ಬಿ.ಎಲ್. ಸಂತೋಷ್ ಸಕ್ರಿಯರಾಗಿದ್ದಾರೆ. ಕರ್ನಾಟಕದ ಮಣ್ಣು ಕೂಡ ಬರಡಲ್ಲ; ಬಿಜೆಪಿಗೆ ಹುಲುಸಾದ ನಾಯಕರ ದಂಡನ್ನೇ ಕೊಟ್ಟಿದೆ. ಜನರ ಮಧ್ಯೆ ಈಗಲೂ ತಮ್ಮ ಪ್ರಭಾವವನ್ನು ಉಳಿಸಿಕೊಂಡಿರುವ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಪ್ರಲ್ಹಾದ ಜೋಶಿ, ಕೆ.ಎಸ್. ಈಶ್ವರಪ್ಪ, ಡಿ.ವಿ. ಸದಾನಂದಗೌಡ, ಆರ್. ಅಶೋಕ ಅವರಂತಹ ನಾಯಕರ ದಂಡೇ ಇದೆ. ಕೇಸರಿ ಬಾವುಟ ಹಾರಿಸಲು ಕಾಲಾಳುಗಳೇ ಇಲ್ಲದ ಕಾಲದಿಂದಲೂ ಪಕ್ಷವನ್ನು ಕಟ್ಟಿದ ಯಡಿಯೂರಪ್ಪ, ಈಶ್ವರಪ್ಪ ಈಗಲೂ ಸಕ್ರಿಯರಾಗಿದ್ದಾರೆ. ಸಾಲು ಸಾಲು ಸಮರ್ಥರಿರುವಾಗ ಮೋದಿ-ಶಾ ಅವರೇ ಮುಂದೆ ನಿಂತು ಚುನಾವಣೆ ನಡೆಸಬೇಕೆಂಬ ಸ್ಥಿತಿ ಇದೆಯೆಂದು ಭಾವಿಸುವುದಾದರೆ, ಪಕ್ಷದ ಇನ್ನಿತರ ನಾಯಕರ ಶಕ್ತಿಯನ್ನೇ ಅಣಕಿಸಿದಂತಲ್ಲವೇ? ಅಥವಾ ಗೆಲ್ಲಿಸುವ ತಾಕತ್ತು ಅವರಿಗೆ ಇಲ್ಲ ಎಂದು ಹೀಗಳೆದಂತಲ್ಲವೇ?

ಅಷ್ಟಕ್ಕೂ ಪ್ರಧಾನಿ, ಗೃಹ ಸಚಿವರೇ ಚುನಾವಣೆ ಮುನ್ನಡೆಸುವುದಾದರೆ, ಬೇರೆ ಯಾರನ್ನಾದರೂ ಪ್ರಧಾನಿ ಸ್ಥಾನದಲ್ಲಿ ಕೂರಿಸಿ, ಪಕ್ಷದ ಲಗಾಮನ್ನು ಇವರಿಬ್ಬರೇ ವಹಿಸಿಕೊಳ್ಳುವುದು ಸೂಕ್ತ.

ಪ್ರಧಾನಿಯಾದವರು ಒಕ್ಕೂಟದ ರಾಜ್ಯಗಳ ಮಧ್ಯೆ ಸಮನ್ವಯ ಸಾಧಿಸುವ, ದೇಶವನ್ನು ಮುನ್ನಡೆಸುವ, ವಿವಿಧ ದೇಶಗಳ ಮಧ್ಯೆ ಸಂಬಂಧವನ್ನು ಉತ್ತಮಗೊಳಿಸಿ ಮಾದರಿ ರಾಷ್ಟ್ರವನ್ನು ನಿರ್ಮಾಣ ಮಾಡುವ ಪರಂಪರೆಯನ್ನು ಮುಂದುವರಿಸಬೇಕು. ಅದರ ಬದಲು ಹಕ್ಕುಪತ್ರ ನೀಡುವುದು, ನಲ್ಲಿ ನೀರಿನ ಉದ್ಘಾಟನೆ ಮಾಡುವಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ಪ್ರಧಾನಿ ಹುದ್ದೆಗೆ ಶೋಭೆಯಲ್ಲ. ಹಕ್ಕುಪತ್ರ ವಿತರಿಸಲು ಸಚಿವರು ಕೂಡ ಹೋಗಬಾರದು. ಅದೇನಿದ್ದರೂ ಕಂದಾಯ ಅಧಿಕಾರಿಗಳ ಕೆಲಸ. ಸ್ಥಳೀಯವಾಗಿಯೇ ಮಾಡಬಹುದಾದ ಕೆಲಸಕ್ಕೆ ಸಾರ್ವಜನಿಕರು ತೆರಿಗೆ ರೂಪದಲ್ಲಿ ಕೊಟ್ಟ ಕೋಟಿಗಟ್ಟಲೆ ಹಣ ವ್ಯರ್ಥ ಮಾಡುವುದು ಸಲ್ಲ.

ಡಬಲ್‌ಎಂಜಿನ್ ಸರ್ಕಾರ ಅಸ್ತಿತ್ವಕ್ಕೆ ಬಂದರೆ, 24 ಗಂಟೆಯಲ್ಲೇ ಮಹದಾಯಿ ಯೋಜನೆ ಜಾರಿ ಮಾಡುವುದಾಗಿ ಬಿಜೆಪಿ ನಾಯಕರು 2019ರ ಲೋಕಸಭೆ ಚುನಾವಣೆ ವೇಳೆ ಘೋಷಿಸಿದ್ದರು. ಈಗಲೂ ಅದು ಇತ್ಯರ್ಥವಾಗಿಲ್ಲ. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸುವ ಪ್ರಸ್ತಾವ ಇನ್ನಷ್ಟೇ ಕೇಂದ್ರ ಸರ್ಕಾರದ ಸಚಿವ ಸಂಪುಟದ ಮುಂದೆ ಬರಬೇಕಿದೆ. ಈ ಯೋಜನೆಗೆ ₹9,600 ಕೋಟಿ ನೆರವು ಸಿಗಬಹುದು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಭರವಸೆಯಿಟ್ಟಿದ್ದರು. ಕೇಂದ್ರ ಬಜೆಟ್‌ನಲ್ಲಿ ₹5,300 ಕೋಟಿ ನೀಡುವುದಾಗಿ ಆಶ್ವಾಸನೆ ನೀಡಲಾಗಿದೆ. ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ ಮಾಡಲಾಗಿದೆ. ಇಷ್ಟು ದಿನ ಸುಮ್ಮನಿದ್ದವರು ಮೈಸೂರು-ಬೆಂಗಳೂರು ಹೆದ್ದಾರಿಯ ಉದ್ಘಾಟನೆಯ ಮುಹೂರ್ತ ನಿಗದಿಪಡಿಸುತ್ತಿದ್ದಾರೆ. ಇವೆಲ್ಲವೂ ಚುನಾವಣೆ ಹೊತ್ತಿಗೆ ಮುನ್ನೆಲೆಗೆ ಬಂದಿರುವುದು ಏಕೆ?

ಕರ್ನಾಟಕದಿಂದ ಆದಾಯ ಕೂಡ ಕೇಂದ್ರಕ್ಕೆ ದೊಡ್ಡ ಮಟ್ಟದಲ್ಲಿಯೇ ಇದೆ. ಆದಾಯ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆ ರೂಪದಲ್ಲಿ ₹ 2.40 ಲಕ್ಷ ಕೋಟಿ, ಜಿಎಸ್‌ಟಿ ಲೆಕ್ಕದಲ್ಲಿ ₹1.20 ಲಕ್ಷ ಕೋಟಿ, ಕಸ್ಟಮ್ಸ್ ರೂಪದಲ್ಲಿ ₹45 ಸಾವಿರ ಕೋಟಿ, ಪೆಟ್ರೋಲಿಯಂ ಮೇಲಿನ ಸೆಸ್ ₹35 ಸಾವಿರ ಕೋಟಿ, ಇತರೆ ಸೆಸ್ ₹25 ಸಾವಿರ ಕೋಟಿ ಸಂಗ್ರಹವಾಗುತ್ತದೆ. ಟೋಲ್‌ಗಳಿಂದ ಸುಮಾರು ₹6 ಸಾವಿರ ಕೋಟಿ ವಸೂಲಾಗುತ್ತಿದೆ. ಇದಲ್ಲದೇ, ಐ.ಟಿ-ಬಿ.ಟಿ ರಫ್ತಿನಲ್ಲಿ ಶೇ 58ರಷ್ಟು ಪಾಲು ಕರ್ನಾಟಕದ್ದೇ ಇದೆ. ಇದರಿಂದ ಕೇಂದ್ರಕ್ಕೆ ಬರುವ ವರಮಾನ ಎಷ್ಟೆಂದು ಈವರೆಗೂ ಬಹಿರಂಗಪಡಿಸಿಲ್ಲ. ಜಿಎಸ್‌ಟಿ ಮೊತ್ತ ಕಳೆದರೂ ವರ್ಷಕ್ಕೆ ₹4.5 ಲಕ್ಷ ಕೋಟಿಗೂ ಹೆಚ್ಚು ಮೊತ್ತ ಕೇಂದ್ರದ ಬೊಕ್ಕಸಕ್ಕೆ ಹರಿದು ಹೋಗುತ್ತದೆ. ರಾಜ್ಯಕ್ಕೆ ಬರುವ ನೆರವಿನ ಪಾಲು ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಲೇ ಇದೆ. ಗುಜರಾತ್, ಉತ್ತರಪ್ರದೇಶ, ಮಹಾರಾಷ್ಟ್ರಗಳಿಗೆ ಹೆಚ್ಚಿನ ಪಾಲನ್ನು ನೀಡಲಾಗುತ್ತಿದೆ. ಈ ತಾರತಮ್ಯವನ್ನಾದರೂ 'ಡಬಲ್ ಎಂಜಿನ್' ನೇತಾರರು ಹೋಗಲಾಡಿಸಬೇಕಿದೆ.

ಕೇಂದ್ರ ಸರ್ಕಾರದ ಚುಕ್ಕಾಣಿಯನ್ನು ಬಿಜೆಪಿ ಹಿಡಿಯಲು ಕರ್ನಾಟಕದ ಮತದಾರರು 25 ಸಂಸದರನ್ನು ನೀಡಿದ್ದಾರೆ. ಆ ಋಣವನ್ನಾದರೂ ಮೋದಿ-ಶಾ ತೀರಿಸಲಿ. ಅದನ್ನು ಮಾಡದೇ, ಚುನಾವಣೆ ಹೊತ್ತಿನಲ್ಲಿ ಆಗೀಗ ಬಂದು, 'ನಿಮ್ಮ ನೆರವಿಗೆ ನಾವಿದ್ದೇವೆ' ಎಂದು ಘೋಷಿಸಿ ಹೋದರೆ, ಅದು ಕನ್ನಡಿಗರಿಗೆ ಮಾಡುವ ಅವಮಾನ. ಮೋದಿ-ಶಾ ಮತ್ತೆ ಬರುವಾಗಲಾದರೂ ಭರವಸೆ ಮೂಟೆಯನ್ನು ಹೊತ್ತು ತಂದು, ಖಾಲಿ ಚೀಲ ತೋರಿಸುವ ಬದಲು ಸಚಿವ ಸಂಪುಟದ ನಿರ್ಣಯ, ಅನುದಾನದ ಹರಿವಿಗೆ ಆದ್ಯತೆ ಕೊಡಲಿ. ಇಲ್ಲದಿದ್ದರೆ ಡಬಲ್ ಎಂಜಿನ್ ಹೊಗೆಯಷ್ಟೇ ನಮ್ಮ ನಾಡಿಗೆ, ಬೋಗಿಯಲ್ಲಿರುವ ಸರಕುಗಳೆಲ್ಲ ಉತ್ತರದ ರಾಜ್ಯಗಳಿಗೆ ಸಾಗಣೆಯಾಗುವುದು ಮುಂದುವರಿಯುತ್ತದೆ.



ಚುರುಮುರಿ



ದುಗುಡದ ಕಾರಣ!

● ಎಸ್.ಬಿ.ರಂಗನಾಥ್

ಶಾಸಕರು ಚಿಂತಾಕ್ರಾಂತರಾಗಿದ್ದರು. ಅವರ ತೊಡೆಯ ಮೇಲಿದ್ದ ದಿನಪತ್ರಿಕೆಯನ್ನು ತೆಗೆದಿಡುತ್ತಾ ಮೇಡಂ ಕೇಳಿದರು, 'ಏಳ್ರೀ, ಸ್ನಾನ, ತಿಂಡಿ ಮುಗಿಸಿ. ಜನ ಬರೋದ್ರೊಳಗೆ ನೀವು ರೆಡಿ ಆಗ್ಬೇಕಲ್ಲ. ಪಾರ್ಟಿಯ ಪಾದಯಾತ್ರೆಗೆ ಹೋಗೋಲ್ವೇ?'

'ಹೋಗ್ಬೇಕು, ಹೋಗ್ಬೇಕು' ಎಂದ ಯಜಮಾನರು ಪುನಃ ಅನ್ಯಮನಸ್ಕರಾದರು.

'ಯಾಕ್ರೀ, ಏನು ಯೋಚಿಸ್ತಿದೀರಿ? ಚುನಾವಣೆ ಬಾಗಿಲಿಗೆ ಬಂದಿದೆ, ಸಮರೋಪಾದಿಯಲ್ಲಿ ತಯಾರಾಗ್ಬೇಕು ಅಂತಿದ್ದೋರು ಈಗ್ಯಾಕೆ ಹೀಗೆ?'

'ನಾನು ಕ್ಯಾಂಡಿಡೇಟ್ ಅಂತ ಅನೌನ್ಸ್ ಆಗ್ಲಿ'.

'ನೀವು ಪಾರ್ಟಿ ಕೆಲ್ಸದಲ್ಲಿ ಆ್ಯಕ್ಟಿವ್ ಆಗಿದೀರೀಂತ ನಿಮ್ಮ ನಾಯಕರಿಗೆ ಮನವರಿಕೆ ಮಾಡಿಕೊಡದೆ ಹೇಗೆ ಅಭ್ಯರ್ಥಿಯಾಗ್ತೀರಿ? ಮನೆ ಬಾಗಿಲಿಗೆ ಟಿಕೆಟ್ ಬರುತ್ತೆ ಅಂದ್ಕೊಂಡಿದೀರಾ?'

'ಇಲ್ಲ, ಹಾಗಲ್ಲ'.

'ಮತ್ತೆ, ಟಿಕೆಟ್ ಸಿಗೋ ಬಗ್ಗೆ ಅನುಮಾನನಾ?'

ನಾಯಕರು ಮೌನ ಮುರಿಯಲಿಲ್ಲ.

'ನಿಮ್ಗೆ ಟಿಕೆಟ್ ಸಿಗದಿರೋದಕ್ಕೆ ಕಾರಣಾನೇ ಇಲ್ಲ. ಹೈಕಮಾಂಡ್ ನಾಯಕರನ್ನು ಕಾಲಕಾಲಕ್ಕೆ ಭೇಟಿಯಾಗ್ತಾ ಅವರು ಸದಾ ಸಂತೋಷವಾಗಿರೋ ಹಾಗೆ ನೋಡಿಕೊಳ್ತಿದೀರಿ. ಪಕ್ಷ ವಿರೋಧಿ ಚಟುವಟಿಕೆ ಆರೋಪಗಳಿಲ್ಲ. ವಯೋಮಿತಿಯೂ ಮೀರಿಲ್ಲ. ನಮ್ಮ ರಕ್ತಸಂಬಂಧಿಕರಾರೂ ರಾಜಕೀಯದಲ್ಲಿಲ್ಲ. ಚುನಾವಣೆಗೆ ಸಂಪನ್ಮೂಲದ ಕೊರತೆಯಿಲ್ಲ. ಮತ್ಯಾಕೆ ಚಿಂತೆ?'

'ಅದಲ್ಲ ಚಿಂತೆ'.

'ಮತ್ತೆ? ಯುದ್ಧ ಕಾಲದಲ್ಲಿ ಈ ಅರ್ಜುನ ವಿಷಾದವೇಕೆ? ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನಾ ಎಂದು ಶ್ರೀ ಕೃಷ್ಣ ಗೀತೋಪದೇಶ ಆಗಬೇಕೇನು?'

ಶಾಸಕರು ಮಾತಾಡದೆ, ದಿನಪತ್ರಿಕೆಯನ್ನು ಮಡದಿಗೆ ತೋರಿಸಿದರು. ಭ್ರಷ್ಟಾಚಾರ, ಸ್ವಜನಪಕ್ಷಪಾತಗಳಿಗಾಗಿ ಆಡಳಿತ ಪಕ್ಷದ ಇಬ್ಬರು ಶಾಸಕರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿದ ಸುದ್ದಿ ಇತ್ತು.

'ಎಲೆಕ್ಷನ್ ಟೈಮಲ್ಲಿ ಇಂಥದ್ದೆಲ್ಲ ಮಾಮೂಲು... ಬಿಬಿಸಿ ಕಚೇರಿ ಮೇಲೆ ಐಟಿಯವರು ದಾಳಿ ಮಾಡಿಲ್ವೇ?! ನೀವು ಯಾವ ಅಕ್ರಮಗಳಲ್ಲೂ ಸಿಕ್ಕಿಹಾಕಿಕೊಂಡಿಲ್ವಲ್ಲ, ಯಾಕೆ ಚಿಂತೆ?'

'ಹಾಗಿದ್ದಿದ್ರೆ ಚಿಂತಿಸ್ತಿರಲಿಲ್ಲ. ಆದ್ರೆ... ನಮ್ಮ ವಕೀಲರಿಗೆ ಫೋನ್ ಮಾಡ್ಬೇಕು...' ದುಗುಡದಿಂದಲೇ ಶಾಸಕರು ಮೇಲೆದ್ದರು!

ಸಂಗತ

ರಾಜ್ಯಭಾಷೆ ಅಲ್ಲ, ಅಧಿಕೃತ ಭಾಷೆ

'ರಾಜ್ಯಭಾಷೆ'ಯ ಪರಿಕಲ್ಪನೆ ಸಂವಿಧಾನದಲ್ಲಿ ಇಲ್ಲದಿದ್ದರೂ ವಿಧಿ 345, ರಾಜ್ಯದಲ್ಲಿ ಬಳಕೆಯಲ್ಲಿರುವ ಒಂದು ಅಥವಾ ಹೆಚ್ಚು ಭಾಷೆಗಳನ್ನು ಆಡಳಿತದ ಭಾಷೆಗಳನ್ನಾಗಿ ಅಂಗೀಕರಿಸಬಹುದು ಎನ್ನುತ್ತದೆ

● ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಅಧಿವಕ್ತಾ ಪರಿಷತ್ ಕರ್ನಾಟಕ (ಉತ್ತರ) ಇತ್ತೀಚೆಗೆ ಆಯೋಜಿಸಿದ್ದ ಪ್ರಥಮ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಕಲಬುರಗಿ ಹೈಕೋರ್ಟ್ ಪೀಠದ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್‌ಕುಮಾರ್ ಅವರು, ಹೈಕೋರ್ಟಿನಲ್ಲಿ 'ಮಾತೃಭಾಷೆ' ಬಳಕೆ ಎನ್ನುವ ಬದಲು 'ರಾಜ್ಯಭಾಷೆ' ಎಂದಾಗಬೇಕು ಎಂದು ಹೇಳಿದ್ದಾರೆ. ನಿಜ, 2011ರ ಜನಗಣತಿಯ ಪ್ರಕಾರ, ಕರ್ನಾಟಕದಲ್ಲಿ ಉರ್ದು, ತೆಲುಗು, ತಮಿಳು, ಮರಾಠಿ, ತುಳು, ಬ್ಯಾರಿ, ಕೊಡವ ಸೇರಿದಂತೆ ಸುಮಾರು 56 ಮಾತೃಭಾಷೆಗಳು ಜೀವಂತವಾಗಿವೆ. ಆದರೂ ಭಾಷೆ ಕುರಿತ ಗಂಭೀರವಾದ ಚರ್ಚೆಗಳಲ್ಲಿ 'ಮಾತೃಭಾಷೆ' ಎನ್ನುವ ಪದವನ್ನು 'ಕನ್ನಡ' ಎನ್ನುವುದಕ್ಕೆ ಮಾತ್ರ ಸಂವಾದಿಯಾಗಿ ಬಳಸುವ ಪರಿಪಾಟ ಸಾಮಾನ್ಯವಾಗಿದೆ. ಇದು ಸರಿಯಲ್ಲ. ಇದನ್ನೇ ನ್ಯಾಯಮೂರ್ತಿಯವರು ಹೇಳಿದ್ದು.

ಇನ್ನು ನ್ಯಾಯಾಲಯಗಳಲ್ಲಿ ಮಾತೃಭಾಷೆಯ ಬದಲು 'ರಾಜ್ಯಭಾಷೆ' ಎಂದಾಗಬೇಕು ಎಂದಿದ್ದಾರಲ್ಲ, ರಾಜ್ಯಭಾಷೆ ಎಂದರೆ ಯಾವುದು? ನಿಜವೆಂದರೆ 'ರಾಜ್ಯಭಾಷೆ' ಎನ್ನುವ ಒಂದು ಭಾಷೆ ಇಲ್ಲ. ಅವರ ಇಂಗಿತ 'ಕನ್ನಡ' ಎಂದಿದ್ದರೆ, ಅದು ರಾಜ್ಯದ ಆಡಳಿತ ಭಾಷೆಯೇ ವಿನಾ 'ರಾಜ್ಯಭಾಷೆ' ಅಲ್ಲ.

ಸಂವಿಧಾನದ ಪ್ರಕಾರ, ಭಾರತ ಒಕ್ಕೂಟಕ್ಕೆ ರಾಷ್ಟ್ರ ಲಾಂಛನ, ಧ್ವಜ, ಗೀತೆ, ಪ್ರಾಣಿ, ಪಕ್ಷಿ ಇವೆ. ಆದರೆ 'ರಾಷ್ಟ್ರಭಾಷೆ' ಎಂಬುದು ಇಲ್ಲ. ಹಿಂದಿ ನಮ್ಮ ರಾಷ್ಟ್ರಭಾಷೆ ಅಲ್ಲ. ವಿಧಿ 343(1)ರ ಪ್ರಕಾರ, 'ದೇವನಾಗರಿ ಲಿಪಿಯಲ್ಲಿ ಬರೆದ ಹಿಂದಿಯು ಒಕ್ಕೂಟದ ಅಧಿಕೃತ ಭಾಷೆ (ಅಫಿಷಿಯಲ್ ಲ್ಯಾಂಗ್ವೇಜ್)', ಎಂದರೆ, ಆಡಳಿತ, ನ್ಯಾಯಾಂಗ ವ್ಯವಹಾರದಲ್ಲಿ ಬಳಸಬೇಕಾದ ಭಾಷೆ. ಹಾಗೆಯೇ 'ರಾಜ್ಯಭಾಷೆ' ಎಂಬ ಪರಿಕಲ್ಪನೆಯೂ ಸಂವಿಧಾನದಲ್ಲಿ ಇಲ್ಲ. ಆದಾಗ್ಯೂ, ವಿಧಿ 345, 'ರಾಜ್ಯದಲ್ಲಿ ಬಳಕೆಯಲ್ಲಿರುವ ಒಂದು ಅಥವಾ ಹೆಚ್ಚು ಭಾಷೆಗಳನ್ನು ಆಡಳಿತದ ಭಾಷೆಯನ್ನಾಗಿ ಅಂಗೀಕರಿಸಬಹುದು' ಎನ್ನುತ್ತದೆ. ಆ ಪ್ರಕಾರ, ಕರ್ನಾಟಕ ರಾಜಭಾಷಾ ಅಧಿನಿಯಮ 1963ರ ಅಡಿಯಲ್ಲಿ, ಕನ್ನಡ ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಘೋಷಿಸಲಾಗಿದೆ, 'ರಾಜ್ಯಭಾಷೆ'ಯಾಗಿ ಅಲ್ಲ.

ಸರ್ಕಾರದ ಕಾನೂನು ಪದಕೋಶದಲ್ಲಿ 'ಅಫಿಷಿಯಲ್' ಎಂದು ಬರುವ ಕಡೆಯೆಲ್ಲಾ 'ಅಧಿಕೃತ' ಎಂಬ ಪದವನ್ನು ಬಳಸಲಾಗಿದೆ. ಆದರೆ, ಅದ್ಯಾಕೋ ಭಾಷೆಯ ಸಂದರ್ಭದಲ್ಲಿ ಮಾತ್ರ, ರಾಜಭಾಷೆ, ರಾಜಭಾಷಾ ಅಧಿನಿಯಮ, ರಾಜಭಾಷಾ ಆಯೋಗ, ರಾಜಭಾಷಾ ವಿಭಾಗ ಎಂದೆಲ್ಲಾ 'ರಾಜ' ಎಂಬ ಪದವನ್ನು ಬಳಸಿದ್ದಾರೆ. ಸಂವಿಧಾನ ಜಾರಿಗೆ ಬಂದ ನಂತರ ನಮ್ಮಲ್ಲಿ ರಾಜರು, ಪ್ರಭುಗಳು ಇಲ್ಲ. ಆದರೆ, ಅವರು ನಮ್ಮ ಮೇಲೆ ಇನ್ನೂ ರಾಜರನ್ನು ಹೇರುತ್ತಿದ್ದಾರೆ.

ಭಾರತ ಸಂವಿಧಾನವು ಆರಂಭವಾಗುವುದೇ 'ವಿ ದ ಪೀಪಲ್ ಆಫ್ ಇಂಡಿಯಾ...' ಎಂದು. ಸಂವಿಧಾನದ ಅಧಿಕೃತ ಹಿಂದಿ ಅನುವಾದದಲ್ಲಿ 'ಹಂ ಭಾರತ್ ಕೆ ಲೋಗ್...' ಎಂದಿದೆ. ಅದೇ ರೀತಿಯಲ್ಲಿ, ಕೊಂಕಣಿ- ಆಮಿ, ಭಾರತಾಚೆ ಲೋಕ್, ಮರಾಠಿ- ಅಹ್ಮೀ, ಭಾರತಾಚೆ ಲೋಕ್, ಉರ್ದು-ಹಮ್, ಭಾರತ್ ಕೆ ಅವಾಮ್, ತಮಿಳು- ಇಂಡಿಯಾ ಮಕ್ಕಳಾಕಿಯಾ ನಾಮ್- ಎಂದೆಲ್ಲಾ ಪೀಪಲ್ ಎನ್ನುವುದನ್ನು 'ಜನ' ಎನ್ನುವ ರೀತಿಯಲ್ಲಿ ಅನುವಾದ ಮಾಡಿಕೊಂಡರೆ, ನಮ್ಮ ಕನ್ನಡದ ಅಧಿಕೃತ ಅನುವಾದದಲ್ಲಿ ಇದನ್ನು 'ಭಾರತದ ಪ್ರಜೆಗಳಾದ ನಾವು' ಎಂದಿದೆ. ಇವರು ನಮ್ಮನ್ನು ಪ್ರಜೆಗಳನ್ನಾಗಿ ಮಾಡಿದ್ದಾರೆ. ನಮ್ಮಲ್ಲಿ ಈಗ ಪ್ರಭುಗಳಿಲ್ಲವಾದ್ದರಿಂದ ನಾವು ಪ್ರಜೆಗಳಲ್ಲ, ನಾವು ಸಬ್ಜೆಕ್ಟ್ಸ್ ಅಲ್ಲ, ನಾವು ಸಿಟಿಜನ್ಸ್- ನಾಗರಿಕರು, ಜನ ಎಂಬುದು ಇವರಿಗೆ ಇನ್ನೂ ಅರಿವಾದ ಹಾಗೆ ಕಾಣುತ್ತಿಲ್ಲ.

ಇದೇ ಪ್ರವೃತ್ತಿಯನ್ನು 'ಡೆಮಾಕ್ರಟಿಕ್' ಎಂಬ ಪದದ ಅನುವಾದದಲ್ಲಿಯೂ ಕಾಣುತ್ತೇವೆ. ನಿಜವೆಂದರೆ 'ಡೆಮಾಕ್ರಟಿಕ್' ಎಂಬುದಕ್ಕೆ ಸಂವಿಧಾನದ ಅಧಿಕೃತ ಹಿಂದಿ ಅನುವಾದದಲ್ಲಿ 'ಲೋಕತಂತ್ರಾತ್ಮಕ್' ಎನ್ನುವ ಪದ ಬಳಸಲಾಗಿದೆ. ಅದೇ ರೀತಿಯಲ್ಲಿ, ತಮಿಳು- ಜನನಾಯಕ, ಬಂಗಾಲಿ-ಜನತಾಂತ್ರಿಕ್, ಮರಾಠಿ- ಲೋಕಶಾಹಿ, ಉರ್ದು- ಅವಾಮೀ ಎಂಬ ಪದಗಳಿವೆ. ಆದರೆ ಕನ್ನಡದಲ್ಲಿ ಮಾತ್ರ, 'ಪ್ರಜಾಸತ್ತಾತ್ಮಕ' ಎಂಬ ಪದವನ್ನು ಬಳಸಲಾಗಿದೆ. ಇಲ್ಲಿಯೂ ನಮ್ಮನ್ನು ಪ್ರಜೆಗಳನ್ನಾಗಿಸಿದ್ದಾರೆ. ನಿಜವೆಂದರೆ, ನಮ್ಮದು ಪ್ರಜಾಪ್ರಭುತ್ವವಲ್ಲ, ಜನತಂತ್ರ ಅಥವಾ ಜನಸತ್ತೆ. ಆದ್ದರಿಂದ ನಮ್ಮದು ಜನಸತ್ತಾತ್ಮಕ ಗಣರಾಜ್ಯ.



ಇದನ್ನು ಏಕೆ ಇಷ್ಟು ಗಂಭೀರವಾಗಿ ಪರಿಗಣಿಸಬೇಕೆಂದರೆ, ನಮಗೆಲ್ಲಾ ಗೊತ್ತಿರುವ ಹಾಗೆ, ನಮ್ಮ ಮನೋಭಾವವು ನಾವು ಬಳಸುವ ಭಾಷೆಯಲ್ಲಿ ವ್ಯಕ್ತವಾಗುತ್ತದೆ. ಹಾಗೆಯೇ ನಾವು ಬಳಸುವ ಭಾಷೆಯೂ ನಮ್ಮ ಮನೋಭಾವವನ್ನು ಪ್ರಭಾವಿಸುತ್ತದೆ. ನಮ್ಮನ್ನು ನಾವು ಪ್ರಜೆಗಳು ಎಂದು ನಂಬಿಕೊಂಡಷ್ಟೂ, ನಮ್ಮ ಮತಗಳಿಂದ ಅಧಿಕಾರವನ್ನು ಪಡೆದುಕೊಳ್ಳುವ ನಮ್ಮ ಶಾಸಕರು, ಸಂಸದರು ನಮ್ಮ ಪ್ರತಿನಿಧಿಗಳು ಎಂಬುದನ್ನು ಮರೆತು ದೊರೆಗಳ ರೀತಿಯಲ್ಲಿ ದರ್ಪವನ್ನು ಮೆರೆಯುತ್ತಾರೆ. ಪಂಚಾಯಿತಿ ಸದಸ್ಯನ ಎದುರೂ ನಾವು ಕೈಕಟ್ಟಿ ನಿಲ್ಲುತ್ತೇವೆ. ಇದು ಹಳೆಯ ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಯಲ್ಲದೆ ಇನ್ನೇನು?!

'ಭಾರತೀಯ ಜನತೆಯಾದ ನಾವು' ಸ್ವತಂತ್ರ ಜನಸತ್ತಾತ್ಮಕವಾದ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಅದಕ್ಕೆ ತಕ್ಕ ಜನಸತ್ತಾತ್ಮಕ ಅಂತಃಸತ್ವದಿಂದ ಕೂಡಿದ ಭಾಷೆಯನ್ನು ಮಾತಾಡಬೇಕು.

ವಾಚಕರ ವಾಣಿ

ಇಂಗ್ಲಿಷ್ ಯಾರಿಗೆ ಪೆಡಂಭೂತ?

ಮಾತೃಭಾಷೆ ಬದಲು ರಾಜ್ಯಭಾಷೆಯೆನ್ನಿ ಎಂದಿರುವ ಕಲಬುರಗಿ ಹೈಕೋರ್ಟ್ ಪೀಠದ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್‌ಕುಮಾರ್ ಅವರ ಅಭಿಪ್ರಾಯ ಸರಿಯಾಗಿದೆ. ಆದರೆ ಅವರು ಇಂಗ್ಲಿಷ್ ಅನ್ನು ಪೆಡಂಭೂತ ಎಂದಿರುವುದು ಮಾತ್ರ ಸರಿಯಲ್ಲ. ಆರ್ಥಿಕ ಪರಿಸ್ಥಿತಿ ಚೆನ್ನಾಗಿರುವ ಕೆಲವರು ಇಂಗ್ಲಿಷ್‌ನಲ್ಲಿಯೇ ಮಿಂದೆದ್ದು, ಒಂದೇ ಕುಟುಂಬದಲ್ಲಿ ಇಬ್ಬರು–ಮೂವರು ಐಎಎಸ್‌ನಂತಹ ಉನ್ನತ ಹುದ್ದೆಗಳನ್ನು ಪಡೆದುಕೊಂಡ ಉದಾಹರಣೆಗಳಿವೆ. ಇನ್ನು ಕೆಲವೆಡೆ ವೈದ್ಯಕೀಯ, ಎಂಜಿನಿಯರಿಂಗ್‌ನಂತಹ ವೃತ್ತಿಯಲ್ಲಿಯೇ ಕುಟುಂಬದ ಎಲ್ಲ ಸದಸ್ಯರು ಮುಂದುವರಿಯುತ್ತಿದ್ದಾರೆ. ಹೀಗಿರುವಾಗ, ಅಂತಹವರಿಗೆ ಇಂಗ್ಲಿಷ್ ಹೇಗೆ ಪೆಡಂಭೂತವಾಗುತ್ತದೆ? ಹಣ ಖರ್ಚು ಮಾಡಿ ಇಂಗ್ಲಿಷ್ ಕಲಿಯಲು ಆಗಲಾರದ ಬಡವರಿಗೆ ಮಾತ್ರ ಇಂಗ್ಲಿಷ್ ಪೆಡಂಭೂತವಾಗಬಹುದು. ಇದು ಸಮಾಜದ ಪಕ್ಷಪಾತ ವ್ಯವಸ್ಥೆಯೆಂದರೆ ತಪ್ಪಾಗಲಾರದು.

ಹನಮಂತಪ್ಪ ಬಿ. ದಾಸರ, ತರಲಕಟ್ಟಿ, ಕೊಪ್ಪಳ

ಹೀಗಿದೆ ಸ್ಥಿತಿ!

ಬಿಬಿಸಿಗೆ...
'ನಮ್ಮವರನ್ನೇ ಬಿಟ್ಟಿಲ್ಲ
ನಿಮ್ಮನ್ನ ಬಿಡ್ತೀವಾ?'
ನಮಗೆ...
'ಬಿಬಿಸಿಯನ್ನೇ ಬಿಟ್ಟಿಲ್ಲ
ನೀವ್ಯಾವ ಲೆಕ್ಕ?'

ಎ.ಆರ್. ಸೋಮಯಾಜಿ
ಬೆಂಗಳೂರು

ಬಯಲಾಟವು ಪ್ರಾತಿನಿಧಿಕ ಕಲೆಯಾಗಲಿ

ಬಯಲಾಟವು ಕನ್ನಡ ಜನಪದ ರಂಗಭೂಮಿ ಸಾಹಿತ್ಯದ ಒಂದು ಪ್ರಕಾರ. ಮೂಡಲಪಾಯದ ಈ ಕಲೆ ಉತ್ತರ ಮತ್ತು ಮಧ್ಯ ಕರ್ನಾಟಕ ಪ್ರದೇಶದಲ್ಲಿ ವ್ಯಾಪಕವಾಗಿದೆ. ಉಡುಪಿ ಭಾಗದಲ್ಲಿ ಹೆಚ್ಚಾಗಿರುವ ಯಕ್ಷಗಾನವು 'ಪ್ರಾತಿನಿಧಿಕ ಕಲೆಯಾಗಬೇಕು' ಎಂದು ಇತ್ತೀಚೆಗೆ ನಡೆದ ಸಮಗ್ರ ಯಕ್ಷಗಾನ ಸಮ್ಮೇಳನದಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ (ಪ್ರ.ವಾ., ಫೆ. 12). ಯಕ್ಷಗಾನವು ಜನಪದ ರಂಗಕಲೆಯ ಒಂದು ಭಾಗವಾಗಿರುವಂತೆ, ಬಹುವ್ಯಾಪಕವಾಗಿರುವ 'ಬಯಲಾಟ' ಕಲೆಯು ನಾಡಿನ ಪ್ರಾತಿನಿಧಿಕ ಕಲೆಯಾಗಲು ಯೋಗ್ಯವಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಬಯಲಾಟದ ಕಲೆಗೆ ತಾರತಮ್ಯ ತೋರದೆ ಹೆಚ್ಚಿನ ಪ್ರೋತ್ಸಾಹ ನೀಡಲಿ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

'ನೋಟಾ': ಆಯೋಗದ ನಿಸ್ಸಹಾಯಕತೆಯ ಅಭಿವ್ಯಕ್ತಿ!

'ಚುನಾವಣೆ: ಸಾತ್ವಿಕ ಮಾರ್ಗಕ್ಕೆ ಸೂತ್ರ' ಎಂಬ ಲೇಖನದಲ್ಲಿನ ಡಾ. ಜ್ಯೋತಿ ಅವರ ವಿಶ್ಲೇಷಣೆ (ಪ್ರ.ವಾ., ಫೆ. 15) ಕಳಕಳಿಯಿಂದ ಕೂಡಿದೆ. ಆದರೆ ಅಲ್ಲಿ ಪ್ರತಿಪಾದಿಸಿರುವಂತೆ, ಮತದಾನದಲ್ಲಿ 'ನನ್ ಆಫ್ ದ ಎಬೌವ್' (ನೋಟಾ) ಅವಕಾಶ, ಚುನಾವಣಾ ವ್ಯವಸ್ಥೆಯನ್ನು ಸುಧಾರಿಸುವ ಯಾವುದೇ ಸತ್ವವನ್ನೂ ಹೊಂದಿಲ್ಲ. ಲೇಖನದಲ್ಲಿ ಹೇಳಿರುವಂತೆ, ಇದು ಕೇವಲ ಸಾಂಕೇತಿಕ ಪ್ರತಿಭಟನೆಯೂ ಅಲ್ಲ. ನೋಟಾ ಒಂದರ್ಥದಲ್ಲಿ, ಚುನಾವಣಾ ಆಯೋಗದ ನಿಸ್ಸಹಾಯಕತೆಯ ಅಭಿವ್ಯಕ್ತಿ ಅಷ್ಟೆ!

ಇವರ್‍ಯಾರೂ ಬೇಡ ಎಂದು ಹೇಳುವ ಅವಕಾಶವನ್ನು ಪ್ರಾಮಾಣಿಕ ಮತದಾರರಿಗೆ ನೀಡುವುದನ್ನೇ ದೊಡ್ಡ ಔದಾರ್ಯ ಎಂದು ಭಾವಿಸಲಾಗದು. ಒಂದು ವೇಳೆ, ಅಂತಹ ಪರಿಣಾಮಕಾರಿ ಅಧಿಕಾರವು ಆಯೋಗಕ್ಕೆ ಇರುವುದೇ ಆದರೆ, ಅಯೋಗ್ಯ ಅಭ್ಯರ್ಥಿ ಚುನಾವಣೆಗೆ ನಿಲ್ಲದಂತೆಯೇ ತಡೆಯುವ ಅವಕಾಶವೂ ಏಕಿಲ್ಲ? ಚುನಾವಣಾ ವ್ಯವಸ್ಥೆಯನ್ನು ಮೂರ್ಖತನಮುಕ್ತಗೊಳಿಸುವ ನೈತಿಕ ಸಾಮರ್ಥ್ಯ ನಮ್ಮ ರಾಜಕೀಯ ವ್ಯವಸ್ಥೆಗೂ, ಅದು ನಿರ್ಮಿಸುವ ಸರ್ಕಾರಕ್ಕೂ ಇಲ್ಲವೆಂಬುದು ಸರಳ ಸತ್ಯ! ಆದರೂ ಇರುವ ಕಾಯ್ದೆ ಮತ್ತು ವ್ಯಾವಸ್ಥಿಕ ಚೌಕಟ್ಟಿನಲ್ಲೇ ಸುಧಾರಣೆಯ ಸಾಧ್ಯತೆಯನ್ನು ಕಂಡಿರಿಸುವ ಪ್ರಯತ್ನವನ್ನಾದರೂ ಮಾಡಬಹುದು. ನೌಕರಶಾಹಿಯು ಚುನಾವಣೆ ಸಂದರ್ಭದಲ್ಲಿ ಆಯೋಗವನ್ನು ಪ್ರತಿನಿಧಿಸುತ್ತದೆ. ತಮ್ಮ ಪಕ್ಷ ಪ್ರಣಾಳಿಕೆ, ವೈಯಕ್ತಿಕ ಆಶ್ವಾಸನೆಗಳು, ಆಯವ್ಯಯ, ತೆರಿಗೆ ಸಂದಾಯದಂತಹವುಗಳನ್ನು ಅಭ್ಯರ್ಥಿಯು ಸಕ್ಷಮ ಅಧಿಕಾರಿಯ ಸಮಕ್ಷಮದಲ್ಲಿ ಪ್ರತಿಜ್ಞಾಬದ್ಧವಾಗಿ ದಾಖಲಿಸಿ ಸಹಿ ಹಾಕಿಕೊಟ್ಟಿರುತ್ತಾರೆ. ಗೆದ್ದು ಹೋದಮೇಲೆ, ಆ ದಾಖಲಾತಿಗೆ ಕಸದಬುಟ್ಟಿಯ ಕಿಮ್ಮತ್ತೂ ಇಲ್ಲದಿದ್ದರೆ, ಆ ಜವಾಬ್ದಾರಿಯುತ ಅಧಿಕಾರಿಯ 'ಸಕ್ಷಮತೆ'ಯ ಅರ್ಥವಾದರೂ ಏನು? ಗೆದ್ದ ಅಭ್ಯರ್ಥಿ ಈ ಮೂಲ ಪ್ರತಿಜ್ಞೆಗಳನ್ನು ಉಲ್ಲಂಘಿಸಿದರೆ, ಗೆಲುವಿನ ದೃಢೀಕರಣ ಪತ್ರವನ್ನು ಹಿಂಪಡೆಯುವ ಅಧಿಕಾರವು ಸಂಬಂಧಿತ ಚುನಾವಣಾ ಅಧಿಕಾರಿಗೆ (ಆರ್‌ಒ) ಯಾವತ್ತಿಗೂ ಇರುವಂತೆ ಆಗಬೇಕು. ಬಹುಶಃ ಈ ಸಾಮಾನ್ಯಜ್ಞಾನಕ್ಕೆ ಕಾಯ್ದೆಯ ದೊಡ್ಡ ತಿದ್ದುಪಡಿಯೂ ಬೇಕಾಗಲಾರದೇನೊ?!

ಆರ್.ಕೆ.ದಿವಾಕರ, ಬೆಂಗಳೂರು

'ಸೀಮಿತ'ರಿಗೆ ರಾಜಕೀಯ ಪ್ರಜ್ಞೆಯ ಸಲಹೆ


ರಾಜ್ಯದ ಮುಂಚೂಣಿ ಸಮಾಜಮುಖಿ ರಾಜಕೀಯ ಪಕ್ಷಗಳಿಗೆ ಆರ್‌ಎಸ್‌ಎಸ್ ಶೈಲಿಯ ಸಾಂಸ್ಥಿಕ ರಚನೆಯ ತಳಪಾಯ ಹಾಗೂ ರಾಜಕೀಯ ಪ್ರಜ್ಞೆಯ ಅಗತ್ಯವನ್ನು ದೇವನೂರ ಮಹಾದೇವ ಅವರು ಪ್ರತಿಪಾದಿಸಿದ್ದಾರೆ (ಪ್ರ.ವಾ., ಫೆ. 15). ಸಾಂಸ್ಥಿಕ ರಚನೆ ಈಗಲೂ ಕಮ್ಯುನಿಸ್ಟ್ ಪಕ್ಷಗಳಲ್ಲಿ ಇದೆ. ಆದರೆ ಜನರ ಜತೆಗಿನ ಸಂಪರ್ಕವು ಕೆಲವೇ ಸ್ಥಳಗಳಲ್ಲಿ ಟ್ರೇಡ್ ಯೂನಿಯನ್ ಮಾದರಿಯ ಚಟುವಟಿಕೆಗಳ ಮೂಲಕ ಮಾತ್ರ ಇದೆ. 'ಡೈನಮಿಕ್ ಆಗದೆ ಭವಿಷ್ಯವಿಲ್ಲ' ಎಂದು ಸಿಪಿಎಂ ನಾಯಕ ಸೀತಾರಾಂ ಯಚೂರಿ ಅವರು ಹೇಳಿ ದೀರ್ಘಕಾಲ ಆಗಿದೆ.

ವರದಿಯಲ್ಲಿ ಪ್ರಸ್ತಾಪಿಸಲ್ಪಟ್ಟ ಅಧ್ಯಯನವನ್ನು ಕೈಗೊಂಡವರು ಅಕಡೆಮಿಕ್ ಬುದ್ಧಿಜೀವಿಗಳು. ಕಮಿಟೆಡ್ ಅಲ್ಲದವರು ನಿಗೂಢ ಮತದಾರರು ಎನ್ನುವುದು ಒಂದು ಸರಳೀಕರಣ. ನೂರನಲವತ್ತು ಕೋಟಿ ಜನರ ರಕ್ಷಾಕವಚ ಇದೆ ಎಂದು ಹೇಳಿಕೊಳ್ಳುವವರಿಗೂ ಗೊತ್ತಿದೆ ಅದು ಉತ್ಪ್ರೇಕ್ಷೆ ಎಂದು. ಹೊಸ ಪಕ್ಷಗಳ ಬಗೆಗಿನ ಒಲವು ಕಾಣಿಸಿರುವುದು ಅಪರೂಪಕ್ಕೆ. ಆರ್‌ಎಸ್‌ಎಸ್‌ನ ಯಶಸ್ಸಿಗೆ ಬಿಜೆಪಿಯ ಗೆಲುವೊಂದೇ ಕಾರಣವಲ್ಲ. ದಶಕಗಳ ಕಾಲ ಅದರಲ್ಲಿರುವ ಕಾರ್ಯಕರ್ತರು ಧನ ಅಲ್ಲದಿದ್ದರೂ ತನು, ಮನ ನೀಡಿದ್ದಾರೆ. ಈಚಿನ ವರ್ಷಗಳಲ್ಲಿ ಅದರಲ್ಲಿ ಮರುಚಿಂತನೆ, ಕೆಲವು ಸಮುದಾಯಗಳನ್ನು ಸೇರ್ಪಡಿಸಿಕೊಳ್ಳುವ, ಒಟ್ಟುಗೂಡಿಸುವ ಪ್ರಯತ್ನಗಳು ನಡೆದಿರುವುದೂ ಗಮನಾರ್ಹ. 'ಸೆಕ್ಯುಲರ್' ಸರ್ಕಾರಗಳಿದ್ದಾಗ ಕೆಲವು ಪದವಿಗಳನ್ನು ಪಡೆದು 'ಬದಲಾವಣೆಗಳನ್ನು ತಂದೆವು' ಎಂದು ಹೇಳಿಕೊಂಡವರು ಈಗ ಡಯಾಗ್ನೊಸಿಸ್ ಮಾಡುತ್ತಿದ್ದಾರೆ- ಸ್ವಂತ ಉಳಿವಿನ ಪ್ರಶ್ನೆ ಇರಬಹುದು! ಕೆಲವು ಆನ್‌ಲೈನ್ ಸರ್ವೆಗಳಂತೆ ಇದೂ ನೈಜ ಮತದಾರರ ನಾಡಿಮಿಡಿತ ಹಿಡಿದಿಟ್ಟಿರಲಾರದು. ದೇವನೂರ ಅವರು ಏನು ಹೇಳಿದರೂ ಸುದ್ದಿಯಾಗುತ್ತದೆ, ಹಾಗೆಂದು ಅವರು ಮಧು ದಂಡವತೆಯವರ ನೆನಪಿನಲ್ಲಿ 'ಸೀಮಿತ' ವ್ಯಕ್ತಿಗಳಿಗೆ ರಾಜಕೀಯ ಪ್ರಜ್ಞೆಯ ಸಲಹೆ ನೀಡಿರುವುದು ವ್ಯರ್ಥ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯದಲ್ಲಿ ನಲ್ಲಿ ನೀರಿನ ಸಂಪರ್ಕ ಸ್ಥಿತಿಗತಿ





ಶುದ್ಧ ಕುಡಿಯುವ ನೀರು ಎಲ್ಲರಿಗೂ ಸಿಗುತ್ತಿಲ್ಲ

ರಾಜ್ಯದ ಯಾದಗಿರಿ ಜಿಲ್ಲೆಯ ಅನಪುರ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಇಬ್ಬರು ಮಹಿಳೆಯರು ಸಾವನ್ನಪ್ಪಿದ್ದಾರೆ. ಎಂಟು ತಿಂಗಳ ಅವಧಿಯಲ್ಲಿ ಹೀಗೆ ಕಲುಷಿತ ನೀರು ಕುಡಿದು ಮೃತಪಟ್ಟವರ ಸಂಖ್ಯೆ ಹತ್ತು. ದೇಶದ ಪ್ರತಿ ಮನೆಗೂ ನಲ್ಲಿ ನೀರಿನ ಮೂಲಕ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕೇಂದ್ರ ಸರ್ಕಾರವು 'ರಾಷ್ಟ್ರೀಯ ಜಲಜೀವನ್ ಮಿಷನ್' ಅನ್ನು ಆರಂಭಿಸಿದೆ. ಕರ್ನಾಟಕದಲ್ಲಿ 'ಮನೆಮನೆಗೆ ಗಂಗೆ' ಹೆಸರಿನಲ್ಲಿ ಈ ಕಾರ್ಯಕ್ರಮ ಜಾರಿಯಲ್ಲಿದೆ. ಈ ಕಾರ್ಯಕ್ರಮ ಜಾರಿಯಾದಾಗಿನಿಂದ ಈವರೆಗೆ 38 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಹೊಸದಾಗಿ ನಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ. ಆದರೆ, ಇನ್ನೂ 38 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ದೊರೆಯಬೇಕಿದೆ. ಕಲುಷಿತ ನೀರು ಕುಡಿದು ಜನರು ಪದೇ ಪದೇ ಸಾವನ್ನಪ್ಪುತ್ತಿರುವ ಘಟನೆಗಳು, ಎಲ್ಲರಿಗೂ ಶುದ್ಧ ಕುಡಿಯುವ ನೀರು ದೊರೆಯುತ್ತಿಲ್ಲ ಎಂಬುದರತ್ತ ಬೊಟ್ಟು ಮಾಡುತ್ತಿವೆ.

ಪ್ರಜಾವಾಣಿ ವಾರ್ತೆ

ರಾಜ್ಯದ ಎಲ್ಲಾ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಒದಗಿಸುವ 'ಮನೆಮನೆಗೆ ಗಂಗೆ' ಕಾರ್ಯಕ್ರಮವನ್ನು 2019ರಲ್ಲಿ ಆರಂಭಿಸಲಾಗಿತ್ತು. ಕಾರ್ಯಕ್ರಮವನ್ನು ಆರಂಭಿಸಿದಾಗ ರಾಜ್ಯದಲ್ಲಿ ಒಟ್ಟು 1.01 ಕೋಟಿ ಮನೆಗಳಿದ್ದವು. ಅವುಗಳಲ್ಲಿ ನಲ್ಲಿ ನೀರಿನ ಸಂಪರ್ಕ ಇದ್ದ ಮನೆಗಳ ಸಂಖ್ಯೆ 24.51 ಲಕ್ಷದಷ್ಟಿತ್ತು. 2024ರ ಆಗಸ್ಟ್ ವೇಳೆಗೆ ಎಲ್ಲಾ ಮನೆಗಳಿಗೂ ನಲ್ಲಿ ನೀರಿನ ಸಂಪರ್ಕ ಒದಗಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಕಾರ್ಯಕ್ರಮ ಆರಂಭವಾದಾಗಿನಿಂದ 38 ಲಕ್ಷಕ್ಕೂ ಹೆಚ್ಚು ಮನೆಗಳಿಗೆ ಹೊಸದಾಗಿ ನಲ್ಲಿ ನೀರಿನ ಸಂಪರ್ಕ ಒದಗಿಸಲಾಗಿದೆ. ಒಟ್ಟಾರೆ ಶೇ 62.2ರಷ್ಟು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ದೊರೆತಿದೆ. ಆದರೆ, ಶೇ 37.8ರಷ್ಟು ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಇನ್ನಷ್ಟೇ ದೊರೆಯಬೇಕಿದೆ.

ಪ್ರತಿ ಮನೆಗೂ ಶುದ್ಧ ಕುಡಿಯುವ ನೀರನ್ನು ಪೂರೈಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳಲ್ಲಿ ಒಂದು. ಆದರೆ, ಕಾರ್ಯಕ್ರಮ ಆರಂಭವಾದ ನಂತರವೂ ಕಲುಷಿತ ನೀರು ಕುಡಿದು ಜನರು ಮೃತಪಟ್ಟ ಹಲವು ಘಟನೆಗಳು ರಾಜ್ಯದಲ್ಲಿ ವರದಿಯಾಗಿವೆ. ಕೆಲವು ಪ್ರಕರಣ-ಗಳಲ್ಲಿ ನಲ್ಲಿಯಲ್ಲೇ ಕಲುಷಿತ ನೀರು ಬಂದ ನಿದರ್ಶನಗಳಿವೆ. ಮನೆಮನೆಗೆ ಸಂಪರ್ಕ ನೀಡುವ ನಲ್ಲಿ, ಟ್ಯಾಂಕ್‌ಗಳಿಗೆ ಪೂರೈಕೆಯಾಗುವ ನೀರಿನ ಕೊಳವೆಗಳು ಒಡೆದು, ಕೊಳಚೆ ನೀರು ಪೂರೈಕೆಯಾಗಿದ ಉದಾಹರಣೆಯಿದೆ. ಕುಡಿಯುವ ನೀರಿನ ಕೊಳವೆಗಳು, ಕೊಳಚೆ ನೀರಿನ ಕೊಳವೆಗಳ ಸಮೀಪ ಮತ್ತು ಚರಂಡಿಗಳ ಸಮೀಪ ಇರುವುದೇ ನೀರು ಕಲುಷಿತವಾಗಲು ಕಾರಣ ಎಂದು ಜಿಲ್ಲಾಡಳಿತಗಳು ತಮ್ಮ ತನಿಖಾ ವರದಿಗಳಲ್ಲಿ ಹೇಳಿವೆ.

ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಆರ್‌ಒ ಶುದ್ಧೀಕರಣ ಘಟಕಗಳನ್ನೂ ಸ್ಥಾಪಿಸಲಾಗುತ್ತಿದೆ. ಇವು ಬಹುಪಾಲು ಮಾಲಿನ್ಯಕಾರಕ ಕಣ/ಅಂಶಗಳನ್ನು ನೀರಿನಿಂದ ಬೇರ್ಪಡಿಸುತ್ತವೆ. ಆದರೆ ಕೆಲವು ಆಮ್ಲಕಾರಕ ಅಂಶಗಳನ್ನು ಬೇರ್ಪಡಿಸುವುದಿಲ್ಲ. ಇಂತಹ ಶುದ್ಧೀಕರಣ ಘಟಕಗಳೂ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಇಲ್ಲ. ಇನ್ನೂ ಮೂರನೇ ಒಂದರಷ್ಟು ಗ್ರಾಮಗಳಲ್ಲಿ ಇನ್ನಷ್ಟೇ ಇಂತಹ ಘಟಕಗಳನ್ನು ಸ್ಥಾಪಿಸಬೇಕಿದೆ.

ರಾಷ್ಟ್ರೀಯ ಜಲಜೀವನ ಮಿಷನ್‌ನ ಕ್ರಿಯಾಯೋಜನೆ ಪ್ರಕಾರ ರಾಜ್ಯದಲ್ಲಿ ಒಟ್ಟು 28,333 ಗ್ರಾಮಗಳು ಇವೆ. ಇವುಗಳಲ್ಲಿ ಎಲ್ಲಾ ಮನೆಗಳಿಗೂ ನಲ್ಲಿ ನೀರಿನ ಸಂಪರ್ಕ ಪಡೆದ ಗ್ರಾಮಗಳ ಸಂಖ್ಯೆ 4,410. ಆದರೆ, ಕೇಂದ್ರ ಸರ್ಕಾರವು ಈ ಎಲ್ಲಾ ಗ್ರಾಮಗಳಿಗೆ ಶೇ 100ರಷ್ಟು ನಲ್ಲಿ ನೀರಿನ ಸಂಪರ್ಕ ಪಡೆದ ಗ್ರಾಮಗಳ ಮಾನ್ಯತೆ ನೀಡಿಲ್ಲ. ಇಂತಹ ಮಾನ್ಯತೆ ಪಡೆದಿರುವ ಗ್ರಾಮಗಳ ಸಂಖ್ಯೆ 1,117 ಮಾತ್ರ.

ಎಂಟು ತಿಂಗಳು, ಸಾವು ಹತ್ತು


ಕಲುಷಿತ ನೀರು ಪೂರೈಕೆಯು ರಾಜ್ಯದ ಗ್ರಾಮೀಣ ಭಾಗದಲ್ಲಿ ಗಂಭೀರ ಸಮಸ್ಯೆಯಾಗಿದ್ದು, ವಾಂತಿ–ಭೇದಿ ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿವೆ. ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲೇ ಬಹುತೇಕ ಪ್ರಕರಣಗಳು ವರದಿಯಾಗಿವೆ. ಕಳೆದ ಎರಡು ವರ್ಷಗಳಿಂದ, ಕಲಬುರಗಿ ಜಿಲ್ಲೆಯ 41 ಗ್ರಾಮಗಳಲ್ಲಿ 883 ಜನರು ವಾಂತಿ–ಭೇದಿಯಿಂದ ಅಸ್ವಸ್ಥರಾಗಿದ್ದರು. ಈ ಪ್ರಕರಣಗಳು ಶುದ್ಧ ಕುಡಿಯುವ ನೀರಿನ ಲಭ್ಯತೆ ಇಲ್ಲದಿರುವುದನ್ನು ಸೂಚಿಸುತ್ತದೆ

- 2023ರ ಜನವರಿ 11ರಂದು, ಹೊಸಪೇಟೆಯ ರಾಣಿಪೇಟೆಯಲ್ಲಿ ಕಲುಷಿತ ನೀರು ಸೇವನೆಗೆ ಲಕ್ಷ್ಮಿದೇವಿ ಎಂಬುವರು ಬಲಿಯಾಗಿದ್ದರು. ಸುಮಾರು 200 ಜನರು ಅಸ್ವಸ್ಥಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು
- 2022ರ ನವೆಂಬರ್‌ನಲ್ಲಿ ಶಿವಮೊಗ್ಗದ ಶಾರದಾ ನಗರದಲ್ಲಿ ರಸ್ತೆ ದುರಸ್ತಿ ಮಾಡುವಾಗ ಜಲಮಂಡಳಿಯ ಪೈಪ್ ಒಡೆದಿತ್ತು. ಕಾರ್ಖಾನೆಯಲ್ಲಿ ಕಲುಷಿತ ನೀರು ಸೇವಿಸಿದ್ದ ಒಡಿಶಾದ ಕೂಲಿ ಕಾರ್ಮಿಕ ಮೃತಪಟ್ಟಿದ್ದ ಘಟನೆ ವರದಿಯಾಗಿತ್ತು
- 2022ರ ನವೆಂಬರ್‌ನಲ್ಲಿ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಮುದೇನೂರ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಮೂವರು ಮೃತಪಟ್ಟು, 186 ಮಂದಿ ಅಸ್ವಸ್ಥರಾಗಿದ್ದರು
- 2022ರ ಸೆಪ್ಟೆಂಬರ್‌ನಲ್ಲಿ, ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮಂದೇವಾಲ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಅಸ್ವಸ್ಥಗೊಂಡಿದ್ದ 80 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಜಿಲ್ಲೆಯ ಗೊಬ್ಬರವಾಡಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಅಸ್ವಸ್ಥ-ಗೊಂಡಿದ್ದ ಸಾಯಿಬಣ್ಣ ಭಜಂತ್ರಿ ಮೃತಪಟ್ಟಿ-ದ್ದರು. 15 ಮಂದಿ ವಾಂತಿ–ಭೇದಿಯಿಂದ ನರಳಿದ್ದರು



2022ರ ನವೆಂಬರ್‌ನಲ್ಲಿ, ರಾಮದುರ್ಗ ತಾಲ್ಲೂಕು ಮುದೇನೂರು ಗ್ರಾಮಸ್ಥರು ವಾಂತಿ–ಭೇದಿಯಿಂದಾಗಿ ತಾಲ್ಲೂಕು ಆಸ್ಪತ್ರೆಗೆ ದಾಖಲಾಗಿದ್ದರು

- 2022ರ ಆಗಸ್ಟ್‌ನಲ್ಲಿ ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಕ್ಯಾಸನಕೆರೆ ಗ್ರಾಮದಲ್ಲಿ 6 ಜನ ಆಸ್ಪತ್ರೆಗೆ ದಾಖಲಾಗಿದ್ದರು. ಎರಡು ದಿನಗಳ ಹಿಂದೆ ಗ್ರಾಮದ ಬಾಲಕಿ ಮೃತಪ-ಟ್ಟಿದ್ದಳು. ಸಾವಿಗೆ ಕಲುಷಿತ ನೀರು ಸೇವನೆ ಕಾರಣ ಎಂದು ಶಂಕಿಸಲಾಗಿತ್ತು
- 2022ರ ಜುಲೈನಲ್ಲಿ ಕಂಪ್ಲಿ ತಾಲ್ಲೂಕು ಗೋನಾಳು ಗ್ರಾಮದಲ್ಲಿ ಕಲುಷಿತ ನೀರು ಕುಡಿದಿದ್ದ ಬಾಲಕಿ ಮೃತಪಟ್ಟಿದ್ದಳು. 20 ಮಂದಿ ಅಸ್ವಸ್ಥರಾಗಿದ್ದರು
- 2022ರ ಜುಲೈನಲ್ಲಿ, ಜಗಳೂರು ತಾಲ್ಲೂಕಿನ ಕಾನನಕಟ್ಟೆ ಗ್ರಾಮದ ಯುವಕ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದ. 15 ದಿನಗಳ ಹಿಂದೆ ಕಲುಷಿತ ನೀರು ಸೇವಿಸಿ ಈತ ಅಸ್ವಸ್ಥಗೊಂಡಿದ್ದ
- **ನೂರಾರು ಜನ ಅಸ್ವಸ್ಥ:** ಯಾದಗಿರಿ, ಕಲಬುರಗಿ, ಬಳ್ಳಾರಿ, ರಾಯಚೂರು, ವಿಜಯನಗರ, ಚಾಮರಾಜನಗರ, ಚಿತ್ರದುರ್ಗ, ಕೊಪ್ಪಳ, ಬೆಳಗಾವಿ ಜಿಲ್ಲೆಗಳಲ್ಲಿ 2022ರ ಜುಲೈನಿಂದ ಇಲ್ಲಿಯವರೆಗೆ 236 ಜನರು ವಾಂತಿ–ಭೇದಿಯಿಂದ ಅಸ್ವಸ್ಥ-ಗೊಂಡಿದ್ದಾರೆ ಎಂದು ವರದಿಯಾಗಿವೆ. ವರದಿಯಾಗದ ಪ್ರಕರಣಗಳು ಇನ್ನೂ ಹೆಚ್ಚಿವೆ. 2022ರ ಆಗಸ್ಟ್‌ನಲ್ಲಿ, ಬಳ್ಳಾರಿ ಜಿಲ್ಲೆಯ ಅಂಕಮನಾಳ್ ಗ್ರಾಮದಲ್ಲಿ 84 ಜನ ಅಸ್ವಸ್ಥರಾಗಿ ಆಸ್ಪತ್ರೆಗೆ ಸೇರಿದ್ದರು



ಆಧಾರ: ರಾಷ್ಟ್ರೀಯ ಜಲಜೀವನ್ ಮಿಷನ್, ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಪ್ರಜಾವಾಣಿ ವರದಿಗಳು



ನೀರು ಕಲುಷಿತವಾಗುವುದೇಕೆ?

ಕರ್ನಾಟಕದಲ್ಲಿ ಕಲುಷಿತ ನೀರು ಕುಡಿದು ಜನರು ಮೃತಪಟ್ಟ ಮತ್ತು ಅಸ್ವಸ್ಥರಾದ ಬಹುತೇಕ ಪ್ರಕರಣಗಳಲ್ಲಿ, ಕುಡಿಯುವ ನೀರಿನೊಂದಿಗೆ ಕೊಳಚೆ ನೀರು ಬೆರೆತದ್ದೇ ಅವಘಡಕ್ಕೆ ಕಾರಣ ಎನ್ನಲಾಗಿದೆ. ಕುಡಿಯುವ ನೀರಿನ ಕೊಳವೆಗಳನ್ನು ಕೊಳಚೆ ನೀರಿನ ಕೊಳವೆಗಳ ಪಕ್ಕದಲ್ಲೇ ಹಾಕುವುದು ಮತ್ತು ಚರಂಡಿಗಳಲ್ಲಿ ಹಾಕುವುದು ರೂಢಿಯಲ್ಲಿದೆ. ಎರಡೂ ಕೊಳವೆಗಳಲ್ಲಿ ಸೋರಿಕೆ ಇದ್ದರಷ್ಟೇ ಕುಡಿಯುವ ನೀರು ಕಲು-ಷಿತವಾಗುತ್ತದೆ. ರಾಜ್ಯದ ಹಲವೆಡೆ ಇಂತಹ ಸ್ಥಿತಿ ಇದೆ ಎಂದು ಬೆಂಗಳೂರಿನ, ಭಾರತೀಯ ವಿಜ್ಞಾನ ಸಂಸ್ಥೆಯ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕೊಳಚೆ ನೀರು ಕುಡಿಯುವ ನೀರಿನೊಂದಿಗೆ ಸೇರುವ ಕಾರಣ, ಕುಡಿಯುವ ನೀರಿನಲ್ಲಿ ಅಪಾಯಕಾರಿ ಸೂಕ್ಷ್ಮಾಣು ಜೀವಿಗಳು ಬೆರೆಯುತ್ತವೆ. ಅಂತಹ ನೀರನ್ನು ಸೇವಿಸಿದಾಗ, ಆರೋಗ್ಯದಲ್ಲಿ ಸಮಸ್ಯೆ ಉಂಟಾಗುತ್ತದೆ. ಹೀಗೆ ಕೊಳಚೆ ನೀರು ಕುಡಿಯುವ ನೀರಿನೊಂದಿಗೆ ಬೆರೆತಾಗ, ಅದರಲ್ಲಿ ಇರುವ ಅಪಾಯಕಾರಿ ಸೂಕ್ಷ್ಮಾಣು ಜೀವಿಗಳಲ್ಲಿ ಇ–ಕೊಲಿ ಬ್ಯಾಕ್ಟೀರಿಯಾವೇ ಪ್ರಧಾನ. ಕುಡಿಯುವ ನೀರಿನಲ್ಲಿ ಮನುಷ್ಯ ಮತ್ತು ಪ್ರಾಣಿಗಳ ಮಲವು ನೀರಿನಲ್ಲಿ ಬೆರೆತಿರುವುದನ್ನು, ಈ ಬ್ಯಾಕ್ಟೀರಿಯಾದ ಇರುವಿಕೆ ಸೂಚಿಸುತ್ತದೆ. ನೀರಿನಲ್ಲಿ ಇವುಗಳ ಪ್ರಮಾಣ ಕಡಿಮೆ ಇದ್ದರೆ, ಹೆಚ್ಚು ತೊಂದರೆಯಾಗುವುದಿಲ್ಲ. ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಇದ್ದರೆ, ವಾಂತಿ–ಭೇದಿಯಂತಹ ಸಮಸ್ಯೆ ಉಂಟಾಗುತ್ತದೆ. ಪ್ರಾಣಾಪಾಯದ ಸಾಧ್ಯತೆಯೂ ಇದೆ.

ಕುಡಿಯಲು ಯೋಗ್ಯವಾದ ನೀರಿನ ಗುಣಮಟ್ಟವನ್ನು ಭಾರತೀಯ ಮಾನಕ ಬ್ಯೂರೊ (ಐಎಸ್‌ಐ) ನಿಗದಿಪಡಿಸಿದೆ. 100 ಮಿಲಿಲೀಟರ್ ನೀರನ್ನು ಪರಿಶೀಲಿಸಿದಾಗ, ಅದರಲ್ಲಿ ಇ–ಕೊಲಿ ಬ್ಯಾಕ್ಟೀರಿಯಾ ಪತ್ತೆಯಾಗಲೇಬಾರದು. ಪತ್ತೆಯಾದ ನೀರು ಕುಡಿಯಲು ಯೋಗ್ಯವಲ್ಲ ಎಂದು ಐಎಸ್‌ಐ ಹೇಳುತ್ತದೆ. ಇನ್ನು 6.5ರಿಂದ 8.5ರಷ್ಟು ಆಮ್ಲೀಯ (ಪಿಎಚ್) ಇರುವ ನೀರು ಮಾತ್ರ ಕುಡಿಯಲು ಯೋಗ್ಯ ಎಂದು ಐಎಸ್‌ಐ ಹೇಳುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಹಟವಿಲ್ಲದ ಸಮಸ್ಥಿತಿ

ಎಣಿಕೆಯೊಳಿತಾದೊಡೆಂಯುಮೊಳಿತನಾಗಿಸದು ಹಟ |
ಮಣಿಕನಕ ಸಂಕೋಲೆ ತನುವ ಬಂಧಿಸದೇ ? ||
ತನಯನಿರಿದಸಿ ನಿನ್ನ ಮೈಯ ಹುಣ್ಣಾಗಿಸದೆ ? |
ಮನ ಸರ್ವಸಮವಿರಲಿ - ಮಂಕುತಿಮ್ಮ || 825 ||

ಪದ-ಅರ್ಥ: ಎಣಿಕೆಯೊಳಿತಾದೊಡೆಯುಮೊಳಿತ-ನಾಗಿಸದು = ಎಣಿಕೆಯೊಳು(ಯೋಜನೆಯಲ್ಲಿ, ಚಿಂ-ತನೆಯಲ್ಲಿ) + ಒಳಿತು + ಆದೊಡೆಯುಂ(ಆದರೂ), ಒಳಿತನು + ಆಗಿಸದು, ಸಂಕೋಲೆ = ಬೇಡಿ, ಬಂಧಿಸದೇ = ಬಂಧಿಸಲಾರದೆ, ತನಯನಿರಿದಸಿ = -ತನಯನು (ಮಗನು) + ಇರಿದ + ಅಸಿ(ಖಡ್ಗ).

ವಾಚ್ಯಾರ್ಥ: ನಿಮ್ಮ ಆಲೋಚನೆ, ಉದ್ದೇಶ ಒಳ್ಳೆ-ಯದಾಗಿದ್ದರೂ ಹಟದಿಂದಾಗಿ ಕೊನೆಯಲ್ಲಿ ಅದು ಒಳ್ಳೆಯದನ್ನು ಮಾಡದು. ಬೇಡಿ ಚಿನ್ನ ಮಾಣಿಕ್ಯಗಳಿಂದಾಗಿದ್ದರೂ ಅದು ದೇಹವನ್ನು ಬಂಧಿಸದೆ? ಸ್ವತಃ ಮಗನೇ ಕತ್ತಿಯಿಂದ ಇರಿದ್ದಾದರೂ ಅದು ದೇಹಕ್ಕೆ ಗಾಯ ಮಾಡದಿರುತ್ತದೆಯೆ? ಅದಕ್ಕೆ ಹಟವಿಲ್ಲದೆ ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಬೇಕು.

ವಿವರಣೆ: ಕಗ್ಗ ಇಲ್ಲಿ ಎರಡು ಸುಂದರ ಉದಾಹ-ರಣೆಗಳನ್ನು ನೀಡಿ ಹಟ ಎಂದಿಗೂ ಒಳ್ಳೆಯದನ್ನು ಮಾಡುವುದಿಲ್ಲ ಎಂದು ಉಪದೇಶಿಸುತ್ತದೆ. ಮೊದಲನೆಯದು ಬೇಡಿ. ಅದರ ಕರ್ತವ್ಯವೇ ಅಪರಾಧಿಗಳನ್ನು ಬಂಧಿಸುವುದು. ಅಪರಾಧಿ ಬಹಳ ಪ್ರಖ್ಯಾತನಾದವನು, ಪ್ರಭಾವಶಾಲಿಯಾದ-ವನು, ಅಂಥವನನ್ನು ಕಬ್ಬಿಣದ ಬೇಡಿಯಲ್ಲಿ ಏಕೆ ಕಟ್ಟುವುದು ಎಂದು ಬಂಗಾರದ, ಮಣಿ ಖಚಿತವಾದ ಬೇಡಿಯನ್ನು ನಿರ್ಮಿಸಿದರೂ ಅದು ಮಾಡುವ ಕೆಲಸವೂ ಬಂಧನದ್ದೇ. ಬೇಡಿ ಬೇಡಿಯೇ, ಯಾವ ಲೋಹದ್ದಾದರೇನು? ಚಿನ್ನದ್ದೆಂದು ದೇಹಕ್ಕೆ ಹಿತ ನೀಡುತ್ತದೆಯೆ?

ನಿಮ್ಮ ಪ್ರೀತಿಯ ಮಗ ಅರಿತೋ, ಅರಿಯದೆಯೋ ಒಂದು ಹರಿತವಾದ ಕತ್ತಿಯಿಂದ ನಿಮಗೆ ಇರಿದರೆ, ಪಾಪ! ನಮ್ಮ ಮಗ ಮಾಡಿದ ಕೆಲಸ, ಎಂದು ದೇಹಕ್ಕೆ ಗಾಯವಾಗದೆ ಬಿಡುತ್ತದೆಯೆ? ಕತ್ತಿ ತನ್ನ ಕೆಲಸವನ್ನು ಮಾಡಿಯೇ ತೀರುತ್ತದೆ, ಅದನ್ನು ಹಿಡಿದ ಕೈ ಯಾವುದಾಗಿದ್ದರೂ ಸಹಿತ. ಈ ಉದಾಹರಣೆಗಳನ್ನು ಕಗ್ಗ ಯಾಕೆ ಕೊಡುತ್ತದೆ? ಅದಕ್ಕೊಂದು ಉದ್ದೇಶವಿದೆ. ನೀವು ಯಾವುದೋ ಕಾರ್ಯವನ್ನು ಮಾಡಲು ತೀರ್ಮಾ-ನಿಸಿದ್ದೀರಿ ಎಂದು ಇಟ್ಟುಕೊಳ್ಳಿ. ಅದನ್ನು ಮಾಡುವ ಮುನ್ನ ಪೂರ್ವಾಪರ ವಿಚಾರ ಮಾಡಿದ್ದೀರಾ? ಸಾಧಕ- ಬಾಧಕಗಳನ್ನು ತಿಳಿದಿದ್ದೀರಾ? ಅಥವಾ ಯಾರೇನು ಹೇಳಿದರೂ ನಾನು ಹೀಗೆಯೇ ಮಾಡುತ್ತೇನೆ ಎಂಬ ಹಟದಿಂದ ಮಾಡುತ್ತೀರಾ? ಆಳವಾದ, ಸಮನ್ವಯದ ಮನದಿಂದ ತೀರ್ಮಾನ ಕೈಗೊಂಡರೆ ಕೆಲಸ ಸುಲಭ ಸಾಧ್ಯವಾಗುತ್ತದೆ. ಉದ್ದೇಶ ಒಳ್ಳೆಯದೇ ಆಗಿದ್ದರೂ ಹಟದಿಂದ ಮಾಡಿದ ಕೆಲಸ ಕೊನೆಗೆ ಒಳಿತನ್ನು ಮಾಡುವುದಿಲ್ಲ ಹಟದಿಂದ ತಪಸ್ಸು ಮಾಡಿದ ಹಿರಣ್ಯಕಶಿಪು ಏನಾದ? ಶಿಶುಪಾಲ, ಕಂಸ, ದುರ್ಯೋಧನರೆ-ಲ್ಲ ಏನು ಪಾಡುಪಟ್ಟರು ತಿಳಿಯದೆ? ಆದ್ದರಿಂದ ಯಾವುದೇ ಕೆಲಸವನ್ನು ಮಾಡುವಾಗ ಹಟಕ್ಕೆ ಬೀಳದೆ ಮನಸ್ಸನ್ನು ಸಮತ್ವದಲ್ಲಿಟ್ಟುಕೊಂಡು ಮಾಡುವುದು ಸ್ವಂತಕ್ಕೆ ಮತ್ತು ಸಮಾಜಕ್ಕೆ ಹಿತಕಾರಿ. ❖

ಸಿನಿ ಬಿಟ್ಸ್

ಥ್ರಿಲ್ಲರ್ ಕಥೆಯ 'ಮೇರಿ'

'ಆನ' ಸಿನಿಮಾ ಮೂಲಕ ಚಂದನವನದಲ್ಲಿ ಗುರುತಿಸಿಕೊಂಡಿರುವ ನಿರ್ದೇಶಕ ಮನೋಜ್ ಪಿ. ನಡಲುಮನೆ ಆ್ಯಕ್ಷನ್ ಕಟ್ ಹೇಳುತ್ತಿರುವ ಎರಡನೇ ಸಿನಿಮಾ 'ಮೇರಿ'. ಥ್ರಿಲ್ಲರ್ ಡ್ರಾಮಾ ಕಥಾಹಂದರದ ಈ ಸಿನಿಮಾ ಫೆ.24ರಂದು ಬಿಡುಗಡೆಯಾಗುತ್ತಿದೆ.

ಈಗಾಗಲೇ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ವಿಕಶಾ ಉತ್ತಯ್ಯ, ಸಂದೀಪ್ ನೀನಾಸಂ ಅವರ ನಟನೆ ವೀಕ್ಷಕರ ಗಮನಸೆಳೆಯುತ್ತಿದೆ. 'ಮೇರಿ' ಪಶ್ಚಿಮ ಘಟ್ಟದ ಗ್ರಾಮಾಂತರ ಠಾಣೆಯಲ್ಲಿ ನಡೆಯುವ ಕಥೆಯನ್ನು ಒಳಗೊಂಡಿದ್ದು, ವಿಕಾಶ್ ಉತ್ತಯ್ಯ, ಅನೂಷ ಕೃಷ್ಣ, ಚೇತನ್ ವಿಕ್ಕಿ, ತೇಜಸ್ವಿನಿ ಶರ್ಮಾ ಚಿತ್ರದ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಕಾಡಿನ ಮಧ್ಯದಲ್ಲಿರುವ ಒಂದು ಗ್ರಾಮದ ಪೊಲೀಸ್ ಠಾಣೆಗೆ ಹೊಸದಾಗಿ ಕೆಲಸಕ್ಕೆ ಸೇರಿದ ಸಬ್‌ಇನ್‌ಸ್ಪೆಕ್ಟರ್ ಮುಂದೆ ಹುಡುಗಿಯೊಬ್ಬಳು ತನ್ನ ಮೇಲೆ ಅತ್ಯಾ-ಚಾರವಾಗಿದೆ ಎಂದು ದೂರು ನೀಡಿದ ಬಳಿಕ ನಡೆಯುವ ಘಟನೆಯ ಸುತ್ತ ಕಥೆಯ ಎಳೆಯಿದೆ.

'ಚಿತ್ರದಲ್ಲಿ ಎಸ್‌ಐ 'ರವಿಕುಮಾರ್' ಎಂಬ ಪಾತ್ರ ಮಾಡಿದ್ದೇನೆ. 'ಆನ' ಸಿನಿಮಾದಲ್ಲೂ ಲೀಡ್ ಆಗಿ ಮಾಡಿದ್ದೇನೆ. ಎರಡನೇ ಲಾಕ್‌ಡೌನ್‌ನಲ್ಲಿ ಮನೋಜ್ ಈ ಚಿತ್ರದ ಸ್ಕ್ರಿಪ್ಟ್ ಸಿದ್ಧಪಡಿಸಿದ್ದರು. ತುಂಬಾ ವಿಭಿನ್ನವಾಗಿ ಸಿನಿಮಾ ಮೂಡಿ ಬಂದಿದೆ' ಎನ್ನುತ್ತಾರೆ ವಿಕಾಶ್ ಉತ್ತಯ್ಯ. ಡಿಕೆಎಸ್ ಸ್ಟುಡಿಯೊಸ್ ಬ್ಯಾನರ್‌ನಡಿ ರನ್ವಿತ್ ಶಿವಕುಮಾರ್, ಹರೀಶ್ ಜಿ.ಬಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ❖



ತೇಜಸ್ವಿನಿ ಶರ್ಮಾ

'ಬುದ್ಧ'ನಾಗಿ ಬಂದ ಮಹೇಶ್ ಬಾಬು

ಎಲ್ಲೋ ಕಳೆದುಹೋದವರನ್ನು ಹುಡುಕಿಕೊಡುವ ಕಥೆ ಹೊತ್ತು ಬಂದಿದೆ 'ಬುದ್ಧ'. ಈ ಚಿತ್ರದ ಎರಡನೇ ಹಂತದ ಚಿತ್ರೀಕರಣ ಸಾಗಿದೆ. ವರ್ತನ್ ಪಿಕ್ಚರ್ಸ್ ಲಾಂಛನದಲ್ಲಿ ಸುರೇಶ್ ಭಾರದ್ವಾಜ್ ಕನಕಪುರ ಅವರು ಈ ಚಿತ್ರ ನಿರ್ಮಿಸುತ್ತಿದ್ದಾರೆ. ರಾಮ್ ಪೆರಿಯಸಾಮಿ ನಿರ್ದೇಶಕರು. ಮಹೇಶ್ ಬಾಬು ನಾಯಕ ಹಾಗೂ ವಿದ್ಯಾರಾಜ್ ನಾಯಕಿ. ಚಿತ್ರದ ಫಸ್ಟ್ ಲುಕ್ ಪ್ರೇಮಿಗಳ ದಿನಾಚರಣೆ ಸಂದರ್ಭದಲ್ಲಿ ಬಿಡುಗಡೆಯಾಗಿದೆ.

ಮಹೇಶ್ ಬಾಬು ಅವರು ಎಂಜಿನಿಯರಿಂಗ್ ಪದವೀಧರರು. ನಟನೆಯ ತರಬೇತಿ ಪಡೆದು, ಈ ಚಿತ್ರದ ನಾಯಕನ ಪಾತ್ರ ಮಾಡಿದ್ದಾರೆ. ಮಹೇಶ್ ಹೇಳುವಂತೆ ಇದೊಂದು ಕೌಟುಂಬಿಕ ಚಿತ್ರ. ಚಿತ್ರದಲ್ಲಿ ಐದು ಹಾಡುಗಳಿವೆ. ಒಂದು ಹಾಡನ್ನು ಡಾ.ವಿ.ನಾಗೇಂದ್ರ ಪ್ರಸಾದ್, ನಾಲ್ಕು ಹಾಡುಗಳನ್ನು ಚೇತನ್ ಕುಮಾರ್ ಬರೆದಿದ್ದಾರೆ. ರಾಘವೇಂದ್ರ ಸಂಗೀತ ನಿರ್ದೇಶಕರು. ನಾಗ ಶೆಟ್ಟಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ರಾಮಕೃಷ್ಣ (ತಮಿಳು), ತಬಲನಾಣಿ, ಸಿದ್ಲಿಂಗು ಶ್ರೀಧರ್, ಅರುಣಾ ಬಾಲರಾಜ್ ಮುಂತಾದವರು ಈ ತಾರಾ-ಬಳಗದಲ್ಲಿದ್ದಾರೆ. ಖ್ಯಾತ ನಟಿ ಪವಿತ್ರಾ ಲೋಕೇಶ್ ಕೂಡಾ ತಂಡವನ್ನು ಸೇರಲಿದ್ದಾರೆ ಎಂದಿದೆ ಚಿತ್ರತಂಡ. ❖



ವಿದ್ಯಾರಾಜ್, ಮಹೇಶ್ ಬಾಬು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಫೆಬ್ರುವರಿ 16, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಏಕಾದಶಿ ಗಂ. 26-50 ನಕ್ಷತ್ರ: ಮೂಲಾ ಗಂ. 22-53 ಯೋಗ: ಹರ್ಷಣ ಗಂ. 07-03, ವಜ್ರ ಗಂ. 27-35 ಕರಣ: ಬವ ಗಂ. 16-16, ಕುಂಭ ಮಾಸದ 03 ನೇ ದಿನ.
ರಾಹುಕಾಲ : ಮಧ್ಯಾಹ್ನ 01-30–03-00
ಸೂರ್ಯೋದಯ : 06-56 ಸೂರ್ಯಾಸ್ತ : 06-33
ಮುಸ್ಲಿಂ ದಿನಾಂಕ : 24 ರಜಬ್
ಅದೃಷ್ಟ ಸಂಖ್ಯೆ : 2, 8

ಮೇಷ: ಕುಟುಂಬದ ಸದಸ್ಯರಲ್ಲಿ ಬಾಲ್ಯದ ಕ್ಷಣಗಳನ್ನು ನೆನಪಿಸಿಕೊಳ್ಳುವ ಸಿಹಿ ಘಟನೆಗಳು ಈ ದಿನ ನಡೆಯಲಿದೆ. ವ್ಯಕ್ತಿಯನ್ನು ಅವರ ಮೊದಲ ಭೇಟಿಯಲ್ಲಿ ನೋಡಿದ ಸ್ವಭಾವವೆಂದು ತೂಕಹಾಕಿ ತೀರ್ಮಾನಿಸಬೇಡಿ.

ವೃಷಭ: ಈ ದಿನ ವ್ಯವಸ್ಥಿತವಾಗಿ ನಿಮ್ಮ ದಿನಚರಿ ರೂಪಿಸಿಕೊಂಡರೆ ಈಗಾಗಲೇ ಆರಂಭಿಸಿರುವ ಯೋಜನೆಗಳು ಪೂರ್ಣಗೊಳ್ಳಲಿದೆ. ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ರೀತಿಯ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತದೆ.

ಮಿಥುನ: ಮೇಲಾಧಿಕಾರಿಯ ಮೃದು ವರ್ತನೆಯಿಂದ ಸರ್ಕಾರದ ಕೆಲಸ ಕಾರ್ಯಗಳಲ್ಲಿ ತೃಪ್ತಿಯುಂಟಾಗುವುದು ಮತ್ತು ಯಶಸ್ವಿಯಾಗಿ ಸಂಪೂರ್ಣಗೊ-ಳ್ಳುವುದು. ಇಂಟೀರಿಯರ್ ಡೆಕೊರೇಟರ್ಸ್‌ಗಳಿಗೆ ಅಧಿಕ ವರಮಾನ ಇರುತ್ತದೆ.

ಕರ್ಕಾಟಕ: ವಿವಾದಾಸ್ಪದ ವಿಷಯಗಳ ಕಡೆ ಗಮನ ಕೊಡಬೇಡಿ. ಮನೆಯಲ್ಲಿ ಹಣಕಾಸಿನ ವಿಷಯದಲ್ಲಿ ಚರ್ಚೆ ನಡೆಸುವಿರಿ. ವ್ಯವಹಾರದಲ್ಲಿನ ಹೊಸ ವಿಷಯ ತಿಳಿದುಕೊಂಡು ಅದರಂತೆಯೇ ನಡೆದು ಆದಾಯ ಹೊಂದಬಹುದು.

ಸಿಂಹ: ಅಭಿವೃದ್ಧಿಯನ್ನು ಸಹಿಸಲಾಗದ ಜನರ ಮಧ್ಯದಲ್ಲಿ ಇಂದು ನೀವು ಜೀವನ ನಡೆಸಬೇಕಾಗುತ್ತದೆ. ಕಾಲಕ್ಕೆ ಸರಿಯಾಗಿ ಆಹಾರ ಸೇವನೆ ಮಾಡಲು ಅಡ್ಡಿ ಉಂಟಾಗಬಹುದು. ಇತರರನ್ನು ಗೌರವದಿಂದ ನೋಡಿ.

ಕನ್ಯಾ: ಗುರು ಹಿರಿಯರ ಸಲಹೆ-ಸೂಚನೆಗಳಿಗೆ ಬೆಲೆ ಕೊಟ್ಟು ಕೆಲಸದಲ್ಲಿ ಮುಂದೊರೆಯುವುದು ಉತ್ತಮ. ಅದರಿಂದಾಗಿ ಕಾರ್ಯಕ್ಷೇತ್ರದಲ್ಲಿ ಯಶಸ್ಸನ್ನು, ಚೇತರಿಕೆ ಕಾಣಬಹುದು. ದೂರ ಸಂಚಾರದ ಲಕ್ಷಣಗಳಿವೆ.

ತುಲಾ: ಹೊಸ ಕಟ್ಟಡ ನಿರ್ಮಾಣ ಕಾರ್ಯಗಳ ಒಪ್ಪಂದ ಏರ್ಪಟ್ಟು ಬಹಳ ಸಂತೋಷವಾಗುವುದು. ವೈದ್ಯರು ಅಭ್ಯಾಸದಲ್ಲಿ ತೋರಿದ ಬೇಜವಾಬ್ದಾರಿತನ-ದಿಂದ ಪ್ರಾಣಾಪಾಯಗಳು ಸಂಭವಿಸಬಹುದು.

ವೃಶ್ಚಿಕ: ಈ ದಿನದ ಪರಿಸ್ಥಿತಿಗಳು ಕೊಂಚ ಕಿರಿಕಿರಿ ಮೂಡಿಸಿದರೂ ಫಲಿತಾಂಶ ಸಕಾರಾತ್ಮಕವಾಗಿರುವುದು. ಕೌಟುಂಬಿಕವಾಗಿ ತೀರ್ಮಾನ ತೆಗೆದುಕೊಳ್ಳುವ ವಿಚಾರದಲ್ಲಿ ಏಕಮುಖವಾದ ನಿರ್ಧಾರ ಮತ್ತು ಯಾವುದೇ ಆತುರ ಬೇಡ.

ಧನು: ಸ್ವ ಉದ್ಯೋಗಿಗಳಿಗೆ ಹೆಚ್ಚಿನ ಪರಿಶ್ರಮದಿಂದ ಅಧಿಕ ಸಂಪಾದನೆ ಇರುವುದು. ಈ ದಿನ ಕೈಗೊಳ್ಳುವ ವಿಶೇಷವಾದ ಹಾಗೂ ಮುಖ್ಯ ಕೆಲಸವು ಮುಕ್ತಾಯದ ಹಂತವನ್ನು ಬಹಳ ವಿಳಂಬವಾಗಿ ನೋಡುತ್ತದೆ.

ಮಕರ: ಸ್ನೇಹಿತರಲ್ಲಿ ಅನಗತ್ಯ ಮಾತನಾಡುವುದಕ್ಕಿಂತ ಮೌನವಾಗಿ ಇರುವುದು ಲೇಸು. ನಿರುದ್ಯೋಗಿಗಳಿಗೆ ಉತ್ತಮ ಕೆಲಸ ದೊರೆಯಲಿದೆ. ತೀರ್ಥ ಯಾತ್ರೆ ಮತ್ತು ಪುಣ್ಯಕ್ಷೇತ್ರಗಳಿಗೆ ಹೋಗಿಬರುವ ಸಾಧ್ಯತೆಗಳಿವೆ.

ಕುಂಭ: ಆಕಸ್ಮಿಕ ರೀತಿಯಲ್ಲಿ ಉದ್ಯೋಗ ದೊರೆತು ಸಂತೋಷ. ರುಚಿಯಾದ ಭರ್ಜರಿ ಊಟ ಸವಿಯುವಿರಿ. ಮಗನಿಗಾಗಿ ಹೊಸ ವ್ಯಾಪಾರ ಮಳಿಗೆ ಆರಂಭಿಸುವುದು ಒಳ್ಳೆಯದು. ವಿದೇಶಿ ವಸ್ತುಗಳ ಖರೀದಿಗೆ ಧನ ವ್ಯಯ.


ಮೀನ: ಮಿತ್ರರೊಬ್ಬರು ಎಲ್ಲ ವಿಧದಲ್ಲಿ ಸಹಾಯ ಮಾಡಲಿದ್ದಾರೆ. ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಒಂದು ಮಧುರ ಘಟನೆ ಈ ದಿನ ನಿಮ್ಮ ಜೀವನದಲ್ಲಿ ನಡೆಯಲಿದೆ. ಶ್ರೀ ರಾಮನನ್ನು ಭಜಿಸಿ, ಶುಭವಾಗುತ್ತದೆ.

ಪದಬಂಧ 5232

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಯಜ್ಞ ಪುರೋಹಿತನನ್ನು ಹೀಗೂ ಕರೆವರು (3)
4. ಭವದಲ್ಲಿ ಕೊನೆಗೊಂಡಿರುವ ಹುಟ್ಟು (3)
6. ವಂಚನೆಯ ಯುಕ್ತಿಯಿದು (5)
7. ಭವನದ ಮೇಲಿಂದ ನೋಡಿರುವ ಆಕಾಶ (2)
9. ಮಾನವನಲ್ಲಿ ಹೊಸತು ಕಾಣುತಿದೆ (2)
10. ಗುರುವಿಗೆ ತಕ್ಕನಾದ ವಿದ್ಯಾರ್ಥಿ (2)
11. ಸುಪ್ರಭಾತದ ಹೊತ್ತಿನಲ್ಲಿ ಬಂದಿರುವ ಮಗ (2)
13. ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಳ್ಳುವುದು (5)
16. ಮಸ್ತಿಷ್ಕ ಇಲ್ಲಿದೆ (3)
17. ಪುನಃ ಪುನಃ ಬಂದಿರುವ ಸ್ಮರಣೆ (3)

ಮೇಲಿಂದ ಕೆಳಕ್ಕೆ
1. ವರ್ಷದ ಎರಡೆರಡು ತಿಂಗಳುಗಳ ಅವಧಿ (4)
2. ಒತ್ತಾಸೆಯು ಇಲ್ಲಿ ತಿರುವುಮುರುವಾಗಿದೆ (3)
3. ಕಣ್ಣು ಇಲ್ಲಿ ಉಲ್ಟಾ ಕಾಣಿಸುತ್ತಿದೆಯಲ್ಲಾ? (3)
4. ಶಯನದ ಸಮಯದಲ್ಲಿ ಬಂದಿರುವ ಅನುಮಾನ (3)
5. ಅರವತ್ತು ವರ್ಷದ ಹುಟ್ಟಿದ ಹಬ್ಬ (4)
8. ಮುಂದೆ ಬರಲಿರುವ ಕಾಲ (3)
9. ಸ್ವಪ್ನವಿಲ್ಲಿ ನಿಜವಾಗಿದೆ (3)
10. ತಲೆ ಬರಹವಿದು (4)
12. ಕನ್ನಡಿಗ ಧರಿಸಿದ ಹೆಲ್ಮೆಟ್ (4)
13. ಮರದ ಬಳಿಯಿರುವ ಉಸುಕು (3)
14. ಚನ್ನಾಗಿ ಮಾತನಾಡುವವನು (3)
15. ಮೂಲೆಮನೆಯ ಮಾದರಿ (3)



5231ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ತಡಸಲು 5.ಮಧುಕರಿ
6.ಶುಕ 7.ದಸ್ತಗಿರಿ
10.ಕಟುನುಡಿ 12.ಕಾಷ್ಠ
14.ಉದಾಸೀನ
15.ಕಾರ್ಯಕ್ಷೇತ್ರ

ಮೇಲಿಂದ ಕೆಳಕ್ಕೆ:
1.ಗಮಕ 2.ಮಕರಂದ
3.ತರಾತುರಿ 4.ಲುಬ್ಧಕ
6.ಶುಕ್ತಿ 8.ಗಿಲೀಟು
9.ಜೇಷ್ಠ 10.ಕಟಿಸೂತ್ರ
11.ಡಿಕ್ರಿದಾರ 12.ಕಾಯಕಾ
13.ಕನಸು

ಸುಡೊಕು 5618

				6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		

5617 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ವಿ.ವಿಗಳು ವ್ಯವಹಾರದ ಕೇಂದ್ರ: ಭೋಜೇಗೌಡ

ಬೆಂಗಳೂರು: 'ವಿಶ್ವವಿದ್ಯಾಲಯಗಳು ವ್ಯವಹಾರದ ಕೇಂದ್ರಗಳಾಗಿವೆ. ಹಾದಿ, ಬೀದಿಗಳಲ್ಲಿ ಹೋಗುವವರಿಗೆ ಡಾಕ್ಟರೇಟ್ ನೀಡಿವೆ' ಎಂದು ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಕಿಡಿಕಾರಿದರು.

ವಿಧಾನ ಪರಿಷತ್‌ನಲ್ಲಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಬುಧವಾರ ಮಾತನಾಡಿದ ಅವರು ಶಿಶುನಾಳ ಷರೀಫರ ತತ್ವಪದಗಳು, ಜಾನಪದ ಹಾಡುಗಳನ್ನು ಹಾಡುವ ಮೂಲಕ ಸರ್ಕಾರದ ವೈಫಲ್ಯಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

'ಜಾನಪದ ವಿಶ್ವವಿದ್ಯಾಲಯಗಳಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಶೇ 70ರಷ್ಟು ಅತಿಥಿ ಉಪನ್ಯಾಸಕರಿದ್ದಾರೆ. ಅತಿಥಿ ಉಪನ್ಯಾಸಕರು ಸಹ ಸಂಕಷ್ಟ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮತ್ತೆ ಏಳು ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸಲಾಗುತ್ತಿದೆ' ಎಂದು ದೂರಿದರು.

ತಮ್ಮ ಅವಧಿಯಲ್ಲಿ ಕೈಗೊಂಡ ಕ್ರಮ, ಬೊಮ್ಮಾಯಿ ಸರ್ಕಾರದ ಕಾರ್ಯವೈಖರಿ ತುಲನೆ

ಸರ್ಕಾರಕ್ಕೆ ಬಿಸಿ ಮುಟ್ಟಿಸಿದ ಶೆಟ್ಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳಸಾ ಬಂಡೂರಿ, ತುಪ್ರಿ ಹಳ್ಳ ನೀರಾವರಿ ಯೋಜನೆ, ಹುಬ್ಬಳ್ಳಿ- ಅಂಕೋಲಾ ರೈಲ್ವೆ ಹಳಿ, ಸಾರಿಗೆ ನಿಗಮಗಳ ಪುನರುಜ್ಜೀವನ, ವೈದ್ಯಕೀಯ ಕಾಲೇಜುಗಳಲ್ಲಿ ನೇಮಕಾತಿ ಹೀಗೆ ಹಲವು ವಿಚಾರವನ್ನು ಪ್ರಸ್ತಾಪಿಸಿ ರಾಜ್ಯ ಸರ್ಕಾರಕ್ಕೆ ಬಿಜೆಪಿಯ ಜಗದೀಶ ಶೆಟ್ಟರ್ ಬಿಸಿ ಮುಟ್ಟಿಸಿದ ಪ್ರಸಂಗ ವಿಧಾನ ಸಭೆಯಲ್ಲಿ ಬುಧವಾರ ನಡೆಯಿತು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಚರ್ಚೆ ಮೇಲೆ ಮಾತನಾಡಿದ ಶೆಟ್ಟರ್, ತಾವು ಮುಖ್ಯಮಂತ್ರಿಯಾಗಿದ್ದಾಗ ತೆಗೆದುಕೊಂಡ ಕ್ರಮಗಳು ಮತ್ತು ಬೊಮ್ಮಾಯಿ ಸರ್ಕಾರದ ಕಾರ್ಯವೈಖರಿಯನ್ನು ತುಲನೆ ಮಾಡಿದರು.

'ಮಹದಾಯಿ ವಿಚಾರದಲ್ಲಿ ಕರ್ನಾಟಕದ ಡಿಪಿಆರ್‌ಗೆ ತಡೆಯಾಜ್ಞೆ ನೀಡುವಂತೆ ಗೋವಾ ಸರ್ಕಾರ ಕೋರ್ಟ್ ಮೆಟ್ಟಿಲೇರಿತ್ತು. ಆದರೆ, ಗೋವಾದ ಅರ್ಜಿಯನ್ನು ಕೋರ್ಟ್ ವಜಾ ಮಾಡಿದೆ. ಡಿಪಿಆರ್‌ಗೆ ಒಪ್ಪಿಗೆ ಸಿಕ್ಕಿದೆ ಎಂದು ಕೈಕಟ್ಟಿ ಕುಳಿತರೆ ಯೋಜನೆ ವಿಳಂಬವಾಗಲಿದೆ. ಪರಿಸರ, ಅರಣ್ಯ ಇಲಾಖೆಯಿಂದ ಆದಷ್ಟು ಬೇಗ ಒಪ್ಪಿಗೆ ಪಡೆದು ಯೋಜನೆ ಜಾರಿಗೊಳಿಸಬೇಕು' ಎಂದು ಆಗ್ರಹಿಸಿದರು.

'ತುಪ್ರಿಹಳ್ಳ (ಪ್ರವಾಹ ನಿಯಂತ್ರಣ ಯೋಜನೆ) ಯೋಗೇಶ್ವರ ಏತ ನೀರಾವರಿ ಯೋಜನೆಯ ಮೊದಲ ಹಂತಕ್ಕೆ ₹ 318 ಕೋಟಿಗೆ ಸರ್ಕಾರ ಒಪ್ಪಿಗೆ ಕೊಟ್ಟಿದೆ. ಶೀಘ್ರ ಟೆಂಡರ್ ಪ್ರಕ್ರಿಯೆ ಮಾಡಿ ಅನುಷ್ಠಾನ ಆಗಬೇಕು. ಅದೇ ರೀತಿ ಬೆಣ್ಣಿ ಹಳ್ಳ ಪ್ರವಾಹ ನಿಯಂತ್ರಣ ಯೋಜನೆಗೆ ನಾನು ಮುಖ್ಯಮಂತ್ರಿ ಆಗಿದ್ದಾಗ ವರದಿ ತಯಾರಿಸಿದ್ದೆ. ₹ 1,378 ಕೋಟಿಯ ಯೋಜನೆ ಸಿದ್ಧವಿದೆ. ಆದರೆ, ಯೋಜನೆ ಜಾರಿಯಾಗುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ನಾನು ಕೈಗಾರಿಕೆ ಸಚಿವನಾಗಿದ್ದಾಗ ಹುಬ್ಬಳ್ಳಿ-ಅಂಕೋಲಾ ರೈಲ್ವೆ ಮಾರ್ಗ ಕುರಿತು ಕೇಂದ್ರ ಪರಿಸರ ಸಚಿವರನ್ನು ಹಲವು ಬಾರಿ ಭೇಟಿ ಮಾಡಿದ್ದೆ. ಇದೀಗ ಕೇಂದ್ರ ಪರಿಸರ ಸಚಿವರ ಅಧ್ಯಕ್ಷತೆಯಲ್ಲಿ ಅಧ್ಯಯನ ಮಾಡಿಸಿದ್ದು, ಹೆಚ್ಚು ಅರಣ್ಯ ನಾಶವಾಗದಂತೆ ಪುನರ್ ಪ್ರಸ್ತಾವನೆ ಸಲ್ಲಿಸಲು ಕೇಂದ್ರ ಸೂಚಿಸಿದೆ. ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆಗೆ ಅಟಲ್ ಬಿಹಾರಿ ವಾಜಪೇಯಿ ಅಡಿಗಲ್ಲು ಹಾಕಿದಂದಿನಿಂದ ಇಲ್ಲಿಯವರೆಗೂ ಯೋಜನೆ ನನೆಗುದಿಗೆ ಬಿದ್ದಿದೆ. ಇದಕ್ಕೆ ಚಾಲನೆ ಕೊಡಬೇಕು' ಎಂದರು.

'ಹುಬ್ಬಳ್ಳಿಯ ಕಿಮ್ಸ್ , ಹಾವೇರಿ ಮತ್ತು ಬಳ್ಳಾರಿ ವೈದ್ಯಕೀಯ ಕಾಲೇಜುಗಳಿಗೆ ಪ್ರಾಧ್ಯಾಪಕರ ನೇಮಕಾತಿ ವಿಳಂಬವಾಗುತ್ತಿದೆ. ಅರ್ಹರ ಪಟ್ಟಿ ಸಿದ್ಧವಾಗಿ ವರ್ಷ ಕಳೆದರೂ ನೇಮಕಾತಿ ಆದೇಶ ನೀಡಿಲ್ಲ. ಹೀಗಾದರೆ ಹೇಗೆ' ಎಂದು ಪ್ರಶ್ನಿಸಿದರು. ಆಗ ಮಧ್ಯಪ್ರವೇಶಿಸಿದ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, 'ಹಾವೇರಿ ವೈದ್ಯಕೀಯ ಕಾಲೇಜಿನ ನೇಮಕಾತಿ ಅಂತಿಮ ಪಟ್ಟಿ ಇನ್ನೂ ಬಂದಿಲ್ಲ. ಕಿಮ್ಸ್‌ಗೆ ಪ್ರಾಧ್ಯಾಪಕರ ನೇಮಕಾತಿ ಆದೇಶವನ್ನು ವಾರದೊಳಗೆ ಹೊರಡಿಸಲಾಗುವುದು' ಎಂದು ಭರವಸೆ ನೀಡಿದರು.



ವಿಧಾನಸಭಾ ಕಲಾಪದಲ್ಲಿ ಶಾಸಕ ಜಗದೀಶ ಶೆಟ್ಟರ್ ಮಾತನಾಡಿದರು

'ಜೈನ್ ವಿ.ವಿ ಡೀಮ್ಡ್ ಮಾನ್ಯತೆ ರದ್ದುಪಡಿಸಿ'

ಬೆಂಗಳೂರು: 'ಜೈನ್ ವಿಶ್ವವಿದ್ಯಾಲಯದಲ್ಲಿ ಕಿರುನಾಟಕ ಅಭಿನಯ ಸಂದರ್ಭದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಲಾಗಿದೆ. ಇದು ಖಂಡನೀಯ. ವಿಶ್ವವಿದ್ಯಾಲಯದ ಡೀಮ್ಡ್ ಮಾನ್ಯತೆ ರದ್ದು ಮಾಡಬೇಕು' ಎಂದು ವಿಧಾನಸಭೆಯಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಸದಸ್ಯರು ಆಗ್ರಹಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಕೆ. ಅನ್ನದಾನಿ, 'ದುರುದ್ದೇಶಪೂರ್ವಕವಾಗಿ ಈ ರೀತಿ ಮಾಡಲಾಗಿದೆ. ಅಪಮಾನ ಆಗುತ್ತದೆ ಎಂದು ಗೊತ್ತಿದ್ದರೂ ತಡೆಯುವ ಪ್ರಯತ್ನ ಮಾಡಿಲ್ಲ. ಪ್ರಾಧ್ಯಾಪಕರು, ಡೀನ್‌ಗಳು ನೋಡಿದ ನಂತರವೇ ಪ್ರದರ್ಶನಕ್ಕೆ ಅವಕಾಶ ಸಿಕ್ಕಿರುತ್ತದೆ. ಜೈನ್ ವಿಶ್ವವಿದ್ಯಾಲಯವನ್ನು ಮುಚ್ಚಬೇಕು' ಎಂದು ಪಟ್ಟು ಹಿಡಿದರು. ಅಲ್ಲದೆ, ಈಗಲೇ ಈ ನಿರ್ಧಾರ ಪ್ರಕಟಿಸಬೇಕು ಎಂದೂ ಆಗ್ರಹಿಸಿ ಸಭಾಧ್ಯಕ್ಷರ ಪೀಠದ ಎದುರು ಧರಣಿಗೆ ಮುಂದಾದರು.

ಇದಕ್ಕೆ ಧ್ವನಿಗೂಡಿಸಿದ ಕಾಂಗ್ರೆಸ್‌ನ ಯು.ಟಿ. ಖಾದರ್, 'ಅಂಬೇಡ್ಕರ್ ಅವರಿಗೆ ಅಪಮಾನ ಮಾಡಿರುವ ಜೈನ್ ವಿಶ್ವವಿದ್ಯಾಲಯದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಆಡಳಿತ ಮಂಡಳಿಯ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ' ಎಂದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಅಂಬೇಡ್ಕರ್ ಬಗ್ಗೆ ಅವಹೇಳನ ಮಾಡುವುದನ್ನು ನಾವೂ ಸಹಿಸಲ್ಲ. ಈಗಾಗಲೇ ತನಿಖೆ ನಡೆದಿದೆ. ಕೆಲವು ವಿದ್ಯಾರ್ಥಿಗಳು ಈ ರೀತಿ ಮಾಡಿದ್ದಾರೆ. ಮುಂದೆ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂದು ಪರಿಶೀಲಿಸುತ್ತೇವೆ' ಎಂದು ಭರವಸೆ ನೀಡಿದರು.



ಬುಧವಾರ ವಿಧಾನಸಭೆಯ ಕಲಾಪ ವೀಕ್ಷಿಸಿದ ಶಾಲಾ ವಿದ್ಯಾರ್ಥಿಗಳು

ದತ್ತ ವಿರುದ್ಧ ವಾರಂಟ್

ಬೆಂಗಳೂರು: ಚೆಕ್ ಬೌನ್ಸ್ ಪ್ರಕರಣವೊಂದರಲ್ಲಿ ಮಾಜಿ ಶಾಸಕ ವೈ.ಎಸ್.ವಿ ದತ್ತ ವಿರುದ್ಧ ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ರಹಿತ ವಾರಂಟ್ ಜಾರಿಗೊಳಿಸಿದೆ.

ಈ ಸಂಬಂಧ ಸಿ.ಎಸ್.ಸೋಮೇಗೌಡ ಎಂಬುವರು ಸಲ್ಲಿಸಿರುವ ಖಾಸಗಿ ದೂರಿನ ವಿಚಾರಣೆ ನಡೆಸುತ್ತಿರುವ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ 42ನೇ ಎಸಿಎಂಎಂ ನ್ಯಾಯಾಧೀಶೆ ಜೆ.ಪ್ರೀತ್ ಈ ಕುರಿತಂತೆ ಬುಧವಾರ ಆದೇಶಿಸಿದ್ದಾರೆ.

'ವಿಚಾರಣೆಗೆ ಗೈರು ಹಾಜರಾಗಿರುವ ದತ್ತ ಅವರನ್ನು ಮಾ. 27ಕ್ಕೆ ಕೋರ್ಟ್‌ಗೆ ಹಾಜರುಪಡಿಸಿ' ಎಂದು ಬೆಂಗಳೂರು ಉತ್ತರ ಡಿಸಿಪಿಗೆ ಸೂಚಿಸಿರುವ ನ್ಯಾಯಾಧೀಶರು ವಿಚಾರಣೆ ಮುಂದೂಡಿದ್ದಾರೆ.

'ಬಿ.ಎಸ್.ವೈ ಇಲ್ಲದ ಬಿಜೆಪಿ ಶೂನ್ಯ'

ಬೆಂಗಳೂರು: 'ಯಡಿಯೂರಪ್ಪ ಇಲ್ಲದ ಬಿಜೆಪಿ ಶೂನ್ಯ ಮತ್ತು ಕುಮಾರಣ್ಣ ಇಲ್ಲದ ಕರ್ನಾಟಕ ಇಲ್ಲ' ಎಂದು ಜೆಡಿಎಸ್ ಸದಸ್ಯರು ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪಿಸಿದ್ದು ಚರ್ಚೆಗೆ ಗ್ರಾಸವಾಯಿತು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಜೆಡಿಎಸ್‌ನ ಟಿ.ಎ. ಶರವಣ, 'ಸಮವಸ್ತ್ರ ವಿಷಯದಲ್ಲಿ ಹೈಕೋರ್ಟ್ ಸರ್ಕಾರಕ್ಕೆ ಛೀಮಾರಿ ಹಾಕಿದೆ. ಇದೇನಾ ಅಚ್ಛೇ ದಿನಗಳು? ಪಕ್ಷವನ್ನು ಅಧಿಕಾರಕ್ಕೆ ತಂದ ಯಡಿಯೂರಪ್ಪ ಅವರನ್ನು ಬಿಜೆಪಿ ಕಣ್ಣೀರು ಹಾಕಿಸಿತು. ಮುಂದೆ ನಾವೇ ಅಧಿಕಾರಕ್ಕೆ ಬರ್ತೀವಿ. ಎರಡು ತಿಂಗಳು ಕಾಯಿರಿ' ಎಂದರು.

ಇದಕ್ಕೆ ದನಿಗೂಡಿಸಿದ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ, 'ಶಿಸ್ತಿಗೆ ಹೆಸರಾಗಿರುವ ಸಂಘದಲ್ಲಿದ್ದ ಕೆಲವರು ಇಂದು ಕೋಟ್ಯಂತರ ರೂಪಾಯಿ ಆಸ್ತಿ ಮಾಡಿದ್ದಾರೆ. ನೂರು ನಾಯಕರು ಬಿಜೆಪಿಯಲ್ಲಿರಬಹುದು. ಆದರೆ, ಯಡಿಯೂರಪ್ಪ ಇಲ್ಲದ ಬಿಜೆಪಿ ಶೂನ್ಯ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿಯ ಆಯನೂರು ಮಂಜುನಾಥ್, 'ಯಡಿಯೂರಪ್ಪ ಅವರು ಜಗಮೆಚ್ಚಿದ ಹೋರಾಟಗಾರ. ಶರವಣ ಅವರು ಬಂಗಾರದ ಮನುಷ್ಯರಾಗಿರುವುದರಿಂದ ಜೆಡಿಎಸ್ ಗುರುತಿಸಿದೆ. ನಮ್ಮ ತರಹ ಹಿತ್ತಾಳೆ, ಕಬ್ಬಿಣ ಮನುಷ್ಯ ಅಲ್ಲ. ಜೆಡಿಎಸ್ ಮುಖಂಡರು ಯಾವಾಗಲೂ, ಬಿಜೆಪಿ ಮತ್ತು ಕಾಂಗ್ರೆಸ್ 100 ಸ್ಥಾನಕ್ಕಿಂತ ಹೆಚ್ಚು ಪಡೆದುಕೊಳ್ಳಬಾರದು ಎಂದೇ ಪ್ರಾರ್ಥಿಸಿಕೊಳ್ಳುತ್ತಾರೆ. ನಮ್ಮ ಪಕ್ಷಕ್ಕೆ ಶರವಣ ಮತ್ತು ಭೋಜೇಗೌಡ ಬಂದರೆ ವಕ್ತಾರರನ್ನಾಗಿ ಮಾಡುತ್ತೇವೆ' ಎಂದು ಹಾಸ್ಯ ಚಟಾಕಿ ಹಾರಿಸಿದರು.

'ಕಲ್ಲುಗಣಿಗಾರಿಕೆ ನಿಯಮ ಸಡಿಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲ್ಲುಗಣಿಗಾರಿಕೆ ಆರಂಭಕ್ಕೆ ನಿರಪೇಕ್ಷಣಾ ಪತ್ರ, ಅನುಮತಿ ನೀಡಲು ಅಧಿಕಾರಿಗಳು ಅನಗತ್ಯ ವಿಳಂಬ ಮಾಡುತ್ತಿದ್ದು, ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ನಿಯಮಗಳಿಗೆ ತಿದ್ದುಪಡಿ ತರಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು.

ಬಿಜೆಪಿಯ ಪಿ.ಎಂ.ಮುನಿರಾಜುಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಕರಣದಲ್ಲಿ ಅಲ್ಲಿನ ಉಪ ವಿಭಾಗಾಧಿಕಾರಿ ಗಣಿಗಾರಿಕೆಯ ಅರ್ಜಿ ಇತ್ಯರ್ಥ ಮಾಡದೇ ಅನಗತ್ಯ ವಿಳಂಬ ಮಾಡಿರುವುದು ದೃಢಪಟ್ಟಿದೆ. ತಮ್ಮ ಅಧಿಕಾರ ವ್ಯಾಪ್ತಿ ಮೀರಿದ ನಿಯಮಗಳನ್ನು ನಮೂದಿಸಿ, ಅರ್ಜಿಗಳನ್ನು ಹಿಂದಿರುಗಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಲು ಇಲಾಖೆಯ ಕಾರ್ಯದರ್ಶಿಗೆ ಸೂಚಿಸಲಾಗಿದೆ ಎಂದರು. ರಾಜ್ಯದಲ್ಲಿ ರಸ್ತೆ, ಕಟ್ಟಡ ನಿರ್ಮಾಣ ಸೇರಿದಂತೆ ಅಭಿವೃದ್ಧಿ ಕಾರ್ಯಗಳಿಗೆ ಜಲ್ಲಿಕಲ್ಲಿನ ಅಗತ್ಯವಿದೆ. ನಿಯಮ ಸರಳಗೊಳಿಸುವ ಮೂಲಕ ಹೆಚ್ಚು ಉತ್ಪಾದನೆಗೆ ಅವಕಾಶ ಮಾಡಿಕೊಡಲಾಗುವುದು ಎಂದರು.

ಗೊಲ್ಲರಹಟ್ಟಿಗೆ ತಾರತಮ್ಯ: ರಾಜ್ಯದ 195 ಗೊಲ್ಲರಹಟ್ಟಿಗಳಲ್ಲಿ 187 ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಚಿವ ಅಶೋಕ್ ಹೇಳಿದರು.

ಕಡಲಕೊರೆತ ತಡೆಗೋಡೆಗಿಲ್ಲ ಅನುದಾನ: ದಕ್ಷಿಣ ಕನ್ನಡ ಜಿಲ್ಲೆ ಸೋಮೇಶ್ವರ ಪ್ರದೇಶದ ಉಚ್ಚಿಲ ಬಟ್ಟಪಾಡಿ ಸಮುದ್ರ ತೀರದಲ್ಲಿ ಕಡಲಕೊರೆತಕ್ಕೆ ತಡೆಗೋಡೆ ನಿರ್ಮಿಸಲು ಹೆಚ್ಚುವರಿ ಅನುದಾನಕ್ಕೆ ಆರ್ಥಿಕ ಇಲಾಖೆ ಒಪ್ಪಿಗೆ ನೀಡಿಲ್ಲ. ವಿಪತ್ತು ಪರಿಹಾರ ನಿಧಿಯ ₹5 ಕೋಟಿಯಲ್ಲಿ ರಸ್ತೆ ಪುನರ್ ನಿರ್ಮಿಸಲಾಗುವುದು ಎಂದು ಮೀನುಗಾರಿಕೆ ಸಚಿವ ಎಸ್.ಅಂಗಾರ ಅವರು ಬಿಜೆಪಿಯ ಪ್ರತಾಪಸಿಂಹ ನಾಯಕ್ ಪ್ರಶ್ನೆಗೆ ಉತ್ತರಿಸಿದರು.

ರಸ್ತೆ ಗುಂಡಿ ಮುಚ್ಚಿ: ರಸ್ತೆ ಗುಂಡಿ ಮುಚ್ಚಿ, ಹೊಸ ರಸ್ತೆ ಮಾಡುವುದು ಬೇಡ ಎಂದು ಬಿಜೆಪಿಯ ಡಿ.ಎಸ್. ಅರುಣ್ ಹೇಳಿದರು.

ಸಚಿವ ಚವ್ಹಾಣಗೆ ಸಭಾಪತಿ ಬಸವರಾಜ ಹೊರಟ್ಟಿ ಪಾಠ

ಬೆಂಗಳೂರು: 'ಹೇಗೆ ನಡೆದುಕೊಳ್ಳಬೇಕು ಎನ್ನುವುದನ್ನು ಸದನದಲ್ಲಿ ಕಲಿಯಬೇಕು, ನಿಮ್ಮ ನಡೆ ಸರಿಯಿಲ್ಲ, ಜವಾಬ್ದಾರಿ ಸ್ಥಾನದಲ್ಲಿ ಕುಳಿತಿರುವಾಗ ಅದನ್ನು ನಿಭಾಯಿಸಬೇಕು. . .'

–ಇದು ವಿಧಾನ ಪರಿಷತ್‌ನಲ್ಲಿ ಪಶುಸಂಗೋಪನಾ ಸಚಿವ ಪ್ರಭು ಬಿ. ಚವ್ಹಾಣ ಅವರಿಗೆ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ ಪಾಠ.

ಕಲಾಪ ಬುಧವಾರ ಬೆಳಿಗ್ಗೆ ಆರಂಭವಾಗುತ್ತಿದ್ದಂತೆ ಜೆಡಿಎಸ್‌ನ ಎಸ್.ಎಲ್.ಭೋಜೇಗೌಡ, ರಾಜ್ಯದಿಂದ ಗೋವಾಕ್ಕೆ ಎಷ್ಟು ಪ್ರಮಾಣದಲ್ಲಿ ದನದ ಮಾಂಸ ರಫ್ತಾಗುತ್ತಿದೆ ಎನ್ನುವ ಕುರಿತು ಫೆ. 4ರಂದೇ ಪ್ರಶ್ನೆ ಕಳುಹಿಸಲಾಗಿದೆ. ಆದರೆ, ಇಲ್ಲಿಯವರೆಗೂ ಉತ್ತರ ನೀಡಿಲ್ಲ. ಉತ್ತರ ನೀಡಿದ ನಂತರ ಮುಂದಿನ ಕಲಾಪಗಳಿಗೆ ಅವಕಾಶ ಕೊಡಬೇಕು ಎಂದು ಪಟ್ಟುಹಿಡಿದರು.

ಆಗ ಭೋಜೇಗೌಡರ ನೆರವಿಗೆ ಬಂದ ಸಭಾಪತಿ, 'ಸದಸ್ಯರ ಪ್ರಶ್ನೆಗಳಿಗೆ ಸೂಕ್ತ ಉತ್ತರ ನೀಡಬೇಕು. ನಿಮಗೆ ಅಧಿಕಾರಿಗಳ ಮೇಲೆ ಹಿಡಿತವಿಲ್ಲವೇ, ಇದು ಸರಿಯಲ್ಲ. ಸದನ ಮುಗಿಯುವ ಮೊದಲು ಉತ್ತರ ಕೊಡಬೇಕು' ಎಂದು ತಾಕೀತು ಮಾಡಿದರು.

'ಅಂಬೇಡ್ಕರ್ ವಸತಿ ಶಾಲೆಗಳಿಗೆ ಮೂಲಸೌಕರ್ಯ ಕಲ್ಪಿಸಲು ಬದ್ಧ'

ಬೆಂಗಳೂರು: 'ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳಿಗೆ ಮೂಲಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಬದ್ಧವಾಗಿದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನಸಭೆಯಲ್ಲಿ ಬಿಜೆಪಿಯ ಮಸಾಲ ಜಯರಾಂ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ ಒಟ್ಟು 830 ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳಿವೆ. ಈ ಪೈಕಿ, 240 ಶಾಲೆಗಳು ಬಾಡಿಗೆ ಕಟ್ಟಡಗಳಲ್ಲಿವೆ. ಅವುಗಳ ನಿರ್ವಹಣೆಗೆ ಈಗಾಗಲೇ ₹ 700 ಕೋಟಿ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಶೀಘ್ರ ಬಿಡುಗಡೆ ಮಾಡಲಾಗುವುದು' ಎಂದರು.

ಜೆಡಿಎಸ್‌ನ ಕೃಷ್ಣಾರೆಡ್ಡಿ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮೊರಾರ್ಜಿ ದೇಸಾಯಿ ಶಾಲೆಗೆ ಹೆಚ್ಚಿನ ಆದ್ಯತೆ ನೀಡಲು ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು' ಎಂದರು.

'ಕಳೆದ ಬಜೆಟ್‌ನಲ್ಲಿ 37 ವಸತಿ ಶಾಲೆ ಮಂಜೂರು ಮಾಡಲಾಗಿತ್ತು. ಇದರಲ್ಲಿ 11 ವಸತಿ ಶಾಲೆಗಳಿಗೆ ಕಾಮಗಾರಿ ಆರಂಭವಾಗಿದ್ದು, ಉಳಿದ ಶಾಲೆಗಳನ್ನು ಈ ವರ್ಷದ ಬಜೆಟ್‌ನಲ್ಲಿ ಸೇರಿಸಲು ಮನವಿ ಮಾಡಲಾಗಿದೆ. ಬಜೆಟ್ ಬಳಿಕ ಉಳಿದ ಶಾಲೆಗಳ ಕಾಮಗಾರಿ ಆರಂಭವಾಗಲಿದೆ' ಎಂದರು.

ಎಂಎಸ್‌ಪಿ: ಕಡಲೆ ಖರೀದಿಗೆ ಆದೇಶ: ಸಚಿವ ಸೋಮಶೇಖರ್

ಬೆಂಗಳೂರು: 'ಧಾರವಾಡ, ಗದಗ, ಬೆಳಗಾವಿ, ವಿಜಯಪುರ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ರೈತರಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕಡಲೆ ಕಾಳು ಖರೀದಿಗೆ ಬುಧವಾರ ಆದೇಶ ಹೊರಡಿಸಲಾಗಿದೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ಜೆಡಿಎಸ್‌ನ ವೆಂಕಟರಾವ್ ನಾಡಗೌಡ ಅವರ ಗಮನ ಸೆಳೆಯುವ ಸೂಚನೆಗೆ ಬುಧವಾರ ವಿಧಾನಸಭೆಯಲ್ಲಿ ಉತ್ತರ ನೀಡಿರುವ ಅವರು, 'ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಮೂಲಕ ಖರೀದಿ ನಡೆಯಲಿದೆ. ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಲ್ ಖರೀದಿಗೆ ಅವಕಾಶ ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿ ನಿಲಯ ದುರಸ್ತಿಗೆ ₹ 150 ಕೋಟಿ: ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಯಿಂದ 1,203 ವಿದ್ಯಾರ್ಥಿ ನಿಲಯಗಳ ದುರಸ್ತಿಗೆ ₹ 150 ಕೋಟಿ ಅನುದಾನ ಒದಗಿಸಿದ್ದು, ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಆದೇಶ ಹೊರಡಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಅಭಿವೃದ್ಧಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಬಿಜೆಪಿಯ ಕುಮಾರ್ ಬಂಗಾರಪ್ಪ ಅವರ ಗಮನ ಸೆಳೆಯುವ ಸೂಚನೆಗೆ ಬುಧವಾರ ಉತ್ತರ ನೀಡಿದ ಅವರು, 'ವಿದ್ಯಾರ್ಥಿ ನಿಲಯಗಳಿಗೆ ಮೂಲಸೌಕರ್ಯ ಒದಗಿಸಲು ₹ 100 ಕೋಟಿ ಒದಗಿಸಲಾಗಿದೆ. ₹ 150 ಕೋಟಿ ವೆಚ್ಚದಲ್ಲಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಸಿನಿಮಾ ಪುರವಣಿ ಓದಿರಿ

ಲೋಕೋಪಯೋಗಿ ಇಲಾಖೆ

ಪ್ರಧಾನ ಇಂಜಿನೀಯರ್‌ರವರ ಕಚೇರಿ, ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, 4ನೇ ಮಹಡಿ, ಪಿ.ಡಬ್ಲ್ಯೂ.ಡಿ. ಅನೆಕ್ಸ್ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು–560001

ಸಂ. ಸಂ. ಲೋಇ/40/PRAMC/2022–23 ದಿನಾಂಕ: 14.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

18 ನಾಲಾ ಬದಿಯ ರಸ್ತೆ ಸುರಕ್ಷತಾ ಕಾಮಗಾರಿಗಳ ಪೈಕಿ ತಲಾ 05 ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆ, 04 ಚಿಕ್ಕಮಗಳೂರು ಜಿಲ್ಲೆ, ತಲಾ 02 ಮೈಸೂರು ಮತ್ತು ವಿಜಯಪುರ ಜಿಲ್ಲೆ ಹಾಗೂ 01 ದಾವಣಗೆರೆ ಜಿಲ್ಲೆಯ ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನೀಯರ್, ಪಿ.ಆರ್.ಎ.ಎಂ.ಸಿ ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್ ನಿಂದ (www.eproc.karnataka.gov.in) ದಿನಾಂಕ: 14.02.2023 ಸಂಜೆ 05.30 ನಂತರ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಇಂಜಿನೀಯರ್
ಯೋ.ರ.ಆ.ನಿ.ಕೇಂದ್ರ, ಲೋಇ, ಬೆಂಗಳೂರು

DIPR/CP/4726/GREENFMC/2022-23

TNPL TAMILNADU NEWSPRINT AND PAPERS LIMITED

Kagithapuram - 639 136. Karur Dist. Tamil Nadu.
Ph.: 04324 - 277001 (10 Lines). Email : purchase.wood@tnpl.co.in

NOTICE INVITING TENDER

Tender No.	Material Description	Due date
222313 006944	Supply of debarked Eucalyptus pulpwood from open market sources of Karnataka to TNPL Unit - 1 at Kagithapuram, Karur district, Tamilnadu	25.02.2023

Corrigendum if any will be issued in TNPL Website only. Detailed Terms & conditions are available in tender document at our websites: www.tnpl.com / www.tenders.tn.gov.in

DIPR/1012/Tender/2023 *TNPL - Maker of bagasse based eco-friendly Paper*

"சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்."

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಇಲಕಲ್ಲ–587 125 ಜಿ:ಬಾಗಲಕೋಟೆ

ಸಂಖ್ಯೆ:ಇ1/ಐ.ಸಿ.ಟಿ/ಬಿ.ಆರ್.ಸಿ/ಟೆಂ.ಪ್ರ/2022–23 ದಿನಾಂಕ:13/02/2023

ಸಂಕ್ಷಿಪ್ತ ಟೆಂಡರ ಪ್ರಕಟಣೆ

"ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇಲಕಲ್ಲ ಜಿ:ಬಾಗಲಕೋಟೆ ಕಛೇರಿ ಅಡಿಯಲ್ಲಿ "2022–23 ನೇ ಸಾಲಿನ ಪಿ.ಎ.ಇ ಅನುಮೋದಿತ ICT & Digitial Initiatives ಈ ಚಟುವಟಿಕೆಯಡಿ ಬಾಗಲಕೋಟೆ ಜಿಲ್ಲೆಯ 06 ಬಿ.ಆರ್.ಸಿ ಕೇಂದ್ರಗಳಿಗೆ ತಲಾ 06 ಕಂಪ್ಯೂಟರ್‌ಗಳು(ಮಿನಿ ಪಿ.ಸಿ), ತಲಾ 01 ಯು.ಪಿ.ಎಸ್, ತಲಾ 01 ಲ್ಯಾಪ್‌ಟಾಪ್, ತಲಾ 01 ಪ್ರಿಂಟರ್ ಸಾಮಗ್ರಿಗಳ ಖರೀದಿಗಾಗಿ ಅಲ್ಪಾವಧಿ ಟೆಂಡರ ಅನ್ನು ದಿನಾಂಕ:15/02/2023 ರಂದು ಕರೆಯಲಾಗಿ ಕೊನೆಯ ದಿನಾಂಕ:01/03/2023 ಇದ್ದು, ಸದರ ಟೆಂಡರನ ಮಾಹಿತಿಗಾಗಿ ಇ–ಪ್ರಕ್ಯೂರ್‌ಮೆಂಟ್ ಮೂಲಕ (www.eproc.karnataka.gov.in) ವೆಬ್‌ಸೈಟ್ ನಲ್ಲಿ ಪರಿಶೀಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಾನ್ಯ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ) ಡಯಟ್ ಇಲಕಲ್ಲ ಜಿ:ಬಾಗಲಕೋಟೆ ಅವರ ಮೊಬೈಲ್ ಸಂಖ್ಯೆ:9448999356 ಗೆ ಸಂಪರ್ಕಿಸಬಹುದಾಗಿದೆ."

ಸಹಿ/–ಉಪನಿರ್ದೇಶಕರು (ಅಭಿವೃದ್ಧಿ)
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಇಲಕಲ್ಲ ಜಿ:ಬಾಗಲಕೋಟೆ

DIPR/BGK/RO-NO-884/KSMCA/2022-23

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್

ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿತ್ರದುರ್ಗ–577501

ನಂ. ಗ್ರಾ.ನೀ.ಸ.&ನೈ/ವಿ/ಚಿ/ಕಾಇಂ/ಬಿ4/ಟೆಂಡರ್/2087/2022–23/ ದಿ: 13.02.2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಸ್ಟಾಂಡರ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯು–3 ನಿಭಂದನೆಗೊಳಪಟ್ಟಂತೆ, ಸೂಪರಿಂಟೆಂಡಿಂಗ್ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನೀಯರಿಂಗ್ ವೃತ್ತ, ದಾವಣಗೆರೆ/ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ನೋಂದಣಿ ಮಾಡಿಸಿದ ಗುತ್ತಿಗೆದಾರರಿಂದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಏಕ–ಲಕೋಟೆ ಪದ್ಧತಿಯಲ್ಲಿ 2022–23ನೇ ಸಾಲಿನ ಜೆ.ಜೆ.ಎಂ. ಯೋಜನೆಯಡಿ ಹಿರಿಯೂರು ತಾಲ್ಲೂಕು ವ್ಯಾಪ್ತಿಯ ಹೊಸಯಳನಾಡು ಜನವಸತಿಯಲ್ಲಿ 473 ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸುವ ಕಾಮಗಾರಿ ರೂ. 112.42 ಲಕ್ಷಗಳ ಕಾಮಗಾರಿಗಳನ್ನು ಟೆಂಡರ್ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 23.02.2023ರ ಸಂಜೆ 04:00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 24.02.2023ರ ಸಂಜೆ 04:30 ಗಂಟೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 27.02.2023ರ ಸಂಜೆ 11:00 ಗಂಟೆ ಕಾಮಗಾರಿಗಳ ವಿವರಗಳನ್ನು https://eproc.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಹಾಗೂ ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾ.ನೀ.ಸ&ನೈ, ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
RO No. 1000: DIPR/CTA/KSMCA/2022-23 ಗ್ರಾ.ನೀ.ಸ&ನೈರ್ಮಲ್ಯ ವಿಭಾಗ, ಚಿತ್ರದುರ್ಗ.

TNPL TAMILNADU NEWSPRINT AND PAPERS LIMITED

Kagithapuram - 639 136. Karur Dist. Tamil Nadu.
Ph.: 04324 - 277001 (10 Lines). Email : purchase.recycle@tnpl.co.in

NOTICE INVITING TENDER

Tender No.	Material Description	Due date
222313 006970	Procurement of 1000 MT ± 5% Office Waste Paper (White Records) in Bale form from Karnataka to TNPL Unit - 1 at Kagithapuram	23.02.2023

Corrigendum if any will be issued in TNPL & NIC Website only. Detailed Terms & conditions Tender fee, EMD etc., are available in tender document at our websites: www.tnpl.com / www.tenders.tn.gov.in / https://tntenders.gov.in/nicgep/app

DIPR/1011/Tender/2023 *TNPL - Maker of bagasse based eco-friendly Paper*

"சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்."

ಕರ್ನಾಟಕ ರಾಜ್ಯ ಪೋಲಿಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

#59, ರಿಚ್‌ಮಂಡ್ ರಸ್ತೆ, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ, ಬೆಂಗಳೂರು – 560025.
ದೂರವಾಣಿ ಸಂಖ್ಯೆ: 080–25584102/25594893 ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟಿಎನ್‌ಡಿ/62/2022–23/335 ದಿನಾಂಕ: 14.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಟಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಕೆಡಬ್ಲ್ಯೂ–4ರ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in (ದ್ವಿ ಟೆಂಡರ್ ದಸ್ತಾವೇಜು ಪದ್ಧತಿ) ಮೂಲಕ ಈ ಕೆಳಕಂಡ ಕಾಮಗಾರಿಗಳಿಗಾಗಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದೆ.

1. ಕೆ–ಸೇಫ್–2 ಯೋಜನೆಯಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಅಮೀನಗಡದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಟಿಪಿ ರೂ.221.85 ಲಕ್ಷಗಳು)
2. ಕೆ–ಸೇಫ್–2 ಯೋಜನೆಯಡಿಯಲ್ಲಿ ಗದಗ ಜಿಲ್ಲೆಯ ಗಜೇಂದ್ರಗಡದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಟಿಪಿ ರೂ.223.11 ಲಕ್ಷಗಳು)
3. ಕೆ–ಸೇಫ್–2 ಯೋಜನೆಯಡಿಯಲ್ಲಿ ಬೆಳಗಾವಿ ಜಿಲ್ಲೆಯ ಕಾಗವಾಡ ತಾಲ್ಲೂಕಿನ ಮಂಗಸೂಳಿ ಗ್ರಾಮದಲ್ಲಿ 3 ಬೇ ಅಗ್ನಿಶಾಮಕ ಠಾಣೆ ನಿರ್ಮಾಣ. (ಎಟಿಪಿ ರೂ.223.03 ಲಕ್ಷಗಳು)

ಮತ್ತು

4. ಬೆಳಗಾವಿ ಜಿಲ್ಲೆಯ ಗೋಕಾಕ್ ಉಪ ಕಾರಾಗೃಹ ಆವರಣದಲ್ಲಿ 3 ಸಂಖ್ಯೆಯ ಬಾರಕ್ಸ್ ಕಟ್ಟಡಗಳ ನಿರ್ಮಾಣ. (ಎಟಿಪಿ ರೂ.152.32 ಲಕ್ಷಗಳು) (2ನೇ ಕರೆ)

ಇಚ್ಛೆಯುಳ್ಳ ಮತ್ತು ಅರ್ಹತೆವುಳ್ಳ ಗುತ್ತಿಗೆದಾರರು ಇ–ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತ್ಯಾದಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ 21.02.2023 ರಿಂದ ಲಭ್ಯವಿದೆ. ಯಾವುದೇ ಹೆಚ್ಚಿನ ವಿವರಗಳಿಗಾಗಿ ಕೆಎಸ್‌ಪಿಹೆಚ್ & ಐಡಿಸಿಎಲ್‌ನ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

"ಕೆಎಸ್‌ಪಿಹೆಚ್ & ಐಡಿಸಿಎಲ್ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/–
ವಾಸಾಸಂಇ/ವಾಪ್ರ/4699/ಎಎಎ/2022–23 ಕಾರ್ಯಪಾಲಕ ಅಭಿಯಂತರರು–ಗುತ್ತಿಗೆ

ಕರ್ನಾಟಕ ಸರ್ಕಾರ

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾ ಕಛೇರಿಗಳ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ಜಿಲ್ಲೆ, ಉಡುಪಿ–576 104

Ph: 0820-257433 Email: dudc_udupi@yahoomail.co.in

ಜಿನಕೋ(3): DC UDP-21016/2/2023-UDPDC-DUDC-UDUPI DC (E-104113) ದಿನಾಂಕ: 15.02.2023

ಟೆಂಡರ್ ಪ್ರಕಟಣೆ

ವಿಷಯ: ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ **"ಹೊಲಿಗೆ ಯಂತ್ರ"** ಒದಗಿಸಲು ಟೆಂಡರ್ ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ನಅಇ/66/ಐ.ಎಸ್.ಟಿ 2022 ಬೆಂಗಳೂರು ದಿನಾಂಕ: 02.01.2023(2)

ಮೇಲಿನ ವಿಷಯಕ್ಕೆ ಸಂಬಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–04 ರ ಯೋಜನೆಯ ವೈಯಕ್ತಿಕ ಕಾರ್ಯಕ್ರಮಗಳಾದ **SCSP, TSP,** ಶೇ.7.25 ರಷ್ಟು ಇತರೆ ಬಡಜನರ ಕಲ್ಯಾಣ ಕಾರ್ಯಕ್ರಮ ಘಟಕದಡಿ ಉಡುಪಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ **"ಹೊಲಿಗೆ ಯಂತ್ರ"** ವಿತರಿಸಬೇಕಾಗಿರುತ್ತದೆ. ಆದ್ದರಿಂದ ನಿಗಧಿಪಡಿಸಲಾಗಿರುವ ಕೋಷ್ಟಕದ ನಮೂನೆಯಲ್ಲಿ ವಿವರಿಸಿರುವಂತೆ ಅರ್ಹ ಏಜೆನ್ಸಿಯವರಿಂದ ಮತ್ತು ಸಂಸ್ಥೆಯವರು ಭಾಗವಹಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ದಸ್ತಾವೇಜುಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ www.eproc.karnataka.gov.in ನಲ್ಲಿ ಸಲ್ಲಿಸುವುದು. ಇದರ ಬಗ್ಗೆ ಯಾವುದೇ ತಿದ್ದುಪಡಿ ಹಾಗೂ Addendum ಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕವೇ ಪ್ರಚುರಪಡಿಸಲಾಗುವುದು.

ವಿವರ: ಉಡುಪಿ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ **"ಹೊಲಿಗೆ ಯಂತ್ರ"** ಒದಗಿಸುವ ಬಗ್ಗೆ, ಇಂಡೆಂಟ್ ಸಂಖ್ಯೆ: **DMA/2022-23/IND14986**
ಇ.ಎಂ.ಡಿ ಮೊತ್ತ: **52,800/–**

ಸಹಿ/–ಕಾರ್ಯಪಾಲಕ ಅಭಿಯಂತರರು,
ವಾಸಾಇ/ಉಡುಪಿ/ಕೆಎಸ್‌ಎಂಸಿಎ/881/22–23 ದಿ: 15.02.23 ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಜಿಲ್ಲೆ, ಉಡುಪಿ.

ಕೃಷಿ ವಿಶ್ವವಿದ್ಯಾಲಯ, ಧಾರವಾಡ

ಆಸ್ತಿ ವಿಭಾಗ, ಕೃಷಿ ನಗರ ಧಾರವಾಡ–5
Phone : +91-836-2214214, 332
E-mail : estateofficer@rediffmail.com, eo@uasd.in

ಸಂ.ಆಅ/ಇ–ಪ್ರೋ.ನರ್ಸರಿ/ /2022–23 ದಿನಾಂಕ : 14.02.2023

ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ಕೃಷಿ ವಿಶ್ವವಿದ್ಯಾಲಯ ಧಾರವಾಡದ ಸಂಕೇಶ್ವರ / ಅಲಮೇಲ / ಜಮಖಂಡಿ ಆವರಣಗಳಲ್ಲಿ ಕಬ್ಬಿನ ನರ್ಸರಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಅರ್ಹ ಏಜೆನ್ಸಿ / ಸೇವೆಗಳನ್ನು ಒದಗಿಸುವವರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ವೇಳಾ ಪಟ್ಟಿ

(1) ವಿಚಾರಣೆಗಳಿಗಾಗಿ ಕೊನೆಯ ದಿನಾಂಕ ಹಾಗೂ ವೇಳೆ : **25–02–2023** Upto 16.00 Hrs (2) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಹಾಗೂ ವೇಳೆ : **27–02–2023** Upto 16.00 Hrs (3) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ವೇಳೆ : **28–02–2023 @ 16.15 Hrs**

ಸದರಿ ಟೆಂಡರಗಳನ್ನು **e-procurement portal** ಪದ್ಧತಿಯಂತೆ **http://eproc.karnataka.gov.in online** ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ **0836–2214214/332/254** ಸಂಪರ್ಕಿಸಬಹುದು. ಇ–ಪ್ರೊಕ್ಯೂರಮೆಂಟ್ ನೋಂದಣಿಗಾಗಿ **080–23010900** ಸಂಪರ್ಕಿಸುವುದು.

ಸೂಚನೆ : ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ–ಪ್ರೊಕ್ಯೂರಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/1104/2022–23 ಸಹಿ/– ಆಸ್ತಿ ಅಧಿಕಾರಿಗಳು

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ: ರಾಗಾವಿ/ಪ್ರೊಕ್/ಪಿಆರ್.ಎಸ್‌ಟಿ/46/2022–23 ದಿನಾಂಕ: 14.02.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ) (2ನೇ ಕರ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ವಿಶ್ವವಿದ್ಯಾಲಯಕ್ಕೆ ವಿವಿಧ ಲೇಖನ ಸಾಮಗ್ರಿಗಳು ಮತ್ತು ಮುದ್ರಣ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	14/02/2023
ಪೂರ್ವ ಬಿಡ್ ಸಭೆಯ ದಿನಾಂಕ	20/02/2023 ಮಧ್ಯಾಹ್ನ 12:00 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	23/02/2023 ಸಂಜೆ 5:00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	27/02/2023 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/–
ವಾ.ಸಾ.ಸಂ.ಇ/4705/2022–23 ಕುಲಸಚಿವರು

(ಕರ್ನಾಟಕ ಸರ್ಕಾರ)

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಆಲೂರು–573213

E-mail: tlhalur01@gmail.com phone No.: 08170-218223
ಸಂ: ತಾ.ಸಾ.ಆ./ಆಲೂರು/ಹೊ.ಗು ಟೆಂಡರ್/01/2022–23
ದಿನಾಂಕ; 13/02/2023

:: ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ ::

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಆಲೂರು, ಹಾಸನ ಜಿಲ್ಲೆ 100 ಹಾಸಿಗೆಗಳ ಆಸ್ಪತ್ರೆಗೆ 23–24 ನೇ ಸಾಲಿಗೆ 7 ಜನ ನಾನ್ ಕ್ಲಿನಿಕಲ್ ಹಾಗೂ 10 ಗ್ರೂಪ್ ಡಿ ಮಾನವ ಸಂಪನ್ಮೂಲವನ್ನು ಹೊರಗುತ್ತಿಗೆಯಿಂದ ಪಡೆಯಲು ಅರ್ಹ ಟೆಂಡರ್‌ದಾರರಿಂದ / ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999 / 2000 ದ ಮೇರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ ಆಸಕ್ತ ಟೆಂಡರ್ ದಾರರು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಭಾಗವಹಿಸಬಹುದಾಗಿದ್ದು ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ www.eproc.karnataka.gov.in ವೆಬ್‌ಸೈಟಿನಲ್ಲಿ ಸಂಪರ್ಕಿಸಬಹುದು ಟೆಂಡರ್ ಪ್ರಕಟಿಸುವ ದಿನಾಂಕ: 13–02–2023 ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14–03–2023 ಸಂಜೆ 4:30 ರವರೆಗೆ.

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಆಲೂರು. ಹಾಸನ ಜಿಲ್ಲೆ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1082/2022–23

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/4059–ಎಸ್‌ಸಿಪಿ–ಟಿಎಸ್‌ಪಿ/2022–23/8460/ ದಿನಾಂಕ : 13–02–2023

ಇ–ಟೆಂಡರ್ ಪ್ರಕಟಣೆ

ದಿನಾಂಕಃ 13–02–2023ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 164672 ಮತ್ತು 164195ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **28–02–2023** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ಕೆ. ರಮೇಶ)
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/541/2022–23

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್, ನಂ. 2 ಕಟ್ಟಡಗಳ ವಿಭಾಗ, 1ನೇ ಮಹಡಿ, ಲೋ. ಇ. ಪೂರಕ ಕಟ್ಟಡ, ಕೆ. ಆರ್. ವೃತ್ತ, ಬೆಂಗಳೂರು – 560 001.
ದೂರವಾಣಿ : 080–2212 2856 ಫ್ಯಾಕ್ಸ್ : 080–2212 3368
ಇ–ಮೇಲ್ : eeblgno2@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 51/2022–23 ದಿನಾಂಕ : 15–02–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ನಂ. 2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ – 2000 ರನ್ವಯ ಮತ್ತು ಕೆಡಬ್ಲ್ಯೂ–1 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(http://eproc.karnataka.gov.in)** ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್ ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಕ್ರಮ ಸಂಖ್ಯೆ : 1. ಕಾಮಗಾರಿಯ ಹೆಸರು : ಡಿ.ಎಸ್.ಆರ್.ಟಿ. ಕಟ್ಟಡದ ಮೂರನೇ ಮಹಡಿಯಲ್ಲಿರುವ ನಿರ್ದೇಶಕರ ಕೊಠಡಿಗೆ ಹೊಂದಿಕೊಂಡಂತೆ ಆಂಟಿಚೇಂಬರ್ ಹಾಗೂ ಶೌಚಾಲಯವನ್ನು ನಿರ್ಮಿಸುವ ಕಾಮಗಾರಿ. KPWD/2022-23/BD/WORK_INDENT 164782 ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ (ರೂ.ಗಳಲ್ಲಿ) : ರೂ. 6,09,067.67, ಇ.ಎಂ.ಡಿ. ಮೊತ್ತ : ರೂ. 15,300.00. ಕ್ರಮ ಸಂಖ್ಯೆ : 2. ಕಾಮಗಾರಿಯ ಹೆಸರು : ಡಿ.ಎಸ್.ಆರ್.ಟಿ. ಕಟ್ಟಡದ ಮೂರನೇ ಮಹಡಿಯಲ್ಲಿರುವ ಹಾಲಿ ಕೊಠಡಿಯನ್ನು ನಿರ್ದೇಶಕರ ಕೊಠಡಿಯಾಗಿ ಮಾರ್ಪಡಿಸಲು ಅಭಿವೃದ್ಧಿ ದುರಸ್ಥಿ ಹಾಗೂ ಇತರೆ ಅವಶ್ಯ ಕಾಮಗಾರಿಗಳು. KPWD/2022-23/BD/WORK_INDENT 164982 ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ (ರೂ.ಗಳಲ್ಲಿ) : ರೂ. 8,04,972.62, ಇ.ಎಂ.ಡಿ. ಮೊತ್ತ : ರೂ. 20,200.00. ಕ್ರಮ ಸಂಖ್ಯೆ : 3. ಕಾಮಗಾರಿಯ ಹೆಸರು : ಡಿ.ಎಸ್.ಆರ್.ಟಿ. ಕಟ್ಟಡದ ಮೂರನೇ ಮಹಡಿಯಲ್ಲಿರುವ ಹಾಲಿ ನಿರ್ದೇಶಕರ ಕೊಠಡಿಯನ್ನು ಸಭೆ ಕೊಠಡಿಯಾಗಿ ಮಾರ್ಪಡಿಸಲು ಅಭಿವೃದ್ಧಿ ದುರಸ್ಥಿ ಹಾಗೂ ಇತರೆ ಅವಶ್ಯ ಕಾಮಗಾರಿಗಳು. KPWD/2022-23/BD/WORK_INDENT 164983 ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ (ರೂ.ಗಳಲ್ಲಿ) : ರೂ. 5,63,482.76, ಇ.ಎಂ.ಡಿ. ಮೊತ್ತ : ರೂ. 14,100.00. ಕ್ರಮ ಸಂಖ್ಯೆ : 4. ಕಾಮಗಾರಿಯ ಹೆಸರು : ಡಿ.ಎಸ್.ಆರ್.ಟಿ. ಕಟ್ಟಡದ ಮೇಲ್ಚಾವಣಿ ದುರಸ್ಥಿ, ಜಲನಿರೋಧಕ ಅಳವಡಿಸುವುದು ಹಾಗೂ ಇತರೆ ಅವಶ್ಯ ಕಾಮಗಾರಿಗಳು. KPWD/2022-23/BD/WORK_INDENT 164984 ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ (ರೂ.ಗಳಲ್ಲಿ) : ರೂ. 7,98,488.44, ಇ.ಎಂ.ಡಿ. ಮೊತ್ತ : ರೂ. 20,000.00. ಕ್ರಮ ಸಂಖ್ಯೆ : 5. ಕಾಮಗಾರಿಯ ಹೆಸರು : ಡಿ.ಎಸ್.ಆರ್.ಟಿ. ಕಟ್ಟಡಕ್ಕೆ ಹೊಂದಿಕೊಂಡಿರುವ ತಳಮಹಡಿಯಲ್ಲಿರುವ ಕೃಷ್ಣ ಸ್ಟುಡಿಯೋದ ದುರಸ್ಥಿ ಹಾಗೂ ಇತರೆ ಅವಶ್ಯ ಕಾಮಗಾರಿಗಳು. KPWD/2022-23/BD/ WORK_INDENT 164985 ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ (ರೂ.ಗಳಲ್ಲಿ) : ರೂ. 6,72,193.00, ಇ.ಎಂ.ಡಿ. ಮೊತ್ತ : ರೂ. 17,000.00. ಕ್ರಮ ಸಂಖ್ಯೆ : 6. ಕಾಮಗಾರಿಯ ಹೆಸರು : ತುಂಗಾ ಸ್ಟುಡಿಯೋ ಮೇಲ್ಚಾವಣಿ ದುರಸ್ಥಿ ಮೇಲ್ಚಾವಣಿಯಿಂದ ನೀರು ಒಳಬಾರದಂತೆ ಶೀಟ್ ಅಳವಡಿಕೆ ಹಾಗೂ ಡಿ.ಎಸ್.ಆರ್.ಟಿ. ಕಟ್ಟಡದ ಹಿಂಭಾಗದ ಮೇಲ್ಚಾವಣಿ ದರುಸ್ಥಿ, ಜಲನಿರೋಧಕ ಅಳವಡಿಕೆ ಇತರೆ ಅವಶ್ಯ ಕಾಮಗಾರಿಗಳು. KPWD/2022-23/BD/WORK_INDENT 164986 ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ (ರೂ.ಗಳಲ್ಲಿ) : ರೂ. 5,97,026.59, ಇ.ಎಂ.ಡಿ. ಮೊತ್ತ : ರೂ. 15,000.00. ಕ್ರಮ ಸಂಖ್ಯೆ : 1 ರಿಂದ 6 ರವರೆಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿಗೊಳಿಸಿರುವ ಕಾಲಾವಧಿ : 6 ತಿಂಗಳು (ಮಳೆಗಾಲ ಸೇರಿ), ಕ್ರಮ ಸಂಖ್ಯೆ : 1 ರಿಂದ 6 ರವರೆಗೆ ಗುತ್ತಿಗೆದಾರರ ದರ್ಜೆ : 4ನೇ ದರ್ಜೆ ಮತ್ತು ಮೇಲ್ಪಟ್ಟು, ಕ್ರಮ ಸಂಖ್ಯೆ : 1 ರಿಂದ 6 ರವರೆಗೆ ಟೆಂಡರ್ ಕರೆ : ಮೊದಲನೇ ಕರೆ.

1) ಟೆಂಡರ್ ಡಾಕ್ಯೂಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ : 15–02–2023. 2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ : 22–02–2023 ರ ಸಂಜೆ 4.30 ಗಂಟೆಯವರೆಗೆ. 3) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 24–02–2023 ರ ಸಂಜೆ 4.30 ಗಂಟೆಗೆ ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (http://eproc.karnataka.gov.in) ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ವಾಸಾಇ/ಬೆಂ.ನ./4720/ಮಣಿಪಾಲ್/2022–23 ನಂ. 2, ಕಟ್ಟಡಗಳ ವಿಭಾಗ, ಬೆಂಗಳೂರು.

ರಾಮಚಂದ್ರಪ್ಪ ಪೂರ್ವಿಕರ ಮನೆ ನವೀಕರಣ • 'ತೊಟ್ಟಿಲು' ತುಂಬಿದ ಪುಸ್ತಕ, ಪ್ರಶಸ್ತಿ, ಫಲಕ

ಸಾಹಿತಿ ಬರಗೂರು ಮನೆ ಈಗ ಮ್ಯೂಸಿಯಂ

ಪ್ರಜಾವಾಣಿ ವಾರ್ತೆ

ಶಿರಾ: ತಾಲ್ಲೂಕಿನ ಬರಗೂರು ಗ್ರಾಮದಲ್ಲಿರುವ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಹುಟ್ಟಿ ಬೆಳೆದ ಹಳೆಯ ಮನೆಯನ್ನು ಮಿನಿ ಮ್ಯೂಸಿಯಂ ಆಗಿ ಮಾರ್ಪಾಡು ಮಾಡಲಾಗಿದ್ದು, ಅದಕ್ಕೆ 'ತೊಟ್ಟಿಲು' ಎಂದು ನಾಮಕರಣ ಮಾಡಲಾಗಿದೆ.

ನಾಡೋಜ ಡಾ.ಬರಗೂರು ಪ್ರತಿಷ್ಠಾನ ಬುಧವಾರ ಹಮ್ಮಿಕೊಂಡಿದ್ದ ಮ್ಯೂಜಿಯಂ ಉದ್ಘಾಟನೆ ಕಾರ್ಯಕ್ರಮದಿಂದ ಗ್ರಾಮದಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಚಿತ್ರನಟರಾದ ಸುಂದರರಾಜ್, ಕುಮಾರ್ ಗೋವಿಂದ್, ನಟಿ ರೇಖಾ, ಸಾಹಿತಿ ಡಾ.ರಾಜಪ್ಪ ದಳವಾಯಿ, ಗಾಯಕಿ ಡಾ.ಶಮಿತಾ ಮಲ್ನಾಡ್ ಬಂದು ಶುಭ ಕೋರಿದರು.

ರಾಮಚಂದ್ರಪ್ಪ ಅವರ ಪೂರ್ವಿಕರ ಮನೆಯನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿ ಪ್ರತಿಷ್ಠಾನವು ಹಳೆಯ ಕಟ್ಟಡವನ್ನು ಸಂಪೂರ್ಣ ನವೀಕರಣಗೊಳಿಸಿ ಹೊಸ ರೂಪ ನೀಡಿದೆ. ಇದು ಗ್ರಾಮಸ್ಥರು ಹಾಗೂ ಸಾಹಿತ್ಯಾಸಕ್ತರಲ್ಲಿ ಸಂತಸ ಮೂಡಿಸಿದೆ.

ಬರಗೂರು ಅವರ ಬದುಕು, ಬರಹ ಮತ್ತು ಸಾಧನೆ ಬಿಂಬಿಸುವ ಜೊತೆಗೆ ಸಾಂಸ್ಕೃತಿಕ ಪರಿಕಲ್ಪನೆಯ ಪ್ರಯೋಗಾಲಯವನ್ನಾಗಿ ಈ ಮ್ಯೂಸಿಯಂ ರೂಪಿಸಲಾಗಿದೆ. ಅವರಿಗೆ ದೊರೆತ ಪ್ರಶಸ್ತಿ, ಪಾರಿತೋಷಕ, ಗಣ್ಯ ವ್ಯಕ್ತಿಗಳ ಒಡನಾಟದ ಅಪರೂಪದ ಫೋಟೊಗಳು, ರಚಿಸಿರುವ ಪುಸ್ತಕ, ಚಲನಚಿತ್ರಗಳಿಗೆ ದೊರೆತ ಪ್ರಶಸ್ತಿ, ಫಲಕಗಳು ತೊಟ್ಟಿಲನ್ನು ಅಲಂಕರಿಸಿವೆ.

'ಮುಂದಿನ ದಿನಗಳಲ್ಲಿ ಬರಗೂರು ಅವರಿಗೆ ಸಂಬಂಧಿಸಿದ ಅಪರೂಪದ ವಸ್ತುಗಳ ಜೊತೆಗೆ ಅವರ ಬಗ್ಗೆ ಇಲ್ಲಿ ಸಂಪೂರ್ಣ ಮಾಹಿತಿ ದೊರೆಯುವಂತೆ ಮಾಡುವ ಯೋಚನೆ ಇದೆ. ಸಾಹಿತ್ಯ ಚಟುವಟಿಕೆಯ ಕೇಂದ್ರವನ್ನಾಗಿ ಈ ಮ್ಯೂಸಿಯಂ ಅನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ಪ್ರತಿಷ್ಠಾನ ಹೇಳಿದೆ.

ಮತ್ತೆ ಬರಗೂರು ಅಸ್ವಸ್ಥ– ಚೇತರಿಕೆ

ಬರಗೂರು ಗ್ರಾಮದಲ್ಲಿ ನಡೆದ ಮ್ಯೂಸಿಯಂ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವೇಳೆ ಬರಗೂರು ರಾಮಚಂದ್ರಪ್ಪ ಅಸ್ವಸ್ಥಗೊಂಡರು.

ಊಟದ ನಂತರ ಅವರಲ್ಲಿ ಸುಸ್ತು ಕಾಣಿಸಿಕೊಂಡು, ನಿತ್ರಾಣಗೊಂಡರು. ತಕ್ಷಣ ಕುಟುಂಬದ ಸದಸ್ಯರು ಹಾಗೂ ಇತರರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದರು. ಚಿಕಿತ್ಸೆ ಬಳಿಕ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿತು. ಹರಿಹರದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಅವರು ಇದೇ ರೀತಿ ಹಠಾತ್ ಅಸ್ವಸ್ಥಗೊಂಡಿದ್ದರು.



ಮ್ಯೂಸಿಯಂ ಒಳನೋಟ

279 ಬೋಧಕೇತರ ಹುದ್ದೆ ರದ್ದು

ಬೆಂಗಳೂರು: ಬೋಧಕೇತರ 279 ಹುದ್ದೆಗಳನ್ನು ರದ್ದು ಮಾಡಿ, ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ 58 ಉಪ ಪ್ರಾಂಶುಪಾಲ, ಮುಖ್ಯ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ನಾಲ್ಕು, ಆಯುಕ್ತರ ಕಚೇರಿಯ ಐದು, ಡಯಟ್, ಪದವಿಪೂರ್ವ ಕಾಲೇಜುಗಳ ತಲಾ ಒಂದು ಹುದ್ದೆಗಳು ಸೇರಿ ಶೀಘ್ರ ಲಿಪಿಗಾರರು (50), ಹಿರಿಯ ಬೆರಳಚ್ಚುಗಾರರು (29), ದ್ವಿತೀಯ ದರ್ಜೆ ಸಹಾಯಕರು (100), ದತ್ತಾಂಶ ನಿರ್ವಹಣೆ ಸಿಬ್ಬಂದಿ (50) ಹಾಗೂ ಬೆರಳಚ್ಚುಗಾರರ (50) ಹುದ್ದೆಗಳು ರದ್ದಾಗಿವೆ. ರದ್ದಾದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಸಮೀಪದ ಸೂಕ್ತ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ಆಯುಕ್ತ ಆರ್. ವಿಶಾಲ್ ಆದೇಶದಲ್ಲಿ ವಿವರಿಸಿದ್ದಾರೆ.

ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಹೊಸದಾಗಿ 58 ಮುಖ್ಯ ಶಿಕ್ಷಕರು, ಉಪ ಪ್ರಾಂಶುಪಾಲರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. 500ಕ್ಕೂ ಕಡಿಮೆ ವಿದ್ಯಾರ್ಥಿಗಳಿರುವ 35 ಶಾಲೆಗಳಿಗೆ ಇತರೆ ಶಾಲೆ, ಕಚೇರಿಗಳಲ್ಲಿನ ಮುಖ್ಯ ಶಿಕ್ಷಕರ ಹುದ್ದೆ ಸ್ಥಳಾಂತರಿಸುವಂತೆ ಸೂಚಿಸಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ – ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಬಿಬಿಸಿ ಕಚೇರಿಗಳ ಮೇಲೆ ಐ.ಟಿ ಇಲಾಖೆಯು ನಡೆಸಿದ ಪರಿಶೀಲನೆ, ಪ್ರಧಾನಿ ಕುರಿತು ಪ್ರಸಾರವಾಗಿದ್ದ ಸಾಕ್ಷ್ಯಚಿತ್ರಕ್ಕೆ ಪ್ರತಿಯಾಗಿ ಕೈಗೊಂಡ ಸೇಡಿನ ಕ್ರಮ ಎಂದು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಜೆಡಿಎಸ್ ಅಭ್ಯರ್ಥಿ ಪ್ರಭಾಕರ ರೆಡ್ಡಿ ಮನೆ ಮೇಲೆ ಐ.ಟಿ ದಾಳಿ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿ ಹಾಗೂ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್. ಪ್ರಭಾಕರ ರೆಡ್ಡಿ ಅವರ ಮನೆ ಹಾಗೂ ಕಚೇರಿಗಳ ಮೇಲೆ ಬುಧವಾರ ದಾಳಿಮಾಡಿರುವ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಮೈಲಸಂದ್ರದಲ್ಲಿರುವ ರೆಡ್ಡಿ ಅವರ ಮನೆ, ಕಚೇರಿ, ಕೋಣನಕುಂಟೆ, ದೊಮ್ಮಲೂರು, ಎಚ್‌ಎಸ್‌ಆರ್ ಬಡಾವಣೆಗಳಲ್ಲಿರುವ ಅವರ ಆಸ್ತಿಗಳ ಮೇಲೆ ದಾಳಿ ನಡೆದಿದೆ. ಬುಧವಾರ ಬೆಳಿಗ್ಗೆಯೇ ಹಲವು ತಂಡಗಳಲ್ಲಿ ಈ ಸ್ಥಳಗಳ ಮೇಲೆ ದಾಳಿಮಾಡಿರುವ ಆದಾಯ ತೆರಿಗೆ ಅಧಿಕಾರಿಗಳು, ಇಡೀ ದಿನ ಶೋಧ ನಡೆಸಿದರು. ತೆರಿಗೆ ವಂಚನೆ, ಆದಾಯದ ವಿವರ ಮುಚ್ಚಿಟ್ಟಿರುವುದು ಮತ್ತಿತರ ಅಂಶಗಳನ್ನು ಆಧರಿಸಿ ದಾಳಿ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅರಸೀಕೆರೆ ನಗರಸಭೆ ಅಧ್ಯಕ್ಷ ಅನರ್ಹ



ಸಿ. ಗಿರೀಶ್

ಅರಸೀಕೆರೆ (ಹಾಸನ ಜಿಲ್ಲೆ): ನಗರಸಭೆಗೆ ಸೇರಿದ್ದು ಎನ್ನಲಾದ ಪಂಪ್ ಹೌಸ್ ಕಟ್ಟಡವನ್ನು ವರ್ಷದ ಹಿಂದೆ ನೆಲಸಮ ಮಾಡಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರಸಭೆ ಅಧ್ಯಕ್ಷ ಸಿ.ಗಿರೀಶ್ ಅವರನ್ನು ನಗರಸಭೆಯ ಅಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವದಿಂದ ಅನರ್ಹಗೊಳಿಸಿ ಮೈಸೂರು ಪ್ರಾದೇಶಿಕ ಆಯುಕ್ತರ ನ್ಯಾಯಾಲಯ ಆದೇಶ ಹೊರಡಿಸಿದೆ.

ನಗರಸಭೆಯ ಸಾಮಾನ್ಯ ಸಭೆಯಿಂದ ಅನುಮತಿ ಪಡೆಯದೇ, ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೂ ತಿಳಿಸದೇ ಅಧ್ಯಕ್ಷ ಸಿ. ಗಿರೀಶ್ ಸೂಚನೆಯಂತೆ ಪಂಪ್‌ಹೌಸ್ ಕಟ್ಟಡ ನೆಲಸಮ ಮಾಡಲಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಅಂದಿನ ನಗರಸಭೆ ಪೌರಾಯುಕ್ತರು, ಸಾರ್ವಜನಿಕರ ದೂರು ಆಧರಿಸಿ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ್ದರು. ಜಿಲ್ಲಾಧಿಕಾರಿಯಿಂದ ಪೌರಾಡಳಿತ ಇಲಾಖೆಗೆ ವರದಿ ಸಲ್ಲಿಕೆಯಾಗಿತ್ತು.

ಈ ವರದಿ ಅನ್ವಯ ಸೂಕ್ತ ತನಿಖೆ ನಡೆಸುವಂತೆ ಪೌರಾಡಳಿತ ಇಲಾಖೆ, ಮೈಸೂರು ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಅವರಿಗೆ ನಿರ್ದೇಶನ ನೀಡಿತ್ತು. ವಿಚಾರಣೆ ನಡೆಸಿದ ಮೈಸೂರು ಪ್ರಾದೇಶಿಕ ಆಯುಕ್ತರ ನ್ಯಾಯಾಲಯ ತಕ್ಷಣದಿಂದಲೇ ಜಾರಿಗೆ ಬರುವಂತೆ ಈ ಆದೇಶ ಹೊರಡಿಸಿದೆ.

ನಗರಸಭೆಯಲ್ಲಿ ಬಿಜೆಪಿಗೆ ಬಹುಮತ ಇಲ್ಲದಿದ್ದರೂ ಮೀಸಲಾತಿ ಆಧಾರದ ಎರಡು ವರ್ಷಗಳಿಂದ ಗಿರೀಶ್ ಅಧ್ಯಕ್ಷರಾಗಿದ್ದರು.

'ಕೆಲವರ ಹುನ್ನಾರದಿಂದ ಅಧ್ಯಕ್ಷ ಸ್ಥಾನ ಮತ್ತು ಸದಸ್ಯತ್ವದಿಂದ ಕೆಳಗೆ ಇಳಿಯುವಂತಾಗಿದೆ. ಕಾನೂನು ಹೋರಾಟ ಮಾಡುವೆ. ಗೆಲ್ಲುವ ವಿಶ್ವಾಸ ವಿದೆ' ಎಂದು ಗಿರೀಶ್ ಪ್ರತಿಕ್ರಿಯಿಸಿದರು.

ಆಲಮೇಲದಲ್ಲಿ ಇಂದು 'ಪ್ರಜಾವಾಣಿ ಅಮೃತ ಸಾಹಿತ್ಯೋತ್ಸವ'

ವಿಜಯಪುರ: 'ಪ್ರಜಾವಾಣಿ' ಅಮೃತ ಮಹೋತ್ಸವದ ಅಂಗವಾಗಿ ಆಲಮೇಲ ತಾಲ್ಲೂಕಿನ ಕಡಣಿಯ 'ಬೆರಗು' ಪ್ರಕಾಶನದ ಸಹಯೋಗದೊಂದಿಗೆ ಫೆಬ್ರುವರಿ 16ರಂದು ಬೆಳಿಗ್ಗೆ 10ಕ್ಕೆ ವಿಭೂತಿಹಳ್ಳಿಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಆವರಣದಲ್ಲಿ 'ಪ್ರಜಾವಾಣಿ ಅಮೃತ ಸಾಹಿತ್ಯೋತ್ಸವ' ಆಯೋಜಿಸಲಾಗಿದೆ.

ಸಾಹಿತಿ ಕುಂ.ವೀರಭದ್ರಪ್ಪ 'ಅಮೃತ ಸಾಹಿತ್ಯೋತ್ಸವ'ಕ್ಕೆ ಚಾಲನೆ ನೀಡಲಿದ್ದಾರೆ. 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಸಾಹಿತ್ಯೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ. 'ಬೆರಗು' ಪ್ರಕಾಶನ ಹೊರತಂದಿರುವ 12 ಪುಸ್ತಕಗಳನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದ ನಿರ್ದೇಶಕ ಪ್ರೊ.ಎಚ್.ಟಿ.ಪೋತೆ ಬಿಡುಗಡೆ ಮಾಡಲಿದ್ದಾರೆ.



ಪ್ರಜಾವಾಣಿ ಅಮೃತ ಮಹೋತ್ಸವ

'ಸಾವಿರದ ಸಂತ ಶ್ರೀ ಸಿದ್ದೇಶ್ವರರು' ರಾಜ್ಯಮಟ್ಟದ ಕಾವ್ಯಸ್ಪರ್ಧೆಯ ವಿಜೇತರಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ಬಹುಮಾನ ವಿತರಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಹಾಸಿಂಪೀರ ವಾಲಿಕಾರ 'ಚಿತ್ರಕಲಾ ಪ್ರದರ್ಶನ' ಉದ್ಘಾಟಿಸಲಿದ್ದಾರೆ.

ಮಧ್ಯಾಹ್ನ 12ಕ್ಕೆ 'ಪ್ರಜಾವಾಣಿ ಮತ್ತು ಸಾಹಿತ್ಯ' ವಿಚಾರಗೋಷ್ಠಿ ಮತ್ತು ಮಧ್ಯಾಹ್ನ 2ಕ್ಕೆ ಕವಿಗೋಷ್ಠಿ, ಸಂಜೆ 4ಕ್ಕೆ ಪ್ರಶಸ್ತಿ ಪ್ರದಾನ ಮತ್ತು ಸಮಾರೋಪ ಸಮಾರಂಭ ನಡೆಯಲಿದೆ. ಸಾಹಿತಿಗಳಾದ ಡಾ.ಸತ್ಯಾನಂದ ಪಾತ್ರೋಟ, ಡಾ.ನಿಂಗಪ್ಪ ಮುದೇನೂರು, ಡಾ. ರಾಮಕೃಷ್ಣ ಮರಾಠೆ, ಡಾ.ಬಸವರಾಜ ಡೋಣೂರ, ಡಾ.ಎಂ.ಎಂ. ಪಡಶೆಟ್ಟಿ, ಪ್ರೊ.ರಾಜಕುಮಾರ ಬಡಿಗೇರ, ಸೋಮಶೇಖರ ಜಮಶೆಟ್ಟಿ, ಡಾ.ಶ್ರೀಶೈಲ ನಾಗರಾಳ, ಸಿ.ಎಂ.ಬಂಡಗಾರ, ಶಂಕರ ಬೈಚಬಾಳ ಸೇರಿದಂತೆ ನಾಡಿನ ಪ್ರಸಿದ್ಧ ಸಾಹಿತಿ, ಕಲಾವಿದರು ಮತ್ತು ಗಣ್ಯರು ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ.

ನಿಧನ ವಾರ್ತೆ

ಮಾಜಿ ಎಂಎಲ್‌ಸಿ ಹೊನ್ನಪ್ಪ



ಮಂಡ್ಯ: ವಿಧಾನಪರಿಷತ್ ಮಾಜಿ ಸದಸ್ಯ, ಬಿಜೆಪಿ ಮುಖಂಡ ಇಂಡುವಾಳು ಎಚ್. ಹೊನ್ನಪ್ಪ (75) ವಯೋಸಹಜ ಆರೋಗ್ಯ ಸಮಸ್ಯೆಯಿಂದ ಮಂಗಳವಾರ ತಡ ರಾತ್ರಿ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ. ಇಂಡುವಾಳು ಗ್ರಾಮದ ಜಮೀನಿನಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿತು.

ಕಲುಷಿತ ನೀರು: ಇಬ್ಬರು ಸಾವು

ಒಂದನೇ ಪುಟದಿಂದ...

'ಇಬ್ಬರು ಮಹಿಳೆಯರು ಸಾವಿಗೆ ಮತ್ತು ಜನರು ಅಸ್ವಸ್ಥಗೊಳ್ಳಲು ಕಲುಷಿತ ನೀರು ಕುಡಿದಿದ್ದೇ ಕಾರಣ ಎಂಬ ಶಂಕೆಯಿದೆ. ಗ್ರಾಮದ ಕರೆಮ್ಮ ದೇವಸ್ಥಾನ, ಚೌಡಕಟ್ಟಿ ಓಣಿಯಲ್ಲಿ ಕುಡಿಯುವ ನೀರಿನ ಪೈಪ್‌ಲೈನ್ ಸೋರಿಕೆಯಿಂದ ನೀರು ಕಲುಷಿತ ಆಗಿರಬಹುದು. ಗ್ರಾಮದ ನೀರಿನ ಟ್ಯಾಂಕ್, ಕೊಳವೆಬಾವಿಯ ನೀರಿನ ಗುಣಮಟ್ಟ ಪರಿಶೀಲಿಸಲು ಅದನ್ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಗುರುರಾಜ ಹಿರೇಗೌಡರ್ ತಿಳಿಸಿದರು.

'ಜನರ ಚಿಕಿತ್ಸೆಗೆಂದು ಆರೋಗ್ಯ ಇಲಾಖೆಯಿಂದ ಮೂರು ತಂಡ ರಚಿಸಲಾಗಿದೆ. ವೈದ್ಯರು, ವೈದ್ಯಕೀಯ ಸಿಬ್ಬಂದಿ ಒಳಗೊಂಡ ತಂಡವು ಗ್ರಾಮದಲ್ಲಿ ಬೀಡುಬಿಟ್ಟಿದೆ. ಕುಡಿಯಲು ಯೋಗ್ಯವಲ್ಲದ ನೀರಿನ ಪೂರೈಕೆ ತಕ್ಷಣವೇ ಸ್ಥಗಿತಗೊಳಿಸಲು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಸೂಚಿಸಲಾಗಿದೆ' ಎಂದರು.

(ಕರ್ನಾಟಕ ಸರ್ಕಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಹಾಸನ ವಿಭಾಗ, ಹಾಸನ,
Ph:08172-261640 Email ID:eerdwsd.hsn@gmail.com

ಏಕ ಹಾಗೂ ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವದಿ ಟೆಂಡರ್ ಪ್ರಕಟಣೆ:22/2022-23 ದಿನಾಂಕ: 14-02-2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ ರವರಿಂದ 2022-23ನೇ ಸಾಲಿನಲ್ಲಿ JJM ಯೋಜನೆಯಡಿ ಅನುಮೋದನೆಯಾಗಿರುವ ಬೇಲೂರು, ಅರಕಲಗೂಡು, ಚನ್ನರಾಯಪಟ್ಟಣ, ಅರಸೀಕೆರೆ, ಹೊಳೆನರಸೀಪುರ ಹಾಗೂ ಸಕಲೇಶಪುರ ತಾಲ್ಲೂಕಿನ ಕಾಮಗಾರಿಗಳು ಹಾಗೂ 2022-23 ನೇ ಸಾಲಿನಲ್ಲಿ ಶಿವಮೊಗ್ಗ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯ ಅನುದಾನದಡಿ ಹಾಸನ ನಗರ ವ್ಯಾಪ್ತಿಗೆ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ಮಾಣದ ಅನುಮೋದನೆಯಾಗಿರುವ ಹಾಸನ ತಾಲ್ಲೂಕಿನ ಕಾಮಗಾರಿಗಳಿಗೆ ಈ ಕೆಳಕಂಡಂತೆ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ಏಕ-ಲಕೋಟೆ ಪದ್ಧತಿ ಕಾಮಗಾರಿಗಳು ಬೇಲೂರು ತಾಲ್ಲೂಕಿನ 08 ಕಾಮಗಾರಿಗಳು (ಎಸ್.ಸಿ.-4, ಎಸ್.ಟಿ.-4). ಅರಕಲಗೂಡು ತಾಲ್ಲೂಕಿನ 04 ಕಾಮಗಾರಿ (ಎಸ್.ಸಿ.-3, ಎಸ್.ಟಿ.-1). ಚನ್ನರಾಯಪಟ್ಟಣ ತಾಲ್ಲೂಕಿನ 02 ಕಾಮಗಾರಿ (ಎಸ್.ಸಿ.-02). ಸಕಲೇಶಪುರ ತಾಲ್ಲೂಕಿನ 04 ಕಾಮಗಾರಿ (ಸಾಮಾನ್ಯ-04). ಅರಸೀಕೆರೆ ತಾಲ್ಲೂಕಿನ 01 ಕಾಮಗಾರಿ (ಎಸ್.ಸಿ.-01). ಹೊಳೆನರಸೀಪುರ ತಾಲ್ಲೂಕಿನ 01 ಕಾಮಗಾರಿ (ಎಸ್.ಟಿ.-01). ಪ್ಯಾಕೇಜ್‌ಗಳು-2 : ಹಾಸನ ತಾಲ್ಲೂಕಿನ 05 ಕಾಮಗಾರಿಗಳು (ಎಸ್.ಸಿ). ದ್ವಿ-ಲಕೋಟೆ ಪದ್ಧತಿ ಕಾಮಗಾರಿಗಳು ಪ್ಯಾಕೇಜ್‌ಗಳು-1 : ಹಾಸನ ತಾಲ್ಲೂಕಿನ 13 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 9- ಬೇಲೂರು ತಾಲ್ಲೂಕಿನ 2 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 10- ಬೇಲೂರು ತಾಲ್ಲೂಕಿನ 4 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 11- ಬೇಲೂರು ತಾಲ್ಲೂಕಿನ 7 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 12- ಬೇಲೂರು ತಾಲ್ಲೂಕಿನ 8 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 13- ಬೇಲೂರು ತಾಲ್ಲೂಕಿನ 8 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 14- ಬೇಲೂರು ತಾಲ್ಲೂಕಿನ 5 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್17- ಬೇಲೂರು ತಾಲ್ಲೂಕಿನ 5 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್19- ಬೇಲೂರು ತಾಲ್ಲೂಕಿನ 7 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 20- ಬೇಲೂರು ತಾಲ್ಲೂಕಿನ 7 ಕಾಮಗಾರಿಗಳು (ಸಾಮಾನ್ಯ ವರ್ಗ) ಪ್ಯಾಕೇಜ್ 21- ಬೇಲೂರು ತಾಲ್ಲೂಕಿನ 3 ಕಾಮಗಾರಿಗಳು (ಸಾಮಾನ್ಯ ವರ್ಗ) ಸದರಿ ಕಾಮಗಾರಿಗಳಿಗೆ ಏಕ ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ಟೆಂಡರ್‌ನ್ನು ನಿಗಧಿತ ನಮೂನೆಗಳನ್ನು ದಿನಾಂಕ: 15-02-2023ರ ಸಂಜೆ 17:00 ರಿಂದ www.e-procurement.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 17-02-2023 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 21-02-2023ರಂದು ಪೂರ್ವಾಹ್ನ 11.00 ಗಂಟೆಗೆ ಈ ಕಛೇರಿಯಲ್ಲಿ ಸದರಿ ಯೋಜನೆಯ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಸ್ಥಳ : - ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾಸನ ಜಿಲ್ಲಾ ಪಂಚಾಯತ್ ಕಟ್ಟಡ, ಎನ್.ಆರ್ ವೃತ್ತ ಹಾಸನ. ದಿನಾಂಕ:24-02-2023 ರಂದು ಸಂಜೆ 17:00 ಘಂಟೆಯ ನಂತರ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ:27-02-2023ರ ಬೆಳಿಗ್ಗೆ 11:00 ಗಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ,ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1091/2022-23

ಕೇಂದ್ರೀಯ ವಿದ್ಯಾಲಯ ಡಿಆರ್‌ಡಿಓ
केन्द्रीय विद्यालय डीआर डी ओ
KENDRIYA VIDYALAYA DRDO
C.V.RAMAN NAGAR,BENGALURU – 560 093 Phone: 25243919,
Website: drdobangalore.kvs.ac.in, Email id :kvdrdobangalore@gmail.com

ವಾಕ್-ಇನ್-ಇಂಟರ್ವ್ಯೂ

ಬೆಂಗಳೂರಿನ ಕೇಂದ್ರೀಯ ವಿದ್ಯಾಲಯ ಡಿ ಆರ್ ಡಿ ಓ, ಸಿ.ವಿ.ರಾಮನ್ ನಗರ, ಬೆಂಗಳೂರು-560093 ನಲ್ಲಿ ಗುತ್ತಿಗೆ ಆಧಾರದ ಮೇಲೆ ಶಿಕ್ಷಕರ ಆಯ್ಕೆ ಪಟ್ಟಿಯನ್ನು (ಪ್ಯಾನಲ್) ಸಿದ್ಧಪಡಿಸಲು, ಅಭ್ಯರ್ಥಿಗಳ (18 ರಿಂದ 65 ವಯೋಮಾನದವರು) ಸಂದರ್ಶನವನ್ನು ಈ ಕೆಳಗಿನಂತೆ ನಡೆಸಲಾಗುತ್ತದೆ. ಆಯ್ಕೆಯಾದ ಅಭ್ಯರ್ಥಿಗಳ ಸೇವೆಗಳನ್ನು ಅವರು ನೀಡಿದ ಆದ್ಯತೆಗೆ ಅನುಗುಣವಾಗಿ ಮತ್ತು ಅಗತ್ಯವಿರುವಾಗ ಈ ಶಾಲೆಗಳಲ್ಲಿ ತೆಗೆದುಕೊಳ್ಳಲಾಗುತ್ತದೆ.

ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಲ್ಲಿ ಕೇಂದ್ರೀಯ ವಿದ್ಯಾಲಯ ಡಿ ಆರ್ ಡಿ ಓ, ಸಿ.ವಿ.ರಾಮನ್ ನಗರ, ಬೆಂಗಳೂರು-560093 ನಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಮತ್ತು ಪ್ರಮಾಣಪತ್ರಗಳ ಮೂಲ ಮತ್ತು ಫೋಟೊ ಕಾಪಿಗಳು ಮತ್ತು ಪಾಸ್ಪೋರ್ಟ್ ಭಾವಚಿತ್ರದೊಂದಿಗೆ ಹಾಜರಾಗಬೇಕು. ಎಲ್ಲಾ ಹುದ್ದೆಗಳ ನೋಂದಣಿಯನ್ನು ಅದೇ ದಿನ ಬೆಳಿಗ್ಗೆ 9.00 ರಿಂದ 2.00 ರವರೆಗೆ ಮಾಡಲಾಗುತ್ತದೆ.

ಸಂದರ್ಶನದ ಸ್ಥಳ: ಕೇಂದ್ರೀಯ ವಿದ್ಯಾಲಯ ಡಿ ಆರ್ ಡಿ ಓ, ಸಿ.ವಿ.ರಾಮನ್ ನಗರ, ಬೆಂಗಳೂರು-560093.

ಪೋಸ್ಟ್	ದಿನಾಂಕ	ಸಮಯ
PGT(ಸ್ನಾತಕೋತ್ತರ) -ಇಂಗ್ಲಿಷ್, ಹಿಂದಿ, ಗಣಿತ, ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ. **TGT**-ಇಂಗಿಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ಅಧ್ಯಯನ, ಸಂಸ್ಕೃತ. **PRT**-ಪ್ರಾಥಮಿಕಶಿಕ್ಷಕ. **PGT-** ಕಂಪ್ಯೂಟರ್ ಸೈನ್ಸ್ ಮತ್ತು ಕಂಪ್ಯೂಟರ್ ಬೋಧಕರು. **ವೃತ್ತಿ ಕೌಶಲ್ಯ ತರಬೇತುದಾರರು:** ಯೋಗ ತರಬೇತುದಾರ, ಕನ್ನಡ ಶಿಕ್ಷಕ, ಜರ್ಮನ್ ಭಾಷಾಶಿಕ್ಷಕ, ಸಂಗೀತ ಶಿಕ್ಷಕ, ನೃತ್ಯ ಶಿಕ್ಷಕ, ಕ್ರೀಡಾ ತರಬೇತುದಾರರು, ಕಲೆ ಮತ್ತು ಕರಕುಶಲ ಶಿಕ್ಷಕರು, ಕಂಪ್ಯೂಟರ್ ಬೋಧಕರು, ನರ್ಸ್, ವೈದ್ಯರು, ವಿಶೇಷ ಶಿಕ್ಷಕರು, ಸಲಹೆಗಾರರು.	25.02.2023 (ಶನಿವಾರ)	ಪ್ರಾತಃ 9-00 ರಿಂದ 2-00 ವರೆಗೆ

ಗಮನಿಸಿ: ವಿದ್ಯಾರ್ಹತೆ ಮತ್ತು ಇತರ ವಿವರಗಳಿಗಾಗಿ ದಯವಿಟ್ಟು ವೆಬ್‌ಸೈಟ್‌ಗೆ ಭೇಟಿ ನೀಡಿ. ಅಂತರ್ಜಾಲದಲ್ಲಿ ಆವೇದನಾ ಪತ್ರವನ್ನು (Google Form)ನ್ನು ತುಂಬಿ ಕಳುಹಿಸಿದವರು ಅವಶ್ಯವಾಗಿ ಸಂದರ್ಶನಕ್ಕೆ ಹಾಜರಾಗಬೇಕೆಂದು ಕೊರುತ್ತೇವೆ. www.drdobangalore.kvs.ac.in

ಸಹಿ/-
ಪ್ರಾಂಶುಪಾಲರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಕನೀನಿನಿ,
ನೀರಾವರಿ ಯೋಜನೆ, ನಿರ್ಮಾಣ ವಿಭಾಗ-1, ಕಲಬುರಗಿ

ಸಂ: ಕಾಅ/ಕನೀನಿನಿ/ಐಪಿಸಿ/ವಿಭಾಗ/ಕಲಬುರಗಿ/ಟೆಂಡರ್/ತಾಶಾ-6/2022-23/2311 ದಿನಾಂಕ : 13.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ : 1) ಈ ಕಛೇರಿಯ ಪತ್ರ ಸಂ : 2001 ದಿನಾಂಕ : 06.01.2023

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ನೀರಾವರಿ ಯೋಜನೆ, ನಿರ್ಮಾಣ ವಿಭಾಗ-1, ಕಲಬುರಗಿ. ರವರು ಕೆಳದಂಡೆ ಮುಲ್ಲಾಮಾರಿ ಯೋಜನೆಯ 2022-23 ಸಾಲಿನ ಲೆಕ್ಕ ಶಿರ್ಷಿಕೆ 4701 ಎಸ್.ಸಿ.ಪಿ ಯೋಜನೆ ಅಡಿಯಲ್ಲಿನ 01 ಕಾಮಗಾರಿ ಇಂಡೆಂಟ್ ಸಂಖ್ಯೆ:**36015** ದ್ವಿಲಕೋಟೆ ಪದ್ಧತಿಯಲ್ಲಿ ಇ-ಟೆಂಡರಿಂಗ್ ಮುಖಾಂತರ Percentage ಆಧಾರದ ಮೇಲೆ ಟೆಂಡರ್‌ನ್ನು ಉಲ್ಲೇಖ (1) ರಂತೆ ಅಹ್ವಾನಿಸಲಾಗಿತ್ತು ಕಾರಣಾಂತರಗಳಿಂದ ಸದರಿ ಟೆಂಡರ್ ಪ್ರಕ್ರಿಯೆಯ ದಿನಾಂಕಗಳನ್ನು ಪರಿಷ್ಕರಿಸಲಾಗಿದ್ದು ದಿನಾಂಕಗಳು ಈ ಕೆಳಗಿನಂತಿರುತ್ತದೆ. ಸದರಿ ಕಾಮಗಾರಿಗಳಿಗೆ ಅಂದಾಜು ಮೊತ್ತ **ರೂ. 1,94,87,597.00** ಮತ್ತು ಇ.ಎಂ.ಡಿ ಮೊತ್ತ **ರೂ. 2,92,314.00** ಇರುತ್ತದೆ. ಸದರಿ ಕಾಮಗಾರಿಗೆ ಇ-ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ವಿವರಗಳು ಈ ಕೆಳಗಿನಂತಿರುತ್ತವೆ;

1) ಇ-ಟೆಂಡರಿಂಗ ಲಭ್ಯವಾಗುವ ಅವಧಿ : **ದಿನಾಂಕ : 16.02.2023 ರಿಂದ ದಿ: 23.02.2023 ರ ಸಾಯಂಕಾಲ 5.00 ಘಂಟೆಯವರೆಗೆ.** 2) ಇ-ಟೆಂಡರಿಂಗ ಕೊನೆಯ ದಿನಾಂಕ : **23.02.2023 ಸಾಯಂಕಾಲ 5.00 ಘಂಟೆಯವರೆಗೆ.** 3) ಪೂರ್ವಬಾವಿ ಸಭೆ ಮತ್ತು ಆಕ್ಷೇಪಣೆಗಳ ಸಲ್ಲಿಸುವುದು: **ದಿನಾಂಕ : 21.02.2023 ಮುಂಜಾನೆ 11.00 ಘಂಟೆಗೆ** ಕಾರ್ಯನಿರ್ವಾಹಕ ಅಭಿಯಂತರರು, ಕನೀನಿ(ನಿ), ಐಪಿಸಿ ವಿಭಾಗ ಸಂ.1 ಕಲಬುರಗಿ ಕಛೇರಿಯಲ್ಲಿ ಮತ್ತು ಆಕ್ಷೇಪಣೆಗಳ ಸಲ್ಲಿಸುವುದು ದಿನಾಂಕ : **22.02.2023 ಸಾಯಂಕಾಲ 5.00 ಘಂಟೆಯವರೆಗೆ.** 4) ಟೆಂಡರ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಏಕಲಕೋಟೆ ಪದ್ಧತಿಯ ಮತ್ತು ದ್ವಿಲಕೋಟೆ ಪದ್ಧತಿಯಲ್ಲಿ) : **ದಿನಾಂಕ :25.02.2023 ಮುಂಜಾನೆ 11.30 ಘಂಟೆಗೆ** ಕಾರ್ಯನಿರ್ವಾಹಕ ಅಭಿಯಂತರರು, ಕನೀನಿ(ನಿ), ಐಪಿಸಿ ವಿಭಾಗ ಸಂ.1 ಕಲಬುರಗಿ ಕಛೇರಿಯಲ್ಲಿ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ (ದ್ವಿಲಕೋಟೆ ಪದ್ಧತಿಯಲ್ಲಿ) : **ದಿನಾಂಕ : 28.02.2023 ಮುಂಜಾನೆ 11.30 ಘಂಟೆಗೆ** ಅಥವಾ ತಾಂತ್ರಿಕ ಬಿಡ್ ಅನುಮೋದನೆಗೊಂಡ ತರುವಾಯ. 6) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಕಛೇರಿ ವಿಳಾಸ : ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ http;//www.eproc.Karnataka.gov.in ನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ಐಪಿಸಿ ವಿಭಾಗ ಸಂ.1 ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1294/ಎಂ.ಸಿ.&ಎ/2022-23

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ಸಂ:ಕಾನಿಇಂ/ಲೋಇ/ವಿಬಿ/ಜೇಇ-3/3054/22-23/4686 ದಿನಾಂಕಃ 14-02-2023

:: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಕರ್ನಾಟಕ ರಾಜ್ಯಪಾಲರ ಪರವಾಗಿವರ್ಕ್-ಇಂಡೆಂಟ್ KPWD/2022-23/RD/WORK_INDENT 163791, 163345 ಅಡಿ ಇರುವ ಕನಿಷ್ಠ ರೂ. 32.00 ಲಕ್ಷ ಮತ್ತು ಗರಿಷ್ಠ ರೂ. 200.00 ಲಕ್ಷ ಮೊತ್ತದ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ ಇವರಿಂದ ಟೆಂಡರ್‌ಗಳನ್ನು ಕರೆಯಲಾಗಿದೆ.

ಪಬ್ಲಿಕ್-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನ http://eproc.karnataka.gov.in ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 21.02.2023 ರ ಸಂಜೆ 4.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 22.02.2023 ರಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ವಾ.ಸಾ.ಸಂ.ಇ/ಬೀದರ/469/ಎಂಸಿ&ಎ/2022-23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿಕೋಶ ಬೆಳಗಾವಿ

ಕ್ರಸಂ. ಬಜಿಎಂ/ಡಿಯುಡಿಸಿ/5/ಸಿಆರ್-25/2021-22 ದಿನಾಂಕ: 14-05-2023

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ಯೋಜನೆಯ (24.10% 7.25% 5% ಮತ್ತು ಇತರೆ ಅನುದಾನ) ಕ್ರ.ಸಂ. 01ರ ಕಾಮಗಾರಿಗಾಗಿ ಏಕ ಲಕೋಟೆ ಪದ್ಧತಿಯಲ್ಲಿ KW-2 ಡಾಕ್ಯುಮೆಂಟ್ ಉಪಯೋಗಿಸಿ ಹಾಗೂ ಕ್ರ.ಸಂ. 02 ಮತ್ತು 03 ರ ಕಾಮಗಾರಿಗಳಿಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ KW-3 & 4 ಡಾಕ್ಯುಮೆಂಟ್ ಉಪಯೋಗಿಸಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ GST (ಹೊರತುಪಡಿಸಿ)	ಇ.ಎಂ.ಡಿ ಮೊತ್ತ
01	ಉಗಾರಖುರ್ದ ಪುರಸಭೆ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕ ಮತ್ತು ಬೀದಿ ದೀಪ ಅಳವಡಿಸುವುದು (Tender No. DMA/2022-23/EL/WORK_INDENT 145839)	23.39	0.50
02	ಉಗಾರಖುರ್ದ ಪುರಸಭೆ ವ್ಯಾಪ್ತಿಯಲ್ಲಿ ಸಮುದಾಯ ಭವನ, ಶೌಚಾಲಯ ಮತ್ತು ರಸ್ತೆ, ನಿರ್ಮಿಸುವುದು. (Tender No. DMA/2022-23/OW/WORK_INDENT 143103)	108.09	1.62
02	ಬೈಲಹೊಂಗಲ ಪುರಸಭೆ ವ್ಯಾಪ್ತಿಯಲ್ಲಿ ಪುರಸಭೆ ಮಾಲ್ಕಿ ಜಾಗೆಯಲ್ಲಿ ತಿನಿಸು ಮಾರಾಟ ಮಳಿಗೆ ನಿರ್ಮಿಸುವುದು ಮತ್ತು ವಾರ್ಡ್ ನಂ 05 ರ ಕರೆ ಹತ್ತಿರ ಇರುವ ಕುಸ್ತಿ ಕಣದ ಹತ್ತಿರ ಇರುವ ಆಟದ ಮೈದಾನ ಅಭಿವೃದ್ಧಿಪಡಿಸುವುದು. (Tender No. DMA/2022-23/OW/WORK_INDENT 140623)	65.22	1.30

ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	:	02-03-2023 ರಂದು 17:00 ಗಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	:	03-03-2023 ರಂದು 17:01 ಗಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ-ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

DIPO/RO No. 1757/2022-23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕನೀನಿನಿ,
ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ-1,
ಮುಂಡರಗಿ-582118, Phone : 08371 – 295016
e-mail : eeslis1mdg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ONLY THROUGH "*e-Procurement*" SYSTEM)

ಉಲ್ಲೇಖ :
1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1915/2022-23 ದಿನಾಂಕ: 10.02.2023
2. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1916/2022-23 ದಿನಾಂಕ: 10.02.2023

ಸಿಂಗಟಾಲೂರು ಏತ ನೀರಾವರಿ ಯೋಜನೆ ಮುಂಡರಗಿ ವಿಭಾಗ-1 ಕಛೇರಿ ವ್ಯಾಪ್ತಿಯಲ್ಲಿ ಬರುವ ಕಾಲೋನಿ ಕ್ಯಾಂಪ್‌ನ ಹಾಗೂ ಎಡಭಾಗದ ಕಾಲುವೆಗಳ ವಾರ್ಷಿಕ ನಿರ್ವಹಣೆ ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ -2701 ರಡಿ ಉಲ್ಲೇಖ(1) ಮತ್ತು ಉಲ್ಲೇಖ(2)ರಲ್ಲಿನ ಅಲ್ಪಾವಧಿ ಟೆಂಡರ್ ಪ್ರಕಟಣೆಗಳಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ ಏಕ-ಲಕೋಟೆಯಲ್ಲಿ e-Portal Work Indent No. **35804** ಹಾಗೂ **35805** ರಂತೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಗಳ ಟೆಂಡರ್‌ಗೆ ಇಟ್ಟ ಮೊತ್ತವು ಕ್ರಮವಾಗಿ ರೂ. **8.82** ಲಕ್ಷ ಮತ್ತು ರೂ. **11.73** ಲಕ್ಷ ಆಗಿರುತ್ತದೆ. ಅದರಂತೆ, ಕಾಮಗಾರಿಗೆ ಇ.ಎಂ.ಡಿ. ಮೊತ್ತವು ಕ್ರಮವಾಗಿ ರೂ. **22500/-** ಮತ್ತು ರೂ. **29500/-** ಆಗಿರುತ್ತದೆ.

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ : **15.02.2023** ರ ನಂತರ "**eproc.karnataka.gov.in**", ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟಗಳನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗಳ ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ : **23.02.2023** ಎಂದು ಮತ್ತು ಟೆಂಡರ್ ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ : **24.02.2023** ಎಂದು ನಿಗದಿಪಡಿಸಲಾಗಿದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone Numbers: +91-80-46010000, +91-80-68948777** ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಸಿಂ.ಏ.ನೀ.ಯೋ., ವಿಭಾಗ-01, ಮುಂಡರಗಿ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/651/2022-23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೇಂದ್ರ ಕಛೇರಿ, ಉಗ್ರಾಣ ಮತ್ತು ಖರೀದಿ ವಿಭಾಗ, ಕೆ. ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027

ಟೆಂಡರ್ ಆಹ್ವಾನಿಸುವ ನೋಟೀಸ್ ಸಂಖ್ಯೆ: 12 ದಿನಾಂಕ: 15.02.2023

ಈ ಕೆಳಗೆ ತಿಳಿಸಿರುವ ಸಾಮಗ್ರಿಗಳನ್ನು ಸರಬರಾಜು /ಮಾಡಲು/ ಸೇವೆಗಳನ್ನು ಒದಗಿಸಲು ಅರ್ಹ ಸರಬರಾಜುದಾರರಿಂದ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ (**http://eproc.karnataka.gov.in**) ಮೂಲಕ (ಪೂರ್ವ ಅರ್ಹತೆ ಅಥವಾ ವಾಣಿಜ್ಯದರ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ಸಂಖ್ಯೆ	ಖರೀದಿಸುವ ಸಾಮಗ್ರಿಗಳ/ಸೇವೆಗಳ ವಿವರ	ಟೆಂಡರ್‌ನ ಮೊತ್ತ ಕೋಟಿ ರೂ.ಗಳಲ್ಲಿ (ಅಂದಾಜು)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ವೇಳೆ 17.00 ಗಂಟೆಗೆ
ಜಿ-98/22-23	ಸಪ್ಲೈ ಇನ್ಸ್ಟಾಲೇಶನ್ ಮತ್ತು ಕಮೀಶನಿಂಗ್ ಆಫ್ ಮೈನರ್ ಗ್ಯಾರೇಜ್ ಇಕ್ಯೂಪ್‌ಮೆಂಟ್ಸ್ ಟರ್ನ್‌ಕೀ ಆಧಾರದ ಮೇಲೆ	4.60	20.03.2023
ಜಿ-99 /22-23	ಡೆನ್ಸಿಫೈಡ್ ವುಡನ್ ಫ್ಲೋರ್ ಬೋರ್ಡ್‌ಗಳ ಖರೀದಿ	2.00	20.03.2023
ಜಿ-100/22-23	ಕಾಟನ್ ವೇಸ್ಟ್‌ಗಳ ಖರೀದಿ	1.50	02.03.2023
ಜಿ-101/22-23	ಪ್ರಾದೇಶಿಕ ಕಾರ್ಯಾಗಾರಗಳಿಗೆ ಅಗತ್ಯವಿರುವ ಬಸ್ ಬಾಡಿ ಬಿಲ್ಡಿಂಗ್ ವಸ್ತುಗಳ ಖರೀದಿ	0.50	02.03.2023
ಜಿ-102/22-23	ಕ.ರಾ.ಸಾ ಮುದ್ರಣಾಲಯಕ್ಕೆ ಬೇಕಾಗಿರುವ ಪೇಪರ್, ಬೋರ್ಡ್. ಪ್ರಿಂಟಿಂಗ್ ಇಂಕ್, ಪ್ರಿಂಟಿಂಗ್ ಪ್ಲೇಟ್, ಬ್ಲ್ಯಾಂಕೆಟ್, ಕೆಮಿಕಲ್, ಬೈಂಡಿಗ್ ಮೆಟಿರಿಯಲ್ ಹಾಗೂ ಇತರೆ ಲೇಖನ ಸಾಮಗ್ರಿಗಳ ಖರೀದಿ	0.50	02.03.2023
ಜಿ-103/22-23	ಅಕೌಂಟಿಂಗ್ ಹಾಗೂ ಫೈನಾನ್ಸಿಯಲ್ ಮ್ಯಾನೇಜ್‌ಮೆಂಟ್ ಸಿಸ್ಟಮ್ ಕ್ಲೌಡ್ ಆಧಾರಿತ ಇ.ಆರ್.ಪಿ ಸಾಫ್ಟವೇರ್ ಅಳವಡಿಕೆ	0.16	20.03.2023
ಎ-34/22-23	ವೈಪರ್ ಮೋಟಾರ್ಸ್, ಆರ್ಮ್ಸ್ ಲೌ ಬ್ಲೇಡ್ಸ್ ಖರೀದಿ	6.00	20.03.2023
ಎ-35/22-23	ಶಾಕಲ್ ಪಿನ್ & ಬುಶ್ ಖರೀದಿ	2.00	20.03.2023
	ಅಲ್ಪಾವಧಿ ಟೆಂಡರ್		
ಜಿ-97/22-23	ಟೈರ್ ಟ್ಯೂಬ್ & ಫ್ಲಾಪ್ ಸೆಟ್‌ಗಳು, ಟ್ಯೂಬ್‌ಲೆಸ್ ರೇಡಿಯಲ್ ಟೈರ್ ಮತ್ತು ಹೆಚ್ಚುವರಿ ಟ್ಯೂಬ್‌ಗಳು & ಫ್ಲಾಪ್‌ಗಳು ಖರೀದಿ	95.20	01.03.2023

ಮುಂದುವರೆದು, ಸಾಮಾಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕಗಳಲ್ಲಿ ಯಾವುದೇ ಸೇರ್ಪಡೆ/ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಯೇ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಸರಬರಾಜುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಅಥವಾ ದೂರವಾಣಿ ಸಂಖ್ಯೆ:080-22230960/22234115, ಕರೆಮಾಡಿ / **eprocurementhelpdesk@gmail.com,** ಮೇಲ್ ಮಾಡಿ ಮಾಹಿತಿ ಪಡೆಯ ಬಹುದಾಗಿರುತ್ತದೆ. ಬಿಡ್ಡುದಾರರಿಗೆ ಕ.ರಾ.ರ.ಸಾ.ನಿಗಮದಿಂದ ಸಹಾಯದ ಅಗತ್ಯವಿದ್ದರೆ **cosp@ksrtc.org,** ನಲ್ಲಿ ಸಂಪರ್ಕಿಸಬಹುದು, (ಸಂಪರ್ಕಿಸಿ 7760990225,7760990224).


ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿಗಳು
(ಟೆಂಡರ್ ಕರೆಯುವ ಪ್ರಾಧಿಕಾರಿ)

ವಾಸಾಸಂಇ/ವಾಪ್ರ/ಜಿಎ/4733/2022-23

ಸಿಬಿಎಸ್‌ಇ ಪರೀಕ್ಷೆ ಆರಂಭ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) 10, 12ನೇ ತರಗತಿಯ ಬೋರ್ಡ್ ಪರೀಕ್ಷೆಗಳು ಬುಧವಾರ ಆರಂಭವಾಗಿವೆ. 38 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ದೇಶದಾದ್ಯಂತ ಹಾಗೂ ಹೊರದೇಶಗಳಲ್ಲಿ ಇರುವ 7,250 ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ.

ಷೇರುಪೇಟೆ ವಹಿವಾಟು



ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1690(1680)
ಸೋಯಾ (ರಿಫೈನ್ಡ್)	₹1150(1170)
ಸೂರ್ಯಕಾಂತಿ (ರಿಫೈನ್ಡ್)	₹1170(1175)
ಪಾಮೋಲಿನ್	₹955(960)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1,000-1,300
ಮಧ್ಯಮ	₹600-1,000
ಸಣ್ಣ	₹400-600

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ	₹18000-20000
2ನೇ ದರ್ಜೆ	₹10000-16000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹141.50
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹130.50

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE



Kumuda Vrishabhendra
Born 31/5/1938, Mysore
Died 24/1/2023, Columbus, GA USA
Beloved wife of Madappa Vrishabhendra for 62 years Loving Mother to Madhukesh and Bindu
Adored teacher of many at JSS Primary School, Mysore
Mathru Mandali School, Mysore
Bluff City Elementary & Admiral Moore Middle School Eufaula, Alabama and various schools in Columbus, Georgia
Her passion for life, cooking, travel, reading and learning along with her love and kindness for her family, friends and students alike were exemplary.
She will be missed by all.

10ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಎಸ್.ಹನುಮಂತಪ್ಪ (M.A., K.S.A.S)
01-06-1955 – 16-02-2013
ನಿಮ್ಮ ಸವಿ ನೆನಪುಗಳು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನೀವು ನಮ್ಮೆಲ್ಲರ ಬಾಳಿನಲ್ಲಿ ನಂದಾದೀಪವಾಗಿ ಬೆಳಗುತ್ತಿದ್ದೀರಿ
ಇಂತಿ: ಶ್ರೀಮತಿ ಮಂಜುಳಾ ಹೆಚ್, ಮಕ್ಕಳು ಮತ್ತು ಬಂಧು-ಮಿತ್ರರು

LOOKING TO BUILD, BUY OR SELL A PROPERTY
Please refer Classifieds on Sunday

ಕೊಬ್ಬರಿ ಧಾರಣೆ



ಕೆ.ಆರ್. ಪೇಟೆ (ಇತರ)	₹8250-8250
ತಿಪಟೂರು	₹10300-11200
ತುರುವೇಕೆರೆ	₹10700-10750

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹333-650
ದ್ವಿತಳಿ (ಬಿ.ವಿ)	₹511-776

ವಿನಿಮಯ ದರ

$ಡಾಲರ್	82.83
£ಪೌಂಡ್	99.96
€ಯುರೊ	88.7
¥ಯೆನ್ (100ಕ್ಕೆ)	61.84

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹453

ಸಾಲದ ಬಡ್ಡಿ ಹೆಚ್ಚಿಸಿದ ಎಸ್‌ಬಿಐ

ಮುಂಬೈ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಎಂಸಿಎಲ್‌ಆರ್ ಆಧಾರಿತ ಕಿರು ಅವಧಿಯ ಸಾಲದ ಮೇಲಿನ ಬಡ್ಡಿ ದರವನ್ನು ಬುಧವಾರ ಶೇಕಡ 0.10ರಷ್ಟು ಹೆಚ್ಚಿಸಿದೆ. ಇದು ತಕ್ಷಣದಿಂದ ಜಾರಿಗೆ ಬಂದಿದೆ.

ಭಾರತೀಯ ರಿಸರ್ವ್ ಬ್ಯಾಂಕ್ 2022ರ ಮೇ ತಿಂಗಳ ನಂತರದಲ್ಲಿ ರೆಪೊ ದರವನ್ನು ಶೇ 2.50ರಷ್ಟು ಹೆಚ್ಚಿಸಿದೆ. ಈ ಹೆಚ್ಚಳವನ್ನು ಬ್ಯಾಂಕ್‌ಗಳು ತಮ್ಮ ಗ್ರಾಹಕರಿಗೆ ಬಹುತೇಕ ವರ್ಗಾವಣೆ ಮಾಡಿವೆ. ಆದರೆ ಬ್ಯಾಂಕ್‌ಗಳು ಇದಕ್ಕೆ ಅನುಗುಣವಾಗಿ ತಮ್ಮ ಠೇವಣಿಗಳ ಮೇಲಿನ ಬಡ್ಡಿಯನ್ನು ಹೆಚ್ಚು ಮಾಡಿಲ್ಲ.

ಇದರ ಪರಿಣಾಮವಾಗಿ ಬ್ಯಾಂಕ್‌ಗಳಿಗೆ ಬಂಡವಾಳದ ಕೊರತೆ ಎದುರಾಗಿದೆ. ಕೆಲವು ಬ್ಯಾಂಕ್‌ಗಳು ಬಂಡವಾಳ ಮಾರುಕಟ್ಟೆಯಿಂದ ಹಣ ಸಂಗ್ರಹಿಸುತ್ತಿವೆ. ಜನವರಿ 13ಕ್ಕೆ ಕೊನೆಗೊಂಡ ಹದಿನೈದು ದಿನಗಳ ಅವಧಿಯಲ್ಲಿ ದೇಶದಲ್ಲಿ ಸಾಲ ನೀಡಿಕೆಯ ಬೆಳವಣಿಗೆ ಪ್ರಮಾಣವು ಶೇ 16.5ರಷ್ಟು ಹಾಗೂ ಠೇವಣಿಗಳ ಬೆಳವಣಿಗೆ ಪ್ರಮಾಣವು ಶೇ 10.6ರಷ್ಟು ಇತ್ತು.

ಬುಧವಾರದ ಬಡ್ಡಿ ದರ ಏರಿಕೆಯು ಗೃಹಸಾಲ ಹಾಗೂ ವಾಹನ ಸಾಲದ ಗ್ರಾಹಕರಿಗೆ ಅನ್ವಯವಾಗದು. ಏಕೆಂದರೆ ಈ ಸಾಲಗಳನ್ನು ದೀರ್ಘಾವಧಿಗೆ ನೀಡಲಾಗಿರುತ್ತದೆ.

ಆರು ತಿಂಗಳ ಅವಧಿಯ ಸಾಲಕ್ಕೆ ಎಸ್‌ಬಿಐ ಇನ್ನು ಮುಂದೆ ಶೇ 8.40ರಷ್ಟು ಬಡ್ಡಿ ವಿಧಿಸಲಿದೆ. ಎರಡು ವರ್ಷ ಅವಧಿಯ ಸಾಲಕ್ಕೆ ಶೇ 8.60ರಷ್ಟು ಹಾಗೂ ಮೂರು ವರ್ಷದ ಅವಧಿಯ ಸಾಲಕ್ಕೆ ಶೇ 8.70ರಷ್ಟು ಬಡ್ಡಿ ಇರಲಿದೆ. ಆದರೆ, ₹ 10 ಕೋಟಿಗಿಂತ ಕಡಿಮೆ ಮೊತ್ತದ ಉಳಿತಾಯ ಖಾತೆ ಠೇವಣಿಗೆ ಬ್ಯಾಂಕ್ ನೀಡುತ್ತಿರುವ ಬಡ್ಡಿ ಶೇ 2.70ರಷ್ಟು ಮಾತ್ರ. ₹ 10 ಕೋಟಿಗಿಂತ ಹೆಚ್ಚಿನ ಮೊತ್ತದ ಉಳಿತಾಯ ಖಾತೆ ಠೇವಣಿಗೆಗಳಿಗೆ ಬ್ಯಾಂಕ್ ಶೇ 3ರಷ್ಟು ಬಡ್ಡಿ ನೀಡುತ್ತಿದೆ.

ಮುಖ್ಯಾಂಶಗಳು

- ಠೇವಣಿ ಬೆಳವಣಿಗೆ ಇಳಿಕೆ
- ಬಂಡವಾಳ ಮಾರುಕಟ್ಟೆಯತ್ತ ಮುಖ ಮಾಡಿದ ಬ್ಯಾಂಕ್‌ಗಳು
- ಠೇವಣಿಗಳಿಗೆ ಬಡ್ಡಿ ಆಮೆಗತಿಯಲ್ಲಿ ಏರಿಕೆ

‘ರಾಜ್ಯಗಳು ಒಪ್ಪಿದರೆ ಜಿಎಸ್‌ಟಿ ವ್ಯಾಪ್ತಿಗೆ ಪೆಟ್ರೋಲಿಯಂ ಉತ್ಪನ್ನ’

ನವದೆಹಲಿ (ಪಿಟಿಐ): ರಾಜ್ಯಗಳಿಗೆ ಒಪ್ಪಿಗೆಯಾದರೆ ಪೆಟ್ರೋಲಿಯಂ ಉತ್ಪನ್ನಗಳನ್ನು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯಾಪ್ತಿಗೆ ತರಬಹುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಬಜೆಟ್ ನಂತರದ ಸಂವಾದ ಕಾರ್ಯಕ್ರಮವೊಂದರಲ್ಲಿ ಅವರು ಈ ಮಾತು ಆಡಿದ್ದಾರೆ. ಪೆಟ್ರೋಲಿಯಂ ಉತ್ಪನ್ನಗಳಾದ ಪೆಟ್ರೋಲ್, ಡೀಸೆಲ್, ನೈಸರ್ಗಿಕ ಅನಿಲ, ವಿಮಾನ ಇಂಧನ ಜಿಎಸ್‌ಟಿ ವ್ಯಾಪ್ತಿಯಲ್ಲಿ ಇಲ್ಲ. ಇವುಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ಯಾವತ್ತಿನಿಂದ ತರಬೇಕು ಎಂಬ ತೀರ್ಮಾನ ಕೈಗೊಳ್ಳುವ ಅಧಿಕಾರ ಜಿಎಸ್‌ಟಿ ಮಂಡಳಿಗೆ ಇದೆ.

‘ರಾಜ್ಯಗಳು ಒಪ್ಪಿಕೊಂಡ ನಂತರದಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ಕೂಡ ಜಿಎಸ್‌ಟಿ ವ್ಯಾಪ್ತಿಗೆ ಬರುತ್ತವೆ’ ಎಂದು ನಿರ್ಮಲಾ ಹೇಳಿದ್ದಾರೆ.

‘ಗೋಧಿ ಬೆಲೆ ಇಳಿಕೆ’

ನವದೆಹಲಿ (ಪಿಟಿಐ): ಮುಕ್ತ ಮಾರುಕಟ್ಟೆಗೆ 30 ಲಕ್ಷ ಟನ್ ಗೋಧಿ ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದ ನಂತರದಲ್ಲಿ ಸಗಟು ಹಾಗೂ ಚಿಲ್ಲರೆ ಮಾರುಕಟ್ಟೆಯಲ್ಲಿ ಗೋಧಿ ಬೆಲೆಯು ಕೆ.ಜಿ.ಗೆ ಸರಿಸುಮಾರು ₹ 5ರಷ್ಟು ಕಡಿಮೆ ಆಗಿದೆ ಎಂದು ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ಹೇಳಿದ್ದಾರೆ.

ಅಗತ್ಯ ಕಂಡುಬಂದರೆ, ಬೆಲೆ ನಿಯಂತ್ರಣಕ್ಕೆ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಅವರು ಹೇಳಿದ್ದಾರೆ. ಗೋಧಿ ಹಾಗೂ ಗೋಧಿ ಹಿಟ್ಟಿನ ಬೆಲೆಯನ್ನು ಸರ್ಕಾರವು ಸೂಕ್ಷ್ಮವಾಗಿ ಗಮನಿಸುತ್ತಿದೆ. ಸಂದರ್ಭ ಬಂದರೆ, ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯ ಅಡಿಯಲ್ಲಿ ಇನ್ನಷ್ಟು ಗೋಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗುತ್ತದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಗೋಧಿ ರಫ್ತಿನ ಮೇಲೆ ವಿಧಿಸಿರುವ ನಿಷೇಧವನ್ನು ಹಿಂಪಡೆಯುವ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಸಗಟು ಮಾರುಕಟ್ಟೆಯಲ್ಲಿ ಗೋಧಿಯ ಬೆಲೆಯು ಕೆ.ಜಿ.ಗೆ ₹ 30 ಇದ್ದಿದ್ದು, ₹ 25ಕ್ಕೆ ಇಳಿಕೆಯಾಗಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ₹ 34 ಇದ್ದಿದ್ದು ₹ 29ಕ್ಕೆ ತಗ್ಗಿದೆ ಎಂದು ಅವರು ತಿಳಿಸಿದ್ದಾರೆ.

ಪಾಕಿಸ್ತಾನದಲ್ಲಿ ಚೀನಾ ಕಾನ್ಸುಲರ್ ಕಚೇರಿ ತಾತ್ಕಾಲಿಕ ಸ್ಥಗಿತ

ಇಸ್ಲಾಮಾಬಾದ್ (ಪಿಟಿಐ): ‘ತಾಂತ್ರಿಕ ಸಮಸ್ಯೆ’ಯ ಕಾರಣದಿಂದ ಪಾಕಿಸ್ತಾನದಲ್ಲಿರುವ ತನ್ನ ರಾಯಭಾರ ಕಚೇರಿಯ ಕಾನ್ಸುಲರ್ ವಿಭಾಗವನ್ನು ಚೀನಾ ತಾತ್ಕಾಲಿಕವಾಗಿ ಮುಚ್ಚಿದೆ.

ಈ ಬಗ್ಗೆ ರಾಯಭಾರ ಕಚೇರಿಯು ತನ್ನ ವೆಬ್‌ಸೈಟ್‌ನಲ್ಲಿ ಘೋಷಿಸಿದೆ. ಆದರೆ ಸಮಸ್ಯೆಯ ನಿರ್ದಿಷ್ಟ ಸ್ವರೂಪದ ಕುರಿತಾಗಲೀ, ಎಲ್ಲಿಯವರೆಗೆ ಕಚೇರಿಯು ಮುಚ್ಚಿರಲಿದೆ ಎಂದಾಗಲೀ ಮಾಹಿತಿ ನೀಡಿಲ್ಲ.

ದೇಶದಲ್ಲಿ ಭದ್ರತಾ ಪರಿಸ್ಥಿತಿ ಹದಗೆಡುತ್ತಿದೆ, ಎಚ್ಚರವಾಗಿರಿ ಎಂದು ತನ್ನ ಪ್ರಜೆಗಳಿಗೆ ಸೂಚಿಸಿದ ಬೆನ್ನಲ್ಲೇ ಈ ನಿರ್ಧಾರ ಕೈಗೊಂಡಿದೆ.

ಪಾಕಿಸ್ತಾನದಲ್ಲಿ ಇತ್ತೀಚೆಗೆ ಉಗ್ರರ ಚಟುವಟಿಕೆಗಳು ಹೆಚ್ಚುತ್ತಿದ್ದು, ಚೀನಾ–ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಕೆಲಸ ಮಾಡುತ್ತಿರುವ ಚೀನಾ ಪ್ರಜೆಗಳ ಮೇಲೆ ಪಾಕಿಸ್ತಾನದ ಹಲವು ಭಯೋತ್ಪಾದಕ ಗುಂಪುಗಳು ಆಗಾಗ ದಾಳಿ ನಡೆಸುತ್ತಿವೆ.

‘ಚೀನಾದ ಮೇಲೆ 10 ಬಾರಿ ಹಾರಾಟ ಮಾಡಿದ ಅಮೆರಿಕದ ಬಲೂನ್‌ಗಳು’

ಬೀಜಿಂಗ್ (ರಾಯಿಟರ್ಸ್): ಷಿನ್‌ಜಿಯಾಂಗ್ ಮತ್ತು ಟಿಬೆಟ್ ಪ್ರಾಂತ್ಯಗಳ ವಾಯುಪ್ರದೇಶದಲ್ಲಿ ಅತೀ ಎತ್ತರದಲ್ಲಿ ಅಮೆರಿಕದ ಬಲೂನ್‌ಗಳು ಹಾರಿಹೋಗಿವೆ. ದೇಶದ ಭದ್ರತೆ ಮತ್ತು ಸಾರ್ವಭೌಮತೆಗೆ ಧಕ್ಕೆ ತಂದಿರುವ ಅಮೆರಿಕದ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಚೀನಾ ಬುಧವಾರ ತಿಳಿಸಿದೆ.

‘ಚೀನಾದ ಅನುಮತಿ ಪಡೆಯದೇ, ಷಿನ್‌ಜಿಯಾಂಗ್, ಟಿಬೆಟ್ ಮತ್ತು ಇತರ ಪ್ರಾಂತ್ಯಗಳು ಸೇರಿ ದೇಶದ ವಾಯು ಪ್ರದೇಶದ ಮೇಲೆ 2022ರ ಮೇ ತಿಂಗಳಿನಿಂದ ಇದುವರೆಗೆ ಕನಿಷ್ಠ 10 ಬಾರಿ ಅಮೆರಿಕದ ಬಲೂನ್‌ಗಳು ಅಕ್ರಮ ಹಾರಾಟ ನಡೆಸಿವೆ’ ಎಂದು ಚೀನಾದ ಉನ್ನತ ರಾಜತಾಂತ್ರಿಕ ವಾಂಗ್ ಯಿ ಬುಧವಾರ ದೈನಂದಿನ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಇದನ್ನು ಚೀನಾ ಬಲವಾಗಿ ವಿರೋಧಿಸುತ್ತದೆ. ಚೀನಾದ ಸಾರ್ವಭೌಮತ್ವ ಮತ್ತು ಸುರಕ್ಷತೆಗೆ ಧಕ್ಕೆ ಮಾಡಿದ ಅಮೆರಿಕದ ಕಂಪನಿಗಳ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು’ ಎಂದು ವಾಂಗ್ ಹೇಳಿದರು.

ಚೀನಾದ ಬೇಹುಗಾರಿಕೆ ಬಲೂನ್ ಅಮೆರಿಕದ ವಾಯುಪ್ರದೇಶದಲ್ಲಿ ಕಾಣಿಸಿಕೊಂಡ ನಂತರ, ಬೀಜಿಂಗ್‌ಗೆ ಕೈಗೊಳ್ಳಬೇಕಿದ್ದ ಪೂರ್ವ ಯೋಜಿತ ಪ್ರವಾಸವನ್ನು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಮುಂದೂಡಿದ್ದರು. ಈ ವಾರ ಮ್ಯೂನಿಚ್‌ನಲ್ಲಿ ಚೀನಾದ ಉನ್ನತ ರಾಜತಾಂತ್ರಿಕ ವಾಂಗ್ ಯಿ ಅವರನ್ನು ಭೇಟಿಯಾಗಲು ಬ್ಲಿಂಕನ್ ಯೋಚಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿರಿಯಾಕ್ಕೆ ನೆರವು: ವಿಶ್ವಸಂಸ್ಥೆ ಮೊರೆ

ವಿಶ್ವಸಂಸ್ಥೆ/ಬೈರೂತ್(ಎಪಿ): ಭೀಕರ ಭೂಕಂಪದಿಂದ ತತ್ತರಿಸಿರುವ ವಾಯವ್ಯ ಸಿರಿಯಾಕ್ಕೆ ಸುಮಾರು ₹32.55 ಸಾವಿರ ಕೋಟಿ ನೆರವು ಘೋಷಿಸಿದ ವಿಶ್ವಸಂಸ್ಥೆ, ಈ ದುರಂತದಲ್ಲಿ ಬದುಕುಳಿದ ಸಿರಿಯಾದ ಸುಮಾರು 50 ಲಕ್ಷ ಜನರಿಗೆ ಅಗತ್ಯ ನೆರವು ನೀಡುವಂತೆ ಅಂತರರಾಷ್ಟ್ರೀಯ ಸಮುದಾಯಕ್ಕೆ ಬುಧವಾರ ಕರೆ ನೀಡಿದೆ.

ಟರ್ಕಿಯಿಂದ ಸಿರಿಯಾ ಪ್ರವೇಶಿಸಲು ಎರಡು ಮಾರ್ಗಗಳನ್ನು ಮೂರು ತಿಂಗಳ ಅವಧಿಗೆ ತೆರೆಯಲು ಸಿರಿಯಾ ಅಧ್ಯಕ್ಷ ಬಶರ್ ಅಸ್ಸಾದ್ ಮತ್ತು ವಿಶ್ವಸಂಸ್ಥೆಯ ಮಧ್ಯೆ ಒಡಂಬಡಿಕೆ ನಡೆದಿದೆ. ಇದನ್ನು ಸ್ವಾಗತಿಸಿದ ಮರುದಿನವೇ ವಿಶ್ವಸಂಸ್ಥೆಯ ಮಹಾ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ನೆರವು ಘೋಷಿಸಿದರು.

ಸಿರಿಯಾ ಮಿತ್ರ ರಾಷ್ಟ್ರ ರಷ್ಯಾದ ಒತ್ತಾಯದ ಮೇರೆಗೆ ಬಾಬ್ ಅಲ್-ಹಾವಾದಲ್ಲಿ ಒಂದೇ ಮಾರ್ಗದ ಮೂಲಕ ವಾಯವ್ಯ ಇದ್ಲಿಬ್ ಪ್ರದೇಶಕ್ಕೆ ನೆರವು ನೀಡಲು ವಿಶ್ವಸಂಸ್ಥೆ ಅವಕಾಶ ಕಲ್ಪಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-450
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	650-700
ಜರಡಿ	800 - 900
ಹೆರಕಿದ್ದು	1,250-1,300
ಹಸಿರು ಸಾಧಾರಣ	900-1000
ಹಸಿರು ಉತ್ತಮ	1300-1400
ಹಸಿರು ಅತಿ ಉತ್ತಮ	1500-1,550
ಕಾಳು ಮೆಣಸು -	490

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	22500-40000
ಹಳತು	48000-54500

ಕಾರ್ಕಳ

ಹೊಸತು	30000-40000
ಹಳತು	40000-54500

ಕುಮಟಾ

ಚಿಪ್ಪು	27019-31869
ಕೋಕ	18019-30009
ಫ್ಯಾಕ್ಟರಿ	11509-19870
ಹಳೆಚಾಲಿ	36089-38099
ಹೊಸಚಾಲಿ	33609-35505

ಪುತ್ತೂರು

ಹೊಸತು	32000-37500

ಶಿವಮೊಗ್ಗ

ಬೆಟ್ಟೆ	47000-52620
ಗೊರಬಲು	17009-33199
ರಾಶಿ	35122-45459
ಸರಕು	54299-82003

ಸಿದ್ದಾಪುರ

ಬಿಳಿಗೋಟು	27209-32000
ಚಾಲಿ	35379-38299
ಕೋಕ	26099-31319
ಹೊಸಚಾಲಿ	30889-34599
ಕೆಂಪುಗೋಟು	30500-33309
ರಾಶಿ	42839-45600
ತಟ್ಟಿಬೆಟ್ಟೆ	36899-44309

ಶಿರಸಿ

ಬೆಟ್ಟೆ	36899-42899
ಬಿಳಿಗೋಟು	25609-34299
ಚಾಲಿ	33100-40808
ಕೆಂಪುಗೋಟು	28100-34626
ರಾಶಿ	38989-45579

ಯಲ್ಲಾಪುರ

ಆಪಿ	51269-55379
ಬಿಳಿಗೋಟು	22899-31699
ಕೋಕ	18099-30799
ಹಳೆಚಾಲಿ	36860-40911
ಹೊಸಚಾಲಿ	33699-36860
ಕೆಂಪುಗೋಟು	26399-34666
ರಾಶಿ	41799-50100
ತಟ್ಟಿಬೆಟ್ಟೆ	37899-44699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15300	15350	14950	183.55ಸೆಂಟ್ಸ್
ಎಸಿ	7340	7400	6800	
ಆರ್‌ಪಿ	10400	10400	9950	ಲಂಡನ್
ಆರ್‌ಸಿ	5100	192	4950	2067ಡಾಲರ್ಸ್

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17929
ಇಂದಿನ ಅಂತ್ಯ	18015
▲	86
ದಿನದ ಗರಿಷ್ಠ	18887

ಮುಂಬೈ ಧಾರಣೆ

ಶೇಂಗಾ

15-2-2023

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	11000-11050
ದಪ್ಪ ಮಧ್ಯಪ್ರದೇಶ(ಹೊಸ)	11050-11150
ದಪ್ಪ ಗುಜರಾತ್(ಹೊಸ)	11850-11950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700(1690)
ಒಂದು ವಾರದ ಡೆಲಿವರಿ	1695(1685)
ಸೋಯಾ ಕಚ್ಚಾ	1060(1075)
ಪಾಮ್ ವಾರದ ಡೆಲಿವರಿ	953(958)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060(1070)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56200(56750)
ಬೆಳ್ಳಿ ಕೆ.ಜಿ 65400(65900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಹಿನೂರ್ ವಜ್ರ ರಹಿತ ಕಿರೀಟ ಆರಿಸಿಕೊಂಡ ರಾಣಿ

ಲಂಡನ್ (ಪಿಟಿಐ): ಬ್ರಿಟನ್ ರಾಣಿ ಕ್ಯಾಮಿಲ್ಲಾ ಅವರು ತಮ್ಮ ಪತಿ ಮೂರನೇ ಕಿಂಗ್ ಚಾರ್ಲ್ಸ್ ಅವರ ಪಟ್ಟಾಭಿಷೇಕದಲ್ಲಿ ವಿಶ್ವಪ್ರಸಿದ್ಧ ಭಾರತದ ಕೊಹಿನೂರ್ ವಜ್ರವಿರದ ಕಿರೀಟ ಧರಿಸಲಿದ್ದಾರೆ. ಚಾರ್ಲ್ಸ್ ಅವರು ಸೇಂಟ್ ಎಡ್ವರ್ಡ್ ಕಿರೀಟ ಧರಿಸಲಿದ್ದಾರೆ.

ಮೇ 6ರಂದು ಪಟ್ಟಾಭಿಷೇಕ ನಡೆಯಲಿದೆ. ವಸಾಹತುಶಾಹಿ ಯುಗದ, ವಿವಾದಿತ ಈ ವಜ್ರದ ಮೇಲೆ ಭಾರತ ತನ್ನ ಹಕ್ಕು ಸಾಧಿಸುತ್ತಿದೆ.

ರಾಣಿ ಎರಡನೇ ಎಲಿಜಬೆತ್ ಅವರ ತಾಯಿ, ರಾಣಿ ಎಲಿಜಬೆತ್ ಅವರು ಧರಿಸುತ್ತಿದ್ದ, ವಿಶ್ವದ ಅತಿದೊಡ್ಡ ಕಟ್ ವಜ್ರಗಳಲ್ಲಿ ಒಂದನ್ನು ಹೊಂದಿರುವ ರಾಣಿ ಮೇರಿಯ ಕಿರೀಟವನ್ನು ಕ್ಯಾಮಿಲ್ಲಾ ಆಯ್ಕೆ ಮಾಡಿದ್ದಾರೆ ಎಂದು ಬಕಿಂಗ್‌ಹ್ಯಾಮ್ ಅರಮನೆ ಘೋಷಿಸಿದೆ.

105.6 ಕ್ಯಾರೆಟ್ ತೂಗುವ ಕೊಹಿನೂರ್ ವಜ್ರವು ವಿಶ್ವದ ಅತಿದೊಡ್ಡ ಕಟ್ ವಜ್ರಗಳಲ್ಲಿ ಒಂದಾಗಿದೆ. ಇದನ್ನು 1850ರಲ್ಲಿ ರಾಣಿ ವಿಕ್ಟೋರಿಯಾಗೆ ಅರ್ಪಿಸಲಾಗಿತ್ತು ಎಂದು ‘ಸ್ಕೈ ನ್ಯೂಸ್’ ವರದಿ ಮಾಡಿದೆ.

ಉಕ್ರೇನ್ ಪೂರ್ವದಲ್ಲಿ ರಷ್ಯಾ ಸೇನೆಗೆ ಸವಾಲು

ಕೀವ್ (ಎಪಿ): ಆಕ್ರಮಣ ಆರಂಭಿಸಿ ವರ್ಷ ತುಂಬುವ ಹೊಸ್ತಿಲಿನಲ್ಲಿರುವಾಗ ರಷ್ಯಾ ಪಡೆಗಳು, ಪೂರ್ವ ಉಕ್ರೇನ್ ಭಾಗದಲ್ಲಿ ಮುನ್ನಡೆ ಸಾಧಿಸಲು ಪರದಾಡುತ್ತಿವೆ ಎಂದು ಉಕ್ರೇನ್ ಸೇನೆ ಬುಧವಾರ ಹೇಳಿದೆ.

ಅಮೆರಿಕ ಸೇರಿ ಪಾಶ್ಚಿಮಾತ್ಯ ರಾಷ್ಟ್ರಗಳ ಶಸ್ತ್ರಾಸ್ತ್ರಗಳ ನೆರವಿನಿಂದ ಉಕ್ರೇನ್ ಸೇನೆ ತೋರುತ್ತಿರುವ ಪ್ರತಿರೋಧ ಮತ್ತು ಪ್ರತಿದಾಳಿಯು ರಷ್ಯಾ ಪಡೆಗಳಿಗೆ ದೊಡ್ಡ ಸವಾಲಾಗಿದೆ.

ಅಲಾಸ್ಕ ಬಳಿ ರಷ್ಯಾದ 4 ವಿಮಾನಗಳ ಹಾರಾಟ (ವಾಷಿಂಗ್ಟನ್ ವರದಿ): ಅಲಾಸ್ಕದ ವಾಯು ಪ್ರದೇಶದಲ್ಲಿ ಹಾರಾಟ ನಡೆಸುತ್ತಿದ್ದ ರಷ್ಯಾದ ನಾಲ್ಕು ಕಣ್ಗಾವಲು ವಿಮಾನಗಳನ್ನು ಅಮೆರಿಕದ ಎರಡು ಎಫ್ -16 ಯುದ್ಧ ವಿಮಾನಗಳು ಪತ್ತೆಹಚ್ಚಿವೆ ಎಂದು ಅಮೆರಿಕ–ಕೆನಡಾ ಉತ್ತರ ಅಮೆರಿಕ ವಾಯು ರಕ್ಷಣಾ ಕಮಾಂಡ್ (ಎನ್‌ಒಆರ್‌ಎಡಿ) ಮಂಗಳವಾರ ತಿಳಿಸಿದೆ.

‘ಅಮೆರಿಕ ವೀಸಾ: ಭಾರತೀಯರಿಗೆ ಅನುಕೂಲ’

ವಾಷಿಂಗ್ಟನ್ (ಪಿಟಿಐ): ದೀರ್ಘಕಾಲೀನ ವೀಸಾ ಹೊಂದಿರುವವರ, ಅಮೆರಿಕದ ಪೌರತ್ವ ಹೊಂದಿಲ್ಲದ ವಲಸಿಗರ ಮಕ್ಕಳ ವಯಸ್ಸನ್ನು ಲೆಕ್ಕಹಾಕಲು ನೆರವಾಗುವ ಉದ್ದೇಶದಿಂದ ಜೋ ಬೈಡನ್ ಅವರ ಆಡಳಿತವು ವೀಸಾ ನೀತಿಯಲ್ಲಿ ಕೆಲವು ಬದಲಾವಣೆ ಮಾಡಿದೆ. ಇದರ ಪ್ರಯೋಜನ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತೀಯರಿಗೆ ಲಭಿಸುವ ನಿರೀಕ್ಷೆ ಇದೆ.

ಮಕ್ಕಳ ಸ್ಥಿತಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ, ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ದೇಶದ ಪ್ರಜೆಗಳಲ್ಲದವರ ವಯಸ್ಸನ್ನು ಪರಿಗಣಿಸುವ ಸಲುವಾಗಿ ಖುದ್ದಾಗಿ ನವೀಕರಿಸುವ ವ್ಯವಸ್ಥೆಗೆ ಅನುಮತಿಸಿದೆ.

ಹೆತ್ತವರೊಂದಿಗೆ ಕಾನೂನುಬದ್ಧವಾಗಿ ಅಮೆರಿಕಕ್ಕೆ ಬಂದರೂ ವಯಸ್ಸಿನ ಕಾರಣಕ್ಕೆ ಪೌರತ್ವ ಪಡೆಯಲಾಗದಿದ್ದ ಮಕ್ಕಳ ನೋವನ್ನು ಪರಿಹರಿಸುವಲ್ಲಿ ಇದು ಒಂದು ಸಣ್ಣ ಕ್ರಮವಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Marketing & Sales

GRT JEWELLERS
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ, ಬೆಂಗಳೂರಿನ ಯಲಹಂಕ ಶೋರೂಮಿಗೆ
1964 ರಿಂದಲೂ ಅತ್ಯಂತ ವಿಶ್ವಾಸಾರ್ಹ ಜ್ಯುವೆಲ್ಲರಿ ಸಂಸ್ಥೆಯಾದ ಜಿ ಆರ್ ಟಿ ಜ್ಯುವೆಲರ್ಸ್ ನ ಬೆಂಗಳೂರಿನ ಯಲಹಂಕದ ಶೋರೂಮಿಗೆ ಸೇಲ್ಸ್ ಸಿಬ್ಬಂದಿ ಬೇಕಾಗಿದ್ದರೆ ಫ್ರೆಶರ್ ಮತ್ತು ಅನುಭವಿ ಅಭ್ಯರ್ಥಿಗಳು ತಮ್ಮ ಸ್ವವಿವರ ಮತ್ತು ಶೈಕ್ಷಣಿಕ ಪ್ರಮಾಣಪತ್ರಗಳೊಂದಿಗೆ ವಾಕ್ ಇನ್ ಸಂದರ್ಶನಕ್ಕೆ ಹಾಜರಾಗಬಹುದು. ಅಭ್ಯರ್ಥಿಗಳು ಕನ್ನಡ ಮಾತನಾಡುವವರಾಗಿರಬೇಕು.
ಸೇಲ್ಸ್‌ಮನ್/ ಸೇಲ್ಸ್ ಗರ್ಲ್ಸ್
10ನೇ ತರಗತಿ, ಪಿಯುಸಿ ಅಥವಾ ಪದವಿ
ವಯೋಮಿತಿ:18 ರಿಂದ 35
ಸೇಲ್ಸ್ ಅಸಿಸ್ಟೆಂಟ್ಸ್
10ನೇ ತರಗತಿ, ಅಥವಾ ಪಿಯುಸಿ
ವಯೋಮಿತಿ: 18 ರಿಂದ 22
ದಿನಾಂಕ ಮತ್ತು ಸಮಯ:
16 ಮತ್ತು 17 ಫೆಬ್ರವರಿ 2023, (ಗುರುವಾರ ಮತ್ತು ಶುಕ್ರವಾರ) (10.00ರಿಂದ ಸಂಜೆ 5.00 ರವರೆಗೆ)
ಸಂದರ್ಶನ ಸ್ಥಳ:
GRT Jewellers India (P) Limited-Malleswaram
ಹಳೆಯ ನಂ. 1794, ಹೊಸ ನಂ. 530, 2ನೇ ಮುಖ್ಯ ಸಂಪಿಗೆ ರಸ್ತೆ, ಸಂಪಿಗೆ ಥಿಯೇಟರ್ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು - 560 003
ದಿನಾಂಕ ಮತ್ತು ಸಮಯ:
18 ಫೆಬ್ರವರಿ 2023 (ಶನಿವಾರ) (10.00ರಿಂದ ಸಂಜೆ 5.00 ರವರೆಗೆ)
ಸಂದರ್ಶನ ಸ್ಥಳ:
GRT ಜ್ಯುವೆಲ್ಲರ್ಸ್ ಇಂಡಿಯಾ (ಪ್ರೈ) ಲಿಮಿಟೆಡ್ - ಕೆ ಆರ್ ಪುರಂ
ನಂ: 42/2, JCMS ಕಾಂಪ್ಲೆಕ್ಸ್, ಹಳೆಯ ಮದ್ರಾಸ್ ರಸ್ತೆ-NH 75, ಕೆ.ಆರ್.ಪುರಂ ಬೆಂಗಳೂರು-560036
ಸಂಪರ್ಕ ಸಂಖ್ಯೆಗಳು:
9150566650
9384053666
ಇಮೇಲ್: recruitment@grtjewels.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9611225388/ 9611225266

CONNECT ಕ್ಲಾಸಿಫೈಡ್ಸ್

K+S
1985ರ ರಸಗೊಬ್ಬರ ನಿಯಂತ್ರಣ ಆದೇಶದ ಅಡಿಯಲ್ಲಿ ನಿಗಧಿಪಡಿಸಲಾದ ವಿಶೇಷಣಗಳೊಂದಿಗೆ 100% ನೀರಿನಲ್ಲಿ ಕರಗುವ ರಸಗೊಬ್ಬರಗಳ ಮಿಶ್ರಣ ಮಾರಾಟ.
K+S ಫರ್ಟಿಲೈಸರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
100% ನೀರಿನಲ್ಲಿ ಕರಗುವ ರಸಗೊಬ್ಬರಗಳನ್ನು ಕೆಳಗಿನ ವಿಶೇಷಣಗಳೊಂದಿಗೆ ಮಾರಾಟ ಮಾಡಲು ನಿರ್ಧರಿಸಿದೆ ಎಂದು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

A	COMPOSITION	NPK 9-40-10 + 3.5 % MgO +0.1%B	NPK 13-8-28 + 3.5 % MgO +0.1%B	NPK 25-10-6 + 3.5 % MgO +0.1%B	NPK 14-10-17 + 3.5 % MgO
1	Moisture per cent by weight, maximum	0.5	0.5	0.5	0.5
2	Total Nitrogen Per cent by weight, minimum	9	13	25	14
3	Water soluble Phosphorous(as P2O5) per cent by weight, minimum	40	8	10	10
4	Water soluble Potassium (as K2O) per cent by weight, minimum	10	28	6	17
5	Sodium (as Nacl) Per cent by weight on dry basis, maximum	0.5	0.5	0.5	0.5
6	Matter insoluble in water per cent by weight , maximum	0.5	0.5	0.5	0.5
7	Magnesium (as MgO) per cent by weight, maximum	3.5	3.5	3.5	3.5
8	Boron (as B) per cent by weight, minimum	0.1	0.1	0.1	
9	Total chloride (as Cl) per cent by weight on dry basis, max	1.5	1.5	1.5	1.5
10	Lead (as Pb) per cent by weight, maximum	0.003	0.003	0.003	0.003
11	Cadmium (as Cd) per cent by weight, maximum	0.0025	0.0025	0.0025	0.0025
12	Arsenic (as As) per cent by weight, maximum	0.01	0.01	0.01	0.01
B	soluEPSOMITE (MgSO4)-9.5%Mg+12%S				
C	soluTE Fe(Iron) EDTA 12%				

ಅನ್ವಯ ಮತ್ತು ಪ್ರಯೋಜನಗಳ ಕುರಿತು ಹೆಚ್ಚಿನ ಮಾಹಿತಿಗೆ ದಯವಿಟ್ಟು K+S ಫರ್ಟಿಲೈಸರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಕರ್ನಾಟಕ ಮಾರಾಟ ತಂಡವನ್ನು ಸಂಪರ್ಕಿಸಿ
ಇವರಿಂದ,
K+S Fertilizers (India) Pvt. Ltd.
Office No. 411, 4th Floor, Good Earth Business Bay, Sector 58, Gurgaon, Haryana, Pincode : 122098

General

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100-56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858 .

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 17,800-68,000/-. 9035022290/ 9844503222

ವ್ಯಾಪಾರ

Business Offers

Franchise

BUSINESS OFFER
ಅತ್ಯುತ್ತಮ ಕೆಲಸದ ಸದಾವಕಾಶ!ನೋಂದಾಯಿತ ಕಂಪನಿಯ ಫ್ರಾಂಚೈಸ್/ಡಿಎಂಎ ಅಥವಾ ಏಜೆಂಟ್‌ಶಿಪ್ ಪಡೆದುಕೊಳ್ಳಿ!! ಉತ್ತಮ ವೇತನ ಮತ್ತು ಕಮಿಷನ್ ಕಾಲ್: 9779977427

ಶಿಕ್ಷಣ

Coaching Classes

ACE INDIA IAS Rajarajeshwarinagar Banglore coaching for IAS/KAS/ Banking started admissions. Contact: 9019308383 9845655761

ಭವಿಷ್ಯ

Astrology

ಸ್ತ್ರೀ ವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ, ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್, 8722756967.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018

ಪ್ರವಾಸ

Travel

27/03/2023ರಿಂದ 13/16ದಿನಗಳ ವಿಮಾನ ಮತ್ತು AC ಬಸ್ಸಿನಲ್ಲಿ ಅಖಂಡನೇಪಾಳ ಮತ್ತು ಮುಕ್ತಿನಾಥ್,ಕಾಶಿ, ಗಯಾ,ನೈಮಿಷಾರಣ್ಯ,ಪುರಿ 27/04/2023ರಿಂದ ಚಾರುಧಾಮ್ ಸಮೇತ ಮಸ್ಸೂರಿ,ಹರಿದ್ವಾರ,ಮಾನ, ಋಷಿಕೇಶ್ ಹಾಗೂ ದಕ್ಷಿಣಭಾರತ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್ 9480182865/ 8105657052 (ಷಣ್ಮುಗಾನಂದ)

ನಮ್ಮ ಕಾಶಿಯಾತ್ರೆಗೆ ಅಥವಾ ಮುಕ್ತಿನಾಥ ನೇಪಾಳ ಯಾತ್ರೆಗೆ ನಿಮ್ಮ ಹೆತ್ತವರನ್ನು ಕಳಿಸಿಕೊಡಿ. ಕಾಳಜಿಯಿಂದ ಪ್ರವಾಸ ಮಾಡಿಸುತ್ತೇವೆ. ನಾಲಂದಾ, ಕುಂದಾಪುರ 8310028157.

ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ 9880847001 9902008056 9342848791 ಕಾಶ್ಮೀರ್ ಪ್ರವಾಸ 6/ 10 ದಿನಗಳು 14.03.2023 28.03.2023 11.04.2023 25.04.2023 9.05.2023, 23.05.2023 ಸಿಮ್ಲಾ ಮನಾಲಿ ಪ್ರವಾಸ 7/ 12 ದಿನಗಳು. 14.03.2023 21.03.2023 11.04.2023 18.04.2023 09.05.2023 16.05.2023 ಪುರಿ,ಕಲ್ಕತ್ತಾ,ಡಾರ್ಜಿಲಿಂಗ್ ಪ್ರವಾಸ 11 ದಿನಗಳು. 16.03.2023 30.03.2023 13.04.2023 27.04.2023 11.05.2023 25.05.2023 ಉತ್ತರಭಾರತ ಪ್ರವಾಸ 10/11 ದಿನಗಳು. 7.03.2023 27.03.2023 4.04.2023 18.04.2023 16.05.2023 30.05.2023 ಚಾರ್‌ಧಾಮ್ 13 ದಿನಗಳು. 26.04.2023 03.05.2023 17.05.2023 07.06.2023 21.06.2023 ಮುಕ್ತಿನಾಥ 13 ದಿನಗಳು. 13.03.2023 27.03.2023 10.04.2023 24.04.2023 08.05.2023 26.05.2023

27/04/2023ರಿಂದ 13ದಿನಗಳ ದೆಹಲಿ,ಆಗ್ರಾ,ಕಾಶಿ, ಅಲಹಾಬಾದ್ ಹಾಗೂ ಚಾರಧಾಮ್ ಯಾತ್ರೆಗಳು 30/06/2023ರಿಂದ 12ದಿನಗಳ ಅಮರನಾಥ್ ವೈಷ್ಣೋದೇವಿ,ವಾಘಬಾರ್ಡರ್. ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್: 8105657052/ 9480182865. (ಷಣ್ಮುಗಾನಂದ)

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 23/02/23 ವೈಷ್ಣೋದೇವಿ, ದೆಹಲಿ, ಅಮೃತಸರ, ಇತ್ಯಾದಿ. 27/03/23ಕಾಶಿ, ಅಯೋಧ್ಯ. 09/03/23 ನೇಪಾಳ, ಮುಕ್ತಿನಾಥ 9591017782/9964527782

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಂಪ್ಲೇಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೊಯಮತ್ತೂರಿನ ಕಾರು ಹಾಗೂ ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ

ಮೈಸೂರು ಸೇರಿ 40 ಸ್ಥಳಗಳಲ್ಲಿ ಶೋಧ

ನವದೆಹಲಿ/ಚೆನ್ನೈ (ಪಿಟಿಐ): ಕೊಯಮತ್ತೂರು ಹಾಗೂ ಮಂಗಳೂರಿನಲ್ಲಿ ಸಂಭವಿಸಿದ ಎರಡು ಸ್ಫೋಟ ಪ್ರಕರಣಗಳಿಗೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ಕರ್ನಾಟಕ, ತಮಿಳುನಾಡು ಹಾಗೂ ಕೇರಳದ ಒಟ್ಟು 40 ಸ್ಥಳಗಳಲ್ಲಿ ಬುಧವಾರ ಶೋಧ ಕಾರ್ಯ ಕೈಗೊಂಡಿತು.

ಕೊಯಮತ್ತೂರು ಸ್ಫೋಟಕ್ಕೆ ಸಂಬಂಧಿಸಿ 32 ಸ್ಥಳಗಳಲ್ಲಿ ಹಾಗೂ ಮಂಗಳೂರು ಸ್ಫೋಟಕ್ಕೆ ಸಂಬಂಧಿಸಿ ಮೈಸೂರು ಸೇರಿದಂತೆ 8 ಸ್ಥಳಗಳಲ್ಲಿ ಶೋಧ ನಡೆಸಲಾಯಿತು' ಎಂದು ಎನ್‌ಐಎ ವಕ್ತಾರ ತಿಳಿಸಿದ್ದಾರೆ.

'ಭಾರಿ ಪ್ರಮಾಣದಲ್ಲಿ ಡಿಜಿಟಲ್ ಸಾಧನಗಳು, ₹ 4 ಲಕ್ಷ ನಗದು, ಆಧಾರ್ ಕಾರ್ಡುಗಳು, ಸಿಮ್‌ಗಳು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

ಮಂಗಳೂರಿನಲ್ಲಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ, ಮೈಸೂರಿನಲ್ಲಿ ಒಂದು ಸ್ಥಳ, ಕೇರಳದ ಎರ್ನಾಕುಲಂನಲ್ಲಿ 4, ತಮಿಳುನಾಡಿನ ತಿರುಪ್ಪೂರಿನಲ್ಲಿ 2 ಹಾಗೂ ಕೊಯಮತ್ತೂರಿನ ಒಂದು ಸ್ಥಳದಲ್ಲಿ ಶೋಧ ನಡೆಸಲಾಗಿದೆ.

ಕೊಯಮತ್ತೂರಿನಲ್ಲಿ ಸಂಭವಿಸಿದ್ದ ಕಾರು ಬಾಂಬ್ ಸ್ಫೋಟಕ್ಕೆ ಸಂಬಂಧಿಸಿ, ಕೊಯಮತ್ತೂರಿನ 14 ಸ್ಥಳಗಳಲ್ಲಿ, ತಿರುಚಿನಾಪಳ್ಳಿ, ತೂತ್ತುಕುಡಿ, ದಿಂಡಿಗಲ್, ಮೈಲಾಡುತುರೈ, ಕೃಷ್ಣಗಿರಿ, ಕನ್ಯಾಕುಮಾರಿ, ತೆಂಕಾಸಿ ಹಾಗೂ ಕೇರಳದ ಎರ್ನಾಕುಲಂನಲ್ಲಿ ತಲಾ ಒಂದು ಸ್ಥಳದಲ್ಲಿ ಶೋಧ ನಡೆದಿದೆ. ತಮಿಳುನಾಡಿನ ನೀಲಗಿರಿಯಲ್ಲಿ 2, ತಿರುನೆಲ್ವೇಲಿ- 3, ಚೆನ್ನೈ-3, ತಿರುವಣ್ಣಾಮಲೈನ 2 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ವಕ್ತಾರ ತಿಳಿಸಿದ್ದಾರೆ.

ಸ್ಥಳೀಯ ಪೊಲೀಸರು ಒದಗಿಸಿದ್ದ ಬಿಗಿ ಭದ್ರತೆ ನಡುವೆ ಬೆಳಿಗ್ಗೆ 5ಕ್ಕೆ ಆರಂಭಗೊಂಡ ಶೋಧ ಕಾರ್ಯ, ಹಲವು ಗಂಟೆಗಳ ವರೆಗೆ ನಡೆಯಿತು.

ತಿರುಚಿರಾಪಳ್ಳಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಯೊಬ್ಬರ ಮನೆಯಲ್ಲಿ ಶೋಧ ನಡೆಯಿತು. ಮೈಲಾಡುತುರೈನಲ್ಲಿ ತಂದೆ ಹಾಗೂ ಪುತ್ರಗೆ ಸಂಬಂಧಿಸಿದ ಮನೆಯಲ್ಲಿ ಶೋಧ ನಡೆಸಲಾಯಿತು. ಈ ಇಬ್ಬರು ಮಸ್ಜಿದ್‌ನಲ್ಲಿ ಕಾರು ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಕೊಯಮತ್ತೂರು ಸ್ಫೋಟ ಪ್ರಕರಣದ ಶಂಕಿತ ಆರೋಪಿಗಳ ಜೊತೆ ಮಹಿಳೆಯೊಬ್ಬರು ದೂರವಾಣಿ ಮೂಲಕ ಸಂಪರ್ಕದಲ್ಲಿದ್ದರು. ತೆಂಕಾಸಿಯಲ್ಲಿರುವ ಈ ಮಹಿಳೆ ಮನೆಯಲ್ಲಿಯೂ ಎನ್‌ಐಎ ಅಧಿಕಾರಿಗಳು ಶೋಧ ನಡೆಸಿದ್ದಾರೆ.



ಕೊಯಮತ್ತೂರಿನಲ್ಲಿ ಎನ್‌ಐಎ ಬುಧವಾರ ಶೋಧ ಕಾರ್ಯ ಕೈಗೊಂಡಿದ್ದ ಪ್ರದೇಶದಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು –ಪಿಟಿಐ ಚಿತ್ರ

ಮುಖ್ಯಾಂಶಗಳು

- ಮಂಗಳೂರು ಸ್ಫೋಟ ಸಂಬಂಧ ಮೈಸೂರು ಸೇರಿ 8 ಸ್ಥಳಗಳಲ್ಲಿ ಶೋಧ
- ಡಿಜಿಟಲ್ ಸಾಧನಗಳು, ₹ 4 ಲಕ್ಷ ನಗದು, ಆಧಾರ್ ಕಾರ್ಡ್ ಜಪ್ತಿ
- ತಿರುಚಿನಾಪಳ್ಳಿಯ ಸಾಫ್ಟ್‌ವೇರ್ ಎಂಜಿನಿಯರ್ ಮನೆಯಲ್ಲಿ ಶೋಧ

ಸಂಗಾತಿ ಕೊಲೆ: ಆರೋಪಿ ವಶ

ಕಾರಿನಲ್ಲಿ ಕೊಲೆ ಮಾಡಿ ಫ್ರಿಡ್ಜ್‌ನಲ್ಲಿ ಶವವಿಟ್ಟಿದ್ದ ಸಾಹಿಲ್

ನವದೆಹಲಿ (ಪಿಟಿಐ): ನೈರುತ್ಯ ದೆಹಲಿಯಲ್ಲಿ ತನ್ನ ಸಹಜೀವನದ ಸಂಗಾತಿಯನ್ನು ಕೊಂದು, ಆಕೆಯ ದೇಹವನ್ನು ಫ್ರಿಡ್ಜ್‌ನಲ್ಲಿಟ್ಟ ಆರೋಪಿ ಸಾಹಿಲ್ ಗೆಹಲೋತ್ (24) ಎಂಬಾತನನ್ನು ಐದು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ವಹಿಸಿ ದೆಹಲಿ ನ್ಯಾಯಾಲಯ ಬುಧವಾರ ಆದೇಶಿಸಿದೆ.

'ಸಾಹಿಲ್ ಗೆಹಲೋತ್ ದೆಹಲಿಯ ಮಿತ್ರಾಂವ್ ಗ್ರಾಮದ ನಿವಾಸಿಯಾಗಿದ್ದು, ತನ್ನ ಗೆಳತಿ ನಿಕ್ಕಿ ಯಾದವ್ ಅವರನ್ನು ಕೊಂದು, ಶವವನ್ನು ಫ್ರಿಡ್ಜ್‌ನಲ್ಲಿಟ್ಟಿದ್ದಾನೆ. ಅಲ್ಲದೆ ಕೃತ್ಯ ಎಸಗಿದ ದಿನವೇ ಆತ ಮತ್ತೊಬ್ಬರೊಂದಿಗೆ ಮದುವೆಯಾಗಲು ಹೊರಟಿದ್ದ' ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದರು.

ಹೆಚ್ಚಿನ ವಿಚಾರಣೆಗೆ ಒಳಪಡಿಸಲು, ಕೊಲೆಯ ನಿಖರ ಸ್ಥಳ ಹಾಗೂ ಕೊಲೆಯ ಬಳಿಕ ಆತ ಅನುಸರಿಸಿದ ಮಾರ್ಗವನ್ನು ಖಚಿತಪಡಿಸಿಕೊಳ್ಳಲು ಆರೋಪಿಯನ್ನು ಐದು ದಿನಗಳವರೆಗೆ ದೆಹಲಿಯ ಅಪರಾಧ ವಿಭಾಗದ ಪೊಲೀಸರ ವಶಕ್ಕೆ ಒಪ್ಪಿಸಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅರ್ಚನಾ ಬೇನಿವಾಲ್ ಆದೇಶಿಸಿದರು.

'ಆರೋಪಿಯು ತನ್ನ ಸಂಗಾತಿಯ ಜೊತೆಗೆ ಹೋದ ಸ್ಥಳಗಳನ್ನು ಪರಿಶೀಲಿಸಬೇಕಿದೆ. ಅಲ್ಲದೆ ಅಪರಾಧಕ್ಕೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಿ, ಸಾಕ್ಷ್ಯಗಳನ್ನು ಸಂಗ್ರಹಿಸಬೇಕಿದೆ. ಅದಕ್ಕಾಗಿ ಆರೋಪಿಯನ್ನು ಪೊಲೀಸ್ ವಶಕ್ಕೆ ಒಪ್ಪಿಸುವಂತೆ' ಪೊಲೀಸರು ಅರ್ಜಿಯಲ್ಲಿ ಕೋರಿದ್ದರು.

ಈ ಘಟನೆ ನಡೆದಿರುವ ವಿಷಯ ಪ್ರೇಮಿಗಳ ದಿನವಾದ ಫೆಬ್ರುವರಿ 14ರಂದು ಗೊತ್ತಾಗಿದೆ. ಆರೋಪಿ ನೀಡಿದ ಸುಳಿವುಗಳ ಆಧಾರದ ಮೇಲೆ, 23 ವರ್ಷದ ನಿಕ್ಕಿ ಯಾದವ್ ಶವವನ್ನು ಪೊಲೀಸರು ಮಂಗಳವಾರ ಹೊರತೆಗೆದಿದ್ದರು.

'ಸಾಹಿಲ್ ಮತ್ತು ನಿಕ್ಕಿ ಯಾದವ್ ಕೆಲ ವರ್ಷಗಳಿಂದ ಸಹಜೀವನ ನಡೆಸುತ್ತಿದ್ದರು. ಸಾಹಿಲ್ ಅನ್ನು ವಿವಾಹವಾಗಲು ನಿಕ್ಕಿ ಬಯಸಿದ್ದಳು. ಆದರೆ ಆರೋಪಿ, ತಾನು ಬೇರೊಬ್ಬ ಮಹಿಳೆಯ ಜತೆಗೆ ವಿವಾಹವಾಗುವ ವಿಷಯವನ್ನು ನಿಕ್ಕಿಯಿಂದ ಮುಚ್ಚಿಟ್ಟಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಫೆಬ್ರುವರಿ 9ರ ಮಧ್ಯರಾತ್ರಿ ಕೊಲೆ: 'ಸಾಹಿಲ್ ನಿಶ್ಚಿತಾರ್ಥ ಮತ್ತು ವಿವಾಹವಾಗುವ ವಿಷಯ ತಿಳಿದ ನಿಕ್ಕಿ, ಆತನನ್ನು ಫೆಬ್ರುವರಿ 9ರಂದು ಉತ್ತಮ್ ನಗರದಲ್ಲಿರುವ ತನ್ನ ಮನೆಗೆ ಬರುವಂತೆ ಕರೆ ಮಾಡಿ ಹೇಳಿದ್ದಾಳೆ. ಗೆಳತಿಯ ಮನೆಗೆ ಹೋದ ಆರೋಪಿಯು ತನ್ನ ಕಾರಿನಲ್ಲಿ ಆಕೆಯನ್ನು ಕರೆದುಕೊಂಡು ಹೊರಗೆ ಹೋಗಿದ್ದಾನೆ. ಈ ವೇಳೆ, ಬೇರೊಬ್ಬರೊಂದಿಗೆ ವಿವಾಹವಾಗದಂತೆ ನಿಕ್ಕಿಯು ಸಾಹಿಲ್ ಮೇಲೆ ಒತ್ತಡ ಹೇರಿದ್ದಾಳೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೋಚಿಂಗ್ ಸಂದರ್ಭದಲ್ಲಿ ಪರಿಚಯ: ಎಸ್‌ಎಸ್‌ಸಿ ಪರೀಕ್ಷೆ ತಯಾರಿಗಾಗಿ ತಾನು 2018ರ ಜನವರಿಯಲ್ಲಿ ಉತ್ತಮ್ ನಗರದ ಕೋಚಿಂಗ್ ಸೆಂಟರ್‌ನಲ್ಲಿ ತರಬೇತಿ ಪಡೆಯುತ್ತಿದ್ದೆ. ಹರಿಯಾಣದ ಜಜ್ಜರ್‌ನ ನಿವಾಸಿ ನಿಕ್ಕಿ ಯಾದವ್ ಅವರೂ ಉತ್ತಮ್ ನಗರದ ಸಂಸ್ಥೆಯಲ್ಲಿ ವೈದ್ಯಕೀಯ ಪ್ರವೇಶ ಪರೀಕ್ಷೆಗಾಗಿ ತಯಾರಿ ನಡೆಸುತ್ತಿದ್ದರು ಎಂದು ಸಾಹಿಲ್ ಹೇಳಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಪತ್ನಿ ಕೊಂದು ಹಾಸಿಗೆಯಲ್ಲಿ ಶವ ಸುತ್ತಿಟ್ಟಿದ್ದ ಪತಿ

ಮುಂಬೈ (ಪಿಟಿಐ): ಪಾಲ್ಘರ್ ಜಿಲ್ಲೆಯ ವಿಜಯನಗರದಲ್ಲಿ ಹಾರ್ದಿಕ್ ಶಾ ಎಂಬಾತ, ಪತ್ನಿಯನ್ನು ಕೊಂದು, ಮೃತದೇಹವನ್ನು ಹಾಸಿಗೆಯಲ್ಲಿ ಸುತ್ತಿಟ್ಟಿದ್ದ. ವಾಸನೆಯಿಂದಾಗಿ ಶವವಿರುವುದು ಯಾರಿಗೂ ಗೊತ್ತಾಗಬಾರದು ಎಂಬ ಉದ್ದೇಶದಿಂದ ಆರೋಪಿಯು ಅಗರಬತ್ತಿಗಳನ್ನು ಹಚ್ಚಿಟ್ಟಿದ್ದ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಮನೆಯಲ್ಲಿನ ವಸ್ತುಗಳನ್ನು ಮಾರಾಟ ಮಾಡಿ, ಹರಿದ್ವಾರಕ್ಕೆ ಹೋಗಲು ಸಿದ್ಧತೆ ಮಾಡಿಕೊಂಡಿದ್ದ ಹಾರ್ದಿಕ್, ಖರೀದಿದಾರರನ್ನು ಮನೆಗೆ ಆಹ್ವಾನಿಸಿದ್ದ. ಅವರಿಗೆ, ಕೊಳೆತ ಶವದ ವಾಸನೆ ಬಾರದಂತೆ ಮಾಡುವ ಸಲುವಾಗಿ ಈ ಉಪಾಯ ಮಾಡಿದ್ದ ಎಂದೂ ಪೊಲೀಸರು ತಿಳಿಸಿದ್ದಾರೆ.

ಆರೋಪಿಯನ್ನು ಫೆ.14ರಂದು ಮಧ್ಯಪ್ರದೇಶದ ನಾಗದಾ ರೈಲು ನಿಲ್ದಾಣದಲ್ಲಿ ಪೊಲೀಸರು ಬಂಧಿಸಿದ್ದಾರೆ.

ಹಣದ ವಿಚಾರವಾಗಿ ಪತ್ನಿ ಮೇಘಾ ಹಾಗೂ ಹಾರ್ದಿಕ್ ನಡುವೆ ಫೆ.11ರಂದು ಜಗಳವಾಗಿತ್ತು. ಜಗಳ ವಿಕೋಪಕ್ಕೆ ಹೋದಾಗ, ಟವೆಲ್‌ನಿಂದ ಕುತ್ತಿಗೆಗೆ ನೇಣು ಬಿಗಿದು ಪತ್ನಿಯನ್ನು ಕೊಲೆ ಮಾಡಿದ್ದ ಹಾರ್ದಿಕ್, ಶವವನ್ನು ಹಾಸಿಗೆಯಲ್ಲಿ ಸುತ್ತಿಟ್ಟಿದ್ದ ಎಂದೂ ಪೊಲೀಸರು ತಿಳಿಸಿದ್ದಾರೆ.

ತ್ರಿಪುರಾ: ಇಂದು ಮತದಾನ

ಅಗರ್ತಲಾ (ಪಿಟಿಐ): 60 ಸ್ಥಾನಗಳಿಗೆ ನಡೆಯಲಿರುವ ತ್ರಿಪುರಾ ವಿಧಾನಸಭೆ ಚುನಾವಣೆಯ ಮತದಾನವು ಗುರುವಾರ ನಡೆಯಲಿದೆ. ಮುಕ್ತ, ಪಾರದರ್ಶಕ, ಶಾಂತಿಯುತ ಚುನಾವಣೆ ನಡೆಸಲು ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ಗಿಟ್ಟೆ ಕಿರಣ್ ಕುಮಾರ್ ದಿನಕರೋ ತಿಳಿಸಿದರು.

ಒಟ್ಟು 3,337 ಮತಗಟ್ಟೆಗಳಲ್ಲಿ ಬೆಳಿಗ್ಗೆ 7 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಮತಗಟ್ಟೆಗಳಿಗೆ ಬಿಗಿ ಭದ್ರತೆ ಒದಗಿಸಲಾಗಿದೆ. ಒಟ್ಟು ಮತಗಟ್ಟೆಗಳಲ್ಲಿ 1,100 ಮತಗಟ್ಟೆಗಳನ್ನು ಸೂಕ್ಷ್ಮ ಮತ್ತು 28 ಮತಗಟ್ಟೆಗಳನ್ನು ಅತಿಸೂಕ್ಷ್ಮ ಎಂದು ಗುರುತಿಸಲಾಗಿದೆ ಎಂದು ಅವರು ತಿಳಿಸಿದರು.

31,000 ಚುನಾವಣಾ ಸಿಬ್ಬಂದಿ ಮತ್ತು ಕೇಂದ್ರೀಯ ಭದ್ರತಾ ಸಂಸ್ಥೆಗಳ ಸುಮಾರು 25,000 ಸಿಬ್ಬಂದಿಯನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಚುನಾವಣೆ ವೇಳೆ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ರಾಜ್ಯ ಸಶಸ್ತ್ರ ಪೊಲೀಸ್ ಪಡೆ ಮತ್ತು ರಾಜ್ಯ ಪೊಲೀಸ್ ಪಡೆಯ 31,000 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು.

ಟೆಂಡರ್: ಕೈ–ಕಮಲ ಸವಾಲ್

ಒಂದನೇ ಪುಟದಿಂದ...

ಟೆಂಡರ್ ಮೊತ್ತ ದುಪ್ಪಟ್ಟು ಮಾಡಿ, ಕೆಲವನ್ನು ಸಂಪುಟದಲ್ಲಿ ತೀರ್ಮಾನಿಸಿದರೆ ಇನ್ನೂ ಕೆಲವನ್ನು ಸಂಪುಟ ತೀರ್ಮಾನವಿಲ್ಲದೆ 7 ದಿನಗಳ ಅಲ್ಪಾವಧಿಯಲ್ಲೇ ನೀಡುತ್ತಿದ್ದಾರೆ. ಶಾಸಕರು ಬೀದಿ, ಬೀದಿಯಲ್ಲಿ ಗುತ್ತಿಗೆದಾರರಿಗೆ ಆಹ್ವಾನ ನೀಡಿ, ಟೆಂಡರ್ ಪಡೆಯಲು ಚುನಾವಣೆಗೂ ಮುನ್ನ ಇಂತಿಷ್ಟು ಹಣ ನೀಡಬೇಕು ಎಂದು ಹೇಳುತ್ತಿದ್ದಾರೆ' ಎಂದರು.

'ಬಿಜೆಪಿ ಶಾಸಕರು, ಮಂತ್ರಿಗಿರಿ ಸಿಗದವರಿಗೆ ಈ ರೀತಿ ಟೆಂಡರ್ ಹಂಚುತ್ತಿದ್ದಾರೆ. ಹಳೆ ಕಾಮಗಾರಿಯ ಸಾವಿರಾರು ಕೋಟಿ ಹಣ ಬಾಕಿ ಉಳಿಸಿಕೊಂಡಿದ್ದು, ಮಂತ್ರಿಗಳು ಹಾಗೂ ಸರ್ಕಾರಕ್ಕೆ ಯಾರು ಕಮಿಷನ್ ನೀಡುತ್ತಾರೋ ಅವರ ಬಿಲ್ ಮಾತ್ರ ಪಾಸ್ ಮಾಡುತ್ತಿದ್ದಾರೆ. ನೇಮಕಾತಿಯಲ್ಲಿಯೂ ಅಕ್ರಮ ನಡೆಯುತ್ತಿದ್ದು, ನಾವು ಅಧಿಕಾರಕ್ಕೆ ಬಂದ ನಂತರ ಎಲ್ಲ ನೇಮಕಾತಿಗಳ ತನಿಖೆ ಮಾಡಲಾಗುವುದು' ಎಂದರು.

ಸಿದ್ದರಾಮಯ್ಯ ಮಾತನಾಡಿ, 'ಅಸಮಾಧಾನಗೊಂಡಿರುವ ಶಾಸಕರು, ಸಚಿವರಿಗೆ ದುಡ್ಡು ಕೊಡಲು ನೀರಾವರಿ ನಿಗಮಗಳಲ್ಲಿ ಯೋಜನೆಗಳಿಗೆ ತರಾತುರಿಯಲ್ಲಿ ಅನುಮೋದನೆ ನೀಡಲಾಗುತ್ತಿದೆ. ಯಾರು ಹೆಚ್ಚು ಕಮಿಷನ್ ನೀಡುತ್ತಾರೊ ಅವರಿಗೆ ಕಾಮಗಾರಿ ಕೊಡುತ್ತಿದ್ದಾರೆ. ತಮಗೆ ಬೇಕಾದ ಗುತ್ತಿಗೆದಾರರನ್ನು ಹುಡುಕಿ ಕೆಲಸ ನೀಡುತ್ತಿದ್ದಾರೆ. ಹೀಗೆ ಮಾಡಿ ಕಮಿಷನ್ ವಸೂಲಿ ಮಾಡಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಕಚೇರಿಯಿಂದಲೇ ಈ ಕೆಲಸ ನಡೆಯುತ್ತಿದೆ' ಎಂದು ಆರೋಪಿಸಿದರು.

'ನಾವು ಅಧಿಕಾರಕ್ಕೆ ಬಂದೇ ಬರುತ್ತೇವೆ. ಕಾನೂನುಬಾಹಿರವಾಗಿ ಮಾಡಿದರೆ ನೀವು ಸಿಕ್ಕಿಹಾಕಿಕೊಳ್ಳುತ್ತೀರಿ. ನ್ಯಾಯಾಲಯದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತೇವೆ' ಎಂದು ಸರ್ಕಾರಕ್ಕೆ, ಗುತ್ತಿಗೆದಾರರಿಗೆ, ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

'ಕಾಂಗ್ರೆಸ್ಸಿಗರಿಗೆ ಹುಚ್ಚು ಹಿಡಿದಿದೆ'

ಒಂದನೇ ಪುಟದಿಂದ...

ಕಾಂಗ್ರೆಸ್ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ತಲೆ ತಿರುಕರು ಮತ್ತು ತಲೆ ಸರಿ ಇಲ್ಲದವರು ಮಾತ್ರ ಹೀಗೆ ಮಾತನಾಡಲು ಸಾಧ್ಯ. ಕಾಂಗ್ರೆಸ್‌ನವರು ತಾವು ಅಧಿಕಾರಕ್ಕೆ ಬಂದೇ ಬಿಟ್ಟಿದ್ದೇವೆ ಎಂಬ ಭ್ರಮೆಯಲ್ಲಿದ್ದಾರೆ. ಹೀಗಾಗಿ ಹುಚ್ಚುಚ್ಚಾಗಿ ಮಾತನಾಡುತ್ತಿದ್ದಾರೆ' ಎಂದರು.

ನಿಮ್ಮ ಟೆಂಡರ್ ಹಗರಣಗಳಿಗೆ ಉತ್ತರ ಕೊಡಿ: ಬೊಮ್ಮಾಯಿ

ಒಂದನೇ ಪುಟದಿಂದ....

ಟೆಂಡರ್ ನೀಡಿಕೆ ಕುರಿತಂತೆ ಕಾಂಗ್ರೆಸ್ ನಾಯಕರ ಆರೋಪಗಳಿಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ನಾಯಕರು ತಮ್ಮ ಅವಧಿಯ ಭ್ರಷ್ಟ ಚಾರ ಕರ್ಮಕಾಂಡದ ನೆನಪು ಮಾಡಿಕೊಂಡು ಮಾತನಾಡುತ್ತಿದ್ದಾರೆ. ಮುಂದೆ ತಾವು ಅಧಿಕಾರಕ್ಕೆ ಬಂದರೆ ತನಿಖೆ ಮಾಡುತ್ತೇವೆ, ಗುತ್ತಿಗೆ ರದ್ದು ಮಾಡುತ್ತೇವೆ ಎಂದು ಹೇಳುವ ಮೂಲಕ ಬೆದರಿಕೆ ಹಾಕುತ್ತಿದ್ದಾರೆ ಎಂದರು.

ಕಾಂಗ್ರೆಸ್‌ನ ಈ ಬೆದರಿಕೆಯ ಅರ್ಥವೆಂದರೆ, ಮುಂದೆ ಅಧಿಕಾರಕ್ಕೆ ಬಂದರೆ ಸುಲಿಗೆ ಸಿದ್ಧರಾಗಿದ್ದೇವೆ ಎನ್ನುವುದೇ ಆಗಿದೆ. ಅವರ ಅಜೆಂಡಾವನ್ನು ಅವರೇ ಹೇಳಿಕೊಂಡಿದ್ದಾರೆ. ಶೇ 40 ಕಮಿಷನ್ ಆರೋಪವನ್ನು ಈವರೆಗೂ ಸಾಬೀತು ಮಾಡಲು ಸಾಧ್ಯವಾಗಿಲ್ಲ. ನ್ಯಾಯಾಲಯಕ್ಕೆ ಪುರಾವೆಗಳನ್ನು ಕೊಡುವುದಾಗಿ ಹೇಳಿಕೊಂಡಿದ್ದರು. ಇಲ್ಲಿಯವರೆಗೆ ಏನೂ ಕೊಟ್ಟಿಲ್ಲ. ಒಂದು ಪ್ರಕರಣವನ್ನೂ ದಾಖಲು ಮಾಡಿಲ್ಲ ಎಂದರು.

'ತಮ್ಮ ಭ್ರಷ್ಟಾಚಾರಗಳ ಪ್ರಕರಣಗಳನ್ನು ಮುಚ್ಚಿಹಾಕಲು ಲೋಕಾಯುಕ್ತ ಸಂಸ್ಥೆಯನ್ನೇ ಮುಗಿಸಿಬಿಟ್ಟರು. ಕಾಂಗ್ರೆಸ್ ಅವಧಿಯಲ್ಲಿ ಸಿದ್ದರಾಮಯ್ಯ ಅವರದ್ದೂ ಸೇರಿ ಸುಮಾರು 60 ಪ್ರಕರಣಗಳು ಎಸಿಬಿ ಮುಂದಿತ್ತು. ಎಲ್ಲದಕ್ಕೂ ಬಿ ರಿಪೋರ್ಟ್ ಮೂಲಕ ಕ್ಲೀನ್‌ಚಿಟ್ ಪಡೆದುಕೊಂಡರು. ಕಾಂಗ್ರೆಸ್‌ನವರು ತಮ್ಮ ಮೇಲಿನ ಆರೋಪಗಳಿಗೆ ಉತ್ತರಿಸಬೇಕು. ಆರೋಪಗಳ ಮೇಲೆ 'ಕೌದಿ' ಹಾಕಿ ಮುಚ್ಚುವ ಪ್ರಯತ್ನ ಸಿದ್ದರಾಮಯ್ಯ ನಡೆಸಿದ್ದಾರೆ' ಎಂದು ಬೊಮ್ಮಾಯಿ ಹರಿಹಾಯ್ದರು.

'ಡಿ.ಕೆ.ಶಿವಕುಮಾರ್ ಅವರು ನೀರಾವರಿ ಸಚಿವರಿದ್ದಾಗ ಟೆಂಡರ್ ಪರಿಶೀಲನಾ ಸಮಿತಿ ಮತ್ತು ಟಿ.ಎ.ಸಿ ಯನ್ನೂ ತೆಗೆದುಹಾಕಿದ್ದರು. ನಿಗಮದಲ್ಲಿ ಎರಡು ಹಂತದ ಪರಿಶೀಲನೆಯನ್ನು ತೆಗೆದು ಭ್ರಷ್ಟಾಚಾರಕ್ಕೆ ರಹದಾರಿ ಮಾಡಿಕೊಂಡಿದ್ದ ಸಿದ್ದರಾಮಯ್ಯ ಸರ್ಕಾರ. ನಾವು ಬಂದ ನಂತರ ಅದನ್ನು ಪುನಃ ಸ್ಥಾಪನೆ ಮಾಡಿದ್ದೇವೆ. ಹೀಗಾಗಿ ಅವರಿಗೆ ಯಾವುದೇ ನೈತಿಕ ಹಕ್ಕಿಲ್ಲ'ಎಂದರು.



ರಾಹುಲ್ ಗಾಂಧಿ ಅವರು ಸ್ಕೀಯಿಂಗ್‌ನಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಗುಲ್ಮಾರ್ಗ್‌ನಲ್ಲಿ ಸ್ಕೀಯಿಂಗ್ ನಡೆಸಿದ ರಾಹುಲ್ ಗಾಂಧಿ

ಗುಲ್ಮಾರ್ಗ್ (ಪಿಟಿಐ): ಉತ್ತರ ಕಾಶ್ಮೀರಕ್ಕೆ ಎರಡು ದಿನಗಳ ವೈಯಕ್ತಿಕ ಭೇಟಿ ನೀಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಇಲ್ಲಿನ ಗುಲ್ಮಾರ್ಗ್‌ನಲ್ಲಿ ಸ್ಕೀಯಿಂಗ್ ನಡೆಸಿದರು.

ಎರಡು ವಾರಗಳ ಹಿಂದೆಯಷ್ಟೇ ರಾಹುಲ್, ಶ್ರೀನಗರದಲ್ಲಿ ಭಾರತ ಜೋಡೊ ಯಾತ್ರೆಯ ಸಮಾರೋಪ ನೆರವೇರಿಸಿದ್ದರು. ಗುಲ್ಮಾರ್ಗ್‌ನ ಸ್ಕೀಯಿಂಗ್ ರೆಸಾರ್ಟ್‌ಗೆ ಭೇಟಿ ನೀಡುವ ಮುನ್ನ ಇಲ್ಲಿನ ತಂಗ್‌ಮಾರ್ಗ್ ಪಟ್ಟಣದಲ್ಲಿ ಕೆಲಕಾಲ ತಂಗಿದ್ದ ರಾಹುಲ್ ತಮ್ಮ ನೆಚ್ಚಿನ ಟೀ ಶರ್ಟ್ ಧರಿಸಿ ಗಮನ ಸೆಳೆದರು.

ಈ ವೇಳೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದ ರಾಹುಲ್, 'ನಮಸ್ಕಾರ' ಎಂದಷ್ಟೇ ಹೇಳಿದರು.

ಗುಲ್ಮಾರ್ಗ್‌ನ ಪ್ರಸಿದ್ಧ ಗೊಂಡೊಲಾ ಕೇಬಲ್ ಕಾರಿನಲ್ಲಿ ಸಂಚರಿಸಿದ ರಾಹುಲ್, ಸ್ಕೀಯಿಂಗ್ ನಡೆಸಲು ಅಫರ್ವತ್ ಶಿಖರ ಪ್ರದೇಶದತ್ತ ತೆರಳಿದರು. ಅಲ್ಲಿ ಪ್ರವಾಸಿಗರು ರಾಹುಲ್ ಅವರೊಂದಿಗೆ ಸೆಲ್ಫಿ ತೆಗೆಸಿಕೊಂಡರು.

ಬಾಲ್ಯ ವಿವಾಹ: ಕ್ರಮಕ್ಕೆ ಹೈಕೋರ್ಟ್ ಅಸಮಾಧಾನ

ಗುವಾಹಟಿ (ಪಿಟಿಐ): ಬಾಲ್ಯ ವಿವಾಹದ ವಿರುದ್ಧ ರೂಪಿಸಲಾಗಿರುವ ಕಠಿಣ ಕಾನೂನುಗಳಿಗೆ ಸಂಬಂಧಿಸಿ ಭಾರಿ ಸಂಖ್ಯೆಯಲ್ಲಿ ಜನರನ್ನು ಬಂಧಿಸಿರುವುದರ ವಿರುದ್ಧ ಗುವಾಹಟಿ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. 'ಈ ಕ್ರಮವು ಜನರ ಖಾಸಗಿ ಜೀವನದಲ್ಲಿ ದುಷ್ಪರಿಣಾಮ ಬೀರಲಿದೆ' ಎಂದು ಹೈಕೋರ್ಟ್ ಹೇಳಿದೆ.

ಅರ್ಜಿದಾರರನ್ನು ಜಾಮೀನಿನ ಮೇಲೆ ಕೂಡಲೇ ಬಿಡುಗಡೆ ಮಾಡುವಂತೆ ನ್ಯಾಯಪೀಠ ಆದೇಶ ನೀಡಿದೆ.

ಐಟಿಬಿಪಿಗೆ ಹೊಸ ಬೆಟಾಲಿಯನ್: ಕೇಂದ್ರ ಸಚಿವ ಸಂಪುಟ ಅಸ್ತು

ನವದೆಹಲಿ (ಪಿಟಿಐ): 'ಇಂಡೊ–ಟಿಬೆಟನ್ ಗಡಿ ಪೊಲೀಸ್ ಪಡೆಗೆ (ಐಟಿಬಿಪಿ) ಏಳು ಹೊಸ ಬೆಟಾಲಿಯನ್ ಮಂಜೂರು ಮಾಡುವುದಕ್ಕೆ ಹಾಗೂ ಗಡಿ ಕಾರ್ಯಾಚರಣೆ ನೆಲೆ ಸ್ಥಾಪನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ' ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ಸಭೆಯು ಹೊಸದಾಗಿ 9,400 ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಪ್ರಸ್ತಾವಕ್ಕೂ ಒಪ್ಪಿಗೆ ಸೂಚಿಸಿದೆ. ಹೀಗೆ ನೇಮಕಗೊಂಡ ಸಿಬ್ಬಂದಿಯನ್ನು ಹೊಸದಾಗಿ ನಿರ್ಮಾಣ ಮಾಡುವ 47 ಗಡಿ ಪೋಸ್ಟ್‌ಗಳ ನಿರ್ವಹಣೆಗೆ ಬಳಸಿಕೊಳ್ಳಲಾಗುತ್ತದೆ.

2020ರಿಂದ ಲಡಾಖ್ ಗಡಿಯಲ್ಲಿ ಭಾರತ ಮತ್ತು ಚೀನಾ ನಡುವಿನ ಸಂಘರ್ಷ ತಾರಕಕ್ಕೇರಿದೆ. 1962ರ ಭಾರತ–ಚೀನಾ ಯುದ್ಧದ ಬಳಿಕ 90,000 ಸಿಬ್ಬಂದಿಯನ್ನು ಒಳಗೊಂಡ ಬಲಿಷ್ಠ ಐಟಿಬಿಪಿ ಸ್ಥಾಪಿಸಲಾಗಿದೆ.

'ವೈಬ್ರಂಟ್ ವಿಲೇಜ್ ಕಾರ್ಯಕ್ರಮ' ಜಾರಿಗೆ ಒಪ್ಪಿಗೆ: ಗಡಿ ಗ್ರಾಮಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ 'ವೈಬ್ರಂಟ್ ವಿಲೇಜ್ ಕಾರ್ಯಕ್ರಮ' ಜಾರಿಗೊಳಿಸುವುದಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಒಪ್ಪಿಗೆ ನೀಡಿದೆ.

'ಈ ಕಾರ್ಯಕ್ರಮಕ್ಕಾಗಿ (2022-23 ರಿಂದ 2025-26) ಒಟ್ಟು ₹4,800 ಕೋಟಿ ಮೊತ್ತ ಮೀಸಲಿಡಲಾಗುತ್ತದೆ. ಗಡಿ ಭಾಗದ ಜನರು ವಲಸೆ ಹೋಗುವುದನ್ನು ತಪ್ಪಿಸುವುದು ಈ ಕಾರ್ಯಕ್ರಮದ ಉದ್ದೇಶ' ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ.

'ರಾಷ್ಟ್ರೀಯ ಪಕ್ಷಗಳಿಗೆ ದೇಣಿಗೆ: ಶೇಕಡ 31.50 ರಷ್ಟು ಹೆಚ್ಚಳ'

ನವದೆಹಲಿ (ಪಿಟಿಐ): '2021–22ರ ಹಣಕಾಸು ವರ್ಷದಲ್ಲಿ ರಾಷ್ಟ್ರೀಯ ಪಕ್ಷಗಳಿಗೆ ದೊರೆತ ದೇಣಿಗೆಯ ಪ್ರಮಾಣವು ಶೇ 31.50ರಷ್ಟು (₹187.03 ಕೋಟಿ) ಹೆಚ್ಚಳವಾಗಿದೆ' ಎಂದು ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಂಸ್ಥೆಯ ವರದಿ ಹೇಳಿದೆ.

'2021–22ರ ದೇಣಿಗೆಯ ವಿವರಗಳನ್ನು (₹20,000ಕ್ಕೂ ಮೇಲ್ಪಟ್ಟ ಮೊತ್ತ) ರಾಷ್ಟ್ರೀಯ ಪಕ್ಷಗಳು ಘೋಷಿಸಿದ್ದು, 7,141 ದೇಣಿಗಾರರಿಂದ ₹780.774 ಕೋಟಿ ಸಂಗ್ರಹವಾಗಿದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

'ಬಿಜೆಪಿಯು 4,957 ಮಂದಿಯಿಂದ ₹614.63 ಕೋಟಿ ದೇಣಿಗೆಯನ್ನು, ಕಾಂಗ್ರೆಸ್ 1,255 ಮಂದಿಯಿಂದ ₹95.46 ಕೋಟಿ ದೇಣಿಗೆಯನ್ನು ಸ್ವೀಕರಿಸಿರುವುದಾಗಿ ಆ ಪಕ್ಷಗಳು ಘೋಷಿಸಿವೆ' ಎಂದು ವರದಿ ಹೇಳಿದೆ.

'ಬಿಜೆಪಿ ಘೋಷಿಸಿದ ದೇಣಿಗೆಯ ಮೊತ್ತವು ಕಾಂಗ್ರೆಸ್, ಎನ್‌ಸಿಪಿ, ಸಿಪಿಐ, ಸಿಪಿಎಂ, ಎನ್‌ಪಿಇಪಿ ಮತ್ತು ಎಐಟಿಸಿ ಪಕ್ಷಗಳು ಘೋಷಿಸಿದ ಒಟ್ಟು ಮೊತ್ತಕ್ಕಿಂತ ಮೂರು ಪಟ್ಟು ಹೆಚ್ಚು. ಇದೇ ವೇಳೆ, ಬಹುಜನ ಸಮಾಜ ಪಕ್ಷವು ಕಳೆದ 16 ವರ್ಷಗಳಿಂದ ಘೋಷಿಸುತ್ತಿರುವಂತೆ ಈ ಬಾರಿಯೂ ₹ 20,000ಕ್ಕೆ ಮೇಲ್ಪಟ್ಟು ಯಾವುದೇ ದೇಣಿಗೆ ಸ್ವೀಕರಿಸಿಲ್ಲ ಎಂದು ಹೇಳಿದೆ' ಎಂದೂ ವರದಿ ವಿವರಿಸಿದೆ.

ಮುಟ್ಟಿನ ರಜೆ: ಇದೇ 24ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ವಿದ್ಯಾರ್ಥಿನಿಯರು ಮತ್ತು ಮಹಿಳಾ ಸಿಬ್ಬಂದಿಗೆ ಅವರು ಕೆಲಸ ಮಾಡುವ ಕಚೇರಿಗಳಲ್ಲಿ ಮುಟ್ಟಿನ ರಜೆ ನೀಡಲು ನಿಯಮ ರೂಪಿಸುವಂತೆ ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಇದೇ 24ರಂದು ನಡೆಸಲು ಸುಪ್ರೀಂ ಕೋರ್ಟ್ ಬುಧವಾರ ಒಪ್ಪಿಗೆ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠದ ಎದುರು ಈ ಅರ್ಜಿ ಕುರಿತು ಪ್ರಸ್ತಾಪಿಸಲಾಯಿತು.

ದೆಹಲಿ ನಿವಾಸಿ ಶೈಲೇಂದ್ರ ಮಣಿ ತ್ರಿಪಾಠಿ ಎಂಬುವವರು ಈ ಅರ್ಜಿ ಸಲ್ಲಿಸಿದ್ದರು. ಬ್ರಿಟನ್, ಜಪಾನ್, ಇಂಡೋನೇಷ್ಯಾ ಸೇರಿ ಹಲವಾರು ದೇಶಗಳು ಮಹಿಳಾ ಸಿಬ್ಬಂದಿಗೆ ಮುಟ್ಟಿನ ರಜೆಯನ್ನು ನೀಡಿವೆ ಎಂದು ಅವರು ಅರ್ಜಿಯಲ್ಲಿ ನಮೂದಿಸಿದ್ದರು.

ಚೆನ್ನೈ ಓಪನ್ ಟೆನಿಸ್: ಚುನ್‌ಗೆ ಮೊರೆನೊ ಆಘಾತ

ಎಂಟರಘಟ್ಟಕ್ಕೆ ಜೀವನ್–ಶ್ರೀರಾಮ್

ಚೆನ್ನೈ (ಪಿಟಿಐ): ಭಾರತದ ಜೀವನ್ ನೆಡುಂಚೆಳಿಯನ್ ಮತ್ತು ಶ್ರೀರಾಮ್ ಬಾಲಾಜಿ ಅವರ ಜೋಡಿಯು ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ತಲುಪಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಭಾರತದ ಆಟಗಾರರು ಬುಧವಾರ 6-4,7-5ರಿಂದ ಪೋರ್ಚುಗಲ್‌ನ ಫ್ರೆಡರಿಕೊ ಫೆರೆರಾ ಸಿಲ್ವಾ ಮತ್ತು ಅಮೆರಿಕದ ಡಿ ಅಲ್ಬೊರನ್ ಜೋಡಿಯನ್ನು ಸೋಲಿಸಿದರು.

ಎಂಟರಘಟ್ಟದಲ್ಲಿ ಜೀವನ್–ಶ್ರೀರಾಮ್ ಭಾರತದವರೇ ಆದ ಸುಮಿತ್ ನಗಾಲ್ ಮತ್ತು ಶಶಿಕುಮಾರ್ ಮುಕುಂದ್ ಅವರನ್ನು ಎದುರಿಸುವರು. 16ರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಸುಮಿತ್–ಮುಕುಂದ್ ಅವರು ತೈವಾನ್‌ನ ಸಿಯೊ ಸು– ಇಂಡೋನೇಷ್ಯಾದ ಕ್ರಿಸ್ಟೊಫರ್ ರುಂಗಾಕತ್ ಎದುರು ಸ್ಪರ್ಧಿಸಿದ್ದರು. ಭಾರತದ ಆಟಗಾರರು 7-6, 2-1ರಿಂದ ಮುಂದಿದ್ದಾಗ ಎದುರಾಳಿಗಳು ಗಾಯದಿಂದಾಗಿ ಪಂದ್ಯದಿಂದ ಹಿಂದೆ ಸರಿದರು.

ಚುನ್‌ಗೆ ಆಘಾತ: ಪುರುಷರ ಸಿಂಗಲ್ಸ್ ವಿಭಾಗದ ಅಗ್ರಶ್ರೇಯಾಂಕದ ಆಟಗಾರ ಚುನ್ ಸಿನ್ ಸೆಂಗ್ 16ರ ಘಟ್ಟದಲ್ಲಿ ಆಘಾತ ಅನುಭವಿಸಿದರು. ಅಮೆರಿಕದ ನಿಕೊಲಾಸ್ ಮೊರೆನೊ ಡಿ ಅಲ್ಬೊರನ್ 6-2, 6-4ರಿಂದ ಚೀನಾ ತೈಪೆ ಆಟಗಾರನನ್ನು ಮಣಿಸಿದರು.



ಅಮೆರಿಕದ ನಿಕೊಲಾಸ್ ಮೊರೆನೊ

ಬೆಂಗಳೂರು ಓಪನ್ ಟೆನಿಸ್: ಪ್ರಜ್ವಲ್ ದೇವ್‌ಗೆ ವೈಲ್ಡ್‌ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಸ್.ಡಿ.ಪ್ರಜ್ವಲ್ ದೇವ್ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ವೈಲ್ಡ್ ಕಾರ್ಡ್ ಪ್ರವೇಶ ಗಿಟ್ಟಿಸಿದ್ದಾರೆ. ಹಾಲಿ ವಿಂಬಲ್ಡನ್ ಚಾಂಪಿಯನ್, ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಡಬಲ್ಸ್ ವಿಭಾಗದಲ್ಲಿ ಪ್ರಮುಖ ಆಕರ್ಷಣೆ ಎನಿಸಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು(ಕೆಎಸ್‌ಎಲ್‌ಟಿಎ) ಫೆಬ್ರುವರಿ 20ರಿಂದ 26ರವರೆಗೆ ಪ್ರತಿಷ್ಠಿತ ಎಟಿಪಿ ಚಾಲೆಂಜರ್ ಟೂರ್ನಿಯನ್ನು ಇಲ್ಲಿ ಆಯೋಜಿಸಲಿದೆ. ಮೈಸೂರಿನ ಪ್ರಜ್ವಲ್ ಅವರದು ಟೂರ್ನಿಯ ಎರಡನೇ ವೈಲ್ಡ್‌ಕಾರ್ಡ್ ಪ್ರವೇಶವಾಗಿದೆ. ಸುಮಿತ್ ನಗಾಲ್ ಅವರಿಗೆ ಮೊದಲ ವೈಲ್ಡ್ ಕಾರ್ಡ್ ನೀಡಲಾಗಿತ್ತು. ಕಳೆದ ವರ್ಷ ಐಟಿಎಫ್‌ನ ಎರಡು ಟೂರ್ನಿಗಳಲ್ಲಿ ರನ್ನರ್ ಅಪ್ ಆಗಿದ್ದ ಪ್ರಜ್ವಲ್, ಈ ಟೂರ್ನಿಯಲ್ಲಿ ನಾಲ್ಕನೇ ಬಾರಿ ಕಣಕ್ಕಿಳಿಯಲಿದ್ದಾರೆ.

ಎರಡು ಬಾರಿ ಆಸ್ಟ್ರೇಲಿಯಾ ಓಪನ್ ರನ್ನರ್ ಅಪ್ ಆಗಿರುವ ಪರ್ಸೆಲ್ ಅವರು ತಮ್ಮದೇ ದೇಶದ ಮಾರ್ಕ್ ಪೋಲ್ಮನ್ಸ್ ಅವರ ಜೊತೆಯಾಗಿ ಆಡಲಿದ್ದಾರೆ.

ರಾಮ್‌ಕುಮಾರ್ ರಾಮನಾಥನ್ ಅವರು ಡಬಲ್ಸ್ ವಿಭಾಗದಲ್ಲಿ ಭಾರತದ ಪ್ರಮುಖ ಆಟಗಾರ ಎನಿಸಿದ್ದಾರೆ. ಇಟಲಿಯ ಫ್ರಾನ್ಸೆಸ್ಕೊ ಮಾಸ್ಟ್ರೆಲ್ಲಿ ಜೊತೆಯಾಗಿ ಅವರು ಕಣಕ್ಕಿಳಿಯುವರು.

ಭಾರತದ ಪೂರವ್ ರಾಜಾ– ದಿವಿಜ್ ಶರಣ್, ಅನಿರುದ್ಧ ಚಂದ್ರಶೇಖರ್–ಎನ್. ವಿಜಯ್‌ಸುಂದರ್ ಪ್ರಶಾಂತ್ ಡಬಲ್ಸ್‌ನಲ್ಲಿ ಆಡಲಿದ್ದಾರೆ. ಅರ್ಜುನ್ ಖಾಡೆ ಅವರು ಆಸ್ಟ್ರೇಲಿಯಾದ ಮ್ಯಾಕ್ಸಿಮಿಲನ್ ನ್ಯೂಕ್ರಿಸ್ಟ್ ಜೊತೆಯಾಗಿ ಪ್ರಶಸ್ತಿಗೆ ಪೈಪೋಟಿ ನಡೆಸಲಿದ್ದಾರೆ.



ಎಸ್.ಡಿ. ಪ್ರಜ್ವಲ್ ದೇವ್

ಬ್ಯಾಡ್ಮಿಂಟನ್: ಭಾರತಕ್ಕೆ ಮತ್ತೊಂದು ಜಯ

ದುಬೈ (ಪಿಟಿಐ): ಭಾರತ ತಂಡದವರು ಏಷ್ಯಾ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡನೇ ಜಯ ಗಳಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಭಾರತ 5–0ಯಿಂದ ಯುನೈಟೆಡ್ ಅರಬ್ ಎಮಿರೇಟ್ಸ್ ವಿರುದ್ಧ ಗೆದ್ದಿತು. ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದ ಪಂದ್ಯಗಳಲ್ಲಿ ಕ್ರಮವಾಗಿ ಲಕ್ಷ್ಯ ಸೇನ್ ಮತ್ತು ಆಕರ್ಷಿ ಕಶ್ಯಪ್ ಎದುರಾಳಿಗಳನ್ನು ಮಣಿಸಿದರು.

ಪುರುಷರ ಡಬಲ್ಸ್‌ನಲ್ಲಿ ಚಿರಾಗ್ ಶೆಟ್ಟಿ– ಧ್ರುವ ಕಪಿಲಾ, ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಭಟ್– ಶಿಖಾ ಗೌತಮ್, ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್–ತನಿಶಾ ಕ್ರಾಸ್ಟೊ ಜಯ ಗಳಿಸಿದರು.

ಮಂಗಳವಾರ ತಂಡವು ಕಜಕಸ್ತಾನ ಎದುರು ಗೆದ್ದಿತು.

ನೆಟ್‌ಬಾಲ್: ಕ್ವಾರ್ಟರ್‌ಫೈನಲ್‌ಗೆ ಬೆಂಗಳೂರು, ಮಂಗಳೂರು ವಿವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳೂರು ವಿವಿ ಹಾಗೂ ಬೆಂಗಳೂರು ವಿವಿ ತಂಡಗಳು ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಕ್ವಾರ್ಟರ್‌ಫೈನಲ್ ತಲುಪಿವೆ.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಬೆಂಗಳೂರು ಸೌಂದರ್ಯ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ನಾಗಸಂದ್ರ ಸೌಂದರ್ಯ ಕಾನೂನು ಮಹಾವಿದ್ಯಾಲಯದ ಅಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಮಂಗಳೂರು ವಿವಿ 47–28ರಿಂದ ರೇವಾ ವಿವಿ ತಂಡವನ್ನು ಪರಾಭವಗೊಳಿಸಿತು.

ಎಂಟರಘಟ್ಟದಲ್ಲಿ ಮಂಗಳೂರು ವಿವಿ, ಕ್ಯಾಲಿಕಟ್ ವಿವಿಗೆ ಮುಖಾಮುಖಿಯಾಗಲಿದೆ.

16ರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ವಿವಿ 60–42ರಿಂದ ರಾಜೀವ್‌ಗಾಂಧಿ ಪ್ರೌದ್ಯೋಗಿಕಿ ವಿವಿ ತಂಡವನ್ನು ಸೋಲಿಸಿತು. ಕ್ವಾರ್ಟರ್‌ಫೈನಲ್‌ನಲ್ಲಿ ಬೆಂಗಳೂರು ವಿವಿ ತಂಡಕ್ಕೆ ಭಾರತೀದಾಸನ್ ವಿವಿ ಸವಾಲು ಎದುರಾಗಿದೆ.

27ರಿಂದ ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೂರ್ನಿ

ಪಣಜಿ (ಪಿಟಿಐ): ವಿಶ್ವ ಟೇಬಲ್ ಟೆನಿಸ್ (ಡಬ್ಲ್ಯುಟಿಟಿ) ಸ್ಟಾರ್ ಕಂಟೆಂಡರ್ ಟೂರ್ನಿಯು ಫೆಬ್ರುವರಿ 27ರಿಂದ ಇಲ್ಲಿ ನಡೆಯಲಿದೆ. ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಚೀನಾದ ವಾಂಗ್ ಮನ್ಯು ಅವರಿಗೆ ಟೂರ್ನಿಯ ವೈಲ್ಡ್‌ಕಾರ್ಡ್ ಪ್ರವೇಶ ಲಭಿಸಿದೆ.

22 ವರ್ಷದ ವಾಂಗ್, ಕಳೆದ ವರ್ಷ ಡಬ್ಲ್ಯುಟಿಟಿ ಕಪ್ ಫೈನಲ್ಸ್ ಟೂರ್ನಿಯಲ್ಲಿ ಟ್ರೋಫಿ ಜಯಿಸಿದ್ದರು.

ರೇಸ್‌ವಾಕ್: ಮಂಜುರಾಣಿ ದಾಖಲೆ

ರಾಂಚಿ (ಪಿಟಿಐ): ರಾಮ್‌ಬಾಬು ಹಾಗೂ ಮಂಜುರಾಣಿ ಅವರು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ರೇಸ್ ವಾಕಿಂಗ್ ಚಾಂಪಿಯನ್‌ಷಿಪ್‌ನ 35 ಕಿಲೊ ಮೀಟರ್ಸ್ ಸ್ಪರ್ಧೆಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಪದಕ ಜಯಿಸಿದರು.

ಪಂಜಾಬ್ ತಂಡವನ್ನು ಪ್ರತಿನಿಧಿಸಿದ್ದ 23 ವರ್ಷದ ಮಂಜುರಾಣಿ 2 ತಾಸು 57 ನಿಮಿಷ 54 ಸೆಕೆಂಡುಗಳಲ್ಲಿ ಸ್ಪರ್ಧೆ ಕೊನೆಗೊಳಿಸುವ ಮೂಲಕ ಮೂರು ತಾಸಿನೊಳಗೆ ಗುರಿ ಮುಟ್ಟಿದ ಭಾರತದ ಮೊದಲ ಅಥ್ಲೀಟ್ ಎನಿಸಿಕೊಂಡರು. ಇದರೊಂದಿಗೆ ಈ ಹಿಂದೆ ರಮಣದೀಪ್ ಕೌರ್ (3 ತಾಸು 0.4 ಸೆ.) ಸ್ಥಾಪಿಸಿದ್ದ ದಾಖಲೆಯನ್ನು ಮೀರಿದರು.

ಉತ್ತರಾಖಂಡದ ಪಾಯಲ್ ಬೆಳ್ಳಿ ಮತ್ತು ಉತ್ತರಪ್ರದೇಶದ ವಂದನಾ ಪಟೇಲ್ ಕಂಚಿನ ಪದಕ ಗಳಿಸಿದರು.

ಪುರುಷರ ವಿಭಾಗದಲ್ಲಿ ಉತ್ತರ ಪ್ರದೇಶದ ರಾಮ್ ಬಾಬು 2 ತಾಸು 31 ನಿ. 36 ಸೆಕೆಂಡುಗಳಲ್ಲಿ ಗುರಿ ಮುಟ್ಟುವ ಮೂಲಕ ತಮ್ಮದೇ ಹೆಸರಿನಲ್ಲಿದ್ದ ದಾಖಲೆಯನ್ನು (2 ತಾಸು 36 ನಿ. 34 ಸೆ.) ಉತ್ತಮಪಡಿಸಿಕೊಂಡರು. ಹರಿಯಾಣದ ಜುನೈದ್ ಖಾನ್ ಮತ್ತು ಉತ್ತರಾಖಂಡದ ಚಂದನ್‌ಸಿಂಗ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ತಮ್ಮದಾಗಿಸಿಕೊಂಡರು.

ದಾಖಲೆ ಬರೆದರೂ ಮಂಜುರಾಣಿ ಹಾಗೂ ಬಾಬು ವಿಶ್ವ ಚಾಂಪಿಯನ್‌ಷಿಪ್‌ನ ಅರ್ಹತಾ ಮಾನದಂಡ (ಪುರುಷರಿಗೆ 2 ತಾಸು 29 ನಿ. 40 ಸೆ. ಹಾಗೂ ಮಹಿಳೆಯರಿಗೆ 2 ತಾಸು 51 ನಿ. 30 ಸೆ.) ದಾಟಲು ವಿಫಲರಾದರು.



ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್: ವೆಸ್ಟ್ ಇಂಡೀಸ್ ಮಣಿಸಿದ ಭಾರತ

ರಿಚಾ ಘೋಷ್, ದೀಪ್ತಿ ಮಿಂಚು

ಕೇಪ್‌ಟೌನ್ (ಪಿಟಿಐ): ಯುವ ಆಟಗಾರ್ತಿ ರಿಚಾ ಘೋಷ್ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಭಾರತ ತಂಡಕ್ಕೆ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಲಭಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಭಾರತ ತಂಡ ಆರು ವಿಕೆಟ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು. ಮೊದಲು ಬ್ಯಾಟ್ ಮಾಡಿದ ವಿಂಡೀಸ್, 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 118 ರನ್ ಗಳಿಸಿದರೆ, ಹರ್ಮನ್ ಬಳಗ 11 ಎಸೆತಗಳು ಇರುವಂತೆಯೇ ನಾಲ್ಕು ವಿಕೆಟ್ ಕಳೆದುಕೊಂಡು ಗೆದ್ದಿತು.

ಅಜೇಯ 44 ರನ್ (32 ಎ., 4X5) ಗಳಿಸಿದ ವಿಕೆಟ್ ಕೀಪರ್ ಬ್ಯಾಟರ್ ರಿಚಾ ಅವರು ಗೆಲುವಿನ ಹಾದಿ ಸುಗಮಗೊಳಿಸಿದರು. ಆರಂಭಿಕ ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು ಮಣಿಸಿದ್ದ ಭಾರತ ತಂಡ, ಒಟ್ಟು ನಾಲ್ಕು ಪಾಯಿಂಟ್ಸ್ ಹೊಂದಿದೆ. ರಿಚಾ ಅವರು ಪಾಕ್ ಎದುರಿನ ಪಂದ್ಯದಲ್ಲೂ ಬಿರುಸಿನ ಆಟದಿಂದ ಗಮನ ಸೆಳೆದಿದ್ದರು.

ಸಾಧಾರಣ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಶಫಾಲಿ ವರ್ಮ (28 ರನ್, 23 ಎ., 4X5) ಮತ್ತು ಸ್ಮೃತಿ ಮಂದಾನ (10) ಮೊದಲ ವಿಕೆಟ್‌ಗೆ 32 ರನ್ ಸೇರಿಸಿದರು. ಇವರಿಬ್ಬರು ಮತ್ತು ಜೆಮಿಮಾ ರಾಡ್ರಿಗಸ್ (1) ಅಲ್ಪ ಅಂತರದಲ್ಲಿ ಔಟಾದರು.

ಈ ವೇಳೆ ಜತೆಯಾದ ರಿಚಾ ಮತ್ತು ಹರ್ಮನ್ ಅವರು ನಾಲ್ಕನೇ ವಿಕೆಟ್‌ಗೆ 72 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಮಿಂಚಿದ ದೀಪ್ತಿ: ಮೊದಲು ಬ್ಯಾಟ್ ಮಾಡಿದ್ದ ವಿಂಡೀಸ್ ತಂಡವನ್ನು ದೀಪ್ತಿ ಶರ್ಮಾ (15ಕ್ಕೆ 3) ಅವರ ಶಿಸ್ತಿನ ಬೌಲಿಂಗ್ ನೆರವಿನಿಂದ ಭಾರತ ತಂಡ ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿತು. ರೇಣುಕಾ ಸಿಂಗ್ ಮತ್ತು ಪೂಜಾ ವಸ್ತ್ರಕರ್ ಅವರೂ ಬಿಗುವಾದ ದಾಳಿ ನಡೆಸಿದರು.

ವಿಂಡೀಸ್ ತಂಡ ಹೇಯ್ಲಿ ಮ್ಯಾಥ್ಯೂಸ್ (2) ಅವರನ್ನು ಬೇಗನೇ ಕಳೆದುಕೊಂಡಿತು. ಸ್ಟೆಫಾನಿ ಟೇಲರ್ (42 ರನ್,40 ಎ., 4X6) ಮತ್ತು ಶೆಮೈನ್ ಕ್ಯಾಂಪ್‌ಬೆಲ್ (30 ರನ್, 36 ಎ., 4X3) ಎರಡನೇ ವಿಕೆಟ್‌ಗೆ 73 ರನ್ ಸೇರಿಸಿ ಆಸರೆಯಾದರು. ಆದರೆ ಒಂದು ರನ್ ಅಂತರದಲ್ಲಿ ಇಬ್ಬರನ್ನೂ ಪೆವಿಲಿಯನ್‌ಗೆ ಕಳುಹಿಸಿದ ದೀಪ್ತಿ, ಭಾರತಕ್ಕೆ ಮೇಲುಗೈ ತಂದಿತ್ತರು.

ಕೊನೆಯ ಓವರ್‌ಗಳಲ್ಲಿ ರನ್ ವೇಗ ಹೆಚ್ಚಿಸಲು ವಿಂಡೀಸ್ ಬ್ಯಾಟರ್‌ಗಳಿಗೆ ಭಾರತದ ಬೌಲರ್‌ಗಳು ಅವಕಾಶ ನೀಡಲಿಲ್ಲ.

ಸಂಕ್ಷಿಪ್ತ ಸ್ಕೋರ್: ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 118 (ಸ್ಟೆಫಾನಿ ಟೇಲರ್ 42, ಶೆಮೈನ್ ಕ್ಯಾಂಪ್‌ಬೆಲ್ 30, ಚೆಡೀನ್ ನೇಷನ್ ಔಟಾಗದೆ 21, ದೀಪ್ತಿ ಶರ್ಮಾ 15ಕ್ಕೆ 3, ಪೂಜಾ ವಸ್ತ್ರಕರ್ 21ಕ್ಕೆ 1, ರೇಣುಕಾ ಸಿಂಗ್ 22ಕ್ಕೆ 1)

ಭಾರತ 18.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 119 (ಶಫಾಲಿ ವರ್ಮ 28, ಸ್ಮೃತಿ ಮಂದಾನ 10, ಹರ್ಮನ್‌ಪ್ರೀತ್ ಕೌರ್ 33, ರಿಚಾ ಘೋಷ್ ಔಟಾಗದೆ 44, ಕರಿಷ್ಮಾ ರಮರಾಕ್ 14ಕ್ಕೆ 2, ಹೇಯ್ಲಿ ಮ್ಯಾಥ್ಯೂಸ್ 12ಕ್ಕೆ 1) ಫಲಿತಾಂಶ: ಭಾರತಕ್ಕೆ 6 ವಿಕೆಟ್ ಗೆಲುವು



ರಿಚಾ ಘೋಷ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಟೆಸ್ಟ್ ರ‍್ಯಾಂಕಿಂಗ್: ಭಾರತ ನಂ.1

ಕ್ರಿಕೆಟ್‌ನ ಮೂರೂ ಮಾದರಿಗಳಲ್ಲಿ ಅಗ್ರಸ್ಥಾನದ ಗೌರವ: ಅಶ್ವಿನ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತ ತಂಡವು ಐಸಿಸಿ ಟೆಸ್ಟ್ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿತು. ಈ ಮೂಲಕ ಕ್ರಿಕೆಟ್‌ನ ಮೂರೂ ಮಾದರಿಗಳಲ್ಲಿ ಅಗ್ರಸ್ಥಾನ ಪಡೆದ ಗೌರವ ತನ್ನದಾಗಿಸಿಕೊಂಡಿದೆ.

ನಾಗಪುರದಲ್ಲಿ ನಡೆದಿದ್ದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಮೊದಲ ಪಂದ್ಯವನ್ನು ರೋಹಿತ್ ಶರ್ಮ ಬಳಗ ಇನಿಂಗ್ಸ್ ಹಾಗೂ 132 ರನ್‌ಗಳಿಂದ ಗೆದ್ದಿತ್ತು. ಇದರಿಂದ ಭಾರತ ಅಗ್ರಸ್ಥಾನಕ್ಕೇರಿದ್ದು, ಆಸ್ಟ್ರೇಲಿಯಾ ತಂಡ ಎರಡನೇ ಸ್ಥಾನಕ್ಕೆ ಕುಸಿತ ಕಂಡಿದೆ.

ಟಿ20 ತಂಡಗಳ ರ‍್ಯಾಂಕಿಂಗ್‌ನಲ್ಲಿ ಹಲವು ಸಮಯಗಳಿಂದ ಅಗ್ರಸ್ಥಾನದಲ್ಲಿರುವ ಭಾರತ ತಂಡ, ಕಳೆದ ತಿಂಗಳು ಏಕದಿನ ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಪಟ್ಟಕ್ಕೇರಿತ್ತು. ನ್ಯೂಜಿಲೆಂಡ್ ವಿರುದ್ಧದ ಸರಣಿಯನ್ನು 3–0 ರಲ್ಲಿ ಜಯಿಸಿತ್ತು.

ಟೆಸ್ಟ್ ರ‍್ಯಾಂಕಿಂಗ್ ಪಟ್ಟಿಯಲ್ಲಿ ಭಾರತ ತಂಡವು (115) ಆಸ್ಟ್ರೇಲಿಯಾಕ್ಕಿಂತ (111) ನಾಲ್ಕು ರೇಟಿಂಗ್ ಪಾಯಿಂಟ್ಸ್‌ಗಳಿಂದ ಮುಂದಿದೆ. ನವದೆಹಲಿಯಲ್ಲಿ ನಡೆಯಲಿರುವ ಎರಡನೇ ಟೆಸ್ಟ್‌ನಲ್ಲೂ ಗೆದ್ದರೆ, ರೋಹಿತ್ ಬಳಗದ ಮುನ್ನಡೆಯ ಅಂತರ ಇನ್ನಷ್ಟು ಹೆಚ್ಚಲಿದೆ.

ಎರಡನೇ ಸ್ಥಾನಕ್ಕೇರಿದ ಅಶ್ವಿನ್: ಆಫ್ ಸ್ಪಿನ್ನರ್ ಆರ್.ಅಶ್ವಿನ್, ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದ್ದಾರೆ. ನಾಗಪುರ ಟೆಸ್ಟ್‌ನಲ್ಲಿ ಅವರು ಎಂಟು ವಿಕೆಟ್ ಗಳಿಸಿದ್ದರು.

ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ 16ನೇ ಸ್ಥಾನಕ್ಕೇರಿದ್ದಾರೆ. ಮಂಡಿಯ ಶಸ್ತ್ರಚಿಕಿತ್ಸೆ ಕಾರಣ ಐದು ತಿಂಗಳು ಅಂಗಳದಿಂದ ದೂರವುಳಿದಿದ್ದ ಅವರು ಮೊದಲ ಟೆಸ್ಟ್‌ನಲ್ಲಿ ಮಿಂಚಿದ್ದರು.

ಅಶ್ವಿನ್ ಅವರು (846) ಅಗ್ರಸ್ಥಾನದಲ್ಲಿರುವ ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ (867) ಅವರಿಗಿಂತ 21 ರೇಟಿಂಗ್ ಪಾಯಿಂಟ್ಸ್‌ನಿಂದ ಹಿಂದಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದರೆ ಅವರಿಗೆ ಅಗ್ರಸ್ಥಾನಕ್ಕೇರುವ ಅವಕಾಶವಿದೆ. ಅಶ್ವಿನ್ 2017 ರಲ್ಲಿ ಕೊನೆಯದಾಗಿ ಟೆಸ್ಟ್ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಕಾಣಿಸಿಕೊಂಡಿದ್ದರು.

ಬ್ಯಾಟರ್‌ಗಳ ಪಟ್ಟಿಯಲ್ಲಿ ರೋಹಿತ್ ಅವರು ಎರಡು ಕ್ರಮಾಂಕ ಮೇಲಕ್ಕೇರಿ, ಎಂಟನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದಾರೆ. ನಾಗಪುರ ಟೆಸ್ಟ್‌ನಲ್ಲಿ ಅವರು 120 ರನ್ ಗಳಿಸಿದ್ದರು. ರಿಷಭ್ ಪಂತ್ ಏಳನೇ ಸ್ಥಾನದಲ್ಲಿದ್ದಾರೆ.



ಆರ್. ಅಶ್ವಿನ್

ಡಬ್ಲ್ಯುಟಿಸಿ ಫೈನಲ್‌ನತ್ತ ಹೆಜ್ಜೆ

ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರುವ ಮೂಲಕ ಭಾರತ ತಂಡವು, ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್‌ಗೆ ಅರ್ಹತೆ ಪಡೆಯುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯನ್ನು ಭಾರತ ತಂಡವು 3–0 ಅಥವಾ 3–1 ರಲ್ಲಿ ಗೆದ್ದರೆ ಡಬ್ಲ್ಯುಟಿಸಿ ಫೈನಲ್‌ಗೆ ಪ್ರವೇಶಿಸಲಿದೆ. ಐಸಿಸಿ ರ‍್ಯಾಂಕಿಂಗ್‌ನಲ್ಲಿ ಮೊದಲ ಎರಡು ಸ್ಥಾನಗಳಲ್ಲಿರುವ ತಂಡ ಡಬ್ಲ್ಯುಟಿಸಿ ಫೈನಲ್ ಆಡಲಿದೆ.

ಐಸಿಸಿ ಟೆಸ್ಟ್ ರ‍್ಯಾಂಕಿಂಗ್

ಸ್ಥಾನ	ರೇಟಿಂಗ್	ದೇಶ
1	115	ಭಾರತ
2	111	ಆಸ್ಟ್ರೇಲಿಯಾ
3	106	ಇಂಗ್ಲೆಂಡ್
4	100	ನ್ಯೂಜಿಲೆಂಡ್
5	85	ದಕ್ಷಿಣ ಆಫ್ರಿಕಾ



ರೋಹಿತ್ ಶರ್ಮ

ಆಸ್ಟ್ರೇಲಿಯಾ ವಿರುದ್ಧದ ಎರಡನೇ ಟೆಸ್ಟ್ ನಾಳೆಯಿಂದ

ವಿರಾಟ್ ಹೆಚ್ಚುವರಿ ಅಭ್ಯಾಸ

ನವದೆಹಲಿ (ಪಿಟಿಐ): ಬಾರ್ಡರ್–ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೆಸ್ಟ್ ಸರಣಿಯ ಎರಡನೇ ಪಂದ್ಯಕ್ಕೆ ಸಜ್ಜಾಗುತ್ತಿರುವ ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ, ಬುಧವಾರ ನೆಟ್ಸ್‌ನಲ್ಲಿ ಹೆಚ್ಚುವರಿ ಅವಧಿಯ ಅಭ್ಯಾಸ ನಡೆಸಿದರು.

ಆಸ್ಟ್ರೇಲಿಯಾ ವಿರುದ್ಧದ ಎರಡನೇ ಟೆಸ್ಟ್ ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾಗಲಿದೆ. ರೋಹಿತ್ ಶರ್ಮ ನೇತೃತ್ವದ ತಂಡ ಬುಧವಾರ ಪೂರ್ಣ ಅವಧಿಯ ಅಭ್ಯಾಸದಲ್ಲಿ ಪಾಲ್ಗೊಂಡಿತು.

ಕೊಹ್ಲಿ ಅವರು ತಂಡದ ಸಹ ಆಟಗಾರರು ಅಂಗಳಕ್ಕೆ ಬರುವ ಅರ್ಧ ಗಂಟೆ ಮುಂಚಿತವಾಗಿಯೇ ಕ್ರೀಡಾಂಗಣಕ್ಕೆ ಬಂದಿದ್ದಾರೆ. ನೆಟ್ಸ್‌ನಲ್ಲಿ ಅಧಿಕ ಸಮಯ ಕಳೆಯುವುದು ಅವರ ಉದ್ದೇಶವಾಗಿತ್ತು.ಕೆಲಹೊತ್ತು ವೇಗದ ಬೌಲರ್‌ಗಳನ್ನು ಎದುರಿಸಿದ ಬಳಿಕ ಸ್ಪಿನ್ನರ್‌ಗಳಿಗೆ ಬೌಲ್ ಮಾಡುವಂತೆ ಸೂಚಿಸಿದರು.

ಉತ್ತರ ಪ್ರದೇಶದ ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಅಲ್ಲದೆ ಪುಲಕಿತ್ ನಾರಂಗ್ ಮತ್ತು ಹೃತಿಕ್ ಶೋಕೀನ್ ಅವರು ತುಂಬಾ ಹೊತ್ತು ಕೊಹ್ಲಿಗೆ ಬೌಲ್ ಮಾಡಿದರು.

ನಾಗಪುರದಲ್ಲಿ ನಡೆದಿದ್ದ ಮೊದಲ ಟೆಸ್ಟ್‌ನಲ್ಲಿ ಕೊಹ್ಲಿ, ಆಸ್ಟ್ರೇಲಿಯಾದ ಸ್ಪಿನ್ನರ್‌ಗಳ ಎದುರು ತಡಬಡಾಯಿಸಿದ್ದರು. ಟಾಡ್ ಮರ್ಫಿ ಅವರಿಗೆ ವಿಕೆಟ್ ಒಪ್ಪಿಸಿದ್ದರು. ಇಲ್ಲಿನ ಪಿಚ್ ಕೂಡಾ ಸ್ಪಿನ್ನರ್‌ಗಳಿಗೆ ನೆರವು ನೀಡುವ ಸಾಧ್ಯತೆಯಿದೆ.

ಅಯ್ಯರ್‌ಗೆ ಅವಕಾಶ ಸಾಧ್ಯತೆ: ‘ಶ್ರೇಯಸ್ ಅಯ್ಯರ್ ಅವರು ಪೂರ್ಣ ಫಿಟ್‌ನೆಸ್ ಹೊಂದಿದರೆ ಅಂತಿಮ ಇಲೆವೆನ್‌ನಲ್ಲಿ ಆಡುವ ಅವಕಾಶ ಪಡೆಯಲಿದ್ದಾರೆ’ ಎಂದು ಕೋಚ್ ರಾಹುಲ್ ದ್ರಾವಿಡ್ ಹೇಳಿದ್ದಾರೆ.

‘ಗುರುವಾರದ ಅಭ್ಯಾಸದ ಬಳಿಕ ಅವರ ಆಯ್ಕೆಯ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದಿದ್ದಾರೆ.



ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಬಿಎಫ್‌ಸಿ ಗೆಲುವಿನ ಓಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಎಫ್‌ಸಿ ತಂಡದ ಗೆಲುವಿನ ಓಟ ಮುಂದುವರಿದಿದೆ.

ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 2–1 ಗೋಲುಗಳಿಂದ ಮುಂಬೈ ಸಿಟಿ ಎಫ್‌ಸಿ ತಂಡವನ್ನು ಮಣಿಸಿತು. ಸುನಿಲ್ ಚೆಟ್ರಿ ಮತ್ತು ಜಾವಿ ಹೆರ್ನಾಂಡಿಜ್ ಅವರು ಆತಿಥೇಯ ತಂಡದ ಗೋಲು ಗಳಿಸಿದರು.

ಸತತ ಏಳನೇ ಗೆಲುವು ಪಡೆದ ಬಿಎಫ್‌ಸಿ, ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು. 19 ಪಂದ್ಯಗಳಿಂದ 31 ಪಾಯಿಂಟ್ಸ್‌ಗಳನ್ನು ಹೊಂದಿರುವ ತಂಡದ ‘ಪ್ಲೇ ಆಫ್’ ಪ್ರವೇಶದ ಸಾಧ್ಯತೆ ಹೆಚ್ಚಿದೆ.

ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದ 57ನೇ ನಿಮಿಷದಲ್ಲಿ ಚೆಟ್ರಿ ಅವರು ಬಿಎಫ್‌ಸಿ ಪರ ಮೊದಲ ಗೋಲು ಗಳಿಸಿದರೆ, ಜಾವಿ 70ನೇ ನಿಮಿಷದಲ್ಲಿ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. 77ನೇ ನಿಮಿಷದಲ್ಲಿ ಮೊರ್ತದಾ ಫಾಲ್ ಅವರು ಮುಂಬೈಗೆ ಗೋಲು ತಂದಿತ್ತರು.

ಕಳೆದ ಪಂದ್ಯದಲ್ಲಿ ಕೇರಳ ಬ್ಲಾಸ್ಟರ್ಸ್ ತಂಡವನ್ನು 1–0 ಗೋಲಿನಿಂದ ಸೋಲಿಸಿದ್ದ ಬಿಎಫ್‌ಸಿ, ಮೂರು ಬದಲಾವಣೆಗಳೊಂದಿಗೆ ಆಡಲಿಳಿದಿತ್ತು. ರಾಯ್‌ಕೃಷ್ಣ, ಪರಾಗ್ ಶ್ರೀನಿವಾಸ್ ಮತ್ತು ಅಲನ್ ಕೋಸ್ತಾ ಅವರ ಬದಲು ಚೆಟ್ರಿ, ಅಲೆಕ್ಸಾಂಡರ್ ಜವನೊವಿಚ್ ಮತ್ತು ಸುರೇಶ್ ವಾಂಗ್‌ಜಮ್ ಕಣಕ್ಕಿಳಿದರು. ಬಿಎಫ್‌ಸಿ ಈ ಋತುವಿನ ಕೊನೆಯ ಲೀಗ್ ಪಂದ್ಯವನ್ನು ಫೆ.23 ರಂದು ಕಂಠೀರವ ಕ್ರೀಡಾಂಗಣದಲ್ಲಿ ಆಡಲಿದ್ದು, ಗೋವಾ ಎಫ್‌ಸಿ ವಿರುದ್ಧ ಪೈಪೋಟಿ ನಡೆಸಲಿದೆ.



ಸುನಿಲ್ ಚೆಟ್ರಿ ಚೆಂಡಿನೊಂದಿಗೆ ಮುನ್ನುಗ್ಗಿದ ಕ್ಷಣ –ಪ್ರಜಾವಾಣಿ ಚಿತ್ರ

ಡಬ್ಲ್ಯುಪಿಎಲ್ ತಂಡಕ್ಕೆ ಬೆನ್ ಸಾಯರ್ ಮುಖ್ಯ ಕೋಚ್

ಆರ್‌ಸಿಬಿಗೆ ಸಾನಿಯಾ ಮೆಂಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸ್ (ಆರ್‌ಸಿಬಿ), ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ತನ್ನ ತಂಡಕ್ಕೆ ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಅವರನ್ನು ಮೆಂಟರ್ ಆಗಿ ನೇಮಿಸಿಕೊಂಡಿದೆ. ಆಸ್ಟ್ರೇಲಿಯಾದ ಬೆನ್ ಸಾಯರ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ.

‘ಮೆಂಟರ್ ಆಗಿ ಆರ್‌ಸಿಬಿ ಮಹಿಳಾ ತಂಡವನ್ನು ಸೇರಿಕೊಳ್ಳುತ್ತಿರುವುದು ಖುಷಿಯ ವಿಚಾರ’ ಎಂದು ಆರ್‌ಸಿಬಿ ತಂಡದ ಪ್ರಕಟಣೆಯಲ್ಲಿ ಸಾನಿಯಾ ಪ್ರತಿಕ್ರಿಯಿಸಿದ್ದಾರೆ.

‘ಮಹಿಳಾ ಪ್ರೀಮಿಯರ್ ಲೀಗ್ ಮೂಲಕ ಭಾರತದ ಮಹಿಳಾ ಕ್ರಿಕೆಟ್‌ನ ದಿಕ್ಕು ಬದಲಾಗಲಿದೆ. ಹೊಸ ಕ್ರಾಂತಿ ಉಂಟುಮಾಡಲಿರುವ ಲೀಗ್‌ನಲ್ಲಿ ಭಾಗಿಯಾಗುವುದನ್ನು ಎದುರು ನೋಡುತ್ತಿದ್ದೇನೆ’ ಎಂದಿದ್ದಾರೆ.

ದುಬೈನಲ್ಲಿ ಮುಂದಿನ ವಾರ ನಡೆಯಲಿರುವ ದುಬೈ ಓಪನ್ ಟೂರ್ನಿಯ ಬಳಿಕ ನಿವೃತ್ತಿಯಾಗುವುದಾಗಿ ಸಾನಿಯಾ ಈ ಹಿಂದೆಯೇ ಪ್ರಕಟಿಸಿದ್ದಾರೆ. ಆ ಬಳಿಕ ಅವರು ಆರ್‌ಸಿಬಿ ತಂಡವನ್ನು ಸೇರಿಕೊಳ್ಳುವ ಸಾಧ್ಯತೆಯಿದೆ.

ಸಾಯರ್ ಮುಖ್ಯ ಕೋಚ್: ನ್ಯೂಜಿಲೆಂಡ್ ರಾಷ್ಟ್ರೀಯ ಮಹಿಳಾ ತಂಡದ ಕೋಚ್ ಆಗಿರುವ ಆಸ್ಟ್ರೇಲಿಯಾದ ಬೆನ್ ಸಾಯರ್ ಅವರು ಆರ್‌ಸಿಬಿ ತಂಡದ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

45 ವರ್ಷದ ಸಾಯರ್ ಅವರು ‘ದಿ ಹಂಡ್ರೆಡ್’ ಟಿ20 ಲೀಗ್‌ನಲ್ಲಿ ಆಡುವ ಬರ್ಮಿಂಗ್‌ಹ್ಯಾಂ ಫೀನಿಕ್ಸ್ ತಂಡದ ಹಾಲಿ ಕೋಚ್ ಆಗಿದ್ದಾರೆ. ಮಹಿಳಾ ಬಿಗ್ ಬ್ಯಾಷ್ ಲೀಗ್‌ನಲ್ಲಿ ಆಡುವ ಸಿಡ್ನಿ ಸಿಕ್ಸರ್ಸ್ ತಂಡದ ಮುಖ್ಯ ಕೋಚ್ ಮತ್ತು ಆಸ್ಟ್ರೇಲಿಯಾ ಮಹಿಳಾ ಕ್ರಿಕೆಟ್ ತಂಡದ ಸಹಾಯಕ ಕೋಚ್ ಆಗಿಯೂ ಕರ್ತವ್ಯ ನಿರ್ವಹಿಸಿದ್ದರು.

'ಸಾಯರ್ ಅವರು ಆಸ್ಟ್ರೇಲಿಯಾ ತಂಡದ ಜತೆ ಮೂರು ವಿಶ್ವಕಪ್ ಟೂರ್ನಿಗಳನ್ನು ಗೆದ್ದಿದ್ದಾರೆ. ಸಿಡ್ನಿ ಸಿಕ್ಸರ್ ತಂಡದ ಕೋಚ್ ಆಗಿ ಬಿಗ್ ಬ್ಯಾಷ್ ಲೀಗ್ ಗೆಲ್ಲಿಸಿ ಕೊಟ್ಟಿದ್ದಾರೆ‘ ಎಂದು ಆರ್‌ಸಿಬಿಯ ಕ್ರಿಕೆಟ್ ವ್ಯವಹಾರಗಳ ನಿರ್ದೇಶಕ ಮೈಕ್ ಹೆಸನ್ ಹೇಳಿದ್ದಾರೆ.

ಆರ್‌ಸಿಬಿಯು ಮುಂಬೈನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಮಾರ್ಚ್ 5 ರಂದು ನಡೆಯುವ ತನ್ನ ಮೊದಲ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ.

ಕೋಚಿಂಗ್ ತಂಡ: ಬೆನ್ ಸಾಯರ್ (ಮುಖ್ಯ ಕೋಚ್), ಎಂ. ರಂಗರಾಜನ್ (ಸಹಾಯಕ ಕೋಚ್), ವಿ.ಆರ್.ವನಿತಾ (ಫೀಲ್ಡಿಂಗ್ ಕೋಚ್), ಆರ್.ಎಕ್ಸ್. ಮುರಳಿ (ಬ್ಯಾಟಿಂಗ್ ಕೋಚ್)



ಸಾನಿಯಾ ಮಿರ್ಜಾ

ರಣಜಿ ಫೈನಲ್ ಇಂದಿನಿಂದ: ಸೌರಾಷ್ಟ್ರ ವಿರುದ್ಧ ಪೈಪೋಟಿ

ಬಂಗಾಳಕ್ಕೆ ಪ್ರಶಸ್ತಿ ಬರ ನೀಗಿಸುವ ಛಲ

ಕೋಲ್ಕತ್ತ (ಪಿಟಿಐ): ಮೂರು ದಶಕಗಳ ಪ್ರಶಸ್ತಿ ಬರ ನೀಗಿಸುವ ಛಲದಲ್ಲಿರುವ ಬಂಗಾಳ ತಂಡ, ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಸೌರಾಷ್ಟ್ರ ತಂಡದ ಸವಾಲು ಎದುರಿಸಲಿದೆ.

ಕೋಲ್ಕತ್ತದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾಗುವ ಫೈನಲ್ ಪಂದ್ಯವು, ಹಿಂದಿನ ಸೋಲಿಗೆ ಮುಯ್ಯಿ ತೀರಿಸುವ ಉತ್ತಮ ಅವಕಾಶವನ್ನು ಬಂಗಾಳ ತಂಡಕ್ಕೆ ನೀಡಿದೆ.2020ರ ಟೂರ್ನಿಯಲ್ಲಿ ಬಂಗಾಳ ಕೊನೆಯದಾಗಿ ಫೈನಲ್ ಪ್ರವೇಶಿಸಿದ್ದಾಗ, ಸೌರಾಷ್ಟ್ರ ಎದುರು ಸೋತಿತ್ತು. ರಾಜ್‌ಕೋಟ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಸೌರಾಷ್ಟ್ರ ಗೆದ್ದಿತ್ತು.

ಬಂಗಾಳ ತಂಡ ತನ್ನ ಕೊನೆಯ ರಣಜಿ ಟ್ರೋಫಿಯನ್ನು 1990ರಲ್ಲಿ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಎತ್ತಿಹಿಡಿದಿತ್ತು. ಇದೀಗ 33 ವರ್ಷಗಳ ಬಳಿಕ ಅದೇ ತಾಣದಲ್ಲಿ ಟ್ರೋಫಿ ಗೆಲ್ಲಬೇಕೆಂಬ ಕನಸು ಕಂಡಿದೆ.

ಆರಂಭಿಕ ಬ್ಯಾಟರ್ ಅಭಿಮನ್ಯು ಈಶ್ವರನ್, ಆಲ್‌ರೌಂಡರ್ ಶಹಬಾಜ್ ಅಹ್ಮದ್ ಮತ್ತು ವೇಗಿಗಳಾದ ಆಕಾಶ್ ದೀಪ್, ಇಶಾನ್ ಪೊರೆಲ್ ಮತ್ತು ಮುಕೇಶ್ ಕುಮಾರ್ ಅವರು ಬಂಗಾಳದ ಶಕ್ತಿ ಎನಿಸಿಕೊಂಡಿದ್ದಾರೆ. 9 ಪಂದ್ಯಗಳಿಂದ 37 ವಿಕೆಟ್‌ಗಳನ್ನು ಪಡೆದಿರುವ ಆಕಾಶ್, ಉತ್ತಮ ಫಾರ್ಮ್‌ನಲ್ಲಿದ್ದಾರೆ. ಸೌರಾಷ್ಟ್ರ ತಂಡವು ವೇಗಿ ಜೈದೇವ್ ಉನದ್ಕತ್ ಅವರ ಆಗಮನದಿಂದ ಬಲ ಹೆಚ್ಚಿಸಿಕೊಂಡಿದೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಗೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದ ಜೈದೇವ್ ಅವರಿಗೆ ರಣಜಿ ಫೈನಲ್ ಆಡಲು ಬಿಸಿಸಿಐ ಅನುಮತಿ ನೀಡಿದೆ. ಇನ್ನೊಬ್ಬ ಎಡಗೈ ವೇಗಿ ಚೇತನ್ ಸಕಾರಿಯಾ ಕೂಡಾ ಉತ್ತಮ ಲಯದಲ್ಲಿದ್ದಾರೆ.



ಸೌರಾಷ್ಟ್ರ ತಂಡದ ನಾಯಕ ಜೈದೇವ್ ಉನದ್ಕತ್ ಮತ್ತು ಬಂಗಾಳ ನಾಯಕ ಮನೋಜ್ ತಿವಾರಿ ಬುಧವಾರ ಅಭ್ಯಾಸದ ವೇಳೆ ಜತೆ ಯಾಗಿ ಕಾಣಿಸಿಕೊಂಡರು –ಪಿಟಿಐ ಚಿತ್ರ

ಸಚಿವ ಹೊಡೆದ ಚೆಂಡು ಕ್ಯಾಚ್ ಮಾಡುವ ಪ್ರಯತ್ನ: ವ್ಯಕ್ತಿಗೆ ಗಾಯ

ರೇವಾ, ಮಧ್ಯಪ್ರದೇಶ (ಪಿಟಿಐ): ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೊಡೆದ ಚೆಂಡನ್ನು ಕ್ಯಾಚ್ ಮಾಡಲು ಹೋಗಿ ಬಿಜೆಪಿ ಕಾರ್ಯಕರ್ತನೊರ್ವ ಗಾಯಗೊಂಡ ಘಟನೆ ಇಲ್ಲಿ ಬುಧವಾರ ನಡೆದಿದೆ.

‘ರೇವಾ ಜಿಲ್ಲೆಯ ಇತವುರಾದಲ್ಲಿ ಉದ್ಘಾಟನೆಗೊಂಡ ಹೊಸ ಕ್ರೀಡಾಂಗಣದಲ್ಲಿ ಔಪಚಾರಿಕ ಕ್ರಿಕೆಟ್ ಪಂದ್ಯದ ವೇಳೆ ಈ ಘಟನೆ ನಡೆದಿದ್ದು, ವಿಕಾಸ್ ಮಿಶ್ರಾ ಎಂಬುವವರ ಹಣೆಗೆ ಚೆಂಡು ತಾಗಿ ಗಾಯವಾಗಿದೆ. ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ’ ಎಂದು ಸ್ಥಳೀಯ ಬಿಜೆಪಿ ಕಾರ್ಯಕರ್ತ ಧೀರಜ್ ದ್ವಿವೇದಿ ಹೇಳಿದ್ದಾರೆ. ಸಿಂಧಿಯಾ ಅವರು ಆಸ್ಪತ್ರೆಗೆ ಭೇಟಿ ನೀಡಿ ವ್ಯಕ್ತಿಯ ಆರೋಗ್ಯ ವಿಚಾರಿಸಿದರು.

ಆಯ್ಕೆ ಸಮಿತಿ ಸಭೆ: ಚೇತನ್‌ಗೆ ಸಿಗುವುದೇ ಅನುಮತಿ?

ನವದೆಹಲಿ (ಪಿಟಿಐ): ಭಾರತ ತಂಡದ ಆಯ್ಕೆ ಪ್ರಕ್ರಿಯೆಯ ರಹಸ್ಯ ಮಾಹಿತಿಗಳನ್ನು ಟಿವಿ ವಾಹಿನಿಯ ಕುಟುಕು ಕಾರ್ಯಾಚರಣೆಯಲ್ಲಿ ಬಹಿರಂಗಪಡಿಸಿದ ಆರೋಪಕ್ಕೆ ಸಿಲುಕಿರುವ ಆಯ್ಕೆ ಸಮಿತಿಯ ಮುಖ್ಯಸ್ಥ ಚೇತನ್ ಶರ್ಮಾ ಅವರಿಗೆ ತಮ್ಮನ್ನು ಸಮರ್ಥಿಸಲು ಬಿಸಿಸಿಐ ಅವಕಾಶ ನೀಡುವ ಸಾಧ್ಯತೆಯಿದೆ.

ಆದರೆ ಆಸ್ಟ್ರೇಲಿಯಾ ಎದುರಿನ ಮೂರು ಹಾಗೂ ನಾಲ್ಕನೇ ಟೆಸ್ಟ್‌ಗೆ ತಂಡ ಪ್ರಕಟಿಸುವ ಮುನ್ನ ನಡೆಯಲಿರುವ ಆಯ್ಕೆ ಸಮಿತಿ ಸಭೆಗೆ ಹಾಜರಾಗಲು ಚೇತನ್ ಅವರಿಗೆ ಅನುಮತಿ ಸಿಗುವುದೇ ಎಂಬುದು ಸದ್ಯದ ಪ್ರಶ್ನೆಯಾಗಿದೆ.

‘ಈ ಕುಟುಕು ಕಾರ್ಯಾಚರಣೆಯ ಬಳಿಕ, ವಿಶ್ವಾಸಾರ್ಹತೆಗೆ ಧಕ್ಕೆಯಾಗುತ್ತದೆ ಎಂದು ಯಾವುದೇ ಆಟಗಾರ ಅಥವಾ ಆಯ್ಕೆಗಾರರು ಪತ್ರಕರ್ತರೊಂದಿಗೆ ವಿಷಯಗಳನ್ನು ಹಂಚಿಕೊಳ್ಳಲು ಹಿಂಜರಿಯಬಹುದು‘ ಎಂದು ಬಿಸಿಸಿಐ ಮೂಲಗಳು ಹೇಳಿವೆ.

ಕರ್ನಾಟಕ ತಂಡಗಳಿಗೆ ಚಿನ್ನ

ಬೆಂಗಳೂರು: ಕರ್ನಾಟಕದ ಮಹಿಳಾ ಮತ್ತು ಮಿಶ್ರ ಡಬಲ್ಸ್ ತಂಡಗಳು ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗ್‌ನಲ್ಲಿ ನಡೆದ ಖೇಲೊ ಇಂಡಿಯಾ ವಿಂಟರ್ ಗೇಮ್ಸ್‌ನ ಕರ್ಲಿಂಗ್ ಕ್ರೀಡೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡವು.

ಮಹಿಳಾ ತಂಡದಲ್ಲಿ ಸಂಪ್ರೀತಾ, ಪೂರ್ವಿಕಾ ಜೆ. ಅರಸ್, ಶ್ರೀಶ್ ಎಂ. ದೇವಾಂಗ್ ಮತ್ತು ಪದ್ಮಾವತಿ ರೇವಣಕರ್ ಇದ್ದರು. ಮಿಶ್ರ ಡಬಲ್ಸ್ ತಂಡವು ಸುಕಾಂತ್ ಮತ್ತು ಅಶ್ವಿನಿ ಅವರನ್ನೊಳಗೊಂಡಿತ್ತು.

ಐಸ್ ಸ್ಟಾಕ್ ವಿಭಾಗದಲ್ಲಿ ಕರ್ನಾಟಕ ಪುರುಷರ ತಂಡವು ಕಂಚು ಗೆದ್ದಿತು. ಈ ತಂಡದಲ್ಲಿ ಸಾಯಿ ಗಗನ್, ಯಶವಂತ್ ಬಿ.ಆರ್, ಸುಶೀಲ್ ಕುಮಾರ್ ಮತ್ತು ರಿತಿಕ್ ಇದ್ದರು.

ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ
ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ 1 ಆಯುರ್ವೇದಿಕ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ. ಯಾವುದೇ ಅಡ್ಡಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.
ಸಂಪರ್ಕಿಸಿ
02262676816

ಲೈಂಗಿಕ ಸಮಸ್ಯೆ
“ನಿಮ್ಮ ಲೈಂಗಿಕ ಸಮಸ್ಯೆಗೆ ನಮ್ಮ ಧನ್ವಂತರಿ ಆಯುರ್ವೇದ್”
ಅಡ್ಡಪರಿಣಾಮಗಳಿಲ್ಲ ಬಳಸಿದ ತಕ್ಷಣವೇ ಕೆಲಸ ಆರಂಭ.
ನಮ್ಮ ನೂತನ ಚಿಕಿತ್ಸೆಯಿಂದ ಇಂದ್ರಿಯವನ್ನು 7–8 ಇಂಚು ಉದ್ದ, 3–4 ಇಂಚು ದಪ್ಪ, ನೇರ ಮತ್ತು ಸದೃಢಗೊಳಿಸಿ ಲೈಂಗಿಕ ಸಮಯವನ್ನು 30–40 ನಿಮಿಷ ಹೆಚ್ಚಿಸಿಕೊಳ್ಳಲು ತಕ್ಷಣ ಕರೆ ಮಾಡಿ. 21 ರಿಂದ 75 ವರ್ಷದವರೆಗೆ ರಾಮಬಾಣದಂತ ಔಷಧ.
ನಿಮ್ಮ ಚಿಕ್ಕದಾದ ಸ್ತನಗಳನ್ನು ದೊಡ್ಡದಾಗಿ ಆಕರ್ಷಕವಾಗಿ ಸುಂದರವಾಗಿ ಮತ್ತು ಬಿಗಿಯಾಗಿರುವಂತೆ ಮಾರ್ಪಡಿಸಿಕೊಳ್ಳಿ. (18 ರಿಂದ 50 ವರ್ಷದ ಮಹಿಳೆಯರಿಗಾಗಿ)
100% ಗ್ಯಾರಂಟಿ, ಕಾಮಸೂತ್ರ ಪುಸ್ತಕಗಳು ದೊರೆಯುತ್ತವೆ
ಈಗ ಕರ್ನಾಟಕದಲ್ಲಿ ಲಭ್ಯವಿದೆ.
ಬೆಲೆ 1575, 2100, 3150, 5250
9980890487



